ಹುಬ್ಬಳ್ಳಿ
ಶುಕ್ರವಾರ, 29 ಮೇ 2026
ಸಂಪುಟ 16, ಸಂಚಿಕೆ 65, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಆರೋಗ್ಯ ವೆಚ್ಚದಲ್ಲಿ ಗಮನಾರ್ಹ ಏರಿಕೆ | ೦೨
ಸಂಚಾರಿ ಚಲನ್ ಪರಿಶೀಲನೆ | ೦೨
ಹಾರ್ಮುಜ್ ಮೂಲಕ ಸುರಕ್ಷಿತ ವ್ಯಾಪಾರ ಮುಖ್ಯ | ೦೨

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಸ್ವಾತಿ

ದಿನದ ಮಾತು

ಸಜ್ಜನರು ಎಲ್ಲರಿಗೂ ಕರುಣಾಳುವಾಗಿ, ಏನೊಂದು ಕಾರಣವಿಲ್ಲದಾಗ್ಯೂ ಬಂಧುಗಳಂತೆ ವರ್ತಿಸುತ್ತಾರೆ.

▲ಕಥಾ ಸರಿತ್ಸಾಗರ

ಮತದಾರರ ತೀರ್ಪು ಪ್ರಶ್ನಿಸುವ ಚಾಳಿ: ಈಗ ಜಿರಳೆಯ ಪಾಳಿ

ಲೇಖನ

• ಅರುಣ್ ಆನಂದ್

• ಪುಟ ೬

ಕಿರುಸುದ್ದಿ

ನೀರಾನೆ ಮರಿಗೆ ಸಮೀಕ್ಷಾ ರೆಡ್ಡಿ ಹೆಸರಿಡಲು ಸೂಚನೆ
• ಪುಟ ೩

ಜನಪ್ರಿಯ ನಾಯಕ ಸಿದ್ದರಾಮಯ್ಯ: ಜೋಶಿ
• ಪುಟ ೩

ನೀಟ್ ಪ್ರಶ್ನೆಪತ್ರಿಕೆ ಸಾಗಣೆಗೆ ಸೇನಾ ಲಾಜಿಸ್ಟಿಕ್ಸ್ ಬಳಕೆ?
• ಪುಟ ೨

4 ರಾಜ್ಯಗಳಿಗೆ ಬಿಜೆಪಿ ಹೊಸ ರಾಜ್ಯಾಧ್ಯಕ್ಷರು
• ಪುಟ ೨

ಗೋ ಹತ್ಯೆ ನಿಷೇಧಕ್ಕೆ ಮದ್ರಾಸ್ ಹೈ ಆದೇಶ
• ಪುಟ ೨

ಪ.ಬಂಗಾಳ: ಬಿಎಸ್‌ಎಫ್‌ಗೆ ಗಡಿ ಭೂಮಿ ಹಸ್ತಾಂತರ
• ಪುಟ ೨

ಭಾರತ-ಚೀನಾ ನಡುವೆ ಎಲ್‌ಒಸಿ ಕುರಿತು ಚರ್ಚೆ
• ಪುಟ ೨

ಇಡಿ ಅಧಿಕಾರಿಗಳ ಮೇಲೆ ದಾಳಿ: 8 ಮಂದಿ ಬಂಧನ
• ಪುಟ ೨

ಸಿದ್ದರಾಮಯ್ಯಗೆ ಹೈಕಮಾಂಡ್ ಪ್ರಶಂಸೆ
• ಪುಟ ೪




ಫೈಟರ್ ಜೆಟ್ ನಿರ್ಮಾಣ: ಖಾಸಗಿ ಸಂಸ್ಥೆಗಳ ತೆಕ್ಕೆಗೆ?
• ಪುಟ ೭

ಸುದ್ದಿ ಸಮಗ್ರ

ಸಚಿವರ ಜತೆ ಉಪಾಹಾರ ಸಭೆ | ಹೈಕಮಾಂಡ್ ಸೂಚನೆಯಂತೆ ಅಧಿಕಾರ ತ್ಯಾಗ

ಸಿದ್ದರಾಮಯ್ಯ ರಾಜೀನಾಮೆ

• **ಬೆಂಗಳೂರು:** ರಾಜ್ಯ ರಾಜಕಾರಣದಲ್ಲಿ ಕಳೆದ ಕೆಲವು ದಿನಗಳಿಂದ ಮುಂದುವರಿದಿದ್ದ ತೀವ್ರ ಕುತೂಹಲ ಮತ್ತು ಹೈಡ್ರಾಮಾಗೆ ಕೊನೆಗೂ ಭಾವುಕ ತೆರೆ ಬಿದ್ದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ಅಧಿಕೃತವಾಗಿ ರಾಜೀನಾಮೆ ಸಲ್ಲಿಸುವ ಮೂಲಕ ಅಧಿಕಾರದಿಂದ ಕೆಳಗಿಳಿದಿದ್ದಾರೆ.



ರಾಜೀನಾಮೆ ಸಲ್ಲಿಕೆಗೂ ಮುನ್ನ ಗುರುವಾರ ಬೆಳಗ್ಗೆ ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿಯಲ್ಲಿ ಸಚಿವರೊಂದಿಗೆ ಕೊನೆಯ ಉಪಾಹಾರ ಸಭೆ ನಡೆಯಿತು. ಕಾವೇರಿ ನಿವಾಸದ ಅಂಗಳ ಸದಾ ಜನಸಾಗರದಿಂದ, ಅಧಿಕಾರದ ಗಿಜಿಗುಡುವಿಕೆಯಿಂದ ತುಂಬಿರುತ್ತಿತ್ತು. ಆದರೆ ಇಂದು ಅಲ್ಲಿ ಆವರಿಸಿದ್ದ ಮೌನವೇ ಬೇರೆಯಾಗಿತ್ತು. ಉಪಾಹಾರ ಸಭೆಯಲ್ಲಿ ಭಾಗಿಯಾಗಿದ್ದ ಸಚಿವರು ಮತ್ತು ಆಪ್ತ ನಾಯಕರು ಸಿದ್ದರಾಮಯ್ಯ ಅವರ ಸುದೀರ್ಘ ಹೋರಾಟದ ಪಯಣವನ್ನು ನೆನೆದು ಭಾವುಕರಾದರು. ಹಲವು ಸಚಿವರ ಕಣ್ಣಾಲಿಗಳು ತೇವಗೊಂಡಿದ್ದವು. ಸಹೋದ್ಯೋಗಿ ಮಂತ್ರಿಗಳಿಗೆ ಧೈರ್ಯ ತುಂಬಿದ ಸಿದ್ದರಾಮಯ್ಯ ತಮಗೆ ನೀಡಿದ ಸಹಕಾರವನ್ನು ಮೆಲುಕು ಹಾಕಿದರು. ಸಚಿವರುಗಳಿಗೆ ಧನ್ಯವಾದ ಸಲ್ಲಿಸಿ ವಿದಾಯ ಹೇಳಿದರು.

ಸಚಿವರಿಗೆ ಧನ್ಯವಾದ: ತಮ್ಮ ರಾಜೀನಾಮೆ ನೀಡಲು ಕಾರಣ ಹಾಗೂ ಹೈಕಮಾಂಡ್‌ನ ನಿರ್ಧಾರದ ಬಗ್ಗೆ ಸಿದ್ದರಾಮಯ್ಯ ಅವರು ಎಲ್ಲ ಸಚಿವರಿಗೆ ಮನವರಿಕೆ ಮಾಡಿಕೊಟ್ಟರು. ದೆಹಲಿಯಿಂದ ವಾಪಸ್ಸಾದ ನಂತರ ಏನನ್ನೂ ಮಾತನಾಡದೆ ಮೌನಕ್ಕೆ ಶರಣಾಗಿದ್ದ ಸಿಎಂ ಸಿದ್ದರಾಮಯ್ಯ ಅವರು, ಗುರುವಾರ ಸಚಿವರ ಸಭೆಯಲ್ಲಿ ಎಲ್ಲರ ಜತೆ ಮನಬಿಚ್ಚಿ ಮಾತನಾಡಿ, ಹೈಕಮಾಂಡ್ ಸೂಚನೆಯಂತೆ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ತಿಳಿಸಿ, 3 ವರ್ಷಗಳ ಕಾಲ ತಮ್ಮ ಜತೆ ರಾಜ್ಯದ ಪ್ರಗತಿಗೆ ಕೆಲಸ ಮಾಡಿದ ಎಲ್ಲ ಸಂಪುಟ ಸಹೋದ್ಯೋಗಿಗಳಿಗೆ ಧನ್ಯವಾದ ಹೇಳಿದರು. ➡ಪುಟ ೪

ಸಿಎಂ ಕಾಲಿಗೆ ಬಿದ್ದು ಆಶೀರ್ವಾದ ಪಡೆದ ಡಿಕೆಶಿ

ದುಡುಕಿನ ಹೇಳಿಕೆ ಬೇಡ: ಬೆಂಬಲಿಗರಿಗೆ ಡಿಸಿಎಂ

ಆಡಳಿತ ಸಂತೃಪ್ತಿ ನೀಡಿದೆ: ಸಿಎಂ • ಪುಟ ೪

ಯಾವುದೇ ನೋವಿಲ್ಲ, ಮನಃಪೂರ್ವಕ ನಿರ್ಧಾರ

ನನಗೆ ಯಾವುದೇ ನೋವಿಲ್ಲ, ಮನಃಪೂರ್ವಕವಾಗಿ ರಾಜೀನಾಮೆ ನೀಡುತ್ತಿದ್ದೇನೆ ಎಂದು ಸಿದ್ದರಾಮಯ್ಯ ತಿಳಿಸಿದರು. ಸಚಿವರೊಂದಿಗಿನ ಉಪಾಹಾರ ಸಭೆಯಲ್ಲಿ ಮಾತನಾಡಿದ ಸಿಎಂ, ಹೈಕಮಾಂಡ್ ಹೇಳುವುದನ್ನು ಪಾಲನೆ ಮಾಡುವುದು ನನ್ನ ಕರ್ತವ್ಯ. ನನಗೆ ಯಾವುದೇ ನೋವಿಲ್ಲ, ಮನಃಪೂರ್ವಕವಾಗಿ ರಾಜೀನಾಮೆ ನೀಡುತ್ತಿದ್ದೇನೆಂದು ಹೇಳಿದರು.

ಕಣ್ಣೀರಿಟ್ಟ ಸಿಎಂ

ಸಿಎಂ ಸಿದ್ದರಾಮಯ್ಯ ಸಚಿವರನ್ನುದ್ದೇಶಿಸಿ ಮಾತನಾಡುವಾಗ ಭಾವುಕರಾದ ಘಟನೆಯೂ ನಡೆದಿದೆ. 2028ರವರೆಗೆ ಡಿಕೆ ಶಿವಕುಮಾರ್ ಸಿಎಂ ಆಗಿರುತ್ತಾರೆ. ಮುಂದೆ ಒಳ್ಳೆಯ ಕೆಲಸಗಳನ್ನು ಮಾಡಿಕೊಂಡು ಹೋಗಿ ಎನ್ನುವಾಗ ಕಣ್ಣೀರಾದರು ಎನ್ನಲಾಗಿದೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಎಲ್ಲ ಸಚಿವರು ಇಂದಿನ ಉಪಾಹಾರ ಸಭೆಯಲ್ಲಿ ಪಾಲ್ಗೊಂಡಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಲಭಾಗದಲ್ಲಿ ಡಿ.ಕೆ. ಶಿವಕುಮಾರ್, ಎಡಭಾಗದಲ್ಲಿ ಡಾ.ಜಿ.ಪರಮೇಶ್ವರ್ ಕುಳಿತಿದ್ದುದು ವಿಶೇಷವಾಗಿತ್ತು. ➡ಪುಟ ೪

ಹಿಂದುಳಿದವರ ರಾಮಯ್ಯ

• ವಿಶೇಷ ಪುಟ ೦೦



ಮತದಾರರೇ ಅಭಿಮಾನಿ ದೇವರು

• **ಬೆಂಗಳೂರು:** ಕರ್ನಾಟಕದಲ್ಲಿ ಸುದೀರ್ಘ ಅವಧಿಗೆ ಮುಖ್ಯಮಂತ್ರಿಯಾಗಿದ್ದ ಮತ್ತು ಹದಿನೇಳು ಬಜೆಟ್ ಮಂಡಿಸಿ ದಾಖಲೆ ಮಾಡಿದ್ದ ಸಿದ್ದರಾಮಯ್ಯ ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ಗುರುವಾರ ಲೋಕಭವನಕ್ಕೆ ತೆರಳಿ ರಾಜ್ಯಪಾಲರ ಅನುಪಸ್ಥಿತಿಯಲ್ಲಿ ಅವರ ವಿಶೇಷ ಕಾರ್ಯದರ್ಶಿಯವರಿಗೆ ಒಂದು ಪುಟದ ರಾಜೀನಾಮೆ ಪತ್ರ ನೀಡಿದ್ದಾರೆ. ರಾಜೀನಾಮೆ ಸಲ್ಲಿಸಿದ ಬಳಿಕ ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹಿತ ಸಂಪುಟದ ಕೆಲ ಸಚಿವರೊಂದಿಗೆ ಸುದ್ದಿಗೋಷ್ಠಿ ನಡೆಸಿದ ಸಿದ್ದರಾಮಯ್ಯ, ತಾವು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವುದನ್ನು ಅಧಿಕೃತವಾಗಿ ಘೋಷಿಸಿದರು. ಹೈಕಮಾಂಡ್ ಸೂಚಿಸಿದಾಗ ರಾಜೀನಾಮೆ ಕೊಡುತ್ತೇನೆಂದು ಮೊದಲಿಂದಲೂ ಹೇಳುತ್ತಿದ್ದೆ, ಮೊನ್ನೆ ಕರೆದು ರಾಜೀನಾಮೆ ಕೊಡಬೇಕೆಂದು ಸೂಚಿಸಿದರು. ➡ಪುಟ ೪

ರಾಷ್ಟ್ರ ರಾಜಕಾರಣಕ್ಕೆ ಹೋಗುವುದಿಲ್ಲ

ನಾನು 1978ರಲ್ಲಿ ರಾಜಕಾರಣಕ್ಕೆ ಬಂದಿದ್ದು, ಇನ್ನೆರಡು ವರ್ಷಗಳಾದರೆ 50 ವರ್ಷಗಳಾಗುತ್ತವೆ. ನನ್ನ ರಾಜಕೀಯ ಜೀವನ ತೆರೆದ ಪುಸ್ತಕ. ಅಧಿಕಾರ ಅಥವಾ ಹಣಕ್ಕಾಗಿ ಆಸೆಪಟ್ಟವನಲ್ಲ. ಮತದಾರ ದೇವರು ನನಗೆ ಅಧಿಕಾರ ಕೊಟ್ಟಿದ್ದಾರೆ. ಸಕ್ರಿಯ ರಾಜಕಾರಣದಲ್ಲೇ ಇರುತ್ತೇನೆ. ಅಹಿಂದ ಚಟುವಟಿಕೆ ಮುಂದುವರಿಸುತ್ತೇನೆ, ಸಮಾನತೆಗಾಗಿ ಹೋರಾಟ ಮಾಡುತ್ತೇನೆ. ರಾಜ್ಯಸಭೆಗೆ ಹೋಗಬೇಕು ಎಂದು ವರಿಷ್ಠರು ಹೇಳಿದರು. ಆದರೆ, ರಾಷ್ಟ್ರ ರಾಜಕಾರಣಕ್ಕೆ ಹೋಗುವುದಿಲ್ಲ. ➡ಪುಟ ೪

ಒಂದು ಪುಟದ ರಾಜೀನಾಮೆ ಪತ್ರ

ರಾಜ್ಯಪಾಲರ ಅನುಪಸ್ಥಿತಿಯಲ್ಲಿ ವಿಶೇಷ ಕಾರ್ಯದರ್ಶಿ ಪ್ರಭುಶಂಕರ್‌ಗೆ ಸಲ್ಲಿಕೆ

• **ಬೆಂಗಳೂರು:** ಹೈಕಮಾಂಡ್ ನಿರ್ದೇಶನದ ಬೆನ್ನಲ್ಲೇ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ರಾಜ್ಯಪಾಲರ ಅನುಪಸ್ಥಿತಿಯಲ್ಲಿ ಒಂದು ಪುಟದ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ಮಧ್ಯಾಹ್ನ 2.45ಕ್ಕೆ ಮುಖ್ಯಮಂತ್ರಿಗಳ ಸರ್ಕಾರಿ ನಿವಾಸ ಕಾವೇರಿಯಿಂದ ಕಪ್ಪು ಬಣ್ಣದ ರೇಂಜ್ ರೋವರ್ ಖಾಸಗಿ ಕಾರಿನಲ್ಲಿ ಲೋಕಭವನಕ್ಕೆ ಹೊರಟರು. 2.55ಕ್ಕೆ ಲೋಕಭವನ ತಲುಪಿ, ಅಲ್ಲಿ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಪ್ರಭುಶಂಕರ್ ಅವರಿಗೆ ರಾಜೀನಾಮೆ ಪತ್ರ ಹಸ್ತಾಂತರಿಸಿದರು. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ವೈಯಕ್ತಿಕ ಕಾರಣಗಳಿಂದ ತುರ್ತಾಗಿ ಇಂದೋರ್‌ಗೆ ತೆರಳಿದ್ದರಿಂದ ಅವರು ಲಭ್ಯವಿರಲಿಲ್ಲ. ಹೀಗಾಗಿ, ರಾಜ್ಯಪಾಲರ ಮುನ್ಸೂಚನೆ ಹಾಗೂ ನಿಯಮಾವಳಿಗಳ ಪ್ರಕಾರ ಸಿಎಂ ಸಿದ್ದರಾಮಯ್ಯ ಅವರು ಲೋಕಭವನದ ವಿಶೇಷ ಕಾರ್ಯದರ್ಶಿ ಪ್ರಭುಶಂಕರ್ ಅವರಿಗೆ ತಮ್ಮ ರಾಜೀನಾಮೆ ಪತ್ರ ಕೊಟ್ಟರು. ➡ಪುಟ ೪

> **ಕಳೆದ ಎರಡ್ಮೂರು ದಿನಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ನಡೆಯುತ್ತಿರುವ ಆಂತರಿಕ ವಿದ್ಯಮಾನಗಳನ್ನು ಗಮನಿಸಿದರೆ ಸಿದ್ದರಾಮಯ್ಯ ರಾಜೀನಾಮೆ ಬಳಿಕ ಸಿಎಂ ಯಾರು ಆಗುತ್ತಾರೆ ಎಂಬ ಯಕ್ಷಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ.**
>
> ■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಮತ್ತೆ ಭುಗಿಲೆದ್ದ ಸಂಘರ್ಷ | ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ

ಡ್ರೋನ್ ಹೊಡೆದುರುಳಿಸಿದ ಅಮೆರಿಕ

• **ವಾಷಿಂಗ್ಟನ್:** ಕದನ ವಿರಾಮಗಳ ಹಲವು ಮಾತುಕತೆಗಳ ಮಧ್ಯೆ ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಮತ್ತೆ ತೀವ್ರಗೊಂಡಿದೆ. ಅಮೆರಿಕ ಮತ್ತು ಇರಾನ್ ಸಂಘರ್ಷ ಮತ್ತೆ ಭುಗಿಲೆದ್ದಿದೆ.

ಹಾರ್ಮುಜ್ ಜಲಸಂಧಿ ಪ್ರದೇಶದ ಭದ್ರತೆಗೆ ಗಂಭೀರ ಸಮಸ್ಯೆಯಾಗಿ ಪರಿಣಮಿಸಿದ್ದ ನಾಲ್ಕು ಇರಾನಿಯನ್ ಡ್ರೋನ್‌ಗಳನ್ನು ಅಮೆರಿಕ ಸೇನೆ ಹೊಡೆದುರುಳಿಸಿದೆ. ಜತೆಗೆ ದಕ್ಷಿಣ ಇರಾನ್‌ನ ಬಂದರ್ ಅಬ್ಬಾಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಡ್ರೋನ್ ನಿಯಂತ್ರಣ ಕೇಂದ್ರದ ಮೇಲೂ ದಾಳಿ ನಡೆಸಿದೆ. ಈ ಘಟನೆ ಬಳಿಕ ಅಮೆರಿಕ-ಇರಾನ್ ನಡುವಿನ ತಾತ್ಕಾಲಿಕ ಕದನ ವಿರಾಮದ ಬಗ್ಗೆ ಕಳವಳ ಹೆಚ್ಚು ಮಾಡಿದೆ. ಹಾರ್ಮುಜ್ ಜಲಸಂಧಿ ಸುತ್ತಮುತ್ತ ಅಮೆರಿಕ ಮತ್ತು ಮೈತ್ರಿ ರಾಷ್ಟ್ರಗಳ ಹಡಗುಗಳಿಗೆ ಅಪಾಯ ಉಂಟುಮಾಡುವ ರೀತಿಯಲ್ಲಿ ಇರಾನ್ ಡ್ರೋನ್ ಚಟುವಟಿಕೆಗಳು ಹೆಚ್ಚಾಗಿತ್ತು ಎಂದು ಅಮೆರಿಕದ ರಕ್ಷಣಾ ಇಲಾಖೆ ಮೂಲಗಳು ತಿಳಿಸಿವೆ. ➡ಪುಟ ೪



- ಸಂಧಾನಕಾರರಲ್ಲಿ ಒಮ್ಮತ, ಅಧ್ಯಕ್ಷ ಟ್ರಂಪ್ ಒಪ್ಪಿಗೆಯೊಂದೇ ಬಾಕಿ
- ಇರಾನ್ ಪರಮಾಣು ಯೋಜನೆಗಳ ಸಂಧಾನ ಸಭೆ ಶೀಘ್ರ ಆರಂಭ

ಕೆನ್-ಬೆಟ್ವಾ ಮಾದರಿಯಾಗಲಿ | ರಾಜ್ಯಗಳಿಗೆ ಮೋದಿ ಸಲಹೆ

ಜಲವಿವಾದಕ್ಕೆ ಸಹಕಾರವೇ ಪರಿಹಾರ

• **ಹೊಸದಿಲ್ಲಿ:** ಅಂತಾರಾಜ್ಯ ಜಲ ವಿವಾದಗಳನ್ನು ಸಹಕಾರ, ತ್ವರಿತ ಅನುಮೋದನೆ ಹಾಗೂ ತಂತ್ರಜ್ಞಾನ ಆಧಾರಿತ ಮೇಲ್ವಿಚಾರಣೆಯ ಮೂಲಕ ಬಗೆಹರಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಗಳಿಗೆ ಕರೆ ನೀಡಿದ್ದಾರೆ. ಕೆನ್-ಬೆಟ್ವಾ ನದಿ ಜೋಡಣೆ ಯೋಜನೆ ಇತರ ರಾಜ್ಯಗಳಿಗೆ ಮಾದರಿಯಾಗಬೇಕು ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.



ಬುಧವಾರ ನಡೆದ 51ನೇ ಪ್ರಗತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಧಾನಿ, ರೈಲು, ವಿದ್ಯುತ್ ಮತ್ತು ರಸ್ತೆ ಕ್ಷೇತ್ರಗಳಿಗೆ ಸಂಬಂಧಿಸಿದ ಒಟ್ಟು 30 ಸಾವಿರ ಕೋಟಿ ರೂ. ಮೌಲ್ಯದ ಏಳು ಪ್ರಮುಖ ಮೂಲಸೌಕರ್ಯ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಿದರು. ಸಾರ್ವಜನಿಕ ಯೋಜನೆಗಳ ಅನುಷ್ಠಾನದಲ್ಲಿ ವಿಳಂಬ ಉಂಟಾದರೆ ವೆಚ್ಚ ಹೆಚ್ಚಳವಾಗುವುದಲ್ಲದೆ, ಜನರಿಗೆ ಅಗತ್ಯ ಸೌಲಭ್ಯಗಳು ಸಮಯಕ್ಕೆ ಸಿಗುವುದಿಲ್ಲ ಎಂದು ಮೋದಿ ಎಚ್ಚರಿಸಿದರು. ➡ಪುಟ ೪

ವಾಧವನ್ ಬಂದರು ರಾಷ್ಟ್ರದ ದ್ವಾರವಾಗಲಿ

ರಸ್ತೆ ಮತ್ತು ಬಂದರು ಸಂಪರ್ಕ ಯೋಜನೆಗಳ ಪರಿಶೀಲನೆ ವೇಳೆ ವಾಧವನ್ ಬಂದರನ್ನು ಬಹುಮಾಧ್ಯಮ ಸಾರಿಗೆ ಕೇಂದ್ರವಾಗಿ ಅಭಿವೃದ್ಧಿಪಡಿಸಬೇಕು ಎಂದು ಪ್ರಧಾನಿ ಸೂಚಿಸಿದರು. ಕರಾವಳಿ ಸಾಗಾಟ, ಒಳನಾಡು ಜಲಮಾರ್ಗ, ವಿಶೇಷ ಸರಕು ರೈಲು ಮಾರ್ಗ, ವೇಗದ ರೈಲು, ಹೆದ್ದಾರಿ ಹಾಗೂ ವಿಮಾನ ನಿಲ್ದಾಣ ಸಂಪರ್ಕಗಳನ್ನು ಸಮಗ್ರವಾಗಿ ಜೋಡಿಸುವಂತೆ ಸಲಹೆ ನೀಡಿದರು.



ಗಿರಿಬಾಲಾ ಸಿಬಿಐ ವಶಕ್ಕೆ

• **ಭೋಪಾಲ್:** ಸೊಸೆ ತ್ವಿಶಾ ಶರ್ಮಾ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಗುರುವಾರ ಆಕೆ ಅತ್ತೆ ಮಾಜಿ ನ್ಯಾಯಾಧೀಶೆ ಗಿರಿಬಾಲಾ ಸಿಂಗ್ ಅವರನ್ನು ವಶಕ್ಕೆ ಪಡೆದಿದೆ. ಗಿರಿಬಾಲಾ ಸಿಂಗ್‌ರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ್ದ ಭೋಪಾಲ್ ಸೆಷನ್ಸ್ ನ್ಯಾಯಾಲಯದ ಮೇ 15ರ ಆದೇಶವನ್ನು ಮಧ್ಯಪ್ರದೇಶ ಹೈಕೋರ್ಟ್ ರದ್ದುಗೊಳಿಸಿದ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ. ನ್ಯಾಯಮೂರ್ತಿ ದೇವನಾರಾಯಣ್ ಮಿಶ್ರಾ, ಜಾಮೀನು ಪ್ರಶ್ನಿಸಿದ್ದ ಅರ್ಜಿಗಳನ್ನು ಪುರಸ್ಕರಿಸಿದ್ದು, ವಿಚಾರಣಾ ನ್ಯಾಯಾಲಯ, ಕೇಸ್ ಡೈರಿ, ಸಾಕ್ಷಿಗಳ ಹೇಳಿಕೆಗಳು, ಮೃತರ ಕುಟುಂಬಸ್ಥರ ಆರೋಪಗಳನ್ನು ಸರಿಯಾಗಿ ಪರಿಶೀಲಿಸುವಲ್ಲಿ ವಿಫಲವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ➡ಪುಟ ೪

ತ್ವಿಶಾ ಶರ್ಮಾ ಸಾವು ಪ್ರಕರಣ ಹಿನ್ನೆಲೆ



ಚಂದ್ರನ ಮೇಲ್ಮೈನಲ್ಲಿ ಮಂಜುಗಡ್ಡೆ

• **ಹೊಸದಿಲ್ಲಿ:** ಚಂದ್ರನ ದಕ್ಷಿಣ ಧ್ರುವದ ಸಮೀಪವಿರುವ ಕುಳಿಗಳಲ್ಲಿ ಮೇಲ್ಮೈ ಅಡಿಯಲ್ಲಿ ಮಂಜುಗಡ್ಡೆ ಇರುವ ಬಲವಾದ ಪುರಾವೆಗಳನ್ನು ವಿಜ್ಞಾನಿಗಳು ಚಂದ್ರಯಾನ-2 ದತ್ತಾಂಶ ಬಳಸಿ ಪತ್ತೆಹಚ್ಚಿದ್ದಾರೆ, ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋ ತಿಳಿಸಿದೆ. ಇತ್ತೀಚೆಗೆ ಬಿಡುಗಡೆ ಮಾಡಲಾದ ಈ ಸಂಶೋಧನಾ ಫಲಿತಾಂಶಗಳು ಅಹಮದಾಬಾದ್‌ನ ಭೌತಿಕ ಸಂಶೋಧನಾ ಪ್ರಯೋಗಾಲಯದ ದತ್ತಾಂಶವನ್ನು ಆಧರಿಸಿವೆ. ➡ಪುಟ ೪

ಕಿರುಸುದ್ದಿ

ಇಂದಿನಿಂದ ಸಂಭ್ರಮಾಚರಣೆ

ಹುಬ್ಬಳ್ಳಿ: ಇಲ್ಲಿಯ ವಾದಿರಾಜ ಸೇವಾ ಪ್ರತಿಷ್ಠಾನದ ಹುಬ್ಬಳ್ಳಿ ಮಾಧ್ವ ಮಂಡಲ ವಿದ್ಯಾರ್ಥಿ ನಿಲಯ 60 ವರ್ಷ ಪೂರೈಸುತ್ತಿದ್ದು, ಇದರ ಸಂಭ್ರಮಾಚರಣೆಯನ್ನು ಮೇ 29 ಹಾಗೂ 30ರಂದು ವಿದ್ಯಾರ್ಥಿನಿಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ, ಮಧ್ವಾಚಾರ್ಯ ಮೂಲಮಹಾ ಸಂಸ್ಥಾನ ಪೇಜಾವರ ಅಧೋಕ್ಷಜ ಮಠದ ಪೀಠಾಧಿಪತಿ ವಿಶ್ವಪ್ರಸನ್ನತೀರ್ಥ ಅವರು ಸಾನ್ನಿಧ್ಯ ವಹಿಸುವರು. ಮೇ 29ರಂದು ಸಂಜೆ ವಿದ್ಯಾನಗರದ ಹಳೇ ಆದಾಯ ತೆರಿಗೆ ಇಲಾಖೆ ಕಚೇರಿ ರಸ್ತೆಯ ಮಾರುತಿ ಮಂದಿರದಿಂದ ಬಿವಿಬಿ ವಿದ್ಯಾರ್ಥಿನಿಲಯವರೆಗೆ ಭವ್ಯ ಮೆರವಣಿಗೆ ನಡೆಯಲಿದೆ. ಸಂಜೆ 7 ಗಂಟೆಗೆ ವಿದ್ಯಾರ್ಥಿ ನಿಲಯದ ನವೀಕೃತ ಕೊಠಡಿಗಳ ಉದ್ಘಾಟನೆ, ವಿದ್ಯಾರ್ಥಿನಿಲಯದ ಯಶಸ್ಸಿಗೆ ಶ್ರಮಿಸಿದ ಮಹನೀಯರಿಗೆ ಶ್ರೀಗಳಿಂದ ಗೌರವ ಸತ್ಕಾರ, ವಿದ್ಯಾರ್ಥಿನಿಲಯದಲ್ಲಿ ವ್ಯಾಸಂಗ ಮಾಡಿ ಸಮಾಜದ ವಿವಿಧ ಸ್ತರಗಳಲ್ಲಿ ಉನ್ನತ ಹುದ್ದೆ ಅಲಂಕರಿಸಿರುವ ಮಹನೀಯರಿಗೆ ಸತ್ಕಾರ, ನಂತರ ಉಭಯ ಯತಿವರೇಣ್ಯರಿಂದ ಜ್ಞಾನಾರ್ಜನೆ ಮತ್ತು ಸಂಸ್ಕಾರದ ಮಹತ್ವದ ಕುರಿತು ಆಶೀರ್ವಚನ, ಗುರು ವಂದನೆ ಮತ್ತು ಅನುಗ್ರಹ ಭಾಷಣ, ಹಳೆಯ ವಿದ್ಯಾರ್ಥಿಗಳಿಂದ ನೂತನ ವಿಶ್ವಸ್ಥ ಮಂಡಳಿಯ ಪದಾಧಿಕಾರಿಗಳಿಗೆ ಸನ್ಮಾನ ಏರ್ಪಡಿಸಲಾಗಿದೆ.

ಜೂ.5ಕ್ಕೆ ಪ್ರತಿಭಾ ಪುರಸ್ಕಾರ

ಹುಬ್ಬಳ್ಳಿ: ಕರ್ನಾಟಕ ಸಂಗ್ರಾಮ ಸೇನೆ ವತಿಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ-2026 ಜೂ.5 ರಂದು ಅಶೋಕ ನಗರದ ಕರ್ಕಿ ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತೀರ್ಣರಾದ ಧಾರವಾಡ ಜಿಲ್ಲೆಯ ವಿದ್ಯಾರ್ಥಿಗಳು ತಮ್ಮ ಅಂಕ ಪಟ್ಟಿ, ಆಧಾರ ಕಾರ್ಡ್ ಜೆರಾಕ್ಸ್ ಪ್ರತಿ, ದೂರವಾಣಿ ಸಂಖ್ಯೆ ಸಹಿತ ಅರ್ಜಿ ಸಲ್ಲಿಸಬೇಕು ಎಂದು ರಾಜ್ಯಾಧ್ಯಕ್ಷ ಸಂಜೀವ ದುಮಕ್ಕನಾಳ ತಿಳಿಸಿದರು.

ನಿವೃತ್ತಿ ನಾಳೆ

ಧಾರವಾಡ: ಹಿರಿಯ ಕೆಇಎಸ್ ಅಧಿಕಾರಿ, ಶಾಲಾ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರ ಕಾರ್ಯಾಲಯದ ಶಿಕ್ಷಣಾಧಿಕಾರಿ ಪ್ರಭಯ್ಯ ಕಲ್ಲಯ್ಯ ಚಿಕ್ಕಮಠ ಮೇ 30ರಂದು ಸೇವೆಯಿಂದ ನಿವೃತ್ತಿ ಹೊಂದಲಿದ್ದಾರೆ.



1999ರ ತಂಡದ ಕರ್ನಾಟಕ ಶಿಕ್ಷಣ ಸೇವೆ(ಕೆಇಎಸ್) ಅಧಿಕಾರಿಯಾಗಿರುವ ಇವರು, ಸರ್ಕಾರಿ ಪ್ರೌಢಶಾಲಾ ಮುಖ್ಯಾಧ್ಯಾಪಕರಾಗಿ, ನಗರದ ಡಯಟ್ ಉಪನ್ಯಾಸಕರಾಗಿ, ವಿವಿಧ ತಾಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಜೊತೆಗೆ ತತ್ಸಮಾನ ವೃಂದದ ಹಲವಾರು ಹುದ್ದೆಗಳಲ್ಲಿ ಒಟ್ಟು 32 ವರ್ಷಗಳ ಕಾಲ ಇಲಾಖೆಯಲ್ಲಿ ಸೇವೆಸಲ್ಲಿಸಿದ್ದಾರೆ.

ಮೇ 30 ರಂದು ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಡೆಪ್ಯೂಟಿ ಚೆನ್ನಬಸಪ್ಪ ಸಮಾವೇಶ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಭಯ್ಯ ಚಿಕ್ಕಮಠ ಅವರನ್ನು ಶಾಲಾ ಶಿಕ್ಷಣ ಇಲಾಖೆ, ವಿವಿಧ ಶಿಕ್ಷಕ ಸಂಘಟನೆಗಳ ಹಾಗೂ ಶಿಕ್ಷಣ ಸಂಸ್ಥೆಗಳ ವತಿಯಿಂದ ಗೌರವಿಸಿ ಬೀಳ್ಕೊಡಲಾಗುವುದೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪುಸ್ತಕ ಬಿಡುಗಡೆ ನಾಳೆ



ಧಾರವಾಡ: ಪಂ. ಸಂಜೀವ್ ಪೋತದಾರ ಅವರ ತಬಲಾ ವಾದನ ದರ್ಪಣ ಹಾಗೂ ಪುಸ್ತಕ ಬಿಡುಗಡೆ ಸಮಾರಂಭ ಮೇ 30ರಂದು ಸಂಜೆ 5.30ಕ್ಕೆ ನಗರದ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಭವನದಲ್ಲಿ ಆಯೋಜಿಸಿದ್ದಾಗಿ ಕಲಕೇರಿ ಸಂಗೀತ ವಿದ್ಯಾಲಯದ ನಿರ್ದೇಶಕ ವೀರಣ್ಣ ಪತ್ತಾರ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಅರುಣೋದಯ ಕಲಾನಿಕೇತನ, ಶಾಸ್ತ್ರೀಯ ಸಂಗೀತ ವಿದ್ಯಾಲಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಕಾರ್ಯಕ್ರಮ ಜರುಗಲಿದೆ. ಅಂತಾರಾಷ್ಟ್ರೀಯ ತಬಲಾ ಕಲಾವಿದ ಪಂ.ರಘುನಾಥ ನಾಕೋಡ ಪುಸ್ತಕ ಬಿಡುಗಡೆ ಮಾಡಲಿದ್ದು, ಗಾಯಕ ಡಾ.ಶ್ರೀಧರ ಕುಲಕರ್ಣಿ ಪುಸ್ತಕ ಪರಿಚಯಿಸುವುದಾಗಿ ಹೇಳಿದರು. ಶಿರಸಿಯ ಸಂಜನಾ ರವೀಂದ್ರ ಪೋತದಾರ, ಹುಬ್ಬಳ್ಳಿ ಸುಷ್ಮಾ ಚವಟೆ ಅವರಿಂದ ಗಾಯನ, ಸಾಗರದ ಚೇತನಾ ರಾಜೀವರಾವ್ ಅವರ ತಬಲಾ ಸೋಲೋ, ಬಸವರಾಜ ಹಿರೇಮಠರ ಸಂವಾದಿನಿ, ವಾದಿರಾಜ ದಂಡಾಪೂರ ಅವರ ತಬಲಾ ಕಾರ್ಯಕ್ರಮ ನಡೆಯುವುದು ಎಂದರು.

ಪಂ. ಸಂಜೀವ ಪೋತದಾರ, ಡಾ. ಶ್ರೀಧರ ಕುಲಕರ್ಣಿ, ಶಶಿಧರ ಚವಟೆ ಇದ್ದರು.

ಚನ್ನಬಸಮ್ಮ ಬೆಟಗೇರಿ ನಿಧನ

ಹುಬ್ಬಳ್ಳಿ: ನಗರದ ಗಾಂಧಿ ನಗರ ನಿವಾಸಿ ಚನ್ನಬಸಮ್ಮ ಬೆಟಗೇರಿ (95) ನಿಧನರಾಗಿದ್ದಾರೆ. ಮೃತರಿಗೆ ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.





ಹುಬ್ಬಳ್ಳಿ: ಗುರುಸಾರ್ವಭೌಮ ದಾಸ ಸಾಹಿತ್ಯ ಪ್ರಾಜೆಕ್ಟ್ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ ಮಂತ್ರಾಲಯ ವತಿಯಿಂದ ಅಧಿಕ ಮಾಸದ ಅಂಗವಾಗಿ 33 ದೇವರ ನಾಮಗಳ ಭಜನಾ ಕಾರ್ಯಕ್ರಮ ಜರುಗಿತು.

ರಾಜ್ಯಮಟ್ಟದ ಕಕ್ಕಯ್ಯ ಕಪ್ ಕ್ರಿಕೆಟ್ ಪಂದ್ಯಾವಳಿ ಇಂದು

ಹುಬ್ಬಳ್ಳಿ: ಕಕ್ಕಯ್ಯ ಸಂದೇಶ ಸುದ್ದಿ ಪತ್ರಿಕೆ ಹಾಗೂ ಸಮಸ್ತ ಡೋರ ಕಕ್ಕಯ್ಯಾ ಕರ್ನಾಟಕ ಸಂಘ ಸಂಸ್ಥೆಗಳ ವತಿಯಿಂದ ಅಖಿಲ ಕರ್ನಾಟಕ ಡೋರ ಕಕ್ಕಯ್ಯ ಏಕತಾ ಸಮ್ಮೇಳನ ಹಾಗೂ ರಾಜ್ಯಮಟ್ಟದ ಕಕ್ಕಯ್ಯ ಕಪ್ 2026 ಕ್ರಿಕೆಟ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ ಎಂದು ಪತ್ರಿಕೆ ಸಂಪಾದಕ ರಾಜೇಶ ಹೋಟಕರ ತಿಳಿಸಿದರು. ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಮಟ್ಟದ ಕಕ್ಕಯ್ಯಾ ಕಪ್ ಮೇ 29 ರಂದು ಬೆಳಗ್ಗೆ 10 ಗಂಟೆಗೆ ನಗರದ ನೆಹರು ಮೈದಾನದಲ್ಲಿ ಆರಂಭವಾಗಲಿದ್ದು, ಶಾಸಕ ಮಹೇಶ ಟೆಂಗಿನಕಾಯಿ ಚಾಲನೆ ನೀಡಲಿದ್ದಾರೆ. ಮೂರು ದಿನಗಳು ಪಂದ್ಯಗಳು ನಡೆಯಲಿವೆ. 16 ತಂಡ ಭಾಗವಹಿಸಲಿವೆ ಎಂದರು. ಅಖಿಲ ಕರ್ನಾಟಕ ಡೋರ ಕಕ್ಕಯ್ಯ ಏಕತಾ ಸಮ್ಮೇಳನ ಮೇ 31 ರಂದು ನೆಹರು ಮೈದಾನದಲ್ಲಿ ಸಂಜೆ 5 ಗಂಟೆಗೆ ನಡೆಯಲಿದೆ. ಪ್ರಸ್ತುತ ಸಮಾಜದ ಸ್ಥಿತಿಗತಿ, ಸಮಾಜ ತರುಣ, ತರುಣಿಯರ ಸ್ಥಿತಿಗತಿ, ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ ಉದ್ಯಮ ಕ್ಷೇತ್ರದಲ್ಲಿ ಅವಕಾಶಗಳ ಕುರಿತು ಉಪನ್ಯಾಸ ನಡೆಸುವ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಸಾನ್ನಿಧ್ಯ ಬೀದರ್‌ನ ಗುರುದೇವ ಕಮಲಾನಂದ ಪೀಠಾಧಿಪತಿ ಗುರುಮಹಾ ನಂದಾನಾಯಿ, ಶಾಸಕ ವಿಠ್ಠಲ ಕಟಕದೊಂಡ, ರಾಯಚೂರ ಡಿವೈಎಸ್ಪಿ ಪರಮಾನಂದ ಘೋಡಕೆ, ಅಖಿಲ ಭಾರತೀಯ ಡೋರ ಕಕ್ಕಯ್ಯಾ ಸಮಾಜ ಮಂಡಳ ಅಧ್ಯಕ್ಷ ವಿಠ್ಠಲ ಮೋಳೆ, ನಿವೃತ್ತ ಪ್ರಾಂಶುಪಾಲ ಅಮೃತ ಕಟಕೆ, ವಿನಾಯಕ ಘೋಡಕೆ, ಮಹಾರಾಷ್ಟ್ರ ಕಕ್ಕಯ್ಯಾ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ದಶರಥ ನಾರಾಯಣ, ವೀರಶೈವ ಕಕ್ಕಯ್ಯಾ ಕಲ್ಯಾಣ ಮಂಡಳ ಪಕ್ಕಾರ ರವೀಂದ್ರ ಭಾಗಸರ ವಹಿಸುವರು ಎಂದು ತಿಳಿಸಿದರು. ಶಾಂತರಾಜ ಮೋಳ, ಲಕ್ಷ್ಮಿ ಕಾಂತ ಘೋಡಕೆ, ಪರಮಾನಂದ ಘೋಡಕೆ, ವಿಲಾಸ ಹೋಟಕರ ಇದ್ದರು.



ಹುಬ್ಬಳ್ಳಿ: ಬೆಳಗಾವಿ ಪ್ರಾಂತೀಯ ಸಮಾಜ ಸೇವಾ ಸಂಸ್ಥೆ (ಬಿಡಿಎಸ್) ಮತ್ತು ಧಾರವಾಡ ಕೆ.ಎನ್.ಎಚ್. ಜರ್ಮನಿ ಸಾತಿ ಯೋಜನೆಯಡಿ ಬೆಂಗೇರಿಯಲ್ಲಿ ಆಯೋಜಿಸಲಾಗಿದ್ದ ಬೇಸಿಗೆ ಶಿಬಿರದ ಮುಕ್ತಾಯ ಸಮಾರಂಭಕ್ಕೆ ಸಮಾಜ ಸೇವಕ ರಮೇಶ ಮಹಾದೇವಪ್ಪನವರ ದಂಪತಿ ಚಾಲನೆ ನೀಡಿದರು. ಫಾದರ್ ಪೀಟರ್, ಪಾಲಿಕೆ ಸದಸ್ಯ ಭೀರಪ್ಪ ಖಂಡೇಕರ, ಕಲಂದರ ಮುಲ್ಲಾ, ಮಾರುತಿ ವಾವರೆ, ಸತೀಶ ಬೊಮ್ಮನಹಳ್ಳಿ ಇದ್ದರು.

ಮಕ್ಕಳಲ್ಲಿ ಸಾಧಿಸುವ ಛಲ ಮುಖ್ಯ



- ಹುಬ್ಬಳ್ಳಿಯ ಕರ್ನಾಟಕ ಮಲ್ಲಕಂಬ ಅಕಾಡೆಮಿಯ ಮಕ್ಕಳು ಮಲ್ಲಕಂಬ ಪ್ರದರ್ಶನ ನೀಡಿ ಜನರ ಗಮನ ಸೆಳೆದರು
- ಧಾರವಾಡ ಟೆಕ್ವಾಂಡೊ ಕ್ರೀಡಾ ಸಂಸ್ಥೆಯ ಮಕ್ಕಳು ಸ್ವ-ರಕ್ಷಣಾ ಕುರಿತು ಪ್ರದರ್ಶನ ನಡೆಸಿಕೊಟ್ಟರು

ಧಾರವಾಡ: ರಾಷ್ಟ್ರಮಟ್ಟದ ಕ್ರೀಡೆಯಲ್ಲಿಯೂ ಗ್ರಾಮೀಣ ಪ್ರತಿಭೆ ಮುಂದೆ. ಇಂದಿನ ಮಕ್ಕಳಿಗೆ ಕ್ರೀಡೆ ಬಹಳ ಮುಖ್ಯ. ಅಸಾಧ್ಯವಾದುದು ಯಾವುದೂ ಇಲ್ಲ. ಆದರೆ ಛಲ ಇರಬೇಕು. ಛಲವಿದ್ದಲ್ಲಿ ಯಾವುದು ಕಷ್ಟ ಆಗಲಾರದು ಎಂದು ವಿಶ್ರಾಂತ ಕುಲಪತಿ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಕ್ರೀಡಾ ವಿಭಾಗದ ಮುಖ್ಯಸ್ಥರಾಗಿದ್ದ ಕುಸ್ತಿ ಪಟುವಾಗಿದ್ದ ಡಾ. ಬಿ.ಎಂ. ಪಾಟೀಲ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಯುವಜನ ಹಾಗೂ ಕ್ರೀಡಾ ಮಂಟಪ ಹಮ್ಮಿಕೊಂಡ ಮಲ್ಲಕಂಬ ಹಾಗೂ ಸ್ವರಕ್ಷಣಾ ಕುರಿತ ಪ್ರದರ್ಶನದಲ್ಲಿ ಭಾಗವಹಿಸಿ ಮಾತನಾಡಿ, ಧಾರವಾಡ ಸಾಹಿತ್ಯ ಸಂಸ್ಕೃತಿಗೆ ಹೇಗೆ ಹೆಸರಾಗಿದೆಯೋ ಹಾಗೆ ಕ್ರೀಡೆಗೂ ಹೆಸರಾಗಿದೆ ಎಂದರು.

ಪ್ರೊ. ಬಸವರಾಜ ತಾಳಿಕೋಟೆ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಮಲ್ಲಕಂಬ ಅಕಾಡೆಮಿ ತರಬೇತುದಾರ ಸಂತೋಷ ಸಣತಂಗಿ, ಅಂತಾರಾಷ್ಟ್ರೀಯಕ್ರೀಡಾಪಟು ಅದಿತಿಕ್ಷಾತ್ರತೇಜ ಉಪಸ್ಥಿತರಿದ್ದರು. ಯುವಜನ ಮತ್ತುಕ್ರೀಡಾ ಮಂಟಪದ ಸಂಚಾಲಕಿ ವಿಶ್ವೇಶ್ವರಿ ಬ. ಹಿರೇಮಠ ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಲಹಾ ಸಮಿತಿಯ ಸದಸ್ಯ ಲಿಂಗರಾಜ ಪಾಟೀಲ ವಂದಿಸಿದರು. ಡಾ.ಬಾಬು ಬೆಣ್ಣಿ ನಿರೂಪಿಸಿದರು. ಟೇಕ್ವಾಂಡೋ ಸಂಸ್ಥೆಯ ಅಂಜಲಿ, ಶೋಭಾ ರಸಾಳಕರ್ ಹಾಗೂ ಆನಂದ ಕಿಡದಾಳ, ಅಮೀರ್‌ಜಾನ್, ಮೈನುದ್ದೀನ್ ನವಲೂರ, ಮಕ್ಕಂ, ಮೆಹಬೂಬ್‌ಸಾಬ್ ಸವಣೂರು, ನೀಲಾ ಶಿಗ್ಗಿ ಮುಂತಾದವರಿದ್ದರು.

ಕ್ರೀಡಾ ಕಾಶಿ

ಧಾರವಾಡ ವಿದ್ಯಾಕಾಶಿ ಎನ್ನುತ್ತೇವೆ. ಅದು ಕ್ರೀಡಾ ಕಾಶಿ ಕೂಡ ಹೌದು. ಕಠಿಣ ಪರಿಶ್ರಮದಿಂದ 'ಒಲಂಪಿಕ್ ನಲ್ಲೂ ಬಂಗಾರದ ಪದಕವನ್ನು ಗಳಿಸುವುದು ಸಾಧ್ಯ. ನಾವೂ ಇಂದು ಕ್ರೀಡಾಪಟುಗಳನ್ನು ಬೆಳೆಸಬೇಕಾಗಿದೆ. ನಮ್ಮ ಸಂಸ್ಥೆಯಿಂದ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳನ್ನು ತಯಾರಿ ಮಾಡುವ ಗುರಿಯಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಸದಾನಂದ ಅಮರಾಪುರ ಹೇಳಿದರು.

"50 ವರ್ಷಗಳಿಂದ ಜಿಮ್ನಾಸ್ಟಿಕ್‌ನಲ್ಲಿ ಧಾರವಾಡದಲ್ಲಿ ಸೇವೆ ಸಲ್ಲಿಸುತ್ತಿದ್ದು ಸಾವಿರಾರು ವಿದ್ಯಾರ್ಥಿಗಳನ್ನು ತಯಾರು ಮಾಡಲಾಗಿದೆ. ನಮ್ಮ ವಿದ್ಯಾರ್ಥಿಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಪದಕಗಳನ್ನು ಪಡೆದಿದ್ದಾರೆ. ಆದರೆ ಸರ್ಕಾರ ಅವರನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯವನ್ನು ಮಾಡಬೇಕಾಗಿದೆ.

■ ವಿಠಲ್ ಮೂರ್ತಗುಡ್ಡೆ, ಬಾಲ ಮಾರುತಿ ಜಿಮ್ನಾಸ್ಟಿಕ್ ಸಂಸ್ಥೆಯ ತರಬೇತುದಾರ

ಟೆಕ್ವಾಂಡೋ ಸ್ವರಕ್ಷಣ ಕಲೆ ಅವಶ್ಯ

ಕ್ರೀಡೆ ಬದುಕುವುದನ್ನು ಕಲಿಸುತ್ತದೆ. ಕ್ರೀಡೆಯಲ್ಲಿ ಸೋತವನು ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳೇ ಇಲ್ಲ. ಸೋಲನ್ನು ಗೆಲುವನ್ನಾಗಿ ರೂಪಿಸಿಕೊಳ್ಳುವುದನ್ನು ಕ್ರೀಡೆ ಕಲಿಸುತ್ತದೆ. ಟೆಕ್ವಾಂಡೋ ಸ್ವರಕ್ಷಣ ಕಲೆಯನ್ನುಇಂದು ಪ್ರತಿಯೊಬ್ಬ ಯುವತಿಯರು ಕಲಿಯಲೇಬೇಕು. ನಮ್ಮ ದೇಶದಲ್ಲಿ ಕ್ರೀಡೆಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಸಿಗಬೇಕಿದೆ ಎಂದು ಡಾ. ಬಿ.ಎಂ. ಪಾಟೀಲ ಹೇಳಿದರು.





ಮಹಾವಿದ್ಯಾಲಯದಲ್ಲಿ ಜನಪದ ಜಾತ್ರೆ ಸಂಭ್ರಮ

ನವಲಗುಂದ: ಎನ್.ಟಿ.ಎಸ್ ಸಂಸ್ಥೆಯ ಶ್ರೀ ಶಂಕರ ಪದವಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಜನಪದ ಜಾತ್ರೆಯು ನಾಡಿನ ಸಾಂಸ್ಕೃತಿಕ ವೈಭವ ಹಾಗೂ ರೈತ ಚಳವಳಿಯ ಐತಿಹಾಸಿಕ ನೆನಪುಗಳನ್ನು ಮರುಕಳಿಸುವ ಮೂಲಕ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.

ಕಾಲೇಜು ಆವರಣವು ಸಂಪೂರ್ಣ ಗ್ರಾಮೀಣ ಸೊಗಡಿನಿಂದ ಕಂಗೊಳಿಸುತ್ತಿದ್ದರೆ, ವಿದ್ಯಾರ್ಥಿಸಮೂಹಬಿಳಿ-ಪಂಜೆ,ಬಿಳಿ-ಶರ್ಟ ಹಾಗೂ ರೈತರ ಹಸಿರು ಶಾಲುಗಳನ್ನು ಧರಿಸಿ ಜನಪದಸಂಭ್ರಮದಲ್ಲಿದ್ದರು. ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ, ನವಲಗುಂದದ ರೈತ ಬಂಡಾಯದ ಹುತಾತ್ಮರ ವೀರಗಲ್ಲಿಗೆ ಗೌರವ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯು ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿತು. ಮುಂಚೂಣಿಯಲ್ಲಿ ಸುಂದರವಾಗಿ ಅಲಂಕರಿಸಲ್ಪಟ್ಟ ಎತ್ತುಗಳು ಮತ್ತು ಚಕ್ಕಡಿ (ಎತ್ತಿನ ಬಂಡಿ) ಮೆರವಣಿಗೆಗೆ ಅಪ್ಪಟ ಗ್ರಾಮೀಣ ಕಳೆಯನ್ನು ತಂದುಕೊಟ್ಟವು. ಕುಂಭಮೇಳ ಹಾಗೂ ಆರತಿ, ಸಾಂಪ್ರದಾಯಿಕ ಉಡುಪು ಧರಿಸಿದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪೂರ್ಣಕುಂಭ ಹೊತ್ತು, ಆರತಿ ಹಿಡಿದು ಸಾಗಿದರು.

ಮೆರವಣಿಗೆಯು ಮರಳಿ ಕಾಲೇಜು ಆವರಣ ತಲುಪಿದ ಬಳಿಕ ನಡೆದ ಸಭಾ ಕಾರ್ಯಕ್ರಮದ ಕೇಂದ್ರ ಬಿಂದುವಾಗಿ ಕಾಲೇಜಿನ ಪ್ರಾಚಾರ್ಯ ಡಾ.ಎಸ್.ವಿ.ಬಡಿಗೇರ ಅವರ ನೇತೃತ್ವದಲ್ಲಿ ಎಲ್ಲ ಸಿಬ್ಬಂದಿ ಪಾಲ್ಗೊಂಡಿದ್ದರು. ಕಾಲೇಜಿನ ವಿದ್ಯಾರ್ಥಿಒಕ್ಕೂಟದಕಾರ್ಯಾಧ್ಯಕ್ಷಡಾ.ಎಂ.ಎನ್.ಹಾರೋಗೇರಿ ಹಾಗೂ ಸಾಂಸ್ಕೃತಿಕ ಕಾರ್ಯಾಧ್ಯಕ್ಷ ಡಾ.ಆರ್.ಎಸ್.ಹಿರೇಮಠ, ಕಾಲೇಜಿನ ಆಡಳಿತ ಮಂಡಳಿ, ಉಪನ್ಯಾಸಕ ವೃಂದ, ನೂರಾರು ವಿದ್ಯಾರ್ಥಿಗಳು ಹಾಗೂ ಸ್ಥಳೀಯ ಸಾರ್ವಜನಿಕರು ಈ ಸಾಂಸ್ಕೃತಿಕ ಮಹಾಸಂಗಮಕ್ಕೆ ಸಾಕ್ಷಿಯಾದರು. ಇಡೀ ದಿನ ಕಾಲೇಜು ಆವರಣದಲ್ಲಿ ಜನಪದ ಗೀತೆಗಳ ಗಾಯನ ಮತ್ತು ಗ್ರಾಮೀಣ ಕ್ರೀಡೆಗಳ ಸಂಭ್ರಮ ಮನೆಮಾಡಿತ್ತು. ಕಾಲೇಜಿನ ಪ್ರಾಧ್ಯಾಪಕರಾದ ಡಾ.ಶೀಲಾ ತುಬುಚಿ, ಡಾ.ಎ.ಜಿ.ಜಕ್ಕನಗೌಡ್ರ, ಡಾ.ಜಿ.ಎಸ್.ಚಿಣಗಿ, ಎಂ.ವಿ.ಹೊಳೆಯಣ್ಣವರ ಹಾಗೂ ಬಿ.ಕೆ. ಮಹೇಶ ಮತ್ತು ಪ್ರೊ. ಅಕ್ಕಮ್ಮ ಯಮನೂರ, ವಿಜಯಲಕ್ಷ್ಮಿ ಸಾವಂತ, ಅಂದಾನಿಗೌಡ ಕಿತ್ತೂರು, ದಾವಲಸಾಬ ಕಲಬುರಗಿ ಮತ್ತು ವಿದ್ಯಾರ್ಥಿ ಪ್ರತಿನಿಧಿಗಳಾದ ಕುಮಾರ ಶಿವಯೋಗಿ ಹರಪನಹಳ್ಳಿ, ದೇವರಾಜ ಮತ್ತು ಶ್ವೇತಾ ಹೆಬಸೂರು, ಲಕ್ಷ್ಮೀ ಕಂಬಳಿ ಹಾಗೂ ಮಹಾವಿದ್ಯಾಲಯದ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡರು.



ವೀರ ಸಾವರ್ಕರ್ ಜನ್ಮದಿನಾಚರಣೆ

ಧಾರವಾಡ: ನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ವೀರ ಸಾವರ್ಕರ್ ಜಯಂತಿ ಆಚರಿಸಲಾಯಿತು.

ವಿದ್ಯಾರ್ಥಿ ಅರ್ಣವ್ ಅಕ್ಕೋಲಿ, ವೀರ ಸಾವರ್ಕರರ ಜೀವನ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾತ್ರ ಎಂಬ ವಿಷಯದ ಕುರಿತು ಮಾತನಾಡಿದರು. ಪ್ರಾಚಾರ್ಯೆ ಡಾ. ಅನಿತಾ ರೈ, ಶಿಕ್ಷಕ ಶಿಕ್ಷಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು. ಅಖಿಲೇಶ ಮಾಳವಾಡಿ ನಿರೂಪಿಸಿದರು. ಅಮೋಘ ಚಚಡಿ ವಂದಿಸಿದರು.



ಹುಬ್ಬಳ್ಳಿ ಗ್ರಾಮೀಣ ಡಿವೈಎಸ್‌ಪಿ ಕಚೇರಿಗೆ ಆದೇಶ

ಹುಬ್ಬಳ್ಳಿ: ಧಾರವಾಡ ಜಿಲ್ಲೆಯಲ್ಲಿ ಒಂದೇ ಪೊಲೀಸ್ ಉಪವಿಭಾಗ ಇದ್ದು ಕಾರ್ಯ ಒತ್ತಡ ಹೆಚ್ಚುತ್ತಿರುವುದರಿಂದ ಈ ಭಾಗದ ಜನರ ಬಹುದಿನ ಬೇಡಿಕೆ ನೂತನ ಹುಬ್ಬಳ್ಳಿ ಗ್ರಾಮೀಣ ಡಿ.ವೈ.ಎಸ್.ಪಿ. ಕಚೇರಿಯನ್ನು ಪ್ರಾರಂಭಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಹಾಗೂ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಇದೊಂದು ವಿಶೇಷ ಪ್ರಕರಣ ಎಂದು ಪರಿಗಣಿಸಿ ಆದೇಶ ಹೊರಡಿಸಿದ್ದಾರೆ ಎಂದು ಶಾಸಕ ಎನ್.ಎಚ್. ಕೋನರಡ್ಡಿ ಹೇಳಿದರು.



ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ ಅವರು, ಧಾರವಾಡ ಜಿಲ್ಲೆ ವಿಭಜನೆಗೊಂಡ ನಂತರ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಘೋರ ಅಪರಾಧ ಪ್ರಕರಣ ಮತ್ತು ಲಘು ಅಪರಾಧ ಪ್ರಕರಣಗಳು ಅಲ್ಲದೇ ಮಹದಾಯಿ, ಕಳಸಾ-ಬಂಡೂರಿ ಹಾಗೂ ರೈತರ, ಕಾರ್ಮಿಕ, ವಿದ್ಯಾರ್ಥಿಗಳ ಚಳುವಳಿಗಳು ನಡೆಯುತ್ತಿರುವುದರಿಂದ ಹುಬ್ಬಳ್ಳಿ ಗ್ರಾಮೀಣ, ನವಲಗುಂದ, ಅಣ್ಣಿಗೇರಿ ಹಾಗೂ ಕುಂದಗೋಳ, ಗುಡಗೇರಿ ಪೊಲೀಸ್ ಠಾಣೆಗಳ ವ್ಯಾಪ್ತಿಯನ್ನು ಹೊಂದಿರುವ ನೂತನ ಹುಬ್ಬಳ್ಳಿ ಗ್ರಾಮೀಣ ಡಿ.ವೈ.ಎಸ್.ಪಿ. ಕಚೇರಿಯನ್ನು ಪ್ರಾರಂಭಿಸಲು ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯ ಕಟ್ಟಡ ಉದ್ಘಾಟನೆಗೆ ಬಂದಾಗ ಘೋಷಿಸಿದಂತೆ ಇದೊಂದು ವಿಶೇಷ ಪ್ರಕರಣ ಆದೇಶ ಹೊರಡಿಸಿದ್ದಾರೆ ಎಂದರು.



ನವಲಗುಂದ: ಶಾಸಕ ಎನ್.ಎಚ್. ಕೋನರಡ್ಡಿ ಅವರು ನಗರದ ಈದ್ಗಾ ಮೈದಾನದಲ್ಲಿ ನಮಾಜ ಮಾಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಾರ್ಥಿಸಿದರು. ನವಲಗುಂದ ಈದ್ಗಾ ಅಭಿವೃದ್ಧಿ ಪಡಿಸಲು ಸಮಾಜ ಹಾಗೂ ಅಂಜುಮನ್ ಸಂಸ್ಥೆ ಮುಂದಾಗಬೇಕು ಅದಕ್ಕೆ ಅನುದಾನ ಬಿಡುಗಡೆ ಮಾಡಲು ಕೋನರಡ್ಡಿ ಭರವಸೆ ನೀಡಿದರು. ಸಲೀಂಖಾಜಿ ಗುರುಗಳು, ಅಂಜುಮನ್ ಅಧ್ಯಕ್ಷರಾದ ಅಲ್ಲಾಸಾಬ ಕಲಕುಟ್ರಿ, ಉಸ್ಮಾನಸಾಬ ಬಬರ್ಚಿ, ಸೈಪುದ್ದಿನ ಅವರಾಧಿ, ಮೋದಿನಸಾಬ ಶಿರೂರ, ಅನ್ವರ ಮೂಲಿಮನಿ, ಸಿರಾಜುದ್ದಿನ ಧಾರವಾಡ, ಅಬ್ಬಾಸಾಲಿ ದೇವರಿಡು ಇತರರಿದ್ದರು.

ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗಿ

ಅಣ್ಣಿಗೇರಿ: ಬಕ್ರೀದ್ ಹಬ್ಬದ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿದ ಸರ್ವರಿಗೂ ಶಾಸಕ ಎನ್.ಹೆಚ್.ಕೋನರಡ್ಡಿ ಶುಭ ಕೋರಿದರು.

ಇಲ್ಲಿಯ ಈದಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶಾದಿಮಹಲ್ ಹತ್ತಿರವಿರುವ 51 ಗುಂಟೆ ಜಾಗದಲ್ಲಿ ಕಟ್ಟಡ ನಿರ್ಮಾಣಕ್ಕಾಗಿ 20 ಲಕ್ಷ ರೂ.ಗಳ ಅನುದಾನಕ್ಕಾಗಿ ಮನವಿಯನ್ನು ಸಲ್ಲಿಸಿದ್ದು ಅದನ್ನು ಬಿಡುಗಡೆಗೊಳಿಸಲು ಪ್ರಯತ್ನಿಸಲಾಗುವುದು ಎಂದರು. ಧರ್ಮಗುರುಗಳಾದ ಅಲ್ ಹಾಜ್ ಅಶ್ರಫ ಖಾಜಿ, ಅಲ್ ಹಾಜ್ ಮಮ್ಮದಶಫಿ ಖಾಜಿ, ಅಬ್ದುಲಖಾದರ ನಡಕಟ್ಟಿನ, ಪುರಸಭೆ ಅಧ್ಯಕ್ಷ ಶಿವಾನಂದ ಬೆಹಾರ, ಉಪಾಧ್ಯಕ್ಷ ನಾಗರಾಜ ದಳವಾಯಿ, ಚೇರಮನ್ ಇಮಾಮ ದರವಾನ, ಸದಸ್ಯರಾದ ಈಶ್ವರ ಕಾಳಪ್ಪನವರ, ಮಮ್ಮದಶಾದೀಕ ಠಾಣೇದ, ಬಾಬಾಜಾನ ಮುಲ್ಲಾನವರ, ಹಸನಸಾಬ ಸುಂಕದ, ಅಂಜುಮನ್ ಸಂಸ್ಥೆಯ ಪಕ್ರುಅಲಿ ಲೋಕಾಪೂರ, ಬಾಶುಸಾಬ ನವಲಗುಂದ, ಹಸನಸಾಬ ಗಡ್ಡದ ಇತರರಿದ್ದರು.





ಕುಂದಗೋಳ: ತಾಲೂಕಿನ ವಿವಿಧೆಡೆ ಗುರುವಾರ ಮುಸ್ಲಿಂ ಸಮುದಾಯದವರು ಬಕ್ರೀದ್ ನ್ನು ಸೌಹಾರ್ದತೆಯಿಂದ ಆಚರಿಸಿದರು. ಪಟ್ಟಣದ ಕಿಲ್ಲಾ ಓಣಿಯ ಯುದಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಿತು. ಸಮುದಾಯದ ಹೈದರಾಲಿ ದರ್ಗಾ ಕಮಿಟಿ ಅಧ್ಯಕ್ಷ ಎಂ.ಎಂ. ಮಾಕಾಂದಾರ್, ಮೌಲಾನಾ ಹೈದರಅಲಿ ಮಾಕಾಂದಾರ್ ಅಂಜುಮನ್ ಅಧ್ಯಕ್ಷ ಕೈಯಿಮ್ ನಾಲಬಂದ, ಸಲಿಮ್ ಕ್ಯಾಲಕೊಂಡ, ಆಶಿಮಫಿರ್ ಮಾಕಾಂದಾರ್, ಅನ್ವರ್ ಅಲಿ ಮಾಕಾಂದಾರ್, ಮಹಬೂಬ್ ಟಪಾಲ್, ಸಲಿಮ್ ಜಾಗಿರದಾರ್,ಬಾಬಾಸಾಬ್ ಜಂಗಲಿ,ಪಾರುಕ್ ಮಾಕಾಂದಾರ್ ಅಡ್ಡು ಮಾಕಾಂದಾರ್ ಇತರರಿದ್ದರು.

ಹುಬ್ಬಳ್ಳಿಯಲ್ಲಿ ಸೌಹಾರ್ದತೆಯ ಬಕ್ರೀದ್



ಹುಬ್ಬಳ್ಳಿ: ನಗರದಲ್ಲಿ ಬಕ್ರೀದ್ ಹಬ್ಬವನ್ನು ಮುಸ್ಲಿಂ ಸಮುದಾಯದವರು ಗುರುವಾರ ಸಂಭ್ರಮದಿಂದ ಆಚರಿಸಿದರು. ಇಲ್ಲಿಯ ರಾಣಿ ಚನ್ನಮ್ಮ ಮೈದಾನದಲ್ಲಿ(ಈದ್ಗಾ), ಹಳೇ ಹುಬ್ಬಳ್ಳಿ, ಕಾರವಾರ ರಸ್ತೆ ಸಾವಿರಾರು ಸಂಖ್ಯೆಯಲ್ಲಿ ಸೇರಿ ಮುಸ್ಲಿಂ ಸಮುದಾಯದವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಮಾಜಿ ಸಚಿವ, ಅಂಜುಮನ್ ಏ ಇಸ್ಲಾಂ ಅಧ್ಯಕ್ಷ ಎ.ಎಂ. ಹಿಂಡಸಗೇರಿ, ಹು-ಧಾ ಮಹಾನಗರ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಲ್ತಾಫಹುಸೇನ ಹಳ್ಳೂರ, ಪಾಲಿಕೆ ಸದಸ್ಯ ಇಲಿಯಾಸ ಮನಿಯಾರ, ದಾದಾಹಯಾತ ಖೈರಾತಿ, ಅಬ್ದುಲ್ ಬಶೀರ ಹಳ್ಳೂರ. ಅಂಜುಮನ್ ಏ ಇಸ್ಲಾಂ ಅಧ್ಯಕ್ಷ ಎ.ಎಂ. ಹಿಂಡಸಗೇರಿ ಇದ್ದರು. ಪ್ರಾರ್ಥನೆ ಮುಕ್ತಾಯದ ನಂತರ ಮುಸಲ್ಮಾನರು ಇಲ್ಲಿಯ ಮೂರುಸಾವಿರ ಮಠಕ್ಕೆ ತೆರಳಿ ಶ್ರೀಮಠದ ಡಾ. ಗುರುಸಿದ್ಧ ರಾಜಯೋಗೀಂದ್ರ ಶ್ರೀಗಳನ್ನು ಸನ್ಮಾನಿಸಿದರು.

ಪ್ರತ್ಯೇಕ ಪಾಲಿಕೆ ಹೋರಾಟ: ಬೆರಳೆಣಿಕೆ ಜನರ ಉಪವಾಸ ಧರಣಿ



ಧಾರವಾಡ: ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆ ಕೂಗಿಗೆ ರಾಜ್ಯಪಾಲರು ಅಂಕಿತ ಬೆನ್ನಲ್ಲೇ ಕಳೆದ 13 ದಿನಗಳಿಂದ ಸ್ವಾಭಿಮಾನಿ ಹೋರಾಟ ಸಮಿತಿ ನಡೆಸಿದ ಸತ್ಯಪ್ರತಿಪಾದನೆ ಸತ್ಯಾಗ್ರಹ14ನೇ ದಿನ ಗುರುವಾರ ಬೆರಳೆಣಿಕೆ ಜನರ ಉಪವಾಸ ಧರಣಿಯೊಂದಿಗೆ ತೀವ್ರತೆ ಕಳೆದುಕೊಂಡು ಗೌಣವಾದಂತೆ ಕಂಡುಬಂದಿದೆ.

ಯಾವ ಹೋರಾಟವು ಸಾರ್ವಜನಿಕರ ಗಮನ ಸೆಳೆದು ತಾರ್ಕಿಕ ಅಂತ್ಯದತ್ತ ಮುಖ ಮಾಡಿತ್ತೋ ಅದೇ ಹೋರಾಟದ ಅಂತಿಮ ಹಂತದಲ್ಲಿ ಇಂತಹ ನಿರಾಸಕ್ತಿ ಮೂಡಿರುವುದು ಈಗ ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಪ್ರತ್ಯೇಕ ಪಾಲಿಕೆ ಧಾರವಾಡದ ದೀರ್ಘಕಾಲದ ಕನಸು. ಈ ನಿಟ್ಟಿನಲ್ಲಿ ಹೋರಾಟ ಸಮಿತಿ ಹಮ್ಮಿಕೊಂಡಿದ್ದ ಸತ್ಯಾಗ್ರಹ ಆರಂಭದಲ್ಲಿ ಹಂತ ಹಂತವಾಗಿ ಜನಬೆಂಬಲ ಗಳಿಸುತ್ತ ಸಾಗಿತ್ತು. ಆದರೆ 14ನೇ ದಿನ ಗುರುವಾರ ಧರಣಿ ನಿರತರ ಸಂಖ್ಯೆ ಕ್ಷೀಣಿಸಿದೆ. ರಾಜ್ಯಪಾಲರು ಪ್ರತ್ಯೇಕ ಪಾಲಿಕೆ ರಚನೆಗೆ ಅಂಕಿತ ಹಾಕಿದ್ದೇ ಹೋರಾಟದ ದೊಡ್ಡ ಯಶಸ್ಸು. ಆದರೆ ಆ ಯಶಸ್ಸಿನ ಅಧಿಕೃತ ಮುದ್ರೆ ಬಿದ್ದ ತಕ್ಷಣವೇ ಹೋರಾಟಗಾರರಲ್ಲಿ ನಮ್ಮ ಕೆಲಸ ಮುಗಿಯಿತು ಎಂಬ ಸಮಾಧಾನದ ಭಾವನೆ ಮೂಡಿದೆಯೇ? ಎಂಬ ಅನುಮಾನ ಕಾಡುತ್ತಿದೆ. ರಾಜ್ಯಪಾಲರ ಅಂಕಿತದ ನಂತರ ಅಧಿಸೂಚನೆ ಹೊರಡಿಸಲು ಸರ್ಕಾರಕ್ಕೆ ಜೂ.9ರವರೆಗೆ ಗಡುವು ನೀಡಿದ ಸಮಿತಿ ಆಡಳಿತಾತ್ಮಕ ಪ್ರಕ್ರಿಯೆಗಳ ಜಾರಿಗೆ ಆಗ್ರಹಿಸಲು ಸಮಿತಿಯು ಬಲಿಷ್ಠ ಕಾರ್ಯತಂತ್ರ ರೂಪಿಸುವಲ್ಲಿ ಎಡವಿದಂತೆ ಕಾಣುತ್ತಿದೆ. ಧರಣಿ ಮುಂದುವರಿಕೆಗೆ ಔಪಚಾರಿಕವಾಗಿ ಸತ್ಯಾಗ್ರಹ ನಡೆಸಿದಂತೆ ಭಾಸವಾಗುತ್ತಿದೆ.

ರಾಜ್ಯಪಾಲರ ಅಂಕಿತ ಕೇವಲ ಮೊದಲ ಹೆಜ್ಜೆಯಷ್ಟೇ. ಪ್ರತ್ಯೇಕ ಪಾಲಿಕೆ ಸಂಪೂರ್ಣವಾಗಿ ಘೋಷಣೆಗೆ ಕೆಲ ಪ್ರಕ್ರಿಯೆಗಳು ಬಾಕಿ ಇವೆ. ಸರ್ಕಾರದ ಮಟ್ಟದಲ್ಲಿ ಗೆಜೆಟ್ ಅಧಿಸೂಚನೆ ಹೊರಡಿಸುವುದು, ಆಸ್ತಿ ಮತ್ತು ಸಿಬ್ಬಂದಿ ವಿಭಜನೆ, ಪ್ರತ್ಯೇಕ ಬಜೆಟ್ ಹಂಚಿಕೆ ಅಂತಹ ತಾಂತ್ರಿಕ ಸವಾಲುಗಳು ಇನ್ನೂ ಎದುರಿಗಿವೆ. ಇಂತಹ ನಿರ್ಣಾಯಕ ಹಂತದಲ್ಲಿ ಹೋರಾಟವು ಗೌಣವಾದರೆ ಅಥವಾ ಹೋರಾಟಗಾರರ ಒಗ್ಗಟ್ಟು ಸಡಿಲವಾದರೆ ಸರ್ಕಾರಿ ಮಟ್ಟದಲ್ಲಿ ಪ್ರಕ್ರಿಯೆಗಳು ವಿಳಂಬವಾಗುವ ಸಾಧ್ಯತೆ ಎಂಬ ಮಾತೂ ಕೇಳಿಬರುತ್ತಿದೆ.

ಅರವಿಂದ ಏಗನಗೌಡರ, ನೀಲವ್ವ ಅರವಳದ, ಲಕ್ಷ್ಮಿ ಹಿಂಡಸಗೇರಿ, ಕರೆಪ್ಪ ಸುಣಗಾರ, ಶಂಕರ ಹೂಗಾರ ಇವರುಗಳು ಬೆಳಗ್ಗೆ 10ರಿಂದ ಸಂಜೆ 5ರವರೆಗು ಉಪವಾಸ ಕೈಗೊಂಡರು. ಧರಣಿಯಲ್ಲಿ ಬಿ.ಡಿ.ಹಿರೇಮಠ, ಮಾದೇವ ಹೊರಟ್ಟಿ, ವೆಂಕಟೇಶ ಮಾಚಕನೂರ, ದಾನಪ್ಪ ಕಬ್ಬೇರ, ಪ್ರಕಾಶ್ ಘಾಟಗೆ, ನಾಗರಾಜ ಗೌರಿ, ರಾಜಶೇಖರ್ ಕಮತಿ, ಕವಿತಾ ಕಬ್ಬೇರ, ವಸಂತ ಅರ್ಕಾಚಾರ, ಬಸವರಾಜ ಜಾಧವ ಇದ್ದರು.

ಪ್ರತ್ಯೇಕ ಪಾಲಿಕೆ ವಿಳಂಬಕ್ಕೆ ಬಿಜೆಪಿ ಕಾರಣ

ಧಾರವಾಡ: ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಯ ವಿಳಂಬಕ್ಕೆ ಬಿಜೆಪಿ ನಾಯಕರ ದ್ವಂದ್ವ ನೀತಿಯೇ ಮುಖ್ಯ ಕಾರಣ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರವಿಂದ ಏಗನಗೌಡರ ಹಾಗೂ ಪಾಲಿಕೆ ಸದಸ್ಯ ರಾಜಶೇಖರ ಕಮತಿ ಜಂಟಿ ಆರೋಪಿಸಿದ್ದಾರೆ.





ಪ್ರಕಟಣೆ ನೀಡಿದ ಅವರು, ಜನತೆಗೆ ದ್ರೋಹ ಬಗೆದು ಪ್ರತ್ಯೇಕಪಾಲಿಕೆ ಪ್ರಕ್ರಿಯೆ ಹಳ್ಳಹಿಡಿಸಿದ್ದೇ ಬಿಜೆಪಿ ನಾಯಕರು. ಕಾಂಗ್ರೆಸ್ ಸರ್ಕಾರದ ಬದ್ಧತೆ ಪ್ರಶ್ನಿಸುವ ನೈತಿಕತೆ ಇಲ್ಲ ಬಿಜೆಪಿಗಿಲ್ಲ ಎಂದಿದ್ದಾರೆ. ಕಾಂಗ್ರೆಸ್ ಸರ್ಕಾರದ ನಾಯಕರು, ಪ್ರತ್ಯೇಕ ಪಾಲಿಕೆ ಹೋರಾಟಗಾರರು ರಾಜ್ಯಪಾಲರನ್ನು ಭೇಟಿಯಾಗಿ ಮನವರಿಕೆ ಮಾಡಿದರೂ, ರಾಜ್ಯಪಾಲರು ಅಂಕಿತ ಹಾಕಲು ನಿರಾಕರಿಸಿ, ಪ್ರಹ್ಲಾದ್ ಜೋಶಿ ಹಾಗೂ ಅರವಿಂದ ಬೆಲ್ಲದ ಒಪ್ಪಿಗೆ ಇಲ್ಲದ ಸಹಿ ಮಾಡಲ್ಲ ಎಂದಿದ್ದು ಏಕೆ? ಎಂದು ಪ್ರಶ್ನಿಸಿದ್ದಾರೆ. ಧಾರವಾಡ ಪಶ್ಚಿಮ ಕ್ಷೇತ್ರದ ಶಾಸಕ ಅರವಿಂದ ಬೆಲ್ಲದ ಅವರು ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ಬೇಡ ಎಂದು ರಾಜ್ಯಪಾಲರಿಗೆ ಪತ್ರ ಬರೆದು ಪ್ರಕ್ರಿಯೆಗೆ ಅಡ್ಡಿಪಡಿಸಿದ್ದಾರೆ. ಹೀಗಿದ್ದಾಗ ಕಾಂಗ್ರೆಸ್ ಸರ್ಕಾದ ಕಡೆಗೆ ಬೊಟ್ಟು ಮಾಡುವುದು ಸರಿಯಲ್ಲ ಎಂದಿದ್ದಾರೆ.

ಸ್ವತಃ ಧಾರವಾಡದ ಜ್ಯೋತಿ ಪಾಟೀಲ್ ಅವರು ಕಳೆದ ಏಪ್ರಿಲ್‌ನಲ್ಲಿ ನಡೆದ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಪ್ರತ್ಯೇಕ ಪಾಲಿಕೆ ರಚನೆಯ ವಿರುದ್ಧವಾಗಿ ನಿರ್ಣಯ ಅಂಗೀಕರಿಸಿ, ಧಾರವಾಡದ ಜನತೆಯ ಹೋರಾಟದ ಬೆನ್ನಿಗೆ ಚೂರಿ ಹಾಕಿದ್ದಾರೆ. ಒಂದೆಡೆ ಪ್ರತ್ಯೇಕ ಪಾಲಿಕೆಗೆ ವಿರುದ್ಧವಾಗಿ ನಿರ್ಣಯ ಪಾಸ್ ಮಾಡಿ, ಮತ್ತೊಂದೆಡೆ ಕಾಂಗ್ರೆಸ್ ಬದ್ಧತೆ ಪ್ರಶ್ನಿಸುವ ಅವರ ನಡೆ ದ್ವಂದ್ವ ನಿಲುವು ತೋರಿಸುತ್ತದೆ ಎಂದು ದೂರಿದ್ದಾರೆ.

ಅರಿವು ಕೇಂದ್ರಗಳಲ್ಲಿ ವಿವಿಧ ಪಠ್ಯ, ಪಠ್ಯೇತರ ಚಟುವಟಿಕೆ

ಅಳ್ನಾವರ: ಸಮೀಪದ ಕಡಬಗಟ್ಟಿ ಮತ್ತು ಬೆಣಚಿ ಅರಿವು ಕೇಂದ್ರಗಳಲ್ಲಿ ಕಳೆದ ಒಂದೂವರೆ ತಿಂಗಳಿನಿಂದ ಶಾಲಾ ರಜೆಯ ಅವಧಿಯಲ್ಲಿ ಮಕ್ಕಳಿಗಾಗಿ ವಿವಿಧ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಆಯೋಜಿಸಲಾಗಿದೆ.



2019 ರಲ್ಲಿ ಶಿಕ್ಷಣ(ಗ್ರಂಥಾಲಯ) ಇಲಾಖೆಯಿಂದ ಬೇರ್ಪಟ್ಟು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ವಿಲೀನಗೊಂಡ ನಂತರ ಬಹಳಷ್ಟು ಸುಧಾರಣೆ ಕಂಡಿದ್ದು,ಇಲಾಖೆಯ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ ಅವರ ಕಾಳಜಿ ಜೊತೆಗೆ ಆಸಕ್ತಿಯಿಂದ ಅರಿವು ಕೇಂದ್ರಗಳು ಬದಲಾವಣೆಯತ್ತ ಸಾಗಿವೆ ಎನ್ನುವ ಅಭಿಪ್ರಾಯ ಮೇಲ್ವಿಚಾರಕರಿಂದ ವ್ಯಕ್ತವಾಗುತ್ತಿದೆ. ಶಾಲಾ ರಜೆಯ ಅವಧಿಯಲ್ಲಿ ಮಕ್ಕಳು ಶೈಕ್ಷಣಿಕ ಚಟುವಟಿಕೆಗಳಿಂದ ವಿಮುಖವಾಗದಂತೆ ನೋಡಿಕೊಳ್ಳಲು ಧಾರವಾಡ ಜಿಲ್ಲೆಯಲ್ಲಿ ಜಿ.ಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭುವನೇಶ ಪಾಟೀಲ ಅವರ ಆಸಕ್ತಿಯಿಂದ ಸುಮಾರು ಒಂದೂವರೆ ತಿಂಗಳು ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಅರಿವು ಕೇಂದ್ರಗಳಲ್ಲಿ ಬೇಸಿಗೆ ಬೆಸುಗೆ ಹೆಸರಿನ ಶಿಬಿರಗಳನ್ನು ಆಯೋಜಿಸಿ ಅನೇಕ ಚಟುವಟಿಕೆಗಳನ್ನು ಏರ್ಪಡಿಸಿ ಮಕ್ಕಳ ಪ್ರಗತಿಗೆ ಕಾರಣವಾಗುವಂತೆ ಮಾಡಿರುವುದು ವಿಶೇಷವೆನಿಸಿದೆ.

ತಾಲೂಕಿನ ನಾಲ್ಕು ಗ್ರಾಮ ಪಂಚಾಯತಿಗಳ ಪೈಕಿ ಬೆಣಚಿ ಮತ್ತು ಕಡಬಗಟ್ಟಿ ಅರಿವು ಕೇಂದ್ರಗಳು ಜೊತೆಗೆ ಜಿಲ್ಲೆಯ ಅನೇಕ ಅರಿವು ಕೇಂದ್ರಗಳಲ್ಲಿ ಬೇಸಿಗೆ ಶಿಬಿರಗಳನ್ನು ಆಯೋಜಿಸಿದ್ದು ಅಲ್ಲಿನ ಮೇಲ್ವಿಚಾರಕರು ಸಹ ಅತ್ಯಂತ ಆಸಕ್ತಿಯಿಂದ ಮಕ್ಕಳನ್ನು ಗ್ರಂಥಾಲಯಗಳಿಗೆ ಕರೆದುಕೊಂಡು ಬಂದು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಮಾಡಿದ್ದು, ಗ್ರಂಥಾಲಯಗಳ ಸದ್ವಿನಿಯೋಗ ಎಲ್ಲರಿಗೂತಲುಪುವಂತೆಮಾಡುತ್ತಿದ್ದಾರೆ. ರಾಜ್ಯದ ಪ್ರತಿಯೊಂದು ಅರಿವು ಕೇಂದ್ರಗಳಲ್ಲಿ ಡಿಜಿಟಲಿಕರಣ ಸೌಲಭ್ಯಗಳನ್ನು ಒದಗಿಸಿದ್ದು ಮಕ್ಕಳಿಂದ ವೃದ್ಧರಿಗೆ ಅಗತ್ಯವಿರುವ ಸಾವಿರಾರು ಪುಸ್ತಕಗಳು ಲಭ್ಯವಿವೆ. ಅಳ್ನಾವರ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಪ್ರಶಾಂತ ತುರಕಾಣಿ ಮಾತನಾಡಿ, ಪಂಚಾಯತ್ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರಿವು ಕೇಂದ್ರಗಳಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಪುಸ್ತಕಗಳು ಲಭ್ಯವಿದ್ದು ಇವುಗಳ ಸದುಪಯೋಗ ಪಡಿಸಿಕೊಳ್ಳಬೇಕು. ಗ್ರಂಥಾಲಯಗಳಿಗೆ ಮೂಲ ಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ ಎಂದಿದ್ದಾರೆ.

ಕಿರುಸುದ್ದಿ

ಚೆನ್ನೈನ ಶಾಲೆಯಿಂದ ತಲಕಾವೇರಿಯಲ್ಲಿ ಸಂಗೀತ ಕಾರ್ಯಕ್ರಮ

ಮಡಿಕೇರಿ: ಚೆನ್ನೈನ ಮನೋಗಾನಂ ಸಂಗೀತ ವಿದ್ಯಾಸಂಸ್ಥೆಯು ಮಡಿಕೇರಿ ಹಾಗೂ ತಲಕಾವೇರಿಯಲ್ಲಿ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಮೇ 30ರಂದು ಬೆಳಗ್ಗೆ 8.30ಕ್ಕೆ ತಲಕಾವೇರಿಯಲ್ಲಿ ಹಾಗೂ 31ರಂದು ಬೆಳಗ್ಗೆ 7ಗಂಟೆಗೆ ಮಡಿಕೇರಿಯ ಕಂಚಿ ಕಾಮಾಕ್ಷಿ ದೇವಾಲಯದಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ಚೆನ್ನೈನ ಈ ಸಂಗೀತ ವಿದ್ಯಾ ಸಂಸ್ಥೆ ಪ್ರತಿ ವರ್ಷ ತನ್ನ ವಿದ್ಯಾರ್ಥಿಗಳನ್ನು ದೇಶದ ವಿವಿಧ ದೇವಾಲಯಗಳಿಗೆ ಕರೆದುಕೊಂಡು ಹೋಗಿ ಅಲ್ಲಿ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ. ತನ್ನ ಆರು ಮತ್ತು ಏಳನೇ ವರ್ಷದ ಕಾರ್ಯಕ್ರಮದ ಅಂಗವಾಗಿ ಕೊಡಗಿನಲ್ಲಿ ಸಂಗೀತ ಸುಧೆ ಹರಿದು ಬರಲಿದ್ದು, ಮಕ್ಕಳ ಸಂಗೀತದೊಂದಿಗೆ ಪಿಟೀಲು ವಾದನ ಕೂಡಾ ಇರಲಿದೆ. ಪತ್ರಕರ್ತ ಜಿ.ಚಿದ್ವಿಲಾಸ್ ಅವರ ಸಹಕಾರದಿಂದ ಈ ಕಾರ್ಯಕ್ರಮಗಳು ನಡೆಯುತ್ತಿವೆ ಎಂದು ಸಂಸ್ಥೆಯ ಪ್ರಾಂಶುಪಾಲೆ ರಮಾಶ್ರೀ ತಿಳಿಸಿದ್ದಾರೆ.

ರಾಷ್ಟ್ರ ಮಟ್ಟದ ಸ್ಪರ್ಧೆಗೆ ಮಿಲನಾ ಭರತ್ ಆಯ್ಕೆ

ಮಡಿಕೇರಿ: ಬೆಂಗಳೂರಿನಲ್ಲಿ ನಡೆದ 2025– 26ನೇ ಸಾಲಿನ ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಭರತನಾಟ್ಯ, ಕೂಚುಪುಡಿ ಮತ್ತು ಒಡಿಸ್ಸಿ ವಿಭಾಗದಲ್ಲಿ ಕೊಡಗಿನ ಮಿಲನಾ ಕೆ.ಭರತ್ ಅವರು ಪ್ರಶಸ್ತಿ ಪಡೆಯುವುದರೊಂದಿಗೆ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಕೊಡಗು ಜಿಲ್ಲೆಯ ಮೀನುಗಾರಿಕೆ ಇಲಾಖೆಯಲ್ಲಿ ಸಹಾಯಕ ನಿರ್ದೇಶಕಿಯಾಗಿರುವ



ಮಿಲನಾ ಅವರು ನೃತ್ಯ ಗುರು ವಿದ್ವಾನ್ ರಾಜೇಶ್ ಆಚಾರ್ಯ ಅವರಿಂದ ಮಾರ್ಗದರ್ಶನ ಪಡೆದುಕೊಂಡಿದ್ದರು. ಅಭಿನಯ ಕಲಾ ಮಿಲನ ಚಾರಿಟೇಬಲ್ ಟ್ರಸ್ಟ್ ಅಡಿಯಲ್ಲಿ ಅವರು ಶನಿವಾರಸಂತೆ ಮತ್ತು ಭಾಗಮಂಡಲದಲ್ಲಿ ನಾಟ್ಯ ಮಿಲನ ನೃತ್ಯ ಶಾಲೆಯನ್ನು ಮುನ್ನಡೆಸುತ್ತಿದ್ದಾರೆ.

ಸಾಲಬಾಧೆ: ರೈತ ಆತ್ಮಹತ್ಯೆ

ಹಾವೇರಿ: ಸಾಲಬಾಧೆ ತಾಳಲಾರದೆ ರೈತರೊಬ್ಬರು ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಹಿರೇಕೆರೂರು ತಾಲೂಕು ಹಾದ್ರಿಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಕೃಷ್ಣಪ್ಪ ಬಸವರಾಜಪ್ಪ ಬೆಳಕಿನಕೊಂಡ (35) ಮೃತ ರೈತ. ಮೃತರು ಒಂದೂವರೆ ಎಕರೆ ಜಮೀನು ಹೊಂದಿದ್ದು, ಕೃಷಿ ಚಟುವಟಿಕೆಗಳಿಗಾಗಿ 1.30ಲಕ್ಷ ರೂ.ಬೆಳೆ ಸಾಲ ಹಾಗೂ ಬಂಗಾರ ಅಡವಿಟ್ಟು 30 ಸಾವಿರ ರೂ.ಸಾಲವನ್ನು ಪಡೆದುಕೊಂಡಿದ್ದರು. ಎರಡ್ಮೂರು ವರ್ಷಗಳಿಂದ ಅತಿವೃಷ್ಟಿ ಮತ್ತು ಅನಾವೃಷ್ಟಿ ಸಂಭವಿಸಿದ್ದರಿಂದ ಬೆಳೆಯು ಸರಿಯಾಗಿ ಬಾರದ ಹಿನ್ನೆಲೆ ಮನನೊಂದಿದ್ದ, ಮಾಡಿದ ಸಾಲವನ್ನು ತೀರಿಸುವುದು ಹೇಗೆ ಎಂಬ ಚಿಂತೆಯಲ್ಲಿ ಮನೆಯಲ್ಲಿ ಯಾರೂ ಇಲ್ಲದಿರುವಾಗ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಮೃತನ ಪತ್ನಿ ರೇಣುಕಾ ಬೆಳಕಿನಕೊಂಡ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಿರೇಕೆರೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇ 30ರಂದು ರಿಷಿ ಹೆಜ್ಜೆ ಗೆಜ್ಜೆ ಸಂಭ್ರಮ-2026

ಮಂಗಳೂರು: ಬೆಳ್ತಂಗಡಿಯ ರಿಷಿ ಸಾಮಾಜಿಕ ಸಾಂಸ್ಕೃತಿಕ ಪ್ರತಿಷ್ಠಾನ ಇವರ ಆಶ್ರಯದಲ್ಲಿ ರಿಷಿ ಕಲಾ ಕೇಂದ್ರ ಇದರ ವಾರ್ಷಿಕೋತ್ಸವ ಹಾಗೂ ಕಲಾ ಕೇಂದ್ರದಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳ ರಂಗಪ್ರವೇಶ ಕಾರ್ಯಕ್ರಮ ಋಷಿ ಹೆಜ್ಜೆ ಗೆಜ್ಜೆ ಸಂಭ್ರಮ–2026ಟ ಮೇ 30 ಮಂಗಳೂರಿನ ಉರ್ವಸ್ಟೋರ್‌ನ ತುಳುಭವನದಲ್ಲಿರುವ ಸಿರಿ ಚಾವಡಿ ಸಭಾಂಗಣದಲ್ಲಿ ಸಂಜೆ 6 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದೆ. ಬಳಿಕ ಯಕ್ಷಗುರು ವಿಶ್ವನಾಥ ಪದ್ಮುಂಜ ಇವರ ನಿರ್ದೇಶನದಲ್ಲಿ ಕಲಾ ಕೇಂದ್ರದಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳಿಂದ ಮಹಿಷ ವಧೆ ಯಕ್ಷಗಾನ ಪ್ರದರ್ಶನ ನಡೆಯಲಿದೆ. ಕಾರ್ಯಕ್ರಮದಲ್ಲಿ ಖ್ಯಾತ ಯಕ್ಷಗಾನ ಕಲಾವಿದ ಹಾಗೂ ಪ್ರಸ್ತುತ ಗೆಜ್ಜೆಗಿರಿ ಮೇಳ ದಲ್ಲಿ ಸೇವೆ ಸಲ್ಲಿಸುತ್ತಿರುವ ಜನಾರ್ದನ ಗೌಡ ಬೋಳಂತೂರು ಅವರನ್ನು ಸನ್ಮಾನಿಸಲಾಗುವುದು ಎಂದು ಸಂಸ್ಥೆಯ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾವೂರು ಗಾಂಧಿನಗರ ಪ್ರದೇಶಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿದ ಶಾಸಕ ಭರತ್ ಶೆಟ್ಟಿ

ಮಂಗಳೂರು: ಇಲ್ಲಿನ ಕಾವೂರು ಗಾಂಧಿನಗರ ಹಾಗೂ ಮೈರೋಡಿ ಬೆಟ್ಟು ಪ್ರದೇಶದ ಜನರ ಸಮಸ್ಯೆಯನ್ನು ಶಾಸಕ ಭರತ್ ಶೆಟ್ಟಿ ಆಲಿಸಿದರು. ಇಲ್ಲಿ ಕಳೆದ ಎರಡು ವರ್ಷದಿಂದ ಡ್ರೈನೇಜ್ ಸಮಸ್ಯೆಯಿಂದ ಜನತೆ ತತ್ತರಿಸಿ ಹೋಗಿದ್ದು, ಬಾವಿಗಳು ಡ್ರೈನೇಜ್ ತುಂಬಿ ಹಾಳಾಗಿವೆ.. ಈ ಸಮಸ್ಯೆಯನ್ನು ಅರಿತ ಶಾಸಕರು ಬುಧವಾರ ಪ್ರದೇಶಕ್ಕೆ ಭೇಟಿ ನೀಡಿ ಸ್ಥಳವನ್ನು ಪರಿಶೀಲಿಸಿ ತಕ್ಷಣವೇ ಕೊಳವೆಯನ್ನು ದುರಸ್ತಿ ಪಡಿಸುವ ಕಾಮಗಾರಿಯನ್ನು ಮಾಡಿ ಸಮಸ್ಯೆಯನ್ನು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಎಲ್‌ಡಿಇ ಡೀಮ್ಡ್ ವಿವಿ, ಚಿಕ್ಯಾಗೋ ಇಲಿನಾಯಿಸ್ ವಿವಿ ಜೊತೆ ಒಡಂಬಡಿಕೆ

ವಿಜಯಪುರ: ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯ ಮತ್ತು ಅಮೆರಿಕದ ಯುನಿವರ್ಸಿಟಿ ಆಫ್ ಇಲಿನಾಯಿಸ್ ಚಿಕ್ಯಾಗೊ ನಡುವೆ ಶೈಕ್ಷಣಿಕ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಕಳೆದ ಮಾರ್ಚ್ ತಿಂಗಳಲ್ಲಿ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ಡಾ.ಅರುಣ ಇನಾಮದಾರ ಅವರು ಅಮೆರಿಕಕ್ಕೆ ತೆರಳಿದ್ದರು. ಅಲ್ಲಿ ಇಲಿನಾಯಿಸ ವಿಶ್ವವಿದ್ಯಾಲಯ, ಚಿಕ್ಯಾಗೊ ಅಂತಾರಾಷ್ಟ್ರೀಯ ಆರೋಗ್ಯ ವಿಭಾಗದ ಅಸೋಶಿಯೇಟ ಡೀನ್ ಡಾ.ಪ್ರಭಾಕರ ಬೆಳ್ಳೂರ ಅವರೊಂದಿಗೆ ಈ ಒಡಂಬಡಿಕೆ ಕುರಿತು ಚರ್ಚಿಸಿದ್ದರು. ಈಗ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ಒಡಂಬಡಿಕೆಯಿಂದಾಗಿ ಎರಡೂ ವಿಶ್ವವಿದ್ಯಾಲಯಗಳು ಶೈಕ್ಷಣಿಕ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸಲಿವೆ.



ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಕುಲಾಧಿಪತಿ ಬಸನಗೌಡ ಪಾಟೀಲ, ಸಮಕುಲಾಧಿಪತಿ ಡಾ.ವೈ.ಎಂ.ಜಯರಾಜ, ಕುಲಸಚಿವ ಡಾ.ರಾಘವೇಂದ್ರ ಕುಲಕರ್ಣಿ ಹಾಗೂ ವೈದ್ಯಕೀಯ ಮಹವಿದ್ಯಾಲಯದ ಪ್ರಾಚಾರ್ಯೆ ಡಾ.ತೇಜಸ್ವಿನಿ ವಲ್ಲಭ ಅವರ ಮಾರ್ಗದರ್ಶನದಲ್ಲಿ ಈ ಶೈಕ್ಷಣಿಕ ವರ್ಷದಿಂದಲೇ ಈ ಒಡಂಬಡಿಕೆ ಜಾರಿಗೆ ಬಂದಿದೆ.

ಅದರಂತೆ ಬಿಎಲ್‌ಡಿಇ ಸಂಸ್ಥೆಯ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ವಿದೇಶಿ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಅನುಭವ ಮತ್ತು ಜಾಗತಿಕ ಮಟ್ಟದ ಪರಿಚಯಪಡೆಯಲು ಹೊಸ ಅವಕಾಶಗಳು ದೊರೆಯಲಿವೆ.

ಸದ್ಯ ಇಂಟರ್ನ್ ಆಗಿರುವ ವಿದ್ಯಾರ್ಥಿನಿ ಮೇಘನಾ ಅವರು ಯುನಿವರ್ಸಿಟಿ ಆಫ್ ಇಲಿನಾಯಿಸ್ ಚಿಕಾಗೊನಲ್ಲಿ ನ್ಯೂರೋಸರ್ಜರಿ ವಿಭಾಗದಲ್ಲಿ ಎಲೆಕ್ಟಿವ್ ತರಬೇತಿಗೆ ಆಯ್ಕೆಯಾಗಿರುವುದು ಗಮನಾರ್ಹವಾಗಿದೆ. ಇಂಥ ಅಂತಾರಾಷ್ಟ್ರೀಯ ಶೈಕ್ಷಣಿಕ ಸಹಕಾರಗಳು ವಿದ್ಯಾರ್ಥಿಗಳ ಭವಿಷ್ಯಕ್ಕೆ ಹೊಸ ಅವಕಾಶಗಳನ್ನು ಸೃಷ್ಟಿಸಲಿದ್ದು, ಜಾಗತಿಕ ಮಟ್ಟದಲ್ಲಿ ಶೈಕ್ಷಣಿಕ ಹಾಗೂ ಸಂಶೋಧನೆ ಕ್ಷೇತ್ರಗಳಲ್ಲಿ ಉತ್ತಮ ಬೆಳವಣಿಗೆಗೆ ನೆರವಾಗಲಿವೆ ಎಂದು ವಿಶ್ವವಿದ್ಯಾಲಯದ ಸಂಶೋಧನಾ ವಿಭಾಗದ ಡೀನ್ ಡಾ.ಎಂ.ಎಂ.ಪಾಟೀಲ ಅವರು ತಿಳಿಸಿದ್ದಾರೆ.

ಹಂಪಿ ಆನೆ ಸ್ಥಳಾಂತರ ವಿರೋಧಿಸಿ ಪ್ರತಿಭಟನೆ

ವಿಜಯನಗರ: ವಿಶ್ವಪ್ರಸಿದ್ಧ ಹಂಪಿಯ ಶ್ರೀವಿರೂಪಾಕ್ಷ ದೇವಾಲಯದ ಸಾಕು ಆನೆ 'ಲಕ್ಷ್ಮೀ'ಯನ್ನು ಕೋಲಾರಕ್ಕೆ ಸ್ಥಳಾಂತರಿಸುವ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ಹಂಪಿ, ಕಮಲಾಪುರ ಹಾಗೂ ಕಡ್ಡಿರಾಂಪುರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಹಂಪಿ ವಿರೂಪಾಕ್ಷೇಶ್ವರ ಸನ್ನಿಧಾನದ ಎದುರು ಪ್ರತಿಭಟನೆ ನಡೆಸಿದರು.

ಹಂಪಿ ವಿರೂಪಾಕ್ಷ ದೇಗುಲದ ಆನೆ ಲಕ್ಷ್ಮೀ ಈ ಭಾಗದ ಜನರೊಂದಿಗೆ ಅತ್ಯಂತ ಭಾವನಾತ್ಮಕ ಒಡನಾಟ ಹೊಂದಿದೆ. ಆದರೆ, ಅನಾರೋಗ್ಯದ ನೆಪ ಒಡ್ಡಿ ಏಕಾಏಕಿ ಲಕ್ಷ್ಮೀಯನ್ನು ಸ್ಥಳಾಂತರಿಸುವ ಪ್ರಯತ್ನ ನಡೆದಿದೆ. ಮೂರು ತಿಂಗಳ ಕಾಲ ಚಿಕಿತ್ಸೆ ನೀಡುವ ನೆಪದಲ್ಲಿ ಆನೆಯನ್ನು ಕೋಲಾರಕ್ಕೆ ಕಳುಹಿಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, ಒಮ್ಮೆ ಇಲ್ಲಿಂದ ಸ್ಥಳಾಂತರ ಮಾಡಿದರೆ ಆನೆ ಮತ್ತೆ ಹಂಪಿಗೆ ವಾಪಸ್ ಬರುವುದಿಲ್ಲ ಎಂಬ ಆಕ್ರೋಶ ವ್ಯಕ್ತಪಡಿಸಿದರು.

ಒಂದುವೇಳೆ ಆನೆ ಲಕ್ಷ್ಮೀಗೆ ನಿಜವಾಗಿಯೂ ಅನಾರೋಗ್ಯ ವಿದ್ದರೆ, ಅದನ್ನು ಕೋಲಾರಕ್ಕೆ ಕೊಂಡೊಯ್ಯುವ ಅಗತ್ಯವಿಲ್ಲ. ಹಂಪಿಯ ತುಂಗಭದ್ರಾ ನದಿ ತಟದ 'ಮ್ಯಾಂಗೋ ಟ್ರೀ' ಪರಿಸರದಲ್ಲಿ ಅತ್ಯಂತ ಪ್ರಶಾಂತ ಹಾಗೂ ಉತ್ತಮ ವಾತಾವರಣವಿದೆ. ನದಿ ತೀರದ ಇದೇ ಜಾಗದಲ್ಲೇ ಆನೆಗೆ ಅಗತ್ಯವಿರುವ ವೈದ್ಯಕೀಯ ಚಿಕಿತ್ಸೆ ನೀಡಿ, ಇಲ್ಲೇ ಉಳಿಸಿಕೊಳ್ಳಬೇಕು ಎಂದು ಜನರು ಪಟ್ಟು ಹಿಡಿದರು. ಈ ವೇಳೆ ಅಧಿಕಾರಿಗಳು, ಪೊಲೀಸರು ಹಾಗೂ ಪ್ರತಿಭಟನಾಕಾರರ ಮಧ್ಯೆ ಕೆಲಕಾಲ ವಾಗ್ವಾದ ನಡೆಯಿತು. ಈ ಕುರಿತಂತೆ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದ ತಹಸೀಲ್ದಾರ್ ಶ್ರುತಿ ಎಂ. ಮಾತನಾಡಿ, ಆನೆ ಲಕ್ಷ್ಮೀಗೆ ಚಿಕಿತ್ಸೆಯ ಕಾರಣದಿಂದ ಇಲ್ಲಿಂದ ತಾತ್ಕಾಲಿಕವಾಗಿ ಸ್ಥಳಾಂತರಿಸಲಾಗುತ್ತಿದೆ. ಚಿಕಿತ್ಸೆ ಪೂರ್ಣಗೊಂಡ ಬಳಿಕ ಮರಳಿ ಹಂಪಿ ದೇವಸ್ಥಾನಕ್ಕೆ ಒಪ್ಪಿಸುವಂತೆ ಕೋರಿ ಅರಣ್ಯಾಧಿಕಾರಿಗಳಿಗೆ ಪತ್ರ ಬರೆಯುವುದಾಗಿ ತಿಳಿಸಿ, ಪ್ರತಿಭಟನಾ ನಿರತರನ್ನು ಸಮಾದಾನ ಪಡಿಸಿದರು.



ಜಾಲತಾಣದಲ್ಲಿ 'ಲಕ್ಷ್ಮೀ' ಪರ ಅಭಿಯಾನ

ಸಾಮಾಜಿಕ ಜಾಲತಾಣಗಳಲ್ಲೂ ಹಂಪಿಯ ಆನೆ ಲಕ್ಷ್ಮೀಯನ್ನು ಇಲ್ಲೇ ಉಳಿಸಿಕೊಳ್ಳಬೇಕು ಎಂದು ಸಾರ್ವಜನಿಕರು ದೊಡ್ಡ ಮಟ್ಟದ ಆನ್‌ಲೈನ್ ಅಭಿಯಾನವನ್ನು ಆರಂಭಿಸಿದ್ದಾರೆ. ದಕ್ಷಿಣ ಕಾಶಿ ಎಂದೇ ಪ್ರಖ್ಯಾತಿಯಾಗಿರುವ ಹಂಪಿಯ ಸಾಂಸ್ಕೃತಿಕ ಹೆಮ್ಮೆಯಾಗಿರುವ ಆನೆಯನ್ನು ಯಾವುದೇ ಕಾರಣಕ್ಕೂ ಬೇರೆಡೆಗೆ ಕಳುಹಿಸಬಾರದು ಎಂಬುದು ಜಿಲ್ಲೆಯ ಜನರ ಒಕ್ಕೊರಲ ಒತ್ತಾಯವಾಗಿದೆ.

ಸಿದ್ದರಾಮಯ್ಯ ರಾಜೀನಾಮೆಯಿಂದ ಸರ್ಕಾರ ಪತನ: ಲಖನ್ ಜಾರಕಿಹೊಳಿ

ಬೆಳಗಾವಿ: ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ ಮೇಲೆ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ಲಖನ್ ಪ್ರತಿಕ್ರಿಯಿಸಿದ್ದಾರೆ.

ಗೋಕಾಕ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅವರು ಮೂರು ವರ್ಷ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಯಾವುದೇ ರೀತಿ ಸಮಸ್ಯೆಯಾಗದ ಹಾಗೇ ನಿಗಿಸಿಕೊಂಡ ಬಂದಿದ್ದಾರೆ. ಇಂತಹ ಮಹಾ ನಾಯಕನಿಗೆ ಅನ್ಯಾಯ ಮಾಡಿದರೆ ಕಾಂಗ್ರೆಸ್ ಸರ್ಕಾರ ಪಲ್ಟಿ ಹೊಡಿಯುವುದರಲ್ಲಿ ಸಂಶಯವಿಲ್ಲ ಎಂದರು.



ಗ್ಯಾರಂಟಿ ಯೋಜನೆಗಳು ನಿಲ್ಲುವುದು ನಿಚ್ಚಿತ: ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ಗ್ಯಾರಂಟಿಗಳು ಅತಿ ಶೀಘ್ರವೇ ನಿಲ್ಲಲಿವೆ. ಅಲ್ಲದೇ ಸರ್ಕಾರಿ ನೌಕರರಿಗೆ ನೀಡುವ ವೇತನಗಳಲ್ಲೂ ಸಮಸ್ಯೆಗಳು ಉಂಟಾಗಲಿವೆ ಎಂದು ಭವಿಷ್ಯ ನುಡಿದರು.

ಕುರುಬ ಸಮಾಜಕ್ಕೆ ಅನ್ಯಾಯ: ಹಿಂದೆ ವೀರೇಂದ್ರ ಪಾಟೀಲ ಅವರು ಸಿಎಂ ಆಗಿದ್ದಾಗ ಕಾಂಗ್ರೆಸ್ ಹೈಕಮಾಂಡ್ ರಾಜೀನಾಮೆ ನೀಡುವಂತೆ ಮಾಡಿ ಲಿಂಗಾಯತ ಸಮುದಾಯದವರಿಗೆ ಅನ್ಯಾಯ ಮಾಡಿತ್ತು. ಅದರಂತೆ ಈಗ ಕುರುಬ ಸಮುದಾಯದ ದೊಡ್ಡ ನಾಯಕ ಸಿದ್ದರಾಮಯ್ಯ ಅವರಿಗೆ ರಾಜೀನಾಮೆ ನೀಡುವಂತೆ ಹೇಳಿ ಇಡಿ ಕುರುಬ ಸಮುದಾಯಕ್ಕೆ ಕಾಂಗ್ರೆಸ್ ಹೈ ಕಮಾಂಡ್ ಅನ್ಯಾಯ ಮಾಡಿದೆ. 2028ಕ್ಕೆ ಕಾಂಗ್ರೆಸ್ ಪಕ್ಷ 40ರ ಸಂಖ್ಯೆಗೆ ಬಂದು ತಲುಪಲಿದೆ ಎಂದರು.

ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲಿರುವ ಕಾಂಗ್ರೆಸ್‌ನ ಪ್ರಭಾವಿ ನಾಯಕ ಕೆ.ಸಿ.ವೇಣುಗೋಪಾಲ್ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ಕನ್ನಡ ಮಾತನಾಡಲು ಬರುವುದಿಲ್ಲ, ಇವರಿಗೆ ಬೆಂಗಳೂರು ಬಿಟ್ಟರೆ ರಾಜ್ಯದಲ್ಲಿರುವ ಯಾವ ಊರುಗಳು ಇವರಿಗೆ ಗೊತ್ತಿಲ್ಲ, ಇಂತವರು ಹೈಕಮಾಂಡ್ ಮಟ್ಟದಲ್ಲಿ ಕುಳಿತು ಸಿದ್ದರಾಮಯ್ಯನವರಿಗೆ ದಾರಿ ಹೇಳುವಂತರಾಗಿದ್ದಾರೆ ಎಂದು ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ವ್ಯಂಗ್ಯವಾಡಿದರು.

ಜೇನು ಗೂಡಿಗೆ ಕೈ ಹಾಕಿದ ಹೈಕಮಾಂಡ್: ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಎಲ್ಲ ರೀತಿಯಿಂದಲೂ ಸುಸುತ್ರವಾಗಿ ಸರ್ಕಾರ ನಿಗಿಸಿಕೊಂಡು ಹೊಗುತ್ತಿತ್ತು. ಅದಲ್ಲೂ ಎಲ್ಲ ನಾಯಕರಿಗೂ ಕೂಡಾ ಒಂದಲ್ಲಾ ಒಂದು ಹುದ್ದೆಯಲಿದ್ದು, ಸರ್ಕಾರ ಸುಭದ್ರವಾಗಿತ್ತು. ಆದರೆ, ಈಗ ಕಾಂಗ್ರೆಸ್ ಹೈಕಮಾಂಡ್ ಸಿಎಂ ಬದಲಾವಣೆ ಮಾಡುವ ನಿರ್ಧಾರ ಮಾಡಿ ಜೇನು ಗೂಡಿ ಗೆ ಕೈ ಹಾಕುವಂತೆ ಮಾಡಿದೆ ಎಂದರು. ಇನ್ನು 2028ಕ್ಕೆ ಜ್ವಾಲಾಮುಖಿಯಾಗಿ ಸ್ಪೋಟಗೊಳ್ಳುವುದರಲ್ಲಿ ಸಂಶಯವಿಲ್ಲ ಎಂದರು.

ಸಮರ್ಪಕವಾಗಿ ರಸಗೊಬ್ಬರ ಪೂರೈಸಿ: ಜಿಲ್ಲಾಧಿಕಾರಿ

ರಾಯಚೂರು: ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಸಮರ್ಪಕವಾಗಿ ಪೂರೈಸಲು ಬೀಜ ಮತ್ತು ರಸಗೊಬ್ಬರಗಳ ಕಂಪನಿಗಳ ಪ್ರತಿನಿಧಿಗಳು ಮತ್ತು ಕೃಷಿ ಇಲಾಖೆಯ ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದು ಜಿಲ್ಲಾಧಿಕಾರಿ ಪೂವಿತಾ.ಎಸ್ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ 2026–27ನೇ ಸಾಲಿನ ಮುಂಗಾರು ಹಂಗಾಮಿನ ಪೂರ್ವ ಸಿದ್ದತೆಗಳ ಕುರಿತು ಕೃಷಿ ಇಲಾಖೆ ಹಾಗೂ ಬೀಜ ಮತ್ತು ರಸಗೊಬ್ಬರ ಕಂಪನಿಗಳ ಪ್ರತಿನಿಧಿಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಪ್ರತಿಯೊಂದು ರೈತ ಸಂಪರ್ಕ ಕೇಂದ್ರದಿಂದ ರೈತರಿಗೆ ಕೃಷಿಗೆ ಸಂಬಂಧಿಸಿದ ಎಲ್ಲಾ ರೀತಿಯ ಮಾಹಿತಿಗಳನ್ನು ನೀಡುತ್ತಿರಬೇಕು. ಬೇಡಿಕೆ ಪಟ್ಟಿಗೆ ತಕ್ಕಂತೆ ಬಿತ್ತನೆ ಬೀಜ ಮತ್ತು ರಸಗೊಬ್ಬರಗಳನ್ನು ಶೇಖರಿಸಿಟ್ಟಿರಬೇಕು. ಕಂಪನಿಗಳು ಉತ್ತಮವಾದ ಬಿತ್ತನೆ ಬೀಜಗಳು ಮತ್ತು ರಗೊಬ್ಬರಗಳನ್ನು ನೀಡಬೇಕು. ಒಂದು ವೇಳೆ ರೈತರಿಂದ ಬಿತ್ತನೆ ಬೀಜ ಮತ್ತು ರಸಗೊಬ್ಬರಗಳ ವಿಚಾರವಾಗಿ ದೂರುಗಳು ಕೇಳಿಬಂದಲ್ಲಿ ಸಂಬಂಧಿಸಿದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಜಿಲ್ಲೆಯ ವಿವಿಧ ತಾಲೂಕಿನ ಯೂರಿಯಾ ಮಾರಾಟಗಾರರ ಅಂಗಡಿಗಳಿಗೆ ಮೇಲಿಂದ ಮೇಲೆ ಭೇಟಿ ನೀಡಿ ಪರಿಶೀಲನೆ ಮಾಡಬೇಕು. ಕಿಸಾನ ಆ್ಯಪ್ ಮೂಲಕ ಜಿಲ್ಲಾ ಮಟ್ಟದಲ್ಲಿ ಬಫರ್ಸ್ ಸ್ಟಾಕ್ ಅನ್ನು ಮೇಲ್ವಿಚಾರಣೆ ಮಾಡಬೇಕು. ಅಲ್ಲದೆ ವಿತರಣೆಯನ್ನು ಮಾಡಬೇಕು. ಸಂಶಯಾಸ್ಪದ ವ್ಯಾಪಾರಿಗಳಿಗೆ ಶೋಕಾಸ್ ಮತ್ತು ಮಾರಾಟ ನಿಲುಗಡೆ ನೋಟಿಸ್ ನೀಡಿ, ಅವರ ವ್ಯಾಪಾರ ಪರವಾನಗಿಯನ್ನು ಸಹ ಅಮಾನತುಗೊಳಿಸಬೇಕು. ಕಂದಾಯ ಮತ್ತು ಪೊಲೀಸ್ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಜಿಲ್ಲೆಯಲ್ಲಿ ವಿವಿಧ ಹಂತಗಳಲ್ಲಿ ರಸಗೊಬ್ಬರ ಮೇಲ್ವಿಚಾರಣಾ ಸಮಿತಿಗಳನ್ನು ರಚಿಸಿ, ಹೆಚ್ಚುವರಿ ರಸಗೊಬ್ಬರ ಬಳಕೆ ಮತ್ತು ಅದರ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕೆಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಪ್ರಕಾಶ ಚೌವ್ಹಾಣ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಮಹಮ್ಮದ್ ಅಲಿ, ಕೃಷಿ ಇಲಾಖೆಯ ಉಪ ನಿರ್ದೇಶಕ ನಹಿಂ ಹುಸೇನ್, ಲಿಂಗಸುಗೂರು ಉಪ ಕೃಷಿ ನಿರ್ದೇಶಕ ಮುತ್ತುರಾಜ್, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ.ತಿಮ್ಮಣ್ಣ, ರಾಯಚೂರು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕಿ ದೀಪಾ ಕುಲಕರ್ಣಿ, ದೇವದುರ್ಗ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಶ್ರೀನಿವಾಸ್, ಜಂಟಿ ನಿರ್ದೇಶಕ ಕಚೇರಿಯ ಕೃಷಿ ಅಧಿಕಾರಿ ಶರಣಮ್ಮ ಸೇರಿದಂತೆ ಇತರರಿದ್ದರು.

ಬೋಟ್ ಮುಳುಗಡೆ: ಎಲ್ಲ ಮೀನುಗಾರರ ರಕ್ಷಣೆ

ಮಂಗಳೂರು: ಮೀನುಗಾರಿಕೆ ನಡೆಸಿ ವಾಪಾಸ್ ಬರುತ್ತಿದ್ದ ಬೋಟೊಂದು ಮುಳುಗಡೆಯಾಗಿದ್ದು, ಅಪಾರ ಪ್ರಮಾಣದ ನಷ್ಟ ಉಂಟಾಗಿದೆ.

ಬ್ರಹ್ಮಾವರ ಮಾಬುಕಳ ಜಯ ಸಾಲ್ಯಾನ್ ಎಂಬವರಿಗೆ ಸೇರಿದ 'ಭಾಗೀರಥಿ' ಹೆಸರಿನ ಬೋಟ್ ಮೇ 24ರಂದು ಮಲ್ಪೆ ಬಂದರಿನಿಂದ ಮೀನುಗಾರಿಕೆಗೆ ತೆರಳಿತ್ತು. ಮಂಗಳೂರಿನಿಂದ ಸುಮಾರು 8–10 ನಾಟಿಕಲ್‌ಮೈಲ್ ದೂರದಲ್ಲಿ ಮೀನುಗಾರಿಕೆ ಮಾಡುತ್ತಿದ್ದಾಗ ಬೋಟ್‌ನಲ್ಲಿ ಸಮಸ್ಯೆ ಕಾಣಿಸಿಕೊಂಡು ಮುಳುಗಡೆಯಾಗಿದೆ.

ಈ ಅವಘಡಕ್ಕೆ ಕಾರಣವೇನು?

ಅಳಿವೆ ಬಾಗಿಲಿನ ಮೂಲಕ ನಿರ್ಗಮಿಸಿ, ಸುಮಾರು 5 ನಾಟಿಕಲ್ ಮೈಲು ದೂರದಲ್ಲಿ ಸಾಗಿ ಮೀನುಗಾರಿಕೆ ಮಾಡುತ್ತಿದ್ದಾಗ, ಸಮುದ್ರದ ಅಡಿಯಲ್ಲಿ ಯಾವುದೋ ಮುಳುಗಡೆಯಾಗಿದ್ದ ಬೋಟಿನ ಭಾಗ ತಾಗಿದ್ದು, ಒಳಭಾಗದಲ್ಲಿ ನೀರು ತುಂಬಿಕೊಂಡು ಬೋಟ್ ಸಂಪೂರ್ಣವಾಗಿ ಮುಳುಗಲು ಆರಂಭವಾಗಿದೆ ಎನ್ನಲಾಗಿದೆ.

ಹತ್ತಿರದ ಬೋಟ್‌ನವರು ಧಾವಿಸಿ ಬಂದರು

ರಾತ್ರಿ ಸುಮಾರು 12.30ರ ವೇಳೆಗೆ ಬೋಟ್ ಸಂಪೂರ್ಣ ಮುಳುಗಡೆ ಹಂತಕ್ಕೆ ತಲುಪಿದಾಗ ಹತ್ತಿರದಲ್ಲಿದ್ದ ನಾಲ್ಕು ಬೋಟಿನವರು ಸಹಾಯಕ್ಕೆ ಬಂದು ಮೀನುಗಾರರನ್ನು ರಕ್ಷಣೆ ಮಾಡಿದ್ದಾರೆ. ಜತೆಗೆ ಮುಳುಗಡೆಯಾಗುತ್ತಿದ್ದ ಬೋಟನ್ನು ಹಗ್ಗ ಕಟ್ಟಿನ ಇತರ ಎರಡು ಬೋಟಿನ ಸಹಾಯದಿಂದ ಎಳೆದು ತಂದು ಹಳೆ ಬಂದರು ದಕ್ಕೆಯ ಹೊಯ್ಗೆ ಬಜಾರ್ ನಲ್ಲಿ ಡಾಕ್ ಮಾಡಿದ್ದಾರೆ.

ಈ ದುರಂತ ಘಟನೆಗೆ ಸಂಬಂಧಿಸಿದಂತೆ ಮಂಗಳೂರಿನ ಕರಾವಳಿ ಕಾವಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


25 ಲಕ್ಷ ರೂ.ಗಳ ನಷ್ಟ

ಎರಡು ದಿನಗಳ ಕಾಲ ಮೀನುಗಾರಿಕೆ ಮಾಡಿ ಬೋಟ್‌ನಲ್ಲಿ ಸಂಗ್ರಹಿಸಿ ಇಡಲಾಗಿದ್ದ ಸುಮಾರು 1 ಲಕ್ಷ ರೂ. ಮೌಲ್ಯದ ಮೀನುಗಳು, ಸುಮಾರು 2,500 ಲೀ. ಡೀಸೆಲ್, ನೇವಿಗೇಷನ್ ಉಪಕರಣಗಳಾದ ಜಿಪಿಎಸ್, ಎಐಎಸ್, ವಯರ್ ಲೆಸ್ ಸೆಟ್, ಫಿಶ್ ಫೈಂಡರ್, ಮೀನುಗಾರಿಕ ಬಲೆಗಳು ನಾಶವಾಗಿವೆ. ಬೋಟ್‌ನ ಇಂಜಿನ್ ಒಳಗೆ ನೀರು ಹೋಗಿ ಬೋಟ್ ರಿಪೇರಿ ಮಾಡಲಾಗದ ಸ್ಥಿತಿ ಉಂಟಾಗಿದೆ. ಸುಮಾರು 25 ಲಕ್ಷ ರೂ. ನಷ್ಟ ಸಂಭವಿಸಿದೆ ಎಂದು ಬೋಟ್ ಮಾಲಕರು ದೂರಿನಲ್ಲಿ ತಿಳಿಸಿದ್ದಾರೆ.

ದೇಶದ ಪಾರಂಪರಿಕ ಸಂಸ್ಕೃತಿ ಉಳಿಯಬೇಕು: ಸೋದೆ ಶ್ರೀ

ಉಡುಪಿ: ಒಂದು ಕಾಲದಲ್ಲಿ ಮನುಷ್ಯನ ಜೀವನಕ್ಕೆ ಪ್ರಮುಖ ಆಧಾರವಾಗಿದ್ದ ಕೃಷಿ ಇಂದು ಅಪ್ರಧಾನವಾಗುತ್ತಿದೆ. ಕೃಷಿ ಮತ್ತು ನಮ್ಮ ಮೂಲ ಸಂಸ್ಕೃತಿಯನ್ನು ಬಿಟ್ಟು ಕೇವಲ ದುಡ್ಡು ಗಳಿಸುವುದೇ ಪ್ರಧಾನ ಎಂಬಂತೆ ವಲಸೆ ಹೋಗುತ್ತಿರುವುದರಿಂದ, ನಮ್ಮ ಹೆಮ್ಮೆಯ ಪಾರಂಪರಿಕ ಕೃಷಿ ಪದ್ಧತಿಗಳು ಕಣ್ಮರೆಯಾಗುತ್ತಿವೆ ಎಂದು ಸೋದೆ ಮಠಾಧೀಶರಾದ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರು ತೀವ್ರ ಕಳಕಳಿ ವ್ಯಕ್ತಪಡಿಸಿದ್ದಾರೆ.

ಸೋದೆ ವಾದಿರಾಜ ಮಠ ಮತ್ತು ತೀರ್ಥಹಳ್ಳಿಯ ಕೃಷಿ ಪ್ರಯೋಗ ಪರಿವಾರ ಸಂಸ್ಥೆಯ ಜಂಟಿ ಆಶ್ರಯದಲ್ಲಿ ಉಡುಪಿ ರಥಬೀದಿಯ ಸೋದೆ ಮಠದ ಆವರಣದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ವಿಶಿಷ್ಟ 'ಬೊಗಸೆ ಭತ್ತ ಬೀಜ ಪ್ರದಾನ' ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.



ದೇಶದ ಅಸ್ಮಿತೆಯೇ ಕೃಷಿ

ನಮ್ಮ ದೇಶದ ಅಸ್ಮಿತೆಯೇ ಕೃಷಿಯಾಗಿದೆ ಎಂದು ನೆನಪಿಸಿದ ಶ್ರೀಗಳು, ಹಿಂದೆ ಕೃಷಿ ಜಮೀನಿನ ಮೂಲಕವೇ ಒಬ್ಬ ವ್ಯಕ್ತಿಯ ಸಾಮಾಜಿಕ ಅಂತಸ್ತನ್ನು ಅಳೆಯಲಾಗುತ್ತಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಭತ್ತವನ್ನು ಬೆಳೆಸುವ ಮತ್ತು ಸಾಂಪ್ರದಾಯಿಕ ತಳಿಗಳನ್ನು ಉಳಿಸುವ ಜವಾಬ್ದಾರಿ ಕೇವಲ ರೈತರದ್ದು ಮಾತ್ರವಲ್ಲ, ಬದಲಿಗೆ ಅನ್ನ ತಿನ್ನುವ ಪ್ರತಿಯೊಬ್ಬ ನಾಗರಿಕನದ್ದೂ ಆಗಿದೆ. ಪ್ರಸ್ತುತ ದಿನಗಳಲ್ಲಿ ಕಣ್ಮರೆಯಾಗುತ್ತಿರುವ ಆಹಾರ ವೈವಿಧ್ಯತೆಯನ್ನು ಮರಳಿ ಒಟ್ಟುಗೂಡಿಸುವ ಒಂದು ಸಣ್ಣ ಪ್ರಾಮಾಣಿಕ ಪ್ರಯತ್ನವನ್ನು ಈ ವಿಶಿಷ್ಟ ಕಾರ್ಯಕ್ರಮದ ಮೂಲಕ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ, ಈ ಯೋಜನೆಯಡಿ ಸಾವಯವ ಕೃಷಿ ಮಾಡುವ ರೈತರಿಗೆ ಸೂಕ್ತ ಬೆಂಬಲ ಬೆಲೆ, ಗೌರವಧನ ನೀಡಿ ಶ್ರೀಮಠದಿಂದ ಸತ್ಕರಿಸಲಾಗುವುದು ಎಂದು ಅವರು ಪ್ರಕಟಿಸಿದರು.

ಕಾರ್ಯಕ್ರಮದಲ್ಲಿ ಹಾದಿಕಲ್ಲು ಲಕ್ಷ್ಮೀ ನಾರಾಯಣ, ಆನಂದ ಹಾಗೂ ಕೃಷಿ ಪ್ರಯೋಗ ಪರಿವಾರದ ಅರುಣ್ ಮತ್ತು ದಿನೇಶ್ ಉಪಸ್ಥಿತರಿದ್ದು ಪ್ರಮುಖ ವಿಷಯಗಳ ಕುರಿತು ಮಾತನಾಡಿದರು. ಶ್ರೀನಿವಾಸ ಭಟ್ ಕಾರ್ಯಕ್ರಮದ ಕೊನೆಯಲ್ಲಿ ವಂದಿಸಿದರು.

ಭಾರತೀಯ ಪರಂಪರೆಯಲ್ಲಿ ಗೋವು ಮತ್ತು ಕೃಷಿ ಒಂದಕ್ಕೊಂದು ಅವಿನಾಭಾವ ಸಂಬಂಧ ಹೊಂದಿವೆ. ಕೃಷಿ ನಮ್ಮಲ್ಲಿ ಎಂದಿಗೂ ಕೇವಲ ಉದ್ಯಮವಾಗಿರಲಿಲ್ಲ, ಅದೊಂದು ಶ್ರೇಷ್ಠ ಸಂಸ್ಕೃತಿಯಾಗಿತ್ತು. ಈ ಕೃಷಿ ಸಂಸ್ಕೃತಿ ಮುಂದಿನ ತಲೆಮಾರಿಗೆ ಉಳಿಯಬೇಕಾದರೆ ಮೊದಲು ನಮ್ಮ ಕುಟುಂಬ ವ್ಯವಸ್ಥೆಗಳು ಗಟ್ಟಿಯಾಗಿ ಉಳಿಯಬೇಕು ಎಂದು ಅಭಿಪ್ರಾಯಪಟ್ಟರು.

ಶ್ರೀವತ್ಸ, ತೀರ್ಥಹಳ್ಳಿಯ ಕೃಷಿ ಪ್ರಯೋಗ ಪರಿವಾರ ಸಂಸ್ಥೆ


ಸಿಎಂ ಸಿದ್ದರಾಮಯ್ಯಗೆ ಹೈಕಮಾಂಡ್ ಪ್ರಶಂಸೆ

ಹೊಸದಿಲ್ಲಿ: ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡಿರುವ ಕ್ರಮವನ್ನು ಕಾಂಗ್ರೆಸ್ ನಾಯಕತ್ವ 'ಪಕ್ಷ ಹಿತಕ್ಕಾಗಿ ತೆಗೆದುಕೊಂಡ ನಿಸ್ವಾರ್ಥ ನಿರ್ಧಾರ' ಎಂದು ಶ್ಲಾಘಿಸಿದೆ. ಇದೇ ವೇಳೆ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರಸ್ಪರ ಅಪ್ಪಿಕೊಂಡಿರುವ ಚಿತ್ರಗಳನ್ನು ಪಕ್ಷದ ನಾಯಕರು ಹಂಚಿಕೊಂಡಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿ, ಸ್ವಾರ್ಥಕ್ಕಿಂತ ಪಕ್ಷ ಮೇಲು, ಅಧಿಕಾರಕ್ಕಿಂತ ಜನತೆ ಮೇಲು. ಕಾಂಗ್ರೆಸ್‌ಗೆ ಪಕ್ಷವೇ ಕುಟುಂಬ, ಜನರೇ ಗುರಿ ಎಂದು ಹೇಳಿದ್ದಾರೆ. ಸಿದ್ದರಾಮಯ್ಯ ಕಾಂಗ್ರೆಸ್‌ನ ರಾಜಕೀಯ ಧ್ಯೇಯದಲ್ಲಿ ಬದಲಿ ಇಲ್ಲದ ನಾಯಕ ಎಂದು ಬಣ್ಣಿಸಿದ ಅವರು, ಕರ್ನಾಟಕದ ಸಿಎಂ ಆಗಿ ಅವರ ಆಡಳಿತ ಅವಧಿ ಜನಪರ, ಪರಿವರ್ತನಾ ದಿಶೆಯದ್ದಾಗಿತ್ತು ಎಂದು ಪ್ರಶಂಸಿದರು. ಸಮಾಜದ ಅಂಚಿನಲ್ಲಿದ್ದ ಜನರಿಗೆ ಶಕ್ತಿ ತುಂಬುವ ಕೆಲಸವನ್ನು ಅವರು ಮಾಡಿದ್ದಾರೆ. ರೈತ ಕುಟುಂಬದಿಂದ ಹೊರಹೊಮ್ಮಿ ತತ್ವನಿಷ್ಠೆ, ಜನಸೇವೆ ಹಾಗೂ ಆಡಳಿತ ಚಾಣಾಕ್ಷ್ಯೆಯಿಂದ ರಾಜ್ಯದ ಉನ್ನತ ಹುದ್ದೆಗೇರಿದ ನಾಯಕ ಸಿದ್ದರಾಮಯ್ಯ ಅವರು, ಬಡವರು, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತ ವರ್ಗಗಳ ಸಬಲೀಕರಣಕ್ಕಾಗಿ ಅವರ ಆಡಳಿತ ಸುವರ್ಣಾಕ್ಷರಗಳಲ್ಲಿ ದಾಖಲಾಗಲಿದೆ ಎಂದು ವೇಣುಗೋಪಾಲ್ ಹೇಳಿದ್ದಾರೆ.

ಪಕ್ಷದ ಹಿತದೃಷ್ಟಿಯಿಂದ ಸಿದ್ದರಾಮಯ್ಯ ತಾಳ್ಮೆ ಹಾಗೂ ಗೌರವದೊಂದಿಗೆ ನಿರ್ಧಾರ ಕೈಗೊಂಡಿರುವುದು ಸಾರ್ವಜನಿಕ ಜೀವನದ ನಾಯಕರಿಗೆ ಮಾದರಿಯಾಗಿದೆ ಎಂದೂ ಅವರು ಹೇಳಿದ್ದಾರೆ. ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಕೂಡ ಪ್ರತಿಕ್ರಿಯಿಸಿ, ಕರ್ನಾಟಕಕ್ಕಾಗಿ, ಜನರಿಗಾಗಿ, ಕಾಂಗ್ರೆಸ್‌ಗಾಗಿ ನಾವು ಒಗ್ಗಟ್ಟಾಗಿದ್ದೇವೆ ಎಂದು ಹೇಳಿದ್ದಾರೆ.

ರಾಮ ಬಾಣ



ಡ್ರೋನ್ ಹೊಡೆದುರುಳಿಸಿದ ಅಮೆರಿಕ

ಪುಟ ೧ ➔ ಈ ಹಿನ್ನಲೆ ಅಮೆರಿಕದ ಸೆಂಟ್ರಲ್ ಕಮಾಂಡ್ ಪಡೆಗಳು ತಕ್ಷಣ ಕಾರ್ಯಾಚರಣೆ ನಡೆಸಿ ನಾಲ್ಕು 'ಒನ್-ವೇ ಅಟ್ಯಾಕ್ ಡ್ರೋನ್'ಗಳನ್ನು ಗುರಿಯಾಗಿಸಿ ಹೊಡೆದುರುಳಿಸಿವೆ. ಇವು ಆತ್ಮಹತ್ಯಾ ದಾಳಿ ನಡೆಸುವ ಉದ್ದೇಶದಿಂದ ಈ ಡ್ರೋನ್‌ಗಳು ದಾಳಿ ನಡೆಸಿದೆ ಎಂದು ಅಮೆರಿಕ ಸೇನೆ ತಿಳಿಸಿದೆ.

ಕದನ ವಿರಾಮ ಚರ್ಚೆ: ಅಮೆರಿಕ-ಇರಾನ್ ನಡುವಿನ ಕದನ ವಿರಾಮವನ್ನು 60 ದಿನಗಳವರೆಗೆ ವಿಸ್ತರಿಸಲು ಸಂಧಾನಕಾರರು ಒಪ್ಪಿಕೊಂಡಿದ್ದು, ಇರಾನ್ ಪರಮಾಣು ಯೋಜನೆಗಳ ಕುರಿತು ಚರ್ಚೆ ನಡೆಸಲಿದ್ದಾರೆ. ಆದರೆ ಕದನ ವಿರಾಮ ವಿಸ್ತರಣೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಂತಿಮ ಒಪ್ಪಿಗೆ ನೀಡುವುದು ಬಾಕಿಯಿದೆ ಎಂದು ಸಂಧಾನದಲ್ಲಿ ತೊಡಗಿದ್ದ ಕೆಲವು ಅಮೆರಿಕ ಅಧಿಕಾರಿಗಳು ತಿಳಿಸಿದ್ದಾರೆ. ಉಭಯ ರಾಷ್ಟ್ರಗಳ ಸಂಧಾನಕಾರರು 60 ದಿನಗಳ ಕದನ ವಿರಾಮ ಒಪ್ಪಂದಕ್ಕಾಗಿ ಕರಡು ಪ್ರತಿ ಸಿದ್ಧಪಡಿಸಿದ್ದಾರೆಂಬ ಮಾಹಿತಿಯಿದೆ. ಇದರಿಂದ ಅಮೆರಿಕ-ಇರಾನ್ ನಡುವಿನ ತಾತ್ಕಾಲಿಕ ಕದನ ವಿರಾಮ ಮುಂದುವರಿಯುವ ಸಾಧ್ಯತೆಯಿದೆ. ಅಂದರೆ 60 ದಿನಗಳವರೆಗೆ ಯಾವುದೇ ಸೇನಾ ಕಾರ್ಯಾಚರಣೆ ನಡೆಸುವಂತಿಲ್ಲ, ತಾತ್ಕಾಲಿಕ ಕದನ ವಿರಾಮ ವಿಸ್ತರಣೆಯೊಂದಿಗೆ ಇರಾನ್ ಪರಮಾಣು ಯೋಜನೆಯ ಕುರಿತು ಉಭಯ ರಾಷ್ಟ್ರಗಳ ನಡುವಿನ ಸಂಧಾನ ಅಧಿಕೃತವಾಗಿ ಆರಂಭವಾಗಲಿದೆ. ಕದನ ವಿರಾಮ ವಿಸ್ತರಣೆಯಲ್ಲಿ ಪ್ರಮುಖವಾಗಿ ಹಾರ್ಮುಜ್ ಜಲಸಂಧಿಯ ಮೂಲಕ ಸುರಕ್ಷಿತ ಮತ್ತು ತಡೆರಹಿತ ಹಡಗುಗಳ ಸಂಚಾರಕ್ಕೆ ಅನುವು ಮಾಡಿಕೊಡಲು ಷರತ್ತು ವಿಧಿಸಲಾಗಿದೆ.

ಒಮಾನ್‌ಗೆ ಅಮೆರಿಕ ಹೊಸ ಬೆದರಿಕೆ: ಹಾರ್ಮುಜ್ ಜಲಸಂಧಿಯ ಮೂಲಕ ಹಾದು ಹೋಗುವ ಹಡಗುಗಳಿಂದ ಟೋಲ್ ಶುಲ್ಕ ವಸೂಲಾತಿ ಮಾಡುವುದನ್ನು ಅಮೆರಿಕ ಸರ್ಕಾರ ಸಹಿಸುವುದಿಲ್ಲ, ಶುಲ್ಕ ಸಂಗ್ರಹಿಸುವಲ್ಲಿ ತೊಡಗಿರುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕಾದೀತು ಎಂಬುದನ್ನು ಒಮಾನ್ ತಿಳಿದುಕೊಳ್ಳಬೇಕು ಎಂದು ಅಮೆರಿಕ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸ್ಸೆಂಟ್ ಎಚ್ಚರಿಕೆ ನೀಡಿದ್ದಾರೆ.

ಕದನ ವಿರಾಮ ವಿಸ್ತರಣೆ ಪರಿಣಾಮ? ಕದನ ವಿರಾಮ ವಿಸ್ತರಣೆಗೆ ಟ್ರಂಪ್ ಒಪ್ಪಿಕೊಂಡರೆ ಇಂಧನ ಮಾರುಕಟ್ಟೆ ಪುನಃ ಸ್ಥಿರವಾಗಲಿದ್ದು, ತೈಲ ಪೂರೈಕೆ ಕೊರತೆ ಇಳಿಕೆಯಾಗುವ ಸಾಧ್ಯತೆಯಿದೆ. ಮಧ್ಯಪ್ರಾಚ್ಯ ಉದ್ವಿಗ್ನತೆ ತಾತ್ಕಾಲಿಕ ನಿಯಂತ್ರಣಕ್ಕೆ ಬರಲಿದೆ. ಸದ್ಯ ಹಣಕಾಸಿನ ಮಾರುಕಟ್ಟೆ ಧನಾತ್ಮಕ ಟ್ರೆಂಡ್ ಪ್ರದರ್ಶಿಸಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಕಳೆದ ಎರಡು ದಶಕಗಳಿಂದ ವಿದ್ಯಾರ್ಥಿಗಳಲ್ಲಿ, ಹಿರಿಯರಲ್ಲಿ ಓದುವ ಹವ್ಯಾಸ ಶೇಕಡಾ ನಲುವತ್ತರಷ್ಟು ಕಡಿಮೆಯಾಗಿದೆ
- ಅಮೇರಿಕಾದಲ್ಲೊಂದು ಅಧ್ಯಯನ ವರದಿ
- ಲಾಭವಿರುವುದನ್ನು ಮಾಡಲಿಕ್ಕೇ ಸಮಯ ಸಾಲುವುದಿಲ್ಲ, ಇನ್ನು ಲಾಭವಿಲ್ಲದ ಓದುವ ಹವ್ಯಾಸ ಯಾರಿಗೆ ಬೇಕು?

ದಿನ ಭವಿಷ್ಯ

ಮೇಷ
ಇಂದು ನಿಮ್ಮ ಕೆಲಸಕ್ಕೆ ಹೆಚ್ಚು ಪ್ರಾಮುಖ್ಯ ನೀಡಬೇಕು. ಆರ್ಥಿಕ ಪ್ರಗತಿ ನಿಧಾನ. ಅನವಶ್ಯ ಚಿಂತನೆಯಿಂದ ಮನಸ್ಸಿಗೆ ಗೊಂದಲ.

ವೃಷಭ
ವೃತ್ತಿಯಲ್ಲಿ ಸುಗಮ ಪ್ರಗತಿ. ಧನಗಳಿಕೆ ಹೆಚ್ಚಳ. ಆತ್ಮೀಯರ ಜತೆ ಹೆಚ್ಚು ಕಾಲ ಕಳೆಯಲು ಯತ್ನಿಸಿ. ಅವರ ಸಂತೋಷಕ್ಕೆ ಅವಕಾಶ ಕಲ್ಪಿಸಿ.

ಮಿಥುನ
ನಿಮ್ಮ ಆಕಾಂಕ್ಷೆ ಈಡೇರುವ ದಿನ. ನಿಮ್ಮ ಸಣ್ಣ ಹೆಜ್ಜೆಯೂ ಮಹತ್ತರ ಪರಿಣಾಮ ಬೀರಲಿದೆ. ಆಪ್ತರಿಂದ ಸಹಕಾರ. ಧನಲಾಭ ಯೋಗ.

ಕಟಕ
ಇತರರ ಮನಸ್ಸು ಅರಿಯುವಲ್ಲಿ ನೀವು ಚತುರರು. ಅದನ್ನು ನಿಮ್ಮ ಕಾರ್ಯಕ್ಕೆ ಬಳಸಿಕೊಳ್ಳಿ. ದಂಪತಿ ಮಧ್ಯೆ ಕಲಹ ಆದೀತು. ಸಹನೆ ಮುಖ್ಯ.

ಸಿಂಹ
ವೃತ್ತಿಯಲ್ಲಿ ಮಹತ್ವದ ದಿನ. ಉಜ್ವಲ ಅವಕಾಶ. ಮನೆಯಲ್ಲಿ ಸಾಮರಸ್ಯ, ಬಾಂಧವ್ಯ ವೃದ್ಧಿ. ಅಧಿಕ ಖರ್ಚು ಸ್ವಲ್ಪ ಮಟ್ಟಿನ ಚಿಂತೆಗೆ ಕಾರಣವಾಗಲಿದೆ.

ಕನ್ಯಾ
ನಿಮ್ಮ ಕಾರ್ಯ ಸರಿಯಾಗಿ ನಿರ್ವಹಿಸಿ. ನಿಮ್ಮನ್ನು ಪರಾಮರ್ಶೆಗೆ ಒಡ್ಡುವ ಜನರಿದ್ದಾರೆ. ಕೌಟುಂಬಿಕ ವಾಗ್ವಾದ ನೆಮ್ಮದಿ ಕೆಡಿಸಬಹುದು.

ತುಲಾ
ನಿಮ್ಮ ಸಾಮರ್ಥ್ಯ, ಕೌಶಲ ಪ್ರದರ್ಶನಕ್ಕೆ ಅವಕಾಶ ಸಿಗಲಿದೆ. ನಿಮ್ಮ ಭಾವುಕ ಮನಸ್ಸಿನ ಪ್ರದರ್ಶನ ಆಗಲಿದೆ. ಆರ್ಥಿಕ ಒತ್ತಡ ಅಧಿಕ.

ವೃಶ್ಚಿಕ
ನಿಮಗೆ ಪೂರಕ ದಿನ. ಅಲ್ಪ ಪ್ರಯತ್ನದಲ್ಲೂ ಯಶಸ್ಸು ಸಿಗಲಿದೆ. ಮನೆಯ ವಾತಾವರಣ ಹಾಳಾಗಲು ಅವಕಾಶ ಕೊಡಬೇಡಿ.

ಧನು
ಆಕಾಂಕ್ಷೆ ಈಡೇರಿಕೆ. ಉತ್ಸಾಹ ಹೆಚ್ಚಳ. ಆರ್ಥಿಕ ಬಿಕ್ಕಟ್ಟು ಪರಿಹಾರ. ಮನೆಯಲ್ಲಿ ಎಲ್ಲರ ಸಹಕಾರ. ಖಾಸಗಿ ಚಿಂತೆ ಪರಿಹಾರದ ಸಂಕೇತ.

ಮಕರ
ನಿಮ್ಮ ಕಠಿಣ ಶ್ರಮ ಉತ್ತಮ ಫಲ ನೀಡಲಿದೆ. ಆರ್ಥಿಕ ಗಳಿಕೆ ಹೆಚ್ಚಳ. ವ್ಯವಹಾರದಲ್ಲಿ ತಾಳ್ಮೆಯ ಪರೀಕ್ಷೆ ನಡೆಯಲಿದೆ. ಕೋಪ ನಿಗ್ರಹಿಸಿ.

ಕುಂಭ
ಇಂದು ನಿಮ್ಮ ಸುತ್ತ ಹರ್ಷದ ವಾತಾವರಣ. ಕಾರ್ಯ ಸಿದ್ಧಿ, ಧನ ಗಳಿಕೆ. ಉಳಿತಾಯದಲ್ಲಿ ಹೆಚ್ಚಳ. ಆರೋಗ್ಯ ಸಮಸ್ಯೆ ನಿವಾರಣೆಯಾಗಲಿದೆ.

ಮೀನ
ಪ್ರತಿ ವಿಷಯವೂ ಸುಗಮವಾಗಿ ಸಾಗಲಿದೆ. ನಿಮ್ಮ ಕನಸು ನನಸಾಗುವ ಕಾಲ ಬಂದಿದೆ. ಬಿಕ್ಕಟ್ಟು ಒಂದೊಂದಾಗಿ ಪರಿಹಾರ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00

ಅದೃಷ್ಟ ಸಂಖ್ಯೆ : 1,9,2,6

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ



ಪುಟ ೧ ➔ **ಸಚಿವ ಸಂತೋಷ್ ಲಾಡ್ ಕಣ್ಣೀರು:** ಸಿಎಂ ಸಿದ್ದರಾಮಯ್ಯ ನಿವಾಸ ಕಾವೇರಿಯಲ್ಲಿ ನಡೆದ ಉಪಾಹಾರ ಸಭೆ ಮುಗಿಸಿ ಕಾರಿನಲ್ಲಿ ವಾಪಸ್ ತೆರಳುತ್ತಿದ್ದ ಸಂದರ್ಭದಲ್ಲಿ ಸಚಿವ ಲಾಡ್ ಭಾವುಕರಾಗಿದ್ದು, ಕಣ್ಣೀರು ಹಾಕಿದ ಪ್ರಸಂಗ ನಡೆದಿದೆ.

ಸಭೆಯಲ್ಲಿ ಸಿದ್ದು ಆರ್ಥಿಕತೆ ಪಾಠ: ಉಪಾಹಾರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಆರ್ಥಿಕತೆಯ ಪಾಠ ಮಾಡಿದ್ದಾರೆ ಎಂಬ ಮಾಹಿತಿ ಇದೆ. ಗ್ಯಾರಂಟಿ ಸಮಸ್ಯೆ ಆಗುತ್ತದೆ ಎಂದು ಯಾವುದೇ ಕಾರಣಕ್ಕಾಗಿ ನಿಲ್ಲಿಸುವುದು ಬೇಡ. ಗ್ಯಾರಂಟಿಗಳು ಕಾಂಗ್ರೆಸ್ ಮಾದರಿ ಆಗಿವೆ ಎಂದು ಸಚಿವರಿಗೆ ಕಿವಿಮಾತು ಹೇಳಿದ್ದಾರೆ.

ಸಿಎಂ ಕಾಲಿಗೆ ಬಿದ್ದು ಆಶೀರ್ವಾದ ಪಡೆದ ಡಿ.ಕೆ.ಶಿವಕುಮಾರ್

ಉಪಾಹಾರ ಸಭೆಯಲ್ಲಿ ಭಾಗಿಯಾಗಲು ಕಾವೇರಿ ನಿವಾಸಕ್ಕೆ ಆಗಮಿಸಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾಲಿಗೆ ಬಿದ್ದು ಆಶೀರ್ವಾದ ಪಡೆದುಕೊಂಡರು. ಮುಖ್ಯಮಂತ್ರಿಗಳೂ ಕೂಡ ಅವರನ್ನು ಆಲಿಂಗಿಸಿ, ಬೆನ್ನು ತಟ್ಟಿದರು.



ಭಿನ್ನಮತಕ್ಕೆ ಅವಕಾಶ ಇಲ್ಲ: ಸಚಿವ ಪಾಟೀಲ್

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವರಿಗೆ ತಾವು ರಾಜೀನಾಮೆ ನೀಡಿದ ಬಳಿಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮ ಉತ್ತರಾಧಿಕಾರಿಯಾಗಲಿದ್ದಾರೆ ಎಂದು ಹೇಳಿದ್ದಾಗಿ ಕಾನೂನು ಸಚಿವ ಎಚ್.ಕೆ. ಪಾಟೀಲ್ ಅವರು ತಿಳಿಸಿದರು. ಉಪಾಹಾರ ಕೂಟದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಾಯಕತ್ವ ಬದಲಾವಣೆ ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ನಡೆಯುತ್ತಿದೆ ಎಂದು ಸ್ಪಷ್ಟಪಡಿಸಿದರು. ಹೈಕಮಾಂಡ್ ಜತೆ ನಡೆದ ಚರ್ಚೆಗಳ ಉಲ್ಲೇಖಿಸಿದ್ದಾರೆ. ಎಲ್ಲಿಯೂ ಭಿನ್ನಮತಕ್ಕೆ ಅವಕಾಶವೇ ಇಲ್ಲ. ಇದು ಏಕಮತದ ತೀರ್ಮಾನವಾಗಿದ್ದು, ಹೈಕಮಾಂಡ್ ಹೇಳಿರುವುದಕ್ಕೆ ಎಲ್ಲರೂ ಒಪ್ಪಿದ್ದಾರೆ ಎಂದು ಪಾಟೀಲ್ ಹೇಳಿದರು.



ಕಣ್ಣೀರಿಟ್ಟ ಸಿಎಂ

ಪುಟ ೧ ➔ ಸಹೋದ್ಯೋಗಿಗಳ ಜತೆ ಮುಕ್ತ ಮನಸ್ಸಿನಿಂದ ಮಾತನಾಡುತ್ತಾ ಉಪಾಹಾರ ಸವಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಹೈಕಮಾಂಡ್ ಭೇಟಿ, ಅಲ್ಲಿನ ಚರ್ಚೆ, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನಿರ್ದೇಶನ ಎಲ್ಲವನ್ನೂ ಸಚಿವರುಗಳ ಮುಂದೆ ಬಿಡಿಸಿಟ್ಟರು. ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ಸಹೋದ್ಯೋಗಿಗಳಿಗೆ ತಮ್ಮ ಅಧಿಕೃತ ನಿವಾಸ ಕಾವೇರಿಯಲ್ಲೇ ಉಪಾಹಾರ ತಯಾರಿಸಿ ಉಣಬಡಿಸಿದ್ದು ವಿಶೇಷವಾಗಿತ್ತು. ಎಲ್ಲ ಸಚಿವರಿಗೆ ಇಡ್ಲಿ, ವಡೆ, ದೋಸೆ, ಉಪ್ಪಿಟ್ಟಿನ ಉಪಾಹಾರ ಬಡಿಸಲಾಯಿತು.

ದಿಲ್ಲಿ ಬದಲು ಜೈಪುರದಲ್ಲಿಳಿದ ಸಿಎಂ ಸಿದ್ದರಾಮಯ್ಯ ವಿಮಾನ

ಬೆಂಗಳೂರು: ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಹೈಕಮಾಂಡ್ ನಾಯಕರನ್ನು ಭೇಟಿಯಾಗಲು ಬೆಂಗಳೂರಿನಿಂದ ದಿಲ್ಲಿಗೆ ಹೊರಟಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಯಾಣಿಸುತ್ತಿದ್ದ ವಿಮಾನ ಹವಾಮಾನ ವೈಪರೀತ್ಯ ಹಿನ್ನೆಲೆಯಲ್ಲಿ ದಿಲ್ಲಿಗೆ ತೆರಳಬೇಕಿದ್ದ ವಿಶೇಷ ವಿಮಾನ ಜೈಪುರದಲ್ಲಿ ಇಳಿದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಯಾಣಿಸುತ್ತಿದ್ದ ವಿಶೇಷ ವಿಮಾನದಲ್ಲಿ ರಾಜ್ಯ ಉಸ್ತುವಾರಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಸಚಿವರಾದ ಕೆ.ಜೆ. ಜಾರ್ಜ್, ಬೈರತಿ ಸುರೇಶ್, ಕಾನೂನು ಸಲಹೆಗಾರ ಪೊನ್ನಣ್ಣ, ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ, ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ ವಿಮಾನದಲ್ಲಿದ್ದರು. ಮುಖ್ಯಮಂತ್ರಿಗಳು ಪರ್ಯಾಯ ಮಾರ್ಗದ ಮೂಲಕ ದಿಲ್ಲಿಗೆ ತೆರಳಿದರು.

ಅಂದು ಇಂದು ಎಂದೆಂದೂ ಒಗ್ಗಟ್ಟೇ ನಮ್ಮ ಶಕ್ತಿ: ಕಾಂಗ್ರೆಸ್

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಆಲಿಂಗನ ಮಾಡುವ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಕಾಂಗ್ರೆಸ್ ಹಂಚಿಕೊಂಡಿದ್ದು, ಅಂದು, ಇಂದು, ಎಂದೆಂದು... ಒಗ್ಗಟ್ಟೇ ನಮ್ಮ ಶಕ್ತಿ! ಎಂದೆಂದಿಗೂ ಜನಸೇವೆಯೇ ನಮ್ಮ ಬದ್ಧತೆ' ಎಂದು ಬರೆದುಕೊಂಡಿದೆ.

> ನಾನು ಸ್ವಯಂಪ್ರೇರಿತನಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದೇನೆ. ಮುಂದಿನ ಮುಖ್ಯಮಂತ್ರಿ ಯಾರೆಂದು ಹೈಕಮಾಂಡ್ ಮತ್ತು ಶಾಸಕಾಂಗ ಪಕ್ಷದ ಸಭೆ ತೀರ್ಮಾನಿಸುತ್ತದೆ.
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಮತದಾರರೇ ಅಭಿಮಾನಿ ದೇವರು

ಪುಟ ೧ ➔ ಆದರಂತೆ ಇವತ್ತು ಸ್ವಯಂಪ್ರೇರಿತನಾಗಿ ರಾಜೀನಾಮೆ ಕೊಟ್ಟಿದ್ದೇನೆ. ರಾಜ್ಯಪಾಲರು ಬೆಂಗಳೂರಿನಲ್ಲಿಲ್ಲದೆ ಇರುವುದರಿಂದ ಅವರ ಕಾರ್ಯದರ್ಶಿಯವರಿಗೆ ರಾಜೀನಾಮೆ ಪತ್ರ ಕೊಟ್ಟಿದ್ದೇನೆ. ರಾಜ್ಯಪಾಲರು ವಾಪಸ್ ಬಂದ ಬಳಿಕ ನನ್ನ ರಾಜೀನಾಮೆಯನ್ನು ಅಂಗೀಕರಿಸುತ್ತಾರೆಂಬ ಸಂಪೂರ್ಣ ವಿಶ್ವಾಸವಿದೆ. ಸಂವಿಧಾನದ ಪ್ರಕಾರ ಅಂಗೀಕರಿಸಲೇಬೇಕು ಎಂದು ಹೇಳಿದರು.

ಮತದಾರ ದೇವರು! ಕರ್ನಾಟಕದ ಮೇರುನಟ ರಾಜ್‌ಕುಮಾರ್ ಅಭಿಮಾನಿ ದೇವರೆಂದು ಕರೆಯುತ್ತಿದ್ದರು. ನಾನು ರಾಜಕಾರಣಿ, ನಾನು ಸಂವಿಧಾನವೇ ನನ್ನ ಧರ್ಮ ಎಂದು ತಿಳಿದವನು. ಮತದಾರರೇ ನಮ್ಮ ಅಭಿಮಾನಿ ದೇವರು. ಕನ್ನಡನಾಡಿನ 7 ಕೋಟಿ ಜನರ ಸೇವೆ ಮಾಡುವ ಅವಕಾಶ ಸಿಕ್ಕಿತ್ತು. ಎರಡು ಬಾರಿ ಮುಖ್ಯಮಂತ್ರಿಯಾಗುವ ಮತ್ತು ಎರಡು ಬಾರಿ ಪ್ರತಿಪಕ್ಷ ನಾಯಕನಾಗುವ ಅವಕಾಶ ಸಿಕ್ಕಿತ್ತು. ಈ ಅವಕಾಶ ಕೊಟ್ಟ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಈ ಸಂದರ್ಭದಲ್ಲಿ ಅಪಾರ ಧನ್ಯವಾದ ತಿಳಿಸುತ್ತೇನೆ. ನಾನು ಕಾಂಗ್ರೆಸ್ ಸೇರಿದ್ದು 2006, ಆಗಿನಿಂದಲೂ ಕಾಂಗ್ರೆಸ್ ಕಾರ್ಯಕರ್ತರು, ಶಾಸಕರು, ಸಂಸದರು, ನನಗೆ ಪ್ರೀತಿ ತೋರಿಸಿದ್ದಾರೆ, ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. 2013ರಿಂದ 2018ರವರೆಗೆ ಮತ್ತು 2023ರಿಂದ ಇಲ್ಲಿಯವರೆಗೆ ನನ್ನ ಜತೆ ಕೆಲಸ ಮಾಡಿದ ಸಹೋದ್ಯೋಗಿಗಳು ಎಲ್ಲಾ ರೀತಿಯ ಬೆಂಬಲ, ಸಹಕಾರ, ಪ್ರೀತಿ ವ್ಯಕ್ತಪಡಿಸಿದ್ದಾರೆ. ಅವರಿಗೆ ನಾನು ಋಣಿ ಆಗಿರುತ್ತೇನೆ. ಎಲ್ಲರಿಗೂ ಧನ್ಯವಾದ ಹೇಳುತ್ತೇನೆ ಎಂದರು.

ಆಡಳಿತ ಸಂತೃಪ್ತಿ ನೀಡಿದೆ

ನನ್ನ ಅವಧಿಯಲ್ಲಿ ಜನತೆಗೆ ಕೊಟ್ಟ ಭರವಸೆ, ವಚನಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಇದು ನನಗೆ ಮತ್ತು ನಮ್ಮ ಪಕ್ಷಕ್ಕೆ ಸಂತೃಪ್ತಿ ತಂದಿದೆ. ಮೊದಲ ಬಾರಿ ಮುಖ್ಯಮಂತ್ರಿಯಾದಾಗ ಪ್ರಣಾಳಿಕೆಯಲ್ಲಿ ಹೇಳಿರುವ 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೇನೆ. ಎರಡನೇ ಬಾರಿಗೆ ಮುಖ್ಯಮಂತ್ರಿಯಾದಾಗ 550ಕ್ಕೂ ಹೆಚ್ಚಿನ ಭರವಸೆಗಳಲ್ಲಿ 300 ಭರವಸೆಗಳನ್ನು ಈಡೇರಿಸಲಾಗಿದೆ. ಐದು ಗ್ಯಾರಂಟಿ ಯೋಜನೆಗಳನ್ನು ಮೊದಲ ವರ್ಷದಲ್ಲೇ ಅನುಷ್ಠಾನಿಸಲಾಗಿದೆ. ಈವರೆಗೆ 1.40 ಲಕ್ಷ ಕೋಟಿ ರೂ.ಗಳನ್ನು ವಿನಿಯೋಗಿಸಲಾಗಿದೆ. ಕರ್ನಾಟಕ ತಲಾದಾಯದಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಜಿಎಸ್‌ಟಿ ಸಂಗ್ರಹದಲ್ಲಿ ಎರಡನೇ ಸ್ಥಾನದಲ್ಲಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ರಾಷ್ಟ್ರ ರಾಜಕಾರಣಕ್ಕೆ ಹೋಗುವುದಿಲ್ಲ

ಪುಟ ೧ ➔ ಅದರಲ್ಲಿ ಆಸಕ್ತಿ ಇಲ್ಲ. ರಾಜ್ಯ ರಾಜಕಾರಣದಲ್ಲೇ ಇರುತ್ತೇನೆ. ಮತದಾರ ದೇವರು ನನ್ನನ್ನು ಐದು ವರ್ಷಗಳಿಗೆ ಆಯ್ಕೆ ಮಾಡಿದ್ದಾರೆ. ಇನ್ನೂ ಎರಡು ವರ್ಷವಿದೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ರಾಜಕಾರಣಕ್ಕೆ ಬಂದದ್ದು ಆಕಸ್ಮಿಕ

ನಾನು ಹಳ್ಳಿಗಾಡಿನಿಂದ ಬಂದವನು. ನಾನು ಮುಂದೊಂದು ದಿನ ಶಾಸಕ, ಮಂತ್ರಿ, ಮುಖ್ಯಮಂತ್ರಿ, ಪ್ರತಿಪಕ್ಷ ನಾಯಕ ಆಗುತ್ತೇನೆಂದು ಕನಸನ್ನೂ ಕಂಡವನಲ್ಲ. ನಾನು ರಾಜಕಾರಣಕ್ಕೆ ಬಂದದ್ದು ಆಕಸ್ಮಿಕ. ನಮ್ಮ ಕುಟುಂಬದವರು ಯಾರೂ ರಾಜಕಾರಣದಲ್ಲಿ ಇರಲಿಲ್ಲ. ನಾನು ರಾಜಕಾರಣಕ್ಕೆ ಬಂದಾಗಿನಿಂದಲೂ ಬುದ್ಧ, ಬಸವಣ್ಣ, ಬಾಬಾ ಸಾಹೇಬ್ ಅಂಬೇಡ್ಕರ್, ಗಾಂಧೀಜಿ ಅವರ ತತ್ತ್ವ ದರ್ಶಗಳಲ್ಲಿ ನಂಬಿಕೆ ಇಟ್ಟವನು. ಸಂವಿಧಾನದಲ್ಲಿ ಅಪಾರವಾದ ಗೌರವ ಇಟ್ಟುಕೊಂಡವನು. ಆರ್ಥಿಕವಾಗಿ, ಸಾಮಾಜಿಕವಾಗಿ ಈ ದೇಶದ ಸಂಪತ್ತು- ಅಧಿಕಾರ ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು ಎಂಬುದರಲ್ಲಿ ನಂಬಿಕೆ ಇರಿಸಿದ್ದೇನೆ. ನನ್ನ ಅಧಿಕಾರಾವಧಿಯಲ್ಲಿ ನಾನು ನಂಬಿರುವ ಮೌಲ್ಯ, ಸಿದ್ಧಾಂತಗಳೊಂದಿಗೆ ರಾಜಿಯಾಗಿಲ್ಲ. ನೆಲ, ಜಲ, ಭಾಷೆ ವಿಚಾರದಲ್ಲಿ ರಾಜಿ ಆಗಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.



ದುಡುಕಿನ ಹೇಳಿಕೆ ಬೇಡ: ಬೆಂಬಲಿಗರಿಗೆ ಡಿಕೆಶಿ ಸೂಚನೆ

ಮುಖ್ಯಮಂತ್ರಿ ವಿಚಾರದಲ್ಲಿ ಯಾವುದೇ ರೀತಿಯ ದುಡುಕಿನ ಹೇಳಿಕೆ ಬೇಡ ಎಂದು ಬೆಂಬಲಿಗರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಖಡಕ್ ಸೂಚನೆ ನೀಡಿದ್ದಾರೆ. ಹೈಕಮಾಂಡ್ ನಾಯಕರು ನನ್ನ ಜತೆಗೆ ಏನೂ ಮಾತನಾಡಿಲ್ಲ, ಎಲ್ಲವನ್ನೂ ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಮಾತನಾಡಿದ್ದಾರೆ ಎಂದು ತಮ್ಮನ್ನು ಭೇಟಿಯಾದ ಸಚಿವರು, ಶಾಸಕರಿಗೆಲ್ಲ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ ಎನ್ನಲಾಗಿದೆ. ಈ ಉಪಾಹಾರ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವರುಗಳಾದ ಡಾ.ಜಿ. ಪರಮೇಶ್ವರ್, ಶಿವಾನಂದ ಪಾಟೀಲ್, ಕೆ.ಜೆ. ಜಾರ್ಜ್, ಎಂ.ಬಿ. ಪಾಟೀಲ್, ರಾಮಲಿಂಗಾರೆಡ್ಡಿ, ಬೈರತಿ ಸುರೇಶ್, ಸಂತೋಷ್ ಲಾಡ್, ಡಾ. ಎಂ.ಸಿ. ಸುಧಾಕರ್, ಪ್ರಿಯಾಂಕ ಖರ್ಗೆ, ಎಸ್.ಎಸ್. ಮಲ್ಲಿಕಾರ್ಜುನ್, ಕೆ. ವೆಂಕಟೇಶ್, ಶಿವರಾಜ ತಂಗಡಗಿ, ಚಲುವರಾಯಸ್ವಾಮಿ, ಲಕ್ಷ್ಮೀ ಹೆಬ್ಬಾಳ್ಕರ್, ಶರಣಬಸಪ್ಪ ದರ್ಶನಾಪುರ, ಮಧು ಬಂಗಾರಪ್ಪ, ಸತೀಶ್ ಜಾರಕಿಹೊಳಿ, ಡಾ.ಎಚ್.ಸಿ. ಮಹದೇವಪ್ಪ, ಮಾಂಕಾಳ ವೈದ್ಯ, ಆರ್.ಬಿ. ತಿಮ್ಮಾಪುರ, ಶರಣಪ್ರಕಾಶ್ ಪಾಟೀಲ್, ಕೆ.ಎಚ್. ಮುನಿಯಪ್ಪ, ಎಚ್.ಕೆ. ಪಾಟೀಲ್, ಈಶ್ವರ ಖಂಡ್ರೆ, ಬೋಸರಾಜು, ದಿನೇಶ್ ಗುಂಡೂರಾವ್, ಜಮೀರ್ ಅಹ್ಮದ್ ಖಾನ್ ಭಾಗಿಯಾಗಿ ಮುಖ್ಯಮಂತ್ರಿಗಳ ಜತೆ ಉಪಾಹಾರ ಸವಿದರು. ಉಪಾಹಾರದ ಜತೆ ಜತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲ ಸಚಿವರಿಗೂ ಧನ್ಯವಾದ ಹೇಳಿ, ದೆಹಲಿ ಬೆಳವಣಿಗೆಗಳ ಬಗ್ಗೆಯೂ ಮಾಹಿತಿಗಳನ್ನು ನೀಡಿದರು.

ಒಂದು ಪುಟದ ರಾಜೀನಾಮೆ ಪತ್ರ

ಪುಟ ೧ ➔ ಆದರೆ, ಇಂದೋರ್‌ನಿಂದ ರಾಜ್ಯಪಾಲರು ಬೆಂಗಳೂರಿಗೆ ಮರಳಿದ ಬಳಿಕವಷ್ಟೇ ಈ ರಾಜೀನಾಮೆಯನ್ನು ಅಧಿಕೃತವಾಗಿ ಅಂಗೀಕರಿಸಲಾಗುವುದು ಎಂದು ಲೋಕಭವನದ ಮೂಲಗಳು ಸ್ಪಷ್ಟಪಡಿಸಿವೆ.

ಒಂದೇ ಕಾರಿನಲ್ಲಿ ಉಭಯ ನಾಯಕರು: ಸಿದ್ದರಾಮಯ್ಯ ಅವರು ತಮ್ಮ ಉತ್ತರಾಧಿಕಾರಿ ಎನ್ನಲಾದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಒಂದೇ ಕಾರಿನಲ್ಲಿ ಲೋಕಭವನಕ್ಕೆ ಒಟ್ಟಿಗೇ ಆಗಮಿಸಿದ್ದು ಎಲ್ಲರ ಗಮನ ಸೆಳೆಯಿತು. ಅವರ ಜತೆ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಡಾ. ಜಿ. ಪರಮೇಶ್ವರ, ಶರಣಪ್ರಕಾಶ್ ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್, ಎಂ.ಸಿ. ಸುಧಾಕರ್ ಹಾಗೂ ಹಲವಾರು ಕಾಂಗ್ರೆಸ್ ಶಾಸಕರು ಸಹ ರಾಜಭವನಕ್ಕೆ ದೌಡಾಯಿಸಿದ್ದರು. ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರೂ ಈ ಸಂದರ್ಭದಲ್ಲಿ ಇದ್ದರು.



ಇಂದು ಉಪರಾಷ್ಟ್ರಪತಿ ರಾಧಾಕೃಷ್ಣನ್ ಭೇಟಿ

ಬೆಂಗಳೂರು: ಮೇ 29ರಂದು ಹಮ್ಮಿಕೊಳ್ಳಲಾಗಿರುವ ಆರ್ಟ್ ಆಫ್ ಲಿವಿಂಗ್ ಫೌಂಡೇಶನ್‌ನ 45 ವರ್ಷ ಸಂಭ್ರಮಾಚರಣೆಯಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಪಾಲ್ಗೊಳ್ಳಲಿದ್ದಾರೆ. ಬಳಿಕ ಅವರು, ದಾವಣಗೆರೆಯಲ್ಲಿರುವ ವಿಶ್ವವಿದ್ಯಾಲಯ ಬಿಡಿಟಿ ಎಂಜಿನಿಯರಿಂಗ್ ಕಾಲೇಜಿನ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಮೇ 30 ರಂದು ಪಣಜಿಯಲ್ಲಿ ನಡೆಯಲಿರುವ ಗೋವಾ ರಾಜ್ಯ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಂತರ ಅವರು ಗೋವಾದ ಸಿಎಸ್‌ಐಆರ್ ರಾಷ್ಟ್ರೀಯ ಸಮುದ್ರಶಾಸ್ತ್ರ ಸಂಸ್ಥೆಗೆ ಭೇಟಿ ನೀಡಲಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಾಲಯಕ್ಕೆ ಮೇ 31ರಂದು ಭೇಟಿ ನೀಡಲಿದ್ದಾರೆ. ಬಳಿಕ, ಬೆಳ್ತಂಗಡಿಯಲ್ಲಿ ಸಿರಿ ಕೈಗಾರಿಕಾ ಉದ್ಯಾನವನವನ್ನು ಉದ್ಘಾಟಿಸಲಿದ್ದಾರೆ. ಅದೇ ದಿನ ಕೊಟ್ಟಾಯಂನಲ್ಲಿ ದೀಪಿಕಾ ಮಲಯಾಳಂ ದಿನಪತ್ರಿಕೆಯ 140ನೇ ಸಂಸ್ಥಾಪನಾ ದಿನ ಕಾರ್ಯಕ್ರಮ ಉದ್ಘಾಟನೆಗೆ ಕೇರಳಕ್ಕೆ ತೆರಳಲಿದ್ದಾರೆ. ಸಂಸತ್ ಸದಸ್ಯ ಸಿ. ಸದಾನಂದನ್ ಮಾಸ್ಟರ್ ಅವರು ಆಯೋಜಿಸಿರುವ ಖಾಸಗಿ ಸಮಾರಂಭದಲ್ಲಿ ಭಾಗಿಯಾಗಲು ಅವರು ಕಣ್ಣೂರಿಗೆ ಸಹ ಭೇಟಿ ನೀಡಲಿದ್ದಾರೆ.

ಚಂದ್ರನ ಮೇಲ್ಮೈನಲ್ಲಿ ಮಂಜುಗಡ್ಡೆ

ಪುಟ ೧ ➔ ವಿಜ್ಞಾನಿಗಳು ಚಂದ್ರಯಾನ-2 ನೌಕೆಯು ಡ್ಯುಯಲ್ ಫ್ರೀಕ್ವೆನ್ಸಿ ಸಿಂಥೆಟಿಕ್ ಅಪರ್ಚರ್ ರೇಡಾರ್ (ಡಿಎಫ್‌ಎಸ್‌ಎಆರ್) ಒದಗಿಸಿದ ಮಾಹಿತಿಯನ್ನು ವಿಶ್ಲೇಷಿಸಿದ್ದಾರೆ. ಇದು ಚಂದ್ರನ ಮೇಲ್ಮೈ ಆಳವನ್ನು ಶೋಧಿಸುವ ಮೈಕ್ರೋವೇವ್ ಇಮೇಜಿಂಗ್ ಸಾಧನ. ಫಾಸ್ಟಿನಿ ಎಂಬ ದೊಡ್ಡ ಕುಳಿಯೊಳಗಿನ 1.1 ಕಿಲೋಮೀಟರ್ ಅಗಲದ ಸಣ್ಣ ಕುಳಿಯಲ್ಲಿ ಮಂಜುಗಡ್ಡೆ ಇರುವುದಕ್ಕೆ ಬಲವಾದ ಪುರಾವೆಗಳು ಸಿಕ್ಕಿವೆ ಎನ್ನಲಾಗಿದೆ.

ತಾಂತ್ರಿಕ ಮಿಷನ್ ದತ್ತಾಂಶ ಏನು?: ಚಂದ್ರನನ್ನು ಎಲ್-ಬ್ಯಾಂಡ್ ಮತ್ತು ಎಸ್-ಬ್ಯಾಂಡ್ ತರಂಗಾಂತರಗಳಲ್ಲಿ ಅಧ್ಯಯನ ಮಾಡಿದ ಮೊದಲ ಸಂಪೂರ್ಣ ಪೋಲಾರಿಮೆಟ್ರಿಕ್ ಸಾಧನ ಇದಾಗಿದೆ. ಈ ನೌಕೆ, 2019 ರಲ್ಲಿ ಚಂದ್ರನ ಕಕ್ಷೆಯನ್ನು ಪ್ರವೇಶಿಸಿದಾಗಿನಿಂದ ಧ್ರುವೀಯ ಪ್ರದೇಶದ ಭೂಪ್ರದೇಶದ ನಕ್ಷೆ ರಚಿಸಲು ಸಾವಿರಾರು ದತ್ತಾಂಶಗಳನ್ನು ಸಂಗ್ರಹಿಸಿದೆ. ಈ ಹಿಂದಿನ ಅಧ್ಯಯನಗಳೂ ಸಹ ಚಂದ್ರನ ಮೇಲ್ಮೈ ಭಾಗಗಳಲ್ಲಿ ನೀರಿನ ಅಣುಗಳು ಮತ್ತು ಹೈಡ್ರಾಕ್ಸಿಲ್ ಇರುವಿಕೆಯನ್ನು ಪತ್ತೆಹಚ್ಚಿದ್ದವು. ಪ್ರಸ್ತುತ ಲಭ್ಯವಾಗಿರುವ ದತ್ತಾಂಶಗಳು, ಚಂದ್ರನ ಮೇಲೆ ಮಂಜುಗಡ್ಡೆ ಇರುವ ಪ್ರದೇಶಗಳನ್ನು ಗುರುತಿಸಲು ಉನ್ನತ ರೆಸಲ್ಯೂಶನ್ ಧ್ರುವೀಯ ನಕ್ಷೆಗಳನ್ನು ಒದಗಿಸುತ್ತವೆ.

ಚಂದ್ರನ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಯೋಜಿಸುವ ಭವಿಷ್ಯದ ಬಾಹ್ಯಾಕಾಶ ಯೋಜನೆಗಳಿಗೆ ಈ ಸಂಶೋಧನೆಗಳು ಸಹಕಾರಿಯಾಗಲಿವೆ ಎನ್ನಲಾಗಿದೆ. ಚಂದ್ರನ ಮೇಲ್ಮೈ ಅಡಿಯಲ್ಲಿರುವ ಮಂಜುಗಡ್ಡೆಯನ್ನು ಕುಡಿಯುವ ನೀರು, ಆಮ್ಲಜನಕ ಮತ್ತು ರಾಕೆಟ್ ಇಂಧನವಾಗಿ ಪರಿವರ್ತಿಸಬಹುದು. ಅಲ್ಲದೆ, ದೀರ್ಘಕಾಲದ ಮಾನವ ವಾಸಕ್ಕೆ ಇದು ಅತ್ಯಂತ ನಿರ್ಣಾಯಕ ಎಂದು ಪರಿಗಣಿಸಲಾಗಿದೆ.

ಜಲವಿವಾದಕ್ಕೆ ಸಹಕಾರವೇ ಪರಿಹಾರ

ಪುಟ ೧ ➔ ಗುರುವಾರ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ, 'ಪ್ರಗತಿ ಸಭೆಯಲ್ಲಿ ರೈಲು, ವಿದ್ಯುತ್, ರಸ್ತೆ ಸಂಪರ್ಕ ಸೇರಿದಂತೆ ಹಲವು ಪ್ರಮುಖ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಲಾಗಿದೆ. ಬಂದರು, ಸ್ವಚ್ಛ ಭಾರತ್ ಮಿಷನ್ 2.0 ಸೇರಿದಂತೆ ಸಾಮಾಜಿಕ ಕ್ಷೇತ್ರದ ಯೋಜನೆಗಳ ಕುರಿತೂ ಚರ್ಚೆ ನಡೆದಿದೆ' ಎಂದು ತಿಳಿಸಿದ್ದಾರೆ. ಕೆನ್-ಬೆಟ್ವಾ ನದಿ ಜೋಡಣೆ ಯೋಜನೆ ಪರಿಶೀಲನೆ ವೇಳೆ ರಾಜ್ಯಗಳು ಪರಸ್ಪರ ಸಹಕಾರದಿಂದ ಜಲ ವಿವಾದಗಳನ್ನು ಬಗೆಹರಿಸಿಕೊಳ್ಳಬೇಕು ಎಂದು ಪ್ರಧಾನಿ ಸೂಚಿಸಿದರು. ನದಿ ಜೋಡಣೆ, ಜಲ ಸಂರಕ್ಷಣೆ, ಭೂಗರ್ಭಜಲ ಮರುಪೂರೈಕೆ ಮತ್ತು ಪರಿಣಾಮಕಾರಿ ನೀರಾವರಿ ವ್ಯವಸ್ಥೆಗಳನ್ನು ಸಮಗ್ರವಾಗಿ ಜಾರಿಗೆ ತಂದು ದೀರ್ಘಕಾಲಿಕ ಜಲ ಭದ್ರತೆ ಸಾಧಿಸುವಂತೆ ಸಲಹೆ ನೀಡಿದರು.

ಮೇಲ್ಛಾವಣಿ ಸೌರಶಕ್ತಿ ವೇಗಗೊಳಿಸಲು ಸೂಚನೆ: ವಿದ್ಯುತ್ ಕ್ಷೇತ್ರದ ಯೋಜನೆಗಳ ಪರಿಶೀಲನೆ ವೇಳೆ ನಗರ ಪ್ರದೇಶಗಳು, ವಸತಿ ಸಮುಚ್ಚಯಗಳು ಹಾಗೂ ಸಾರ್ವಜನಿಕ ಸಂಸ್ಥೆಗಳಲ್ಲಿ ಮೇಲ್ಛಾವಣಿ ಸೌರಶಕ್ತಿ ಅಳವಡಿಕೆಯನ್ನು ಮಿಷನ್ ಮಾದರಿಯಲ್ಲಿ ಜಾರಿಗೊಳಿಸುವಂತೆ ಪ್ರಧಾನಿ ಸೂಚಿಸಿದರು. ಇದರಿಂದ ವಿದ್ಯುತ್ ವೆಚ್ಚ ಕಡಿಮೆಯಾಗುವ ಜೊತೆಗೆ ಶುದ್ಧ ಇಂಧನ ಬಳಕೆ ಹೆಚ್ಚಲಿದೆ ಎಂದರು.

ಕಾಲುವೆಗಳ ಮೇಲೂ ಸೌರ ಫಲಕ: ಕಾಲುವೆಗಳ ಮೇಲ್ಭಾಗ ಹಾಗೂ ಬದಿಗಳಲ್ಲಿ ಸೌರ ಫಲಕ ಅಳವಡಿಸುವ ನವೀನ ವಿಧಾನಗಳನ್ನು ಅನ್ವೇಷಿಸಬೇಕು ಎಂದು ಪ್ರಧಾನಿ ಸಲಹೆ ನೀಡಿದರು.

ಗಿರಿಬಾಲಾ ಸಿಬಿಐ ವಶಕ್ಕೆ

ಪುಟ ೧ ➔ **ಪ್ರಕರಣದ ವಿವರ:** ಈ ಪ್ರಕರಣ ಭಾರತೀಯ ನ್ಯಾಯ ಸಂಹಿತೆ ಮತ್ತು ವರದಕ್ಷಿಣೆ ನಿಷೇಧ ಕಾಯ್ದೆಯಲ್ಲಿ ಕ್ರೌರ್ಯ ಹಾಗೂ ವರದಕ್ಷಿಣೆ ಕಿರುಕುಳದ ಆರೋಪಗಳನ್ನು ಒಳಗೊಂಡಿದೆ. ಸಿಂಗ್ ಮತ್ತು ಅವರ ಮಗ ಸೇರಿ, ಶರ್ಮಾಗೆ ಕಿರುಕುಳ ನೀಡುತ್ತಿದ್ದರು ಮತ್ತು ಗರ್ಭಪಾತ ಮಾಡಿಸಿಕೊಳ್ಳುವಂತೆ ಒತ್ತಡ ಹೇರುತ್ತಿದ್ದರು ಎಂದು ಮೇ 13ರಂದು ದಾಖಲಾದ ಕುಟುಂಬದ ಹೇಳಿಕೆಗಳು ತಿಳಿಸಿವೆ ಎಂದು ಹೈಕೋರ್ಟ್ ಹೇಳಿದೆ. ಇದರೊಂದಿಗೆ ವಾಟ್ಸ್ಯಾಪ್ ಚಾಟ್‌ಗಳು ಮತ್ತು ಮರಣೋತ್ತರ ಪರೀಕ್ಷೆಯ ವರದಿಯಲ್ಲಿನ ಗಾಯದ ಗುರುತುಗಳನ್ನು ನ್ಯಾಯಾಲಯ ಉಲ್ಲೇಖಿಸಿದೆ.

ತನಿಖೆಯ ಪ್ರಗತಿ: ನೋಟಿಸ್ ನೀಡಿದ್ದರೂ ಸಿಂಗ್ ತನಿಖೆಗೆ ಸಂಪೂರ್ಣವಾಗಿ ಸಹಕರಿಸಿಲ್ಲ ಎಂದು ಪ್ರಾಸಿಕ್ಯೂಷನ್ ಮತ್ತು ತನಿಖಾ ಸಂಸ್ಥೆಗಳು ನ್ಯಾಯಾಲಯಕ್ಕೆ ತಿಳಿಸಿವೆ. ಆರೋಪಗಳ ಗಂಭೀರತೆಯ ಹಿನ್ನೆಲೆಯಲ್ಲಿ ಕಸ್ಟಡಿ ವಿಚಾರಣೆ ಅಗತ್ಯ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ. ಪ್ರಸ್ತುತ ಸಿಂಗ್ ಮತ್ತು ಅವರ ಮಗನನ್ನು ಭೋಪಾಲ್‌ನಲ್ಲಿರುವ ಸಿಬಿಐ ಕಚೇರಿಯಲ್ಲಿ ವಿಚಾರಣೆಗೆ ಒಳಪಡಿಸಲಾಗಿದೆ.

₹25,530 ಕೋಟಿ ಅನುದಾನ ವೆಚ್ಚಕ್ಕೆ ಕೇಂದ್ರ ಅನುಮೋದನೆ

ಹೊಸದಿಲ್ಲಿ: ಕೇಂದ್ರ ಸರ್ಕಾರ ದೇಶದ ಪ್ರತಿ ನಾಗರಿಕರಿಗೂ ಆಹಾರ ಭದ್ರತೆ ಮತ್ತು ಪಡಿತರ ವಿತರಣೆ ವ್ಯವಸ್ಥೆಯಲ್ಲಿ ಅತ್ಯಂತ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಮತ್ತೊಂದು ಹೊಸ ಹೆಜ್ಜೆ ಇರಿಸಿದ್ದು, ಇದೀಗ "ಸಾರ್ಥಕ್ ಪಿಡಿಎಸ್" ಯೋಜನೆಗೆ ಅನುಮೋದನೆ ನೀಡಿದೆ.

ಪ್ರಧಾನಿ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಈ ಹೊಸ ಯೋಜನೆ ಜಾರಿಗೆ ಸಮ್ಮತಿ ಸೂಚಿಸಿತೆಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಹ್ಲಾದ ಜೋಶಿ ಮಾಹಿತಿ ಹಂಚಿಕೊಂಡಿದ್ದಾರೆ. ಕೇಂದ್ರ ಸರ್ಕಾರ, ದೇಶದ ಜನರಿಗೆ ಸಾಮಾಜಿಕ ಮತ್ತು ಕಾನೂನು ಬದ್ಧತೆ ಜತೆಗೆ ಅಗತ್ಯ, ಗುಣಮಟ್ಟದ ಆಹಾರ ಧಾನ್ಯಗಳ ಲಭ್ಯತೆಯನ್ನೂ ಖಚಿತಪಡಿಸಿದೆ. ಅದರಂತೆ NFSA ಅಡಿಯಲ್ಲಿ 81.35 ಕೋಟಿ ಜನರಿಗೆ ಆಹಾರ ಧಾನ್ಯ ಪೂರೈಸುವ ನಿಟ್ಟಿನಲ್ಲಿ "ಸಾರ್ಥಕ್ ಪಿಡಿಎಸ್" ಯೋಜನೆ ಪರಿಣಾಮಕಾರಿಯಾಗಲಿದೆ ಎಂದಿದ್ದಾರೆ.



25,530 ಕೋಟಿ ರೂ. ಅನುದಾನ: 16ನೇ ಹಣಕಾಸು ಆಯೋಗದ ಅವಧಿಯಲ್ಲಿ "ಸಾರ್ಥಕ್ ಪಿಡಿಎಸ್"ಗಾಗಿ ಕೇಂದ್ರ ಸರ್ಕಾರ ತನ್ನ ಪಾಲಿನ ರೂ. 25,530 ಕೋಟಿ ಅನುದಾನ ಒದಗಿಸಿ ಅನುಮೋದನೆ ನೀಡಿದೆ. ದೇಶದ ಪಡಿತರ ವ್ಯವಸ್ಥೆಯಲ್ಲಿ ಇದೊಂದು ಸುಧಾರಿತ ತಂತ್ರಜ್ಞಾನದ ಯೋಜನೆಯಾಗಿ 31.03.2031ರ ವರೆಗೆ 5 ವರ್ಷಗಳ ಕಾಲ ಮುಂದುವರಿಯಲಿದೆ ಎಂದು ತಿಳಿಸಿದ್ದಾರೆ. ಎಲ್ಲಾ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಪಡಿತರ ಸಾಗಣೆ, ಆಹಾರ ಧಾನ್ಯಗಳ ನಿರ್ವಹಣೆ, DPT ವಿತರಕರ ಮಾರ್ಜಿನ್‌ಗಾಗಿ ಮಾಡುವ ವೆಚ್ಚವನ್ನು ಪೂರೈಸಲು 'ಸಾರ್ಥಕ್ ಪಿಡಿಎಸ್' ಒಂದು ಸಾರ್ಥಕ್ಯದ ಯೋಜನೆಯಾಗಿದ್ದು, ಇದರ ಮೂಲಕ ಕೇಂದ್ರ ನೆರವಿನ ಮಾನದಂಡಗಳನ್ನು ಪರಿಷ್ಕರಿಸಲು ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ.

ನೀರಾನೆ ಮರಿಗೆ ಸಮೀಕ್ಷಾ ರೆಡ್ಡಿ ಹೆಸರಿಡಲು ಸೂಚನೆ

ಬೆಂಗಳೂರು: ಬನ್ನೇರುಘಟ್ಟ ಮೃಗಾಲಯದಲ್ಲಿ ಬುಧವಾರ ರಾತ್ರಿ ಜನಿಸಿರುವ ನೀರಾನೆ ಮರಿಯ ಆರೋಗ್ಯದ ಬಗ್ಗೆ ತೀವ್ರ ಗಮನ ಹರಿಸಿ, ಈ ನವಜಾತ ನೀರಾನೆ ಮರಿ ಹೆಣ್ಣಾಗಿದ್ದಲ್ಲಿ ತ್ಯಾವರೆಕೊಪ್ಪ ಮೃಗಾಲಯದಲ್ಲಿ ಕರ್ತವ್ಯನಿರ್ವಹಿಸುವಾಗ ಮೃತಪಟ್ಟ ಡಾ. ಸಮೀಕ್ಷಾ ರೆಡ್ಡಿ ಗೌರವಾರ್ಥ ಸಮೀಕ್ಷಾ ಎಂದು ಹೆಸರಿಡಲು ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ ಸೂಚಿಸಿದ್ದಾರೆ.



ಬನ್ನೇರುಘಟ್ಟದಲ್ಲಿ 17 ವರ್ಷದ ದಶ್ಯ ನೀರಾನೆಯು ಮರಿಗೆ ಜನ್ಮ ನೀಡಿರುವ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಅವರು, ಕಳೆದ ಬಾರಿ ಇದೇ ನೀರಾನೆ ಜನ್ಮ ಕೊಟ್ಟಿದ್ದ ಮರಿ ಸೋಂಕಿನಿಂದ ಮೃತಪಟ್ಟಿತ್ತು. ಈ ನಿಟ್ಟಿನಲ್ಲಿ ಮರಿಯ ಆರೋಗ್ಯದ ಬಗ್ಗೆ ಸತತ ನಿಗಾ ಇಟ್ಟು, ಯಾವುದೇ ಸೋಂಕು ತಗುಲದಂತೆ ಕಟ್ಟುನಿಟ್ಟಾಗಿ ಪ್ರಮಾಣಿತ ಕಾರ್ಯಾಚರಣೆ ಮಾನದಂಡಗಳನ್ನು ಅನುಸರಿಸಲು ಸಚಿವರು ನಿರ್ದೇಶಿಸಿದ್ದಾರೆ.

ಈ ನವಜಾತ ಮರಿಯ ಆರೋಗ್ಯದ ಖಾತ್ರಿ ಪಡಿಸಿಕೊಂಡು ಜೂನ್ 4ರಂದು ದಕ್ಷಿಣ ಆಫ್ರಿಕಾದಿಂದ ತರಲಾಗಿರುವ ಚೀತಾಗಳನ್ನು ಸಾರ್ವಜನಿಕ ವೀಕ್ಷಣಾ ಆವರಣಕ್ಕೆ ಬಿಡುವ ಸಂದರ್ಭದಲ್ಲಿ ಈ ಮರಿಗೆ ಸಮೀಕ್ಷಾ ಎಂದು ನಾಮಕರಣ ಮಾಡಲೂ ಸೂಚಿಸಿದ್ದಾರೆ.

ಶಿವಮೊಗ್ಗ ಬಳಿಯ ತ್ಯಾವರೆಕೊಪ್ಪ ಸಿಂಹಧಾಮದಲ್ಲಿ ಗರ್ಭಿಣಿಯಾಗಿದ್ದ ಹಂಸಿಣಿ ನೀರಾನೆ ಚಿಕಿತ್ಸೆಗೆ ತೆರಳಿದ್ದ ಯುವ ವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಅವರ ಮೇಲೆ ನೀರಾನೆ ದಾಳಿ ಮಾಡಿತ್ತು. ಚಿಕಿತ್ಸೆ ಫಲ ಕಾಣದೆ ಅವರು ಮೃತಪಟ್ಟಿದ್ದರು. ಆ ಸಂದರ್ಭದಲ್ಲಿ ಮೃತ ವೈದ್ಯೆಯ ಕುಟುಂಬದವರಿಗೆ ಸಾಂತ್ವನ ಹೇಳಲು ತೆರಳಿದ್ದ ಈಶ್ವರ ಖಂಡ್ರೆ ಅವರು ಒಂದು ನವಜಾತ ವನ್ಯಜೀವಿಗೆ ಸಮೀಕ್ಷಾ ಹೆಸರಿಡುವ ಪ್ರಸ್ತಾಪ ಮಾಡಿದ್ದರು. ಅದರಂತೆ ಇಂದು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಲಿಖಿತ ಆದೇಶ ನೀಡಿದ್ದಾರೆ.



ಕರ್ನಾಟಕದ ಸುದೀರ್ಘ ಅವಧಿಗೆ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಸಿಎಂ ಸಿದ್ದರಾಮಯ್ಯ ಅವರು ಗುರುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ರಾಜೀನಾಮೆ ಬಳಿಕ ಸಾಮಾಜಿಕ ತಾಣ ಎಕ್ಸ್‌ನಲ್ಲಿ ರಾಜ್ಯದ ಜನತೆಗೆ ಧನ್ಯವಾದ ತಿಳಿಸುವ ಪೋಸ್ಟ್ ಹಂಚಿಕೊಂಡಿದ್ದು, ನಿಮ್ಮ ಪ್ರೀತಿಗೆ ಧನ್ಯವಾದ ಎಂದು ತಿಳಿಸಿದ್ದಾರೆ.

ಅಧಿಕಾರಿಗಳಿಂದ ಅರಣ್ಯ ಸಂಪತ್ತು ಉಳಿವು: ನೇಗಿ

ಬೆಂಗಳೂರು: ಬೇರೆ ಬೇರೆ ಇಲಾಖೆಗಳ ಭೂಮಿ ನಶಿಸುತ್ತಿದ್ದು, ಹೀಗಿರುವಾಗ ಅರಣ್ಯ ಸಂಪತ್ತು ಉಳಿಸಿದ ಶ್ರೇಯಸ್ಸು ಹಿಂದಿನ ಅಧಿಕಾರಿಗಳಿಗೆ ಸಲ್ಲುತ್ತದೆ ಎಂದು ಅರಣ್ಯ ಇಲಾಖೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮೀನಾಕ್ಷಿ ನೇಗಿ ಹೇಳಿದ್ದಾರೆ.

ಭಾರತೀಯ ಅರಣ್ಯ ಸೇವೆ ಪರೀಕ್ಷೆ 2025-26ರಲ್ಲಿ ಯಶಸ್ಸು ಸಾಧಿಸಿದ ಅಭ್ಯರ್ಥಿಗಳಿಗೆ ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯಿಂದ ಅರಣ್ಯ ಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಭಾರತೀಯ ಅರಣ್ಯ ಸೇವೆಗೆ ಸೇರ್ಪಡೆಯಾದ ಹತ್ತು ಸಾಧಕರನ್ನು ಅಭಿನಂದಿಸಿ ಮಾತನಾಡಿದ ಅವರು, ಇಂತಹ ಭವ್ಯವಾದ ನೈಸರ್ಗಿಕ ಅರಣ್ಯ ಸಂಪನ್ಮೂಲ ಉಳಿಸಲು ಅವಿರತವಾಗಿ ಹಿಂದಿನವರು ಶ್ರಮಿಸಿದ್ದಾರೆ. ಪರಿಶ್ರಮ, ಶಿಸ್ತು ಹಾಗೂ ದೃಢ ಸಂಕಲ್ಪದಿಂದ ನಾಗರಿಕ ಸೇವೆಗಳಲ್ಲಿ ಯಶಸ್ಸು ಸಾಧಿಸಬಹುದು ಎಂದು ಕಿವಿ ಮಾತು ಹೇಳಿದರು.

ಸರ್ಕಾರಿ ಹುದ್ದೆ ಎಂದರೆ ಉತ್ತಮ ವೇತನ, ಭತ್ಯೆ ದೊರೆಯುವ ಜೊತೆಗೆ ಆರಾಮವಾಗಿರಬಹುದು ಎನ್ನುವ ಧೋರಣೆ ಹೆಚ್ಚಾಗಿದೆ. ಆದರೆ ಸರ್ಕಾರಿ ಹುದ್ದೆಯಲ್ಲಿ ಕಠಿಣ ಪರಿಶ್ರಮ ಹೊಂದಿರಬೇಕು. ಕರ್ನಾಟಕಕ್ಕೆ ಮೊದಲ ಅರಣ್ಯ ಅಧಿಕಾರಿಯಾಗಿ ನಿಯೋಜನೆಗೊಂಡು ತಾವು ಸವಾಲಿನಿಂದ ಕೆಲಸ ಮಾಡಿರುವುದು ಸಮಾಧಾನ ತಂದಿದೆ.

ಜನರ ನಿರೀಕ್ಷೆಗಳು, ಬೇಡಿಕೆಗಳಿಗೆ ಅನುಗುಣವಾಗಿ ಕೆಲಸ ಮಾಡಬೇಕು. ಅರಣ್ಯ ಪುರಾತನವಾದದ್ದು. ಉಪನಿಷತ್ತಿನಲ್ಲಿ ಅತಿ ಹೆಚ್ಚು ಜ್ಞಾನವಿದ್ದು, ಉಪನಿಷತ್ತಿಗೆ ಮತ್ತೊಂದು ಹೆಸರು ಅರಣ್ಯಕ. ಅರಣ್ಯ ಸಕಲ ಜೀವ ರಾಶಿಗಳಷ್ಟೇ ಅಲ್ಲ ಜ್ಞಾನದ ಬಂಢಾರವಾಗಿದೆ. ಅರಣ್ಯ ಸಂರಕ್ಷಣೆಗೆ ಸಂಪ್ರದಾಯಿಕ ಪದ್ಧತಿ ಮತ್ತು ಅತ್ಯಾಧುನಿಕ ತಂತ್ರಜ್ಞಾನ ಎರಡನ್ನೂ ಬಳಸಬೇಕು ಎಂದು ಕಿವಿ ಮಾತು ಹೇಳಿದರು.



ಇಂಡಿಯಾಫಾರ್ ಐಎಎಸ್ ಅಕಾಡೆಮಿಯ ಸಂಸ್ಥೆಯ ಅಧ್ಯಕ್ಷ ಡಾ.ಸಿ.ಎಸ್.ಷೇದಾರ್ ಮಾತನಾಡಿ, ಈ ಬಾರಿ ದಾಖಲೆ ಪ್ರಮಾಣದಲ್ಲಿ ಕರ್ನಾಟಕದಿಂದ ಅರಣ್ಯ ಸೇವೆಗೆ ಸೇರ್ಪಡೆಯಾಗಿದ್ದು, ಇದು ಅತ್ಯುತ್ತಮ ಬೆಳವಣಿಗೆಯಾಗಿದೆ. ಅರಣ್ಯ ಸೇವೆ ಮಾಡಿದರೆ ಮಾನವೀಯ ಸೇವೆ ಮಾಡಿದಂತೆ. ಈ ಉದ್ದೇಶದಿಂದ ನಮ್ಮ ಅಕಾಡೆಮಿಯಲ್ಲಿ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹ ನೀಡುತ್ತಿದ್ದೇವೆ. ಲೋಕಸೇವಾ ಆಯೋಗದಿಂದ ಪ್ರತಿ ವರ್ಷ ರಾಜ್ಯದ ನೂರು ಮಂದಿ ಆಯ್ಕೆಯಾಗಬೇಕು ಎಂಬುದು ನಮ್ಮ ಮಹತ್ವಾಕಾಂಕ್ಷೆ ಗುರಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಪಿಸಿಸಿಎಫ್ ಶ್ರೀಧರ್ ಮೂರ್ತಿ, ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯ ಉಪಾಧ್ಯಕ್ಷ ಡಾ.ಜಿ.ಎನ್. ಶ್ರೀಕಂಠಯ್ಯ, ನಿವೃತ್ತ ಐಎಫ್‌ಎಸ್ ಅಧಿಕಾರಿ ಶ್ರೀನಿವಾಸ್ ಉಪಸ್ಥಿತರಿದ್ದರು.

ಕಿರುಸುದ್ದಿ

ಹಿರಿಯರ ಮಾರ್ಗದರ್ಶನ ಅಗತ್ಯ: ಹೆಬ್ಬಾಳ್ಕರ್

ಬೆಂಗಳೂರು: ಸಿದ್ದರಾಮಯ್ಯ ಅವರು ನಮ್ಮ ಪಕ್ಷದ ಪ್ರಶ್ನಾತೀತ ನಾಯಕ. ಅವರ ಮುತ್ಸದ್ದಿತನ, ನಾಯಕತ್ವ, ಮಾರ್ಗದರ್ಶನ ಮುಂದಿಟ್ಟುಕೊಂಡೇ ನಮ್ಮ ಸರ್ಕಾರ ಮುನ್ನಡೆಯುತ್ತದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರತಿಕ್ರಿಯೆ ನೀಡಿದ್ದಾರೆ.

ಸಿಎಂ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದ ವಿಚಾರದಲ್ಲಿ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಪಕ್ಷದ ಹೈಕಮಾಂಡ್ ಹೇಳಿದಂತೆ ಸಿದ್ದರಾಮಯ್ಯ ನಡೆದುಕೊಂಡಿದ್ದಾರೆ. ಅವರು ನಮ್ಮ ನಾಯಕರು, ಪ್ರಶ್ನಾತೀತ ನಾಯಕರು. ಅವರ ನಾಯಕತ್ವ, ಮಾರ್ಗದರ್ಶನ ಮುಂದೆಯೂ ಇರುತ್ತದೆ ಎಂದು ಹೇಳಿದರು. ಮುಂದಿನ ಸಿಎಂ ಯಾರು ಎಂಬ ಪ್ರಶ್ನೆಗೆ, ಪಕ್ಷ ಇದೆ, ಹೈಕಮಾಂಡ್ ನಾಯಕರು ಇದ್ದಾರೆ. ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಂದಿನ ನಾಯಕರ ಆಯ್ಕೆ ನಡೆಯುತ್ತದೆ. ಪಕ್ಷದಲ್ಲಿ ಅದಕ್ಕೊಂದು ವ್ಯವಸ್ಥೆ ಇದೆ, ಅದರಂತೆ ನಡೆಯುತ್ತದೆ ಎಂದು ಹೇಳಿದರು.

ಈಗ ಸ್ಪೀಕರ್, ಮುಂದೆ ಏನಾಗುತ್ತದೆ ಗೊತ್ತಿಲ್ಲ: ಖಾದರ್

ಮಂಗಳೂರು: 'ಈಗ ನಾನು ಸ್ಪೀಕರ್ ಆಗಿ ಇದ್ದೇನೆ. ಮುಂದೆ ಏನಾಗುತ್ತದೆ ಎಂಬ ಮಾಹಿತಿ ನನಗೂ ಇಲ್ಲ, ಸಮಯ ಅದನ್ನು ನಿರ್ಧರಿಸುತ್ತದೆ ಎಂದು ಸ್ಪೀಕರ್ ಯು.ಟಿ. ಖಾದರ್ ಹೇಳಿದ್ದಾರೆ. ಗುರುವಾರ ಮಂಗಳೂರಿನಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಈಗ ನಾನು ಯಾವುದೇ ರಾಜಕೀಯ ಮಾತನಾಡಲ್ಲ, ಮಾಧ್ಯಮಗಳಲ್ಲಿ ಈ ಬಗ್ಗೆ ಚರ್ಚೆ ಆಗುತ್ತಿದೆ. ಸಮಯ ಬಂದಾಗ ಗೊತ್ತಾಗುತ್ತದೆ. ಸರ್ಕಾರ ಯಾವಾಗ ಅಧಿವೇಶನ ನಡೆಸಲು ತೀರ್ಮಾನಿಸುತ್ತದೆ, ಆಗ ಸುಸೂತ್ರವಾಗಿ ಸದನ ನಡೆಸುತ್ತೇನೆ. ಯಾರು ಯಾರಿಗೆ ಮಂತ್ರಿ ಸ್ಥಾನ ನೀಡಬೇಕೆಂದು ಆಡಳಿತ ಪಕ್ಷದ ಪ್ರಮುಖರು ತೀರ್ಮಾನ ಮಾಡುತ್ತಾರೆ ಎಂದರು.

ನಾನು ಡಿಸಿಎಂ ಆಗಬೇಕೆಂಬ ಪೋಸ್ಟ್ ಅನ್ನು ಯಾರು ಸಹ ಸಾಮಾಜಿಕ ಜಾಲತಾಣದಲ್ಲಿ ಹಾಕಬೇಡಿ. ಈ ಎಲ್ಲಾ ವಿಚಾರಗಳು ಪಕ್ಷಕ್ಕೆ, ಮುಖಂಡರಿಗೆ ಬಿಟ್ಟಿದ್ದು. ಈ ಎಲ್ಲಾ ವಿಚಾರಗಳನ್ನು ನಾನು ಹೇಳಿದರೆ ಗುಟ್ಟು ಉಳಿಯುತ್ತಾ? ಏನು ಬರುತ್ತದೆ ಅಂತಾ ನೋಡೋಣ. ಇವತ್ತು ಸಂತೋಷದಿಂದ ಹಬ್ಬವನ್ನು ಆಚರಿಸೋಣ. ನನಗೆ ನಿಮ್ಮ ಮೂಲಕವೇ ಸಿಹಿ ಸುದ್ದಿ ಬರುವುದು. ಬೆಂಗಳೂರಿಗೆ ಹೋಗುವ ಬಗ್ಗೆ ತೀರ್ಮಾನಿಸಿಲ್ಲ, ಇವತ್ತು ಬಕ್ರಿದ್ ಹಬ್ಬ ಇರುವುದರಿಂದ ಆಚರಿಸುವುದು ಇವತ್ತಿನ ನನ್ನ ಕೆಲಸ ಎಂದರು.

ನಿವೃತ್ತ ಅರಣ್ಯಾಧಿಕಾರಿ ಮನೆಯಲ್ಲಿ ದಂತ ವಶ

ಮೈಸೂರು: ಶಂಕಿತ ದಂತ ಕಳ್ಳಸಾಗಣೆ ಜಾಲದ ಮೇಲೆ ದಾಳಿ ನಡೆಸಿದ ಮಹಾರಾಷ್ಟ್ರ ರಾಜ್ಯದ ನಾಗ್ಪುರ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳು(ಡಿಆರ್‌ಐ) 2 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಮೂರು ಆನೆ ದಂತವನ್ನು ವಶಪಡಿಸಿಕೊಂಡು, ನಾಲ್ವರನ್ನು ಬಂಧಿಸಿದ್ದಾರೆ. ಮೈಸೂರಿನ ರಾಮಕೃಷ್ಣನಗರ 'ಐ' ಬ್ಲಾಕ್ ನಿವಾಸಿಗಳಾದ ಹಾಗೂ ಆಂಧ್ರಪ್ರದೇಶ ಸರ್ಕಾರದ ನಿವೃತ್ತ ಅರಣ್ಯಾಧಿಕಾರಿ ಜಮುನಾ ರಾಣಿ ಕಾಕಬುಲ್, ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಸೈಯದ್ ಫಯಾಜ್, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದ ಮುನೀರ್ ಪಾಷಾ, ಮತ್ತು ಅಜ್ಗರ್ ಖಾನ್ ಎಂಬವರನ್ನು ಬಂಧಿಸಲಾಗಿದೆ. ದಾಳಿಯ ಸಮಯದಲ್ಲಿ ಜಮುನಾ ರಾಣಿ ಕಾಕಬುಲ್ ಮತ್ತು ಅವರ ಪತಿ ವೆಂಕಟೇಶ್ ಕಾಕಬುಲ್ ಇಬ್ಬರು ಮನೆಯಲ್ಲಿದ್ದರು. ಪ್ರಾಥಮಿಕ ತನಿಖೆಯಲ್ಲಿ ಜಮುನಾ ರಾಣಿ ಕಾಕಬುಲ್ ಅಕ್ರಮವಾಗಿ ದಂತ ವ್ಯಾಪಾರಿಗಳೊಂದಿಗೆ ಸಂಪರ್ಕ ಹೊಂದಿದ್ದರು ಎಂದು ತಿಳಿದುಬಂದಿದೆ.

ಸಿದ್ದರಾಮಯ್ಯನವರನ್ನು ನಡೆಸಿಕೊಂಡ ರೀತಿ ಸರಿಯಿಲ್ಲ: ಜೋಶಿ

ಜನಪ್ರಿಯ ನಾಯಕ ಸಿದ್ದು

ಮಂಗಳೂರು: ಕರ್ನಾಟಕದ ಜನಪ್ರಿಯ ನಾಯಕ, ಮುಖ್ಯಮಂತ್ರಿ ಸಿದ್ದರಾಮಯ್ಯ ನವರನ್ನು ಕಾಂಗ್ರೆಸ್ ಹೈಕಮಾಂಡ್ ನಡೆಸಿ ಕೊಂಡ ರೀತಿ ಸರಿಯಿಲ್ಲ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಟೀಕಿಸಿದರು.

ಮಂಗಳೂರಿನಲ್ಲಿ ಗುರುವಾರ ಸುದ್ದಿಗಾರ ರೊಂದಿಗೆ ಮಾತನಾಡಿ, ರಾಹುಲ್ ಗಾಂಧಿ ಯವರು ಸಿದ್ದ ರಾಮಯ್ಯನವರನ್ನು ನಡೆಸಿ ಕೊಂಡ ರೀತಿ ಸರಿಯಿಲ್ಲ. ಕರ್ನಾಟಕದಲ್ಲಿ ಅಸ್ಥಿರತೆ, ಅರಾಜಕತೆ, ಅವಿಶ್ವಾಸ ನಿರ್ಮಾಣವಾಗಿದೆ. ಇಂತಹ ಸ್ಥಿತಿ ಬರಬಾರದು ಎಂದರು.



ಇದು ಕಾಂಗ್ರೆಸ್ ಪಕ್ಷದ ಆಂತರಿಕ ಗೊಂದಲ ವಾದರೂ ಕೂಡ ಒಬ್ಬ ಹಿಂದುಳಿದ ವರ್ಗದ ಮುಖ್ಯಮಂತ್ರಿಯನ್ನು ಯಾವ ರೀತಿ ನಡೆಸಿ ಕೊಂಡರು ಎಂಬುದು ಗಂಭೀರ ವಿಚಾರ. ಯಾವ ರೀತಿ ವೀರೇಂದ್ರ ಪಾಟೀಲ್ ಅವರನ್ನು ರಾಜೀವ್ ಗಾಂಧಿಯವರು ಅಪಮಾನ ಮಾಡಿ ದ್ದರೊ ಅದೇ ರೀತಿ ಮಗ ರಾಹುಲ್ ಗಾಂಧಿ ಸಿದ್ದರಾಮಯ್ಯನವರನ್ನು ನಡೆಸಿಕೊಂಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ಕುರ್ಚಿ ಫೈಟ್ ನಿಂದ ಬಿಜೆಪಿಗೆ ಲಾಭ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಪ್ರಸಕ್ತ ರಾಜ್ಯದಲ್ಲಿ ಇರುವುದು ತುಷ್ಟೀಕರಣ ಹಾಗು ಭ್ರಷ್ಟಚಾರ. ಡಿಕೆಶಿ ಬಂದರೂ ಅದು ಮುಂದುವರಿಯುತ್ತದೆ. ಕಾಂಗ್ರೆಸ್ ವಿಫಲರಾಗಿ ಬಿಜೆಪಿ ಅಧಿಕಾರಕ್ಕೆ ಬರಬೇಕೆಂದಿಲ್ಲ. ಮೋದಿಯವರ ಮಾರ್ಗದರ್ಶನದಲ್ಲಿ, ಸಕಾರಾತ್ಮಕ ಚಿಂತನೆಗಳ ಮೂಲಕ ಅಧಿಕಾರಕ್ಕೆ ಬರುತ್ತೇವೆ ಎಂದರು.

ಪೆಟ್ರೋಲ್ -ಡೀಸೆಲ್ ಬೆಲೆ ಏರಿಕೆ ಕುರಿತು ಕಾಂಗ್ರೆಸ್ ಟೀಕೆಗೆ, ಈ ರೀತಿ ಯ ಜಾಗತಿಕ ಕ್ರೈಸಿಸ್ ಯಾವತ್ತೂ ಎದುರಾಗಲಿಲ್ಲ, ನನ್ನ ಅನುಭವದ ಆಧಾರದಲ್ಲಿ ಈ ಪ್ರಮಾಣದ ಜಾಗತಿಕ ಬಿಕ್ಕಟ್ಟು ಯಾವಾಗಲು ನಿರ್ಮಾಣ ಆಗಲಿಲ್ಲ. ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಕೆಲಸ ಕಾಂಗ್ರೆಸ್ ಮಾಡುತ್ತಿದೆ. ಮನೆಗೆ ಬೆಂಕಿ ಹತ್ತಿದಾಗ ಇದರಲ್ಲಿ ಬೀಡಿ ಹಚ್ಚಿಕೊಳ್ಳುವ ಕೆಲಸವನ್ನು ಕಾಂಗ್ರೆಸ್ ಮಾಡಬಾರದು ಎಂದು ಟೀಕಿಸಿದರು.

ರಾಜೀನಾಮೆ ಚುನಾವಣೆ ಮೇಲೆ ಪರಿಣಾಮ: ಸಂಸದ ಬೊಮ್ಮಾಯಿ

ಬೆಂಗಳೂರು: ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವುದು ಕಾಂಗ್ರೆಸ್ ಪಕ್ಷದ ಮೇಲೆ ಹಾಗೂ ಕರ್ನಾಟಕದ ಚುನಾವಣಾ ರಾಜಕಾರಣದ ಮೇಲೆ ಪರಿಣಾಮ ಬೀರಲಿದೆ. ಕಾಂಗ್ರೆಸ್ ನಿಂದ ಹಿಂದುಳಿದವರಿಗೆ ನಂಬಿಕೆ ದ್ರೋಹವಾಗಿದ್ದು, ಹಿಂದುಳಿದ ವರ್ಗ ಕಾಂಗ್ರೆಸ್ ವಿರುದ್ಧ ತಿರುಗಿ ಬೀಳಲಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟಿದ್ದಾರೆ.



ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿ, ಕಾಂಗ್ರೆಸ್ ಪಕ್ಷದಿಂದ ಹಿಂದುಳಿದವರಿಗೆ ನಂಬಿಕೆ ದ್ರೋಹ ಮಾಡಿದಂತಾಗಿದೆ. ವಿಶೇಷವಾಗಿ ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಒಬಿಸಿ ಪರವಾಗಿ ಪ್ರಚಾರ ಮಾಡುತ್ತಾರೆ. ಆದರೆ, ಒಬಿಸಿ ಮುಖ್ಯಮಂತ್ರಿಯನ್ನು ಕಿತ್ತು ಹಾಕಿದ್ದಾರೆ. ಹಿಂದುಳಿದ ವರ್ಗಗಳ ಬಗ್ಗೆ ಅವರು ಮೊಸಳೆ ಕಣ್ಣೀರು ಸುರಿಸುವುದು ಈಗ ಬಹಿರಂಗವಾಗಿದೆ. ಇದರಿಂದ ಹಿಂದುಳಿದ ವರ್ಗದವರು ಬೇಸರಗೊಂಡಿದ್ದು, ಅವರು 2028 ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆ ತಕ್ಕ ಪಾಠ ಕಲಿಸುವುದಾಗಿ ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಆಡಳಿತ ಪಕ್ಷವನ್ನು ಅಶಕ್ತಗೊಳಿಸಿದ್ದು, ಬಿಜೆಪಿ ಇನ್ನಷ್ಟು ಬಲಿಷ್ಠವಾಗಿ ನಮ್ಮದೇ ಆದ ಶಕ್ತಿಯೊಂದಿಗೆ 2028 ಕ್ಕೆ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತೇವೆ ಎಂದು ಹೇಳಿದರು.

ಅಭಿವೃದ್ಧಿ ಶೂನ್ಯ: ರಾಜ್ಯದಲ್ಲಿ ಮೂರು ವರ್ಷದಲ್ಲಿ ಅಭಿವೃದ್ಧಿ ಶೂನ್ಯ ಆಗಿದೆ. ಇಂದು ಅವರು ಸಮರ್ಥನೆ ಮಾಡುವ ಅವಶ್ಯಕತೆ ಇತ್ತು. ರಾಜ್ಯದ ಮೇಲೆ ದೊಡ್ಡ ಸಾಲದ ಹೊರೆ ಇದೆ. ಜನರ ಮೇಲೆ ಸಾಲದ ಹೊರೆ ಇಟ್ಟಿದ್ದಾರೆ.

ಇಂದು ಅದನ್ನು ನಾನು ಹೆಚ್ಚಾಗಿ ಟೀಕಿಸುವುದಿಲ್ಲ, ಕಾಂಗ್ರೆಸ್ ಪಕ್ಷ ಸಂಪೂರ್ಣ ತಮ್ಮ ಜನರ ತೀರ್ಪನ್ನು ದುರುಪಯೋಗ ಮಾಡಿಕೊಂಡಿದೆ. ಜನಪರ ಆಡಳಿತ ಕೊಡಬೇಕಿತ್ತು. ಜನವಿರೋಧಿ ಆಡಳಿತ ಕೊಟ್ಟಿದ್ದಾರೆ. ಜೊತೆಗೆ ರಾಜ್ಯವನ್ನು 20 ವರ್ಷಗಳ ಹಿಂದಕ್ಕೆ ತಳ್ಳಿದ್ದಾರೆ. ರಾಜ್ಯದಲ್ಲಿ ಇಂದೇ ಚುನಾವಣೆ ನಡೆದರೆ ಅವರಿಗೆ ಜನ ಪಾಠ ಕಲಿಸುತ್ತಾರೆ ಎಂದು ಹೇಳಿದರು.

ಸಿದ್ದರಾಮಯ್ಯ ನಂತರ ಸಿಎಂ ಯಾರು?: ಬಿವೈವಿ

ವಿಜಯನಗರ: ಕಳೆದ ಎರಡ್ಮೂರು ದಿನಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ನಡೆಯುತ್ತಿರುವ ಆಂತರಿಕ ವಿದ್ಯಮಾನಗಳನ್ನು ಗಮನಿಸಿದರೆ ಸಿದ್ದರಾಮಯ್ಯ ರಾಜೀನಾಮೆ ಬಳಿಕ ಸಿಎಂ ಯಾರು ಆಗುತ್ತಾರೆ ಎಂಬ ಯಕ್ಷಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಬಿಜೆಪಿ ಜಿಲ್ಲಾ ಘಟಕದಿಂದ ಹೊಸಪೇಟೆಯಲ್ಲಿ ಆಯೋಜಿಸಿರುವ ದೀನ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ವರ್ಗದ ಸಮಾರೋಪದಲ್ಲಿ ಪಾಲ್ಗೊಳ್ಳಲು ಆಗಮಿಸಿದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿದ ನಂತರ ಮುಂದಿನ ಸಿಎಂ ಯಾರು ಎಂಬುದು ಅಷ್ಟು ಬೇಗ ಇತ್ಯರ್ಥ ಆಗದು. ಮುಂದಿನ ಮುಖ್ಯಮಂತ್ರಿ ಯಾರು ಎಂಬ ಪ್ರಶ್ನೆಗೆ ತಕ್ಷಣಕ್ಕೆ ಉತ್ತರ ಕಂಡುಕೊಳ್ಳುವಷ್ಟು ಶಕ್ತಿ ಕಾಂಗ್ರೆಸ್ ಪಕ್ಷಕ್ಕಿಲ್ಲ. ಹೀಗಾಗಿ ಈ ಗೊಂದಲ ಇನ್ನೂ ಕೆಲ ದಿನಗಳ ಕಾಲ ಮುಂದುವರಿಯುತ್ತದೆ ಎಂದರು.

ಕಾಂಗ್ರೆಸ್ ಸರ್ಕಾರದಲ್ಲಿರುವ ಆಂತರಿಕ ಕಚ್ಚಾಟದ ಪರಿಣಾಮ ರಾಜ್ಯದಲ್ಲಿ ಆಡಳಿತ, ಆರ್ಥಿಕತೆ ಸಂಪೂರ್ಣ ನೆಲಕಚ್ಚಿದೆ. ಕಳೆದ ಮೂರು ವರ್ಷಗಳಲ್ಲಿ ಉಂಟಾಗಿರುವ ಆರ್ಥಿಕ ಕುಸಿತವನ್ನು ಮುಂದೆ ಯಾರೇ ಮುಖ್ಯಮಂತ್ರಿಯಾದರೂ ಸುಧಾರಿಸಲು ಸಾಧ್ಯವಿಲ್ಲ. ಇಂತಹ ಸಂಕಷ್ಟದ ಸ್ಥಿತಿಯಲ್ಲಿ ರೈತರು, ಬಡವರ ಕಲ್ಯಾಣ ಹಾಗೂ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದು ಹೇಗೆ ಎಂದು ಪ್ರಶ್ನಿಸಿದರು.



ರೈತರ ಸಮಸ್ಯೆ ಕೇಳುವವರಿಲ್ಲ

ರಾಜ್ಯದಲ್ಲಿ ರೈತರ ಸಮಸ್ಯೆ ಕೇಳುವವರಿಲ್ಲ. ವಿವಿಧ ಜಿಲ್ಲೆಗಳಲ್ಲಿ ಕೃತಕ ರಸಗೊಬ್ಬರದ ಸಮಸ್ಯೆ ಸೃಷ್ಟಿಸುವ ಷಡ್ಯಂತ್ರ ನಡೆದಿದೆ. ರಾಜ್ಯದ ಪಾಲಿಗೆ ಕಾಂಗ್ರೆಸ್ ಸರ್ಕಾರ ಶಾಪವಾಗಿದೆ. ಕಾಂಗ್ರೆಸ್ ಸರ್ಕಾರದ ಮೇಲಿನ ವಿಶ್ವಾಸವನ್ನು ರಾಜ್ಯದ ಜನತೆ ಯಾವತ್ತೋ ಕಳೆದುಕೊಂಡಿದ್ದಾರೆ. ಜನಸಾಮಾನ್ಯರ ಪಾಲಿಗೆ ಶಾಪವಾಗಿ ಪರಿಣಮಿಸಿದೆ ಎಂದು ಕಿಡಿಕಾರಿದರು.

ರಾಜ್ಯಪಾಲರ ಭೇಟಿಗೆ ಸಿಎಂ ಸಿದ್ದರಾಮಯ್ಯ ಸಮಯ ಕೇಳಬೇಕಿತ್ತು. ಆದರೆ, ಇಂದಿನ ಟಿಪಿಯಲ್ಲಿ ಆ ಬಗ್ಗೆ ಉಲ್ಲೇಖವಿಲ್ಲ ಮತ್ತು ರಾಜ್ಯಪಾಲರು ದೆಹಲಿಗೆ ತೆರಳಿರುವ ಬಗ್ಗೆ ನನಗೆ ಮಾಹಿತಿಯಿಲ್ಲ. ಕಾಂಗ್ರೆಸ್‌ಗೆ 138 ಶಾಸಕರ ಸ್ಪಷ್ಟ ಬೆಂಬಲ ಇರುವಾಗ ಬಿಜೆಪಿ ಹಸ್ತಕ್ಷೇಪ ಹೇಗೆ ಸಾಧ್ಯ? ರಾಜ್ಯ ಜನರು ಕಾಂಗ್ರೆಸ್‌ಗೆ ಆಶೀರ್ವಾದ ಮಾಡಿದ್ದಾರೆ ಎಂದರು.

ಗೈರು: ಪದಾಧಿಕಾರಿಗಳ ತಲೆದಂಡ

ಬೆಂಗಳೂರು: ಕಾಂಗ್ರೆಸ್ ಈಚೆಗೆ ಹಮ್ಮಿ ಕೊಂಡಿದ್ದ ಎರಡು ದಿನಗಳ ಎಸ್‌ಐಆರ್ ಕುರಿತ ಮಹತ್ವದ ಸಭೆಗೆ ಗೈರು ಹಾಜರಾಗಿದ್ದ ಕೆಪಿಸಿಸಿಯ 32 ಪದಾಧಿಕಾರಿಗಳ ತಲೆದಂಡ ಆಗಿದೆ.



ಕೆ. ಶಿವಮೂರ್ತಿ, ಬಾಬುರಾವ್ ಜಾಗೀರದಾರ, ಎಂ.ಸಿ. ವೇಣುಗೋಪಾಲ್ ಸೇರಿದಂತೆ ಮೂವರು ಕೆಪಿಸಿಸಿ ಉಪಾಧ್ಯಕ್ಷರು ಹಾಗೂ ನಿಕೇತ್‌ರಾಜ್ ಮೌರ್ಯ, ಇಸ್ಮಾಯಿಲ್ ತಮಟಗಾರ ಒಳಗೊಂಡಂತೆ 29 ಪ್ರಧಾನ ಕಾರ್ಯದರ್ಶಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಆಯಾ ಹುದ್ದೆಗಳಿಂದ ಬಿಡುಗಡೆಗೊಳಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.

ಕಾಂಗ್ರೆಸ್‌ನಲ್ಲಿ ಕ್ಷಿಪ್ರ ರಾಜಕೀಯ ಬೆಳವಣಿಗೆಗಳು ನಡೆಯುತ್ತಿರುವ ನಡುವೆಯೂ ಪಕ್ಷ ಎಸ್‌ಐಆರ್ ಕುರಿತ ಸಭೆಗೆ ಪದಾಧಿಕಾರಿಗಳು ಗೈರು ಹಾಜರಾಗಿರುವುದನ್ನು ಗಂಭೀರವಾಗಿ ಪರಿಗಣಿಸಿ, ಮುಲಾಜಿಲ್ಲದೆ ಈ ಶಿಸ್ತು ಕ್ರಮ ಕೈಗೊಂಡಿದೆ. ಮೇ 25ರಂದು ಬೆಂಗಳೂರಿನಲ್ಲಿ ಕರೆಯಲಾಗಿದ್ದ ಕೆಪಿಸಿಸಿ ಸಭೆಗೆ ಈ ಪದಾಧಿಕಾರಿಗಳು ಗೈರುಹಾಜರಾಗಿದ್ದರು. ಈ ಹಿನ್ನೆಲೆಯಲ್ಲಿ ಎಐಸಿಸಿ ಸೂಚನೆ ಮೇರೆಗೆ ಶಿಸ್ತು ಕ್ರಮ ಕೈಗೊಳ್ಳಲಾಗಿದ್ದು, ಮುಂಬರುವ ದಿನಗಳಲ್ಲಿ ಪಕ್ಷದಲ್ಲಿ ಸೂಕ್ತ ಜವಾಬ್ದಾರಿಗಳನ್ನು ನೀಡಲಾಗುವುದು ಎಂದು ಡಿ.ಕೆ. ಶಿವಕುಮಾರ್ ಆದೇಶದಲ್ಲಿ ಸ್ಪಷ್ಟಪಡಿಸಿದ್ದಾರೆ.

ಯಾರ್ಯಾರ ವಿರುದ್ಧ ಕ್ರಮ?

ಕೆ. ಶಿವಮೂರ್ತಿ, ಬಾಬುರಾವ್ ಜಾಗೀರದಾರ ಮತ್ತು ಎಂ.ಸಿ. ವೇಣುಗೋಪಾಲ್ (ಕೆಪಿಸಿಸಿ ಉಪಾಧ್ಯಕ್ಷರು), ಎನ್.ಐ. ಕೋಡಳ್ಳಿ, ಭಾವನಾ ರಾಮಣ್ಣ, ಕೆ.ಸಿ. ಪ್ರಭಾಕರ ರೆಡ್ಡಿ, ತಿಬ್ಬೇಗೌಡ, ಝುಲ್ಫೀಕರ್ ಅಹಮದ್, ಶಂಕರ ದೊಡ್ಡಿ, ರೇಖಾ ಹುಲಿಯಪ್ಪ, ಎಚ್.ಎ. ಷಣ್ಮುಖಪ್ಪ, ಎಂ. ರಾಮಪ್ಪ, ವಡ್ನಾಳ್ ಜಗದೀಶ್, ಷಣ್ಮುಖಪ್ಪ ಶಿವಳ್ಳಿ, ಮಲ್ಲಿಕಾರ್ಜುನ ಅಕ್ಕಿ, ಸ್ವಾತಿ ಮಳಗಿ, ಅಲ್ತಾಫ್ ನವಾಜ್ ಕಿತ್ತೂರ, ನಾಗೇಶ್ವರರಾವ್, ರಮೇಶ್ ಮರಗೋಳ, ಚಂದ್ರಕಲಾ ಪ್ರಸನ್ನ, ಸಿ.ಆರ್. ಮನೋಹರ, ಎಚ್.ಆರ್. ಶ್ರೀನಾಥ್, ಎಚ್. ತ್ಯಾಗರಾಜ್, ಎಲ್. ಪದ್ಮನಾಭ, ನಿಕೇತ್ ರಾಜ್ ಮೌರ್ಯ, ಸಿ.ಬಿ. ಶಶಿಧರ್, ವೆಂಕಟೇಶ ಹೆಗ್ಡೆ ಹೊಸಬಾಳೆ, ವಿ.ವೈ. ಘೋರ್ಪಡೆ, ಮಕ್ಬುಲ್ ಬಾಗವಾನ, ಇಸ್ಮಾಯಿಲ್ ತಮಟಗಾರ, ಬಿ.ಎಚ್. ಬನ್ನಿಕೋಡ್, ಸಂಜಯ್ ಜಾಗಿರದಾರ.

ಕುರ್ಚಿ ಪ್ರಹಸನಕ್ಕೆ ತಾತ್ಕಾಲಿಕ ಅಂತ್ಯ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ರಾಜ್ಯ ಬಿಜೆಪಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು, ಇದರಿಂದ ಕನ್ನಡಿಗೆ ನಯಾಪೈಸೆ ಪ್ರಯೋಜನವಿಲ್ಲ ಎಂದು ಹೇಳಿದೆ.

ಸಾಮಾಜಿಕ ಜಾಲತಾಣದಲ್ಲಿ ರಾಜ್ಯ ಬಿಜೆಪಿ ಈ ಕುರಿತು ಪೋಸ್ಟ್ ಮಾಡಿದೆ. ಕರ್ನಾಟಕ ಕಾಂಗ್ರೆಸ್ಸಿನ ಕುರ್ಚಿ ಕಚ್ಚಾಟದ ಪ್ರಹಸನಕ್ಕೆ ತಾತ್ಕಾಲಿಕ ಅಂತ್ಯ ದೊರೆತಿದೆ. ಆದರೆ, ಇದರಿಂದ ಕನ್ನಡಿಗರಿಗೆ ನಯಾಪೈಸೆ ಪ್ರಯೋಜನ ಇಲ್ಲ ಎಂದಿದೆ. ಕಾಂಗ್ರೆಸ್‌ನ 3 ವರ್ಷಗಳ ಸಾಧನೆ ಎಂದರೆ ಅದು ದಲಿತರ ಹಣ ದುರ್ಬಳಕೆ, ವಾಲ್ಮೀಕಿ ನಿಗಮದ ಹಣ ಲೂಟಿ, ಯುವಕ ರಿಗೆ ಟೋಪಿ, ರೈತರಿಗೆ ನೇಣು ಕುಣಿಕೆ, ಜನಸಾಮಾನ್ಯರಿಗೆ ಬೆಲೆ ಏರಿಕೆ, ಕರ್ನಾಟಕಕ್ಕೆ ಸಾಲದ ಶೂಲ ಹೊದಿಕೆ. ಕರ್ನಾಟಕದ ಅಭಿವೃದ್ಧಿ ಸಂಪೂರ್ಣ ಸ್ತಬ್ಧಗೊಳಿಸಿ, ಕಲೆಕ್ಷನ್-ಕರಪ್ಷನ್-ಕಮಿಷನ್‌ನಲ್ಲಿಯೇ 3 ವರ್ಷ ದೂಡಿ, ಈಗ ರಾಜೀನಾಮೆ ಎಂಬ ಅಲ್ಪ ವಿರಾಮ ಇಟ್ಟಿದ್ದಾರೆ ಎಂದು ಟೀಕಿಸಿದೆ.

ನೂತನವಾಗಿ ಯಾರೇ ಮುಖ್ಯಮಂತ್ರಿ ಆಗಿ ಬಂದರೂ ಕನ್ನಡಿಗರಿಗಾಗಲಿ, ಕರ್ನಾಟಕಕ್ಕಾಗಲಿ ನಯಾಪೈಸೆ ಪ್ರಯೋಜನ ಇಲ್ಲ, ಬಡವರು, ಶ್ರಮಿಕರು, ರೈತರು, ಯುವಕರು, ಮಹಿಳೆಯರು, ದೀನ-ದಲಿತರು, ಹಿಂದುಳಿದವರನ್ನು ಹಿಂಸಿಸಿ, ಶೋಷಿಸಿ ಸರ್ಕಾರ ನಡೆಸುವ ಇವರ ಪ್ರವೃತ್ತಿ ಮುಂದುವರೆಯುತ್ತದೆ ಹೊರತು ಬದಲಾಗುವುದಿಲ್ಲ, ಕರ್ನಾಟಕವನ್ನು ಸಂಪೂರ್ಣ ದಿವಾಳಿ ಮಾಡುವುದು ಹಾಗೂ ಕಾಂಗ್ರೆಸ್ ಹೈಕಮಾಂಡಿಗೆ ಕರ್ನಾಟಕವನ್ನು ಎಟಿಎಂ ಮಾಡುವುದು ಎರಡೇ ಇವರ ಅಜೆಂಡಾ ಎಂದು ಬಿಜೆಪಿ ಹೇಳಿದೆ.

ಸಿಎಂ ಆಪ್ತ ಕಾರ್ಯದರ್ಶಿ ವರ್ಗಾವಣೆ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುತ್ತಿದಂತೆ ಅವರ ಆಪ್ತ ಕಾರ್ಯದರ್ಶಿ, ವಿಶೇಷ ಕರ್ತವ್ಯಧಿಕಾರಿ ಸೇರಿದಂತೆ ಇಬ್ಬರು ಕೆಎಎಸ್ ಅಧಿಕಾರಿಗಳ ವರ್ಗಾವಣೆಯಾಗಿದೆ.

ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಯಾಗಿದ್ದ ಡಾ. ವೆಂಕಟೇಶಯ್ಯ ಅವರನ್ನು ಎಪಿಎಂಸಿ ನಿರ್ದೇಶಕರನ್ನಾಗಿ ವರ್ಗಾಯಿಸಲಾಗಿದೆ. ಇನ್ನು ಸಿಎಂ ಅವರ ವಿಶೇಷ ಕರ್ತವ್ಯಧಿಕಾರಿಯಾಗಿದ್ದ ರಮೇಶ್ ಪಿ. ಕೋನರೆಡ್ಡಿ ಅವರು ಕೆಪಿಟಿಸಿಎಲ್ ನಿರ್ದೇಶಕರನ್ನಾಗಿ ವರ್ಗಾಯಿಸಲಾಗಿದೆ.

ಎಸ್‌ಡಿಆರ್‌ಎಫ್ ಸಿಪಿಐ ಶ್ರೀಶೈಲ ಚೌಗಲೆ ಆತ್ಮಹತ್ಯೆ

ಬೆಳಗಾವಿ: ಎಸ್‌ಡಿಆರ್‌ಎಫ್ ಸಿಪಿಐ ಆಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಶೈಲ ಚೌಗಲೆ (37) ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಕುರಿತು ಹಲವು ಅನುಮಾನಗಳು ಹುಟ್ಟಿಕೊಂಡಿವೆ.



ಘಟನೆ ವಿವರ: ಸಿಪಿಐ ಶ್ರೀಶೈಲ ಬುಧವಾರ ರಾತ್ರಿ ವೇಳೆ ತಮ್ಮ ಕೆಲಸ ನಿರ್ವಹಿಸಿ ಚನ್ನಮ್ಮ ನಗರದಲ್ಲಿರುವ ಅವರ ನಿವಾಸದಲ್ಲಿ ರಾತ್ರಿ ಮಲಗುವುದಾಗಿ ಹೇಳಿ ಮನೆಯ ಕೊಠಡಿಯ ಬಾಗಿಲು ಹಾಕಿಕೊಂಡಿದ್ದಾರೆ. ಬಳಿಕ ಶ್ರೀಶೈಲ ಅವರು ಬೆಳಗ್ಗೆ ಎಳದಿದ್ದಾಗ ಅನುಮಾನಗೊಂಡ ಅವರ ಪತ್ನಿ ತಕ್ಷಣವೇ ಎಸ್‌ಡಿಆರ್‌ಎಫ್ ಸಿಬ್ಬಂದಿಗೆ ಮಾಹಿತಿ ನೀಡಿ ದ್ದಾರೆ. ಸ್ಥಳಕ್ಕೆ ಧಾವಿಸಿದ ಸಿಬ್ಬಂದಿ ಕೊಠಡಿಯ ಬಾಗಿಲು ಮುರಿದಾಗ ನೇಣು ಬಿಗಿದುಕೊಂಡು ಸ್ಥಿತಿಯಲ್ಲಿ ಶ್ರೀಶೈಲ ಅವರ ಶವ ನೇತಾಡುತ್ತಿತ್ತು ಎಂದು ಹೇಳಲಾಗಿದೆ. ನಂತರ ಅವರನ್ನು ಹೊರ ತೆಗೆದು ಆಸ್ಪತ್ರೆಗೆ ದಾಖಲಿಸಿದರೂ, ಅಷ್ಟರಲ್ಲೇ ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ.

ಹೆಸರುಗಳಿಸಿದ್ದ ಸಿಪಿಐ ಶ್ರೀಶೈಲ: ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಸಿಪಿಐ ಆಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಶೈಲ ಅವರು, ಇದಕ್ಕೂ ಮೊದಲು ಕಂಗ್ರಾಳಿ ಬಳಿ ಇರುವ ಕೆಎಸ್‌ಆರ್‌ಪಿ ಪೊಲೀಸ್ ತರಬೇತಿ ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ನಂತರ ಎಸ್‌ಡಿಆರ್‌ಎಫ್ ಸಿಪಿಐ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಇಲ್ಲಿಯು ಸಹ ಸಾಕಷ್ಟು ಉತ್ತಮ ಕೆಲಸ ನಿರ್ವಹಿಸಿ ಹೆಸರುಗಳಿಸಿದ್ದರು ಎಂದು ಹೇಳಲಾಗಿದೆ.

ಶಾಲಾ ಪ್ರಾರಂಭದ ಮೊದಲ 30 ದಿನ ಸೇತುಬಂಧ ಪ್ರಕ್ರಿಯೆ ಕಡ್ಡಾಯ | ಬೋಧನೆ ಮೂಲಕ ಕಲಿಕೆ

ಶಾಲಾ ಮಕ್ಕಳಿಗಾಗಿ ವಿಭಿನ್ನ ಅವಧಿಯ ಸೇತುಬಂಧ

ನಂದಿನಿ ಎನ್.

ದಿಗಂತ ವಿಶೇಷ

ಬೆಂಗಳೂರು: ವಿದ್ಯಾರ್ಥಿಗಳ ಕಲಿಕೆಯಲ್ಲಿ ಉಂಟಾಗಿರುವ ಅಂತರವನ್ನು ಕಡಿಮೆ ಮಾಡಿ, ಅವರನ್ನು ಮುಂದಿನ ಹಂತದ ಶಿಕ್ಷಣಕ್ಕೆ ಸಂಪರ್ಕಿಸುವ ವಿಶೇಷ ಶಿಕ್ಷಣದ ವಿಧಾನವಾಗಿರುವ ಸೇತುಬಂಧ ಯೋಜನೆಯನ್ನು ಶಾಲಾ ಶಿಕ್ಷಣ ಇಲಾಖೆ, ವಿವಿಧ ತರಗತಿಗಳ ಮಕ್ಕಳಿಗೆ ವಿಭಿನ್ನ ಅವಧಿಯ ಸೇತುಬಂಧ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ನಿಗದಿಪಡಿಸಿದೆ.

2026-27ನೇ ಶೈಕ್ಷಣಿಕ ವರ್ಷದ ಆರಂಭದಲ್ಲೇ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಅರಿತು ಅವರಲ್ಲಿರುವ ಕೊರತೆಗಳನ್ನು ಗುರುತಿಸಿ, ಪರಿಹಾರ ಬೋಧನೆಯ ಮೂಲಕ ಸಾಮಾನ್ಯ ಕಲಿಕಾ ಹಂತಕ್ಕೆ ತರಿಸುವ ನಿಟ್ಟಿನಲ್ಲಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ಅಡಿಯಲ್ಲಿ ಈ ಸೇತುಬಂಧ ಶಿಕ್ಷಣ ಕಾರ್ಯಕ್ರಮವನ್ನು ರೂಪಿಸಲಾಗಿದೆ.

1ರಿಂದ 3ನೇ ತರಗತಿ ಮಕ್ಕಳಿಗೆ ಶಾಲಾ ಪ್ರಾರಂಭದ ಮೊದಲ 30 ದಿನಗಳು ಹಾಗೂ 4 ರಿಂದ 10ನೇ ತರಗತಿಗಳಿಗೆ 15 ದಿನಗಳ ಕಾಲ ಕಡ್ಡಾಯವಾಗಿ ಸೇತುಬಂಧ ಪ್ರಕ್ರಿಯೆ ನಡೆಯಲಿದೆ. ಜೂ. 6 ರಂದು ಪ್ರತಿಯೊಬ್ಬ ಮಗುವಿನ ಕಲಿಕಾಮಟ್ಟ ಪರಿಶೀಲನೆ ನಡೆಯಲಿದ್ದು, ಮಕ್ಕಳು ಅಕ್ಷರ ಓದು, ಪದ ಗುರುತು, ಸರಳ ಬರವಣಿಗೆ ಹಾಗೂ ಮೂಲಭೂತ ಗಣಿತದಲ್ಲಿ ಎಷ್ಟು ಪ್ರಗತಿ ಸಾಧಿಸಿದ್ದಾರೆ ಎಂಬುದನ್ನು ಶಿಕ್ಷಕರು ದಾಖಲಿಸಿಕೊಳ್ಳಲಿದ್ದಾರೆ.



ಇದರಲ್ಲಿ ಹಿನ್ನಡೆ ಕಂಡುಬಂದ ವಿದ್ಯಾರ್ಥಿಗಳಿಗೆ ವೈಯಕ್ತಿಕ ಪರಿಹಾರ ಬೋಧನೆ ನೀಡಲಾಗುತ್ತದೆ.

> **ಪ್ರತಿ ವರ್ಷ ಶಾಲೆಗಳು ಆರಂಭವಾಗುವ ಸಮಯದಲ್ಲಿ ವಿದ್ಯಾರ್ಥಿಗಳ ಕಲಿಕಾ ಹಿನ್ನಡೆ ನಿವಾರಣೆಗಾಗಿ ಹಾಗೂ ಹಿಂದಿನ ತರಗತಿಯ ಪಾಠಗಳನ್ನು ಮತ್ತೊಮ್ಮೆ ಅವಲೋಕನಗೊಳಿಸುವುದರಿಂದ ಸೇತುಬಂಧ ಯೋಜನೆಯನ್ನು ಪ್ರಾರಂಭಿಸಿದ್ದು ಶಿಕ್ಷಕರು, ವಿದ್ಯಾರ್ಥಿಗಳ ದುರ್ಬಲತೆಗಳನ್ನು ಗುರುತಿಸಿ ಚಟುವಟಿಕೆಗಳ ಆಧಾರಿತ, ಬೋಧನೆಯ ಮೂಲಕ ಕಲಿಕೆಯನ್ನು ಸುಗಮಗೊಳಿಸುತ್ತಾರೆ.**
> ■ **ಗೋಪಾಲಕೃಷ್ಣ ಎಚ್.ಎನ್.,**
> **ನಿರ್ದೇಶಕ, ಡಿಎಸ್‌ಇಆರ್‌ಟಿ**

ಸೇತುಬಂಧದ ಅವಧಿ ನಂತರವೂ ಮಗು ಕಲಿಕಾ ಮಟ್ಟದಲ್ಲಿ ಹಿಂದುಳಿದರೆ, ವರ್ಷ ಪೂರ್ತಿ ವಿಶೇಷ ಆದ್ಯತೆ ಹಾಗೂ ಪೋಷಕರ ಸಹಕಾರದೊಂದಿಗೆ ಮಗುವಿನ ಕಲಿಕೆಯನ್ನು ಉತ್ತಮಪಡಿಸಲು ಇಲಾಖೆ ಶಿಕ್ಷಕರಿಗೆ ಸೂಚನೆ ನೀಡಿದೆ.

ಮಕ್ಕಳ ಒಟ್ಟಾರೆ ಕಲಿಕಾ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಲು, ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ ಎಫ್‌ಎಲ್‌ಎನ್ ಪ್ರಗತಿಯನ್ನು ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಪ್ರತಿ ತಿಂಗಳು ಮೌಲ್ಯಾಂಕನ ಮಾಡಬೇಕಾಗುತ್ತದೆ. ಇನ್ನುಳಿದ ಕಲಿಕಾ ಫಲಗಳ ಕೊರತೆಯಿರುವ ಮಕ್ಕಳಿಗೆ ಸೆಪ್ಟೆಂಬರ್, ಡಿಸೆಂಬರ್ ಅಂತ್ಯಕ್ಕೆ ಮರುಮೌಲ್ಯಾಂಕನ ನಡೆಸಲಾಗುತ್ತದೆ. ಶಿಕ್ಷಕರ ಬಳಿ ಕಳೆದ ಸಾಲಿನ ಮೌಲ್ಯಾಂಕನ ವಿಶ್ಲೇಷಣಾ ವರದಿಗಳು ಲಭ್ಯವಿದ್ದು, ಅವುಗಳನ್ನು ಆಧರಿಸಿ ವಿದ್ಯಾರ್ಥಿಗಳಲ್ಲಿ ಯಾವ ವಿಷಯದಲ್ಲಿ ಕೊರತೆ ಇದೆ? ಎಂಬುದನ್ನು ವಿಶ್ಲೇಷಿಸಲಾಗುತ್ತದೆ.

ಇದರ ಜತೆಗೆ ನೈದಾನಿಕ ಪರೀಕ್ಷೆಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳ ಓದು, ಬರಹ, ಗಣಿತ, ಗ್ರಹಿಕೆ ಸಾಮರ್ಥ್ಯವನ್ನು ಪರಿಶೀಲಿಸಲಾಗುತ್ತದೆ. ಮಕ್ಕಳ ವಯೋಮಾನ ಮತ್ತು ತರಗತಿಗೆ ಅನುಗುಣವಾಗಿ, ಮೂಲಭೂತ ಕಲಿಕಾ ಫಲಗಳನ್ನು ಗುರುತಿಸಿ ಅವರನ್ನು ಮುಂದಿನ ಹಂತದ ಕಲಿಕೆಗೆ ಸಜ್ಜುಗೊಳಿಸುವುದು ಈ ಕಾರ್ಯಕ್ರಮದ ಮೂಲ ಆಶಯವಾಗಿದೆ.

ಬಿ ಗ್ರೇಡ್ ಮಕ್ಕಳಿಗೆ ವಿಶೇಷ ಪರಿಹಾರ ಬೋಧನೆ

ಪ್ರಶ್ನೆಪತ್ರಿಕೆಯ 1 ರಿಂದ 4ರಲ್ಲಿ ಬಿ ಗ್ರೇಡ್ ಪಡೆದವರನ್ನು ಎಫ್‌ಎಲ್‌ಎನ್ ಸಾಧಿಸದವರೆಂದೂ, 5 ರಿಂದ 10ನೇ ಪ್ರಶ್ನೆಗಳಲ್ಲಿ ಬಿ ಗ್ರೇಡ್ ಪಡೆದವರನ್ನು ಕಲಿಕಾ ಅಂತರ ಹೊಂದಿರುವ ವಿದ್ಯಾರ್ಥಿಗಳೆಂದು ಗುರುತಿಸಲಾಗುತ್ತದೆ. ಇಂತಹ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಚಟುವಟಿಕೆಯನ್ನು ಹಮ್ಮಿಕೊಂಡು ಪರಿಹಾರ ಬೋಧನೆ ನಡೆಸಲಾಗುತ್ತದೆ. ಇದರ ನಂತರ ಸಾಫಲ್ಯ ಪರೀಕ್ಷೆ ನಡೆಸಿ, ಫಲಿತಾಂಶವನ್ನು ಸ್ಯಾಟ್ಸ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ಅಪ್ಲೋಡ್ ಮಾಡಬೇಕಾಗುತ್ತದೆ.

406 ಕ್ವಿಂಟಾಲ್ ಪಡಿತರ ಜಪ್ತಿ: 3 ಪ್ರಕರಣ ದಾಖಲು

ಬಳ್ಳಾರಿ: ಜಿಲ್ಲೆಯಲ್ಲಿ ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಂಗ್ರಹಿಸಿ ಸಾಗಾಟ ಮಾಡುತ್ತಿದ್ದ ಜಾಲದ ವಿರುದ್ಧ ತೀವ್ರ ನಿಗಾ ವಹಿಸಿದ ಜಿಲ್ಲಾಡಳಿತ, ಆಹಾರ ಇಲಾಖೆ ಅಧಿಕಾರಿಗಳು, ಪೊಲೀಸ್ ಇಲಾಖೆ ಜಿಲ್ಲೆಯ ವಿವಿಧೆಡೆ ದಾಳಿ ನಡೆಸಿ ಲಕ್ಷಾಂತರ ರೂಪಾಯಿ ಮೌಲ್ಯದ ಅಕ್ಕಿ ಹಾಗೂ ವಾಹನಗಳನ್ನು ವಶಪಡಿಸಿಕೊಂಡಿದೆ.

ಬುಧವಾರ ಜಿಲ್ಲೆಯ ಮೂರು ಪ್ರತ್ಯೇಕ ಕಡೆಗಳಲ್ಲಿ ಅಗತ್ಯ ವಸ್ತುಗಳ ಕಾಯ್ದೆಯಡಿ (ಇಸಿ ಕಾಯ್ದೆ) ಪ್ರಕರಣಗಳನ್ನು ದಾಖಲಾಗಿವೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕ ಕೆ.ಆರ್.ದೇವರಾಜ್ ತಿಳಿಸಿದ್ದಾರೆ. ಕುರುಗೋಡು ತಾಲೂಕಿನ ಬಾದನಹಟ್ಟಿ ಗ್ರಾಮದ ನಂದಿ ಲೇಔಟ್‌ನಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಸಂಗ್ರಹಿಸಿ ಲಾರಿಗೆ ತುಂಬಿಸುತ್ತಿದ್ದ ವೇಳೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ವೇಳೆ ಲಾರಿಯಲ್ಲಿದ್ದ 226 ಕ್ವಿಂಟಾಲ್ ಅಕ್ಕಿಯನ್ನು ಜಪ್ತಿ ಮಾಡಲಾಗಿದೆ.

ಈ ಕುರಿತು ಕುರುಗೋಡು ನಿವಾಸಿಗಳಾದ ಯರಿಸ್ವಾಮಿ, ಉಮಾಶಂಕರ್, ಮಾನ್ವಿ ತಾಲೂಕಿನ ವೀರಭದ್ರಪ್ಪ, ಚಾಲಕ ವಿನೋದ್ ಹಾಗೂ ಲಾರಿ ಮಾಲೀಕ ಪಂಪನಗೌಡ ಎನ್ನುವವರು ವಿರುದ್ಧ ಕುರುಗೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಸಂಪಾದಕೀಯ

ಸುಗಮ, ಗೊಂದಲಗಳಿಲ್ಲದ ಅಧಿಕಾರ ಹಸ್ತಾಂತರ

ಸಾಮಾನ್ಯವಾಗಿ ಅಧಿಕಾರ ಹಸ್ತಾಂತರದ ವೇಳೆಯಲ್ಲಿ ಗದ್ದಲ, ಗಲಾಟೆಗಳು, ಗೊಂದಲಗಳು ಆಗಲೇಬೇಕು. ರಾಜಕಾರಣದಲ್ಲಿ ಅಧಿಕಾರವೇ ಮುಖ್ಯ. ಅಧಿಕಾರವಿಲ್ಲದೆ ರಾಜಕಾರಣ ಮಾಡುವುದು ಒಂದಷ್ಟು ಕಠಿಣ. ಆದರೆ, ಈಗ ಕರ್ನಾಟಕ ರಾಜ್ಯ ರಾಜಕಾರಣದಲ್ಲಿ ಅತ್ಯಂತ ಗಂಭೀರ ಮತ್ತು ಪ್ರೌಢಿಮೆಯ ನಡೆ ಕಾಣಿಸಿಕೊಂಡಿದ್ದು, ಕಾಂಗ್ರೆಸ್ ಹೈಕಮಾಂಡ್ ಎಲ್ಲೂ ಗೊಂದಲಕ್ಕೆ ಆಸ್ಪದ ಕೊಡದೆ ಅಧಿಕಾರ ಹಸ್ತಾಂತರದ ಮೊದಲ ಚರಣವನ್ನು ಮುಗಿಸಿದೆ.



ಗುರುವಾರ ಬೆಳಗಿನ ಉಪಹಾರ ಕೂಟದಿಂದ ಹಿಡಿದು, ಮಧ್ಯಾಹ್ನ ರಾಜ್ಯಪಾಲರ ಕಚೇರಿಗೆ ತೆರಳಿ ರಾಜೀನಾಮೆ ಮತ್ತು ಮುಖ್ಯಮಂತ್ರಿಗಳ ಪತ್ರಿಕಾಗೋಷ್ಠಿ ವರೆಗೆ ಎಲ್ಲವೂ ಅತ್ಯಂತ ಸರಳ ಕಾರ್ಯಕ್ರಮದಂತೆ ನಡೆದುಹೋದವು. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ, ಎಲ್ಲೂ ಅಧಿಕಾರ ಕೈತಪ್ಪಿ ಹೋಗುತ್ತಿದೆ ಎಂಬ ಬೇಸರ ವ್ಯಕ್ತಪಡಿಸಲಿಲ್ಲ. ಇದಕ್ಕೆ ಬದಲಾಗಿ ಎಂಟು ವರ್ಷಗಳ ಕಾಲ, ಮುಖ್ಯಮಂತ್ರಿಯಾಗಲು ಅವಕಾಶ ಮಾಡಿಕೊಟ್ಟ ಕಾಂಗ್ರೆಸ್ ಹೈಕಮಾಂಡ್‌ಗೆ ಧನ್ಯವಾದ ಹೇಳುತ್ತಲೇ, ತಮ್ಮ ಆರಂಭದ ರಾಜಕೀಯ ಜೀವನದಿಂದ ಹಿಡಿದು, ಇಲ್ಲಿವರೆಗಿನ ತಮ್ಮ ಹಾದಿಯನ್ನು ಎಲ್ಲರ ಮುಂದೆ ಹೇಳಿ ವಿದಾಯ ಘೋಷಿಸಿದರು. ಜತೆಗೆ, ಸಕ್ರಿಯ ರಾಜಕಾರಣ ಬಿಡದೇ, ರಾಜ್ಯದಲ್ಲೇ ರಾಜಕಾರಣ ಮುಂದುವರಿಸುವುದಾಗಿ ಹೇಳಿ ತಮ್ಮ ಪತ್ರಿಕಾಗೋಷ್ಠಿ ಭಾಷಣ ಮುಗಿಸಿದರು.

ಸದ್ಯ ಮುಂದಿನ ಮುಖ್ಯಮಂತ್ರಿ ಯಾರು ಎಂಬುದನ್ನು ಹೈಕಮಾಂಡ್ ಘೋಷಿಸದಿದ್ದರೂ, ಬೆಳಗಿನ ಉಪಹಾರ ಕೂಟದಲ್ಲೇ ಸ್ವಯಂ ಮುಖ್ಯಮಂತ್ರಿಗಳೇ ಡಿ.ಕೆ.ಶಿವಕುಮಾರ್ ಅವರೇ ಮುಂದಿನ ಸಿಎಂ ಎಂಬ ಸುಳಿವನ್ನೂ ನೀಡಿದರು. ಹಾಗಂತ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೂ, ಅಧಿಕಾರ ಹಸ್ತಾಂತರದ ಈ ಸಂಪೂರ್ಣ ಪ್ರಕ್ರಿಯೆಯಲ್ಲಿ ಎಲ್ಲೂ ಯಾವ ಮಾತನ್ನೂ ಆಡದೇ ಮೌನ ಕಾಪಾಡಿಕೊಂಡು ಅದಕ್ಕೊಂದು ಘನತೆಯನ್ನೂ ತಂದುಕೊಟ್ಟರು.

ಈಗಾಗಲೇ ಬೇರೆ ರಾಜ್ಯಗಳಲ್ಲಿ ನಾವು ಈ ಅಧಿಕಾರ ಹಸ್ತಾಂತರದ ಗೊಂದಲಗಳನ್ನು ನೋಡಿದ್ದವರಿಗೆ ಈಗಿನ ಈ ಪ್ರಕ್ರಿಯೆ ಅಚ್ಚರಿ ತಂದಿರಲೂ ಸಾಕು. ಮೂರು ವರ್ಷದ ಹಿಂದೆ ಮುಖ್ಯಮಂತ್ರಿ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಯಾವ ನಿರ್ಧಾರ ತೆಗೆದುಕೊಂಡಿತ್ತು ಎಂಬುದು ಯಾರಿಗೂ ತಿಳಿದಿಲ್ಲ. ಆದರೂ, ಈಗ ಹೈಕಮಾಂಡ್ ಸೂಚನೆಯಂತೆ ತಾವು ಮುಖ್ಯಮಂತ್ರಿ ಗಾದಿ ತ್ಯಜಿಸುತ್ತಿರುವುದಾಗಿ ಹೇಳುವ ಮೂಲಕ ಆಗ ಇಂಥದ್ದೊಂದು ಒಪ್ಪಂದವಾಗಿರಬಹುದು ಎಂಬುದು ವೇದ್ಯವಾಗುತ್ತದೆ. ಏನೇ ಆಗಲಿ, ಈ ಅಧಿಕಾರ ಹಸ್ತಾಂತರ ವಿಚಾರ ಕರ್ನಾಟಕದ ಪಾಲಿಗಂತೂ ಒಂದು ಮಾದರಿಯೇ ಆಗಿದೆ. ಯಾವುದೇ ನಾಟಕೀಯ ಬೆಳವಣಿಗೆಗಳಿಗೆ ಆಸ್ಪದ ಕೊಡದೇ, ಇಂಥ ಬೆಳವಣಿಗೆಯಾಗಿದ್ದು, ಆರೋಗ್ಯಕರ.

ಮತದಾರರ ತೀರ್ಪು ಪ್ರಶ್ನಿಸುವ ಚಾಳಿ: ಈಗ ಜಿರಳೆಯ ಪಾಳಿ

ಅರುಣ್ ಆನಂದ್

ಭಾರತದಲ್ಲಿ ಈಗ ಒಂದು ಹೊಸ ಬಗೆಯ 'ರಾಜಕೀಯ ವಾತಾವರಣ' ನಿರ್ಮಾಣವಾಗಿದೆ. 2014ರ ಬಳಿಕ ರೂಪುಗೊಂಡ ವಾತಾವರಣವಿದು. ಬಿಜೆಪಿ ಯಾವುದೇ ಚುನಾವಣೆಯಲ್ಲಿ ಜಯ ಗಳಿಸಿದರೆ ಅದನ್ನು ತಿರಸ್ಕರಿಸುವಂತಹ, ಅದು ಸರಿಯಿಲ್ಲವೆಂದು ವಾದಿಸುವಂತಹ ವಾತಾವರಣವಿದು. ಚುನಾವಣಾ ಫಲಿತಾಂಶವನ್ನು ನಿರಾಕರಿಸುವ ಸ್ವರೂಪ ಆಗಾಗ ಬದಲಾಗುತ್ತಾ ಬಂದಿದ್ದರೂ ಅದರ ಮುಖ್ಯ ಅಂಶ ಮಾತ್ರ ಬದಲಾಗಿಲ್ಲ. 2014ರ ಚುನಾವಣೆಯ ಬಳಿಕ ಇಲೆಕ್ಟ್ರಾನಿಕ್ ಮತಯಂತ್ರ(ಇವಿಎಂ)ದ ಕುರಿತಂತೆ ಅನುಮಾನ ವ್ಯಕ್ತಪಡಿಸಲಾಯಿತು. 2019ರ ಚುನಾವಣೆಯ ಬಳಿಕ ಫಲಿತಾಂಶಗಳೆಲ್ಲವೂ ನ್ಯಾಯೋಚಿತವಲ್ಲ, ಅದರಲ್ಲಿ ವಂಚನೆ ನಡೆಯುತ್ತಿದೆ ಎಂದು ಹೇಳಿಕೊಂಡು ಬರಲಾಯಿತು. 2014ರಲ್ಲಿ ಬಿಜೆಪಿ ಕಡಿಮೆ ಸ್ಥಾನಗಳೊಂದಿಗೆ ಅಧಿಕಾರ ಹಿಡಿದ ಬಳಿಕ ಫಲಿತಾಂಶದ ವಿಶ್ಲೇಷಣೆಯ ಧಾಟಿ ಮತ್ತೆ ಬದಲಾಯಿತು. ಇದೀಗ ಹೊಸದಾಗಿ ಜಿರಳೆಯ ಮೀಮ್‌ಗಳೊಂದಿಗೆ ರಾಜಕೀಯವನ್ನು ವಿಶ್ಲೇಷಿಸುವ ಪ್ರಯತ್ನ ನಡೆಯುತ್ತಿದೆ. ಫಲಿತಾಂಶ ನಿರಾಕರಣೆಯ ಇವೆಲ್ಲ ಸ್ವರೂಪಗಳು ಬೇರೆಬೇರೆಯಾದರೂ ಅವುಗಳ ಕಾರ್ಯಾಚರಣೆಯ ರೀತಿ ಮಾತ್ರ ಒಂದೇ ಆಗಿದೆ. ಮತದಾರರು ನೀಡಿದ ತೀರ್ಪಿನ ಕುರಿತಂತೆ ಸದಾಕಾಲ ಸಂಶಯವನ್ನು ವ್ಯಕ್ತಪಡಿಸುವುದೇ ಅದರ ಮುಖ್ಯ ಗುರಿಯಾಗಿದೆ.

ಇವಿಎಂ ಹಂತ: 2014-2019

2014ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಭಾರೀ ಬಹುಮತ ಪಡೆದು ಅಧಿಕಾರಕ್ಕೇರಿದ ಬಳಿಕ ಭಾರತದ ವಿರೋಧ ಪಕ್ಷಗಳು ಮತ್ತು ಅದರೊಂದಿಗೆ ಸಖ್ಯ ಹೊಂದಿರುವ ರಾಜಕೀಯ ವಿಶ್ಲೇಷಣಾಕಾರರು ಇಲೆಕ್ಟ್ರಾನಿಕ್ ಮತಯಂತ್ರದ ಸಾಚಾತನವನ್ನು ಪ್ರಶ್ನಿಸತೊಡಗಿದರು. ತಾಂತ್ರಿಕ ನೆಲೆಯಲ್ಲಿ ಮತಯಂತ್ರ ಸರಿಯಿಲ್ಲ ಎಂದು ವಾದಿಸತೊಡಗಿದರು. ಮತಯಂತ್ರಗಳನ್ನು ಬಿಜೆಪಿತನಗೆ ಅನುಕೂಲಕರವಾಗಿ ತಿರುಚುತ್ತಿದೆ ಎಂದರು. ಸುಪ್ರೀಂಕೋರ್ಟ್ ಹಲವಾರು ತೀರ್ಪುಗಳಲ್ಲಿ ಮತಯಂತ್ರದ ಸಾಚಾತನವನ್ನು ಎತ್ತಿ ಹಿಡಿದರೂ ಈ ಮಂದಿಗೆ ಅದರಿಂದ ತೃಪ್ತಿಯಾಗಲಿಲ್ಲ.

ಇವಿಎಂ ಕುರಿತಾದ ಅನುಮಾನವು 2017 ಮತ್ತು 2018ರ ವಿಧಾನಸಭಾ ಚುನಾವಣೆಗಳಲ್ಲೂ ಮುಂದುವರಿಯಿತು. ವಿಪರ್ಯಾಸವೆಂದರೆ ವಿರೋಧ ಪಕ್ಷಗಳು ಗೆದ್ದ ರಾಜ್ಯಗಳಲ್ಲಿ ಇವಿಎಂ ನಿರ್ವಹಣೆಯನ್ನು ಪ್ರಶ್ನಿಸಲಿಲ್ಲ, ತಾವು ಸೋತಾಗ ಮಾತ್ರ ಇವಿಎಂನ ನಿರ್ವಹಣೆಯನ್ನು ವಿರೋಧ ಪಕ್ಷಗಳು ಪ್ರಶ್ನಿಸಿದವು. ನಿಜವಾಗಿ ಚುನಾವಣಾ ಯಂತ್ರದ ಕುರಿತಾಗಿ ಅವರ ಅನುಮಾನವಿರುವುದಲ್ಲ ಎಂಬ ಮೊದಲ ಸಂಕೇತ ಇದರಿಂದ ಲಭಿಸಿತು. ಬಿಜೆಪಿ ಗೆಲುವನ್ನು ಸ್ವೀಕರಿಸದಿರುವುದೇ ಅವರ ಮುಖ್ಯ ಕಾರ್ಯತಂತ್ರ ಎಂದು ತಿಳಿದುಬಂತು. ಮುಂದಿನ ದಶಕದಲ್ಲಿ ಇದೇ ಬಗೆಯ ವರ್ತನೆ ಬೇರೆ ಬೇರೆ ಸ್ವರೂಪಗಳಲ್ಲಿ ಕಂಡು ಬಂದಿತು.

ನಿರಾಕರಣೆಯ ಹಂತ: 2019-2024

2019ರಲ್ಲಿ ಬಿಜೆಪಿ ಹಿಂದಿನ ಚುನಾವಣೆಗಿಂತ ಹೆಚ್ಚು ಸ್ಥಾನ ಗೆದ್ದು ಅಧಿಕಾರಕ್ಕೇರಿತು. ಬಿಜೆಪಿ ವಿರೋಧಿ ರಾಜಕೀಯ ಪಕ್ಷಗಳು ಮತ್ತು ರಾಜಕೀಯ ಪಂಡಿತರಿಂದ ಇದೀಗ ಕೇಳಿ ಬಂದುದು ತಾಂತ್ರಿಕ ದೋಷದ ಕುರಿತಂತೆ ಆರೋಪವಲ್ಲ, ಬದಲಾಗಿ ಅವರು ಚುನಾವಣೆಯ ಫಲಿತಾಂಶವನ್ನೇ ಪ್ರಶ್ನಿಸಲಾರಂಭಿಸಿದರು. ಈ ಫಲಿತಾಂಶವು ನಿಜವಾಗಿಯೂ ಮತದಾರರ ಅಭಿಮತವನ್ನು ಪ್ರತಿಫಲಿಸುವುದೇ ಎಂದು ಪ್ರಶ್ನಿಸುವಂತಹ ಲೇಖನಗಳು ಪ್ರಕಟವಾದವು. ಮತದಾರ ಪಟ್ಟಿಯಲ್ಲಿ ಬದಲಾವಣೆ ಮಾಡಲಾಗಿದೆ, ಮತಗಟ್ಟೆ ವಶೀಕರಣ ನಡೆದಿದೆ ಎಂದೂ ಆರೋಪಿಸಲಾಯಿತು. ಚುನಾವಣಾ ಆಯೋಗವು ಬಿಜೆಪಿ ಜತೆ ಕೈ ಜೋಡಿಸಿದೆ ಎಂದು ದೂರುತ್ತಾ ಚುನಾವಣಾ ಆಯೋಗವನ್ನು ಪಕ್ಷಪಾತಿ ಎಂದು ಬಿಂಬಿಸಲಾಯಿತು. ಆದರೆ ಇವೆಲ್ಲಾ ಆರೋಪಗಳು ನ್ಯಾಯಾಲಯದ ಕಟಕಟೆಯಲ್ಲಿ ಬಿದ್ದುಹೋದವು. ಅವುಗಳಿಗೆ ಯಾವುದೇ ಪುರಾವೆಯಿಲ್ಲ ಎಂಬುದು ಸಾಬೀತಾಯಿತು.

> ಚುನಾವಣಾ ಸೋಲನ್ನು ಗೌರವಯುತವಾಗಿ ಒಪ್ಪಿಕೊಳ್ಳದ ಹೊಸದೊಂದು ರಾಜಕೀಯ ವಾತಾವರಣವು ಈಗ ಭಾರತದಲ್ಲಿ ನಿರ್ಮಾಣಗೊಂಡಿದೆ.

ಈ 'ಹೊಸ ರಾಜಕೀಯ ವ್ಯವಸ್ಥೆ'ಯು 2019ರಿಂದ 2024ರ ಅವಧಿಯಲ್ಲಿ ಚುನಾವಣಾ ಫಲಿತಾಂಶವನ್ನು ತಾನು ಮಾನ್ಯ ಮಾಡುವುದಿಲ್ಲವೆಂದು ಬಿಂಬಿಸಲು ಹಲವಾರು ವಿಧಗಳಲ್ಲಿ ಪ್ರಯತ್ನಿಸಿತು. ಪಾಕಿಸ್ತಾನದಲ್ಲಿ ನಡೆದ ಸರ್ಜಿಕಲ್ ದಾಳಿಗಳು ನಕಲಿ ಎಂದು ಹೇಳಲಾಯಿತು. ನೋಟು ಅಮಾನ್ಯೀಕರಣವು ಒಂದು ಪಿತೂರಿ ಎಂದು ಬಣ್ಣಿಸಲಾಯಿತು. ಸಂವಿಧಾನದ 370ನೇ ವಿಧಿ ರದ್ದತಿಯು ನ್ಯಾಯಬಾಹಿರ ಎಂದೆನ್ನಲಾಯಿತು. ರಾಮಮಂದಿರ ತೀರ್ಪನ್ನು ಕೋಮುವಾದಿ ಎಂದೆನ್ನಲಾಯಿತು. ಸಿಎಎ ಕಾಯ್ದೆಯು ಫ್ಯಾಸಿಸ್ಟ್ ಎಂದು ಜರೆಯಲಾಯಿತು. ಕಾರ್ಯಾಂಗದ ಪ್ರತಿಯೊಂದು ನಿರ್ಧಾರವನ್ನು ಕಾನೂನುಬಾಹಿರವಾದುದೆಂದು ಬಿಂಬಿಸುವ ಪ್ರಯತ್ನ ನಡೆಯಿತು. ಮತದಾರರ ತೀರ್ಪನ್ನು ಗೌಣವಾಗಿಸಿ, ಅದರ ಬದ್ಧತೆಯನ್ನು ಪ್ರಶ್ನಿಸಲಾಯಿತು.

ನಿಜವಾಗಿ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸೋತವನು ತನ್ನ ಸೋಲನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ಯಾರೇ ಗೆದ್ದರೂ ಆತ ಮುಂದಿನ ಅವಧಿಗೆ ನ್ಯಾಯೋಚಿತ ಆಡಳಿತಗಾರನೆಂಬುದನ್ನು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಪ್ಪಿಕೊಳ್ಳಬೇಕು. ಆದರೆ ಯಾವಾಗ ವಿರೋಧ ಪಕ್ಷಗಳು ಅಂತಹ ಚುನಾವಣಾ ತೀರ್ಪನ್ನು ಒಪ್ಪಿಕೊಳ್ಳುವುದಿಲ್ಲವೋ ಆಗ ಪ್ರತಿಯೊಂದು ಚುನಾವಣೆ ಕೂಡಾ ಪ್ರಶ್ನಾರ್ಹವೆಂದಾಗುತ್ತದೆ. ಕಾರ್ಯಾಂಗದ ಪ್ರತಿಯೊಂದು ನಿರ್ಧಾರ ಕೂಡಾ ಒತ್ತಡಕ್ಕೆ ಒಳಗಾಗುತ್ತದೆ.

ಮೀಮ್ ಹಂತ : 2024ರ ನಂತರ...

2024ರ ಚುನಾವಣೆಯಲ್ಲಿ ಬಿಜೆಪಿ ಅಧಿಕಾರ ಗಳಿಸಿದರೂ ಅದಕ್ಕೆ ಕೆಲವಷ್ಟು ಸ್ಥಾನಗಳ ನಷ್ಟವಾಯಿತು. ಮಿತ್ರ ಪಕ್ಷಗಳ ಬೆಂಬಲದಿಂದ ಬಿಜೆಪಿ ಸರಕಾರ ರಚಿಸಿತು. ಯಾವುದೇ ಆರೋಗ್ಯಕರ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಇದೊಂದು ಫಲಪ್ರದ ಫಲಿತಾಂಶ ಎಂದು ಭಾವಿಸಬೇಕಾಗುತ್ತದೆ. ಆಡಳಿತ ಪಕ್ಷಕ್ಕೆ ಸೋಲುಣಿಸದಿದ್ದರೂ ಸ್ವಲ್ಪ ಮಟ್ಟಿನ ನಿಯಂತ್ರಣ ಹೇರಲಾಯಿತು. ವಿಪಕ್ಷಗಳ ಬಲವೃದ್ಧಿಗೊಂಡರೂ ಅದು ವಿಜೇತವಾಗಲಿಲ್ಲ. ಇದು ಮತದಾರರ ಪ್ರಬುದ್ಧ ತೀರ್ಪು. ಆದರೆ ಈ 'ಹೊಸ ರಾಜಕೀಯ ವ್ಯವಸ್ಥೆ'ಯು ಈ ಪ್ರಬುದ್ಧ ತೀರ್ಪನ್ನು ಒಪ್ಪಿಕೊಳ್ಳುವ ಮನಸ್ಥಿತಿಯನ್ನೂ ಪ್ರದರ್ಶಿಸಲಿಲ್ಲ. ಕೆಲವೇ ತಿಂಗಳಲ್ಲಿ ಈ ತೀರ್ಪನ್ನು ಮತ್ತೊಂದು ಹೊಸ ವಿಧಾನದಲ್ಲಿ ತಿರಸ್ಕರಿಸುವಂತಹ ಸ್ವರೂಪ ಅನಾವರಣಗೊಂಡಿತು.

ಈ ಹೊಸ ಸ್ವರೂಪವೇ ಮೀಮ್. ಅದಕ್ಕೆ ಈಗ ಹೊಸದಾದ ಸೇರ್ಪಡೆ ಕಾಕ್ರೋಚ್ ಜನತಾ ಪಾರ್ಟಿ. 2024ರ ಚುನಾವಣಾ ಫಲಿತಾಂಶವನ್ನು ತಾಂತ್ರಿಕವಾಗಿ ಅಥವಾ ಕಾನೂನಿನ ಮುಖಾಂತರ ಪ್ರಶ್ನಿಸಲಿಲ್ಲ, ಅದರ ಬದಲಾಗಿ ಸಾಂಸ್ಕೃತಿಕ ಸ್ವರೂಪದೊಂದಿಗೆ ಚುನಾವಣಾ ಫಲಿತಾಂಶವು ನ್ಯಾಯಬಾಹಿರ ಎಂಬಂತೆ ಚಿತ್ರಿಸಲಾಯಿತು. ಮುಖ್ಯ ಚುನಾವಣಾ ಆಯುಕ್ತರನ್ನು ಯುಎಪಿಎ ಕಾಯ್ದೆಯಡಿ ಬಂಧಿಸಬೇಕೆಂದು ಹೇಳಲಾಯಿತು. ಮಾಧ್ಯಮಗಳನ್ನು ನಿಯಂತ್ರಿಸಬೇಕು ಎನ್ನಲಾಯಿತು. ನ್ಯಾಯಾಂಗದ ಸುಧಾರಣೆಯಾಗಬೇಕು ಎಂದು ಒತ್ತಾಯಿಸಲಾಯಿತು. ಸಂಸತ್ತನ್ನು ಪುನರ್‌ರಚಿಸಬೇಕೆನ್ನಲಾಯಿತು. ಆದರೆ ಈಗೆಲ್ಲ ಬೇಡಿಕೆ ಇಡುವ ಮಂದಿಗಳು 2024ರ ಚುನಾವಣೆಯಲ್ಲಿ ತೀರ್ಪು ನೀಡಿದ ಜನರ ಅಭಿಪ್ರಾಯವನ್ನು ಮನ್ನಿಸಬೇಕು ಎಂಬ ಭಾವನೆಯನ್ನು ಮಾತ್ರ ಪ್ರದರ್ಶಿಸಲಿಲ್ಲ. ಅವರ ಪ್ರಕಾರ ಅದು ಜನರು ನೀಡಿದ ತೀರ್ಪಲ್ಲ, ಬೇರಾವುದೋ ಸ್ವರೂಪದಲ್ಲಿ ಚುನಾವಣಾ ಫಲಿತಾಂಶ ರೂಪುಗೊಂಡಿದೆ ಎಂಬುದು ಅವರ ವಾದ. ಇಂತಹ ವಾದವನ್ನು ಮಂಡಿಸುವ ರೀತಿಯಲ್ಲಿ ಮೀಮ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗತೊಡಗಿದವು.

ಈ ಮೀಮ್ ಹಂತದ ಬುದ್ಧಿವಂತಿಕೆಯೆಂದರೆ ಇದಕ್ಕೆ ಯಾವುದೇ ತರ್ಕದ ಅಗತ್ಯವಿಲ್ಲ. ಇವಿಎಂ ಹಂತಕ್ಕೆ ತಾಂತ್ರಿಕ ಪುರಾವೆಯ ಅಗತ್ಯವಿತ್ತು. ಅದನ್ನು ಪರಿಶೋಧನೆಗೆ ಒಳಪಡಿಸುವ ಅವಕಾಶವೂ ಇತ್ತು. ನಿರಾಕರಣೆಯ ಹಂತದಲ್ಲಿ ನೈತಿಕ ಮೌಲ್ಯದ ಪ್ರಶ್ನೆ ಇತ್ತು. ಅದರ ಕುರಿತಾಗಿ ಚರ್ಚೆ ನಡೆಯಬಹುದಾಗಿತ್ತು. ಆದರೆ ಈ ಮೀಮ್ ಹಂತಕ್ಕೆ ಅದಾವುದರ ಅಗತ್ಯವೂ ಇಲ್ಲ. ತಮ್ಮ ಅಸಂತೃಪ್ತಿಯನ್ನು ಹಾಸ್ಯದ ಮೂಲಕ, ವಿಡಂಬನೆಯ ಮೂಲಕ ಮಂಡಿಸಲಾಗುತ್ತದೆ. ಇಲ್ಲಿ ಈ ಮೀಮ್‌ಗಳು ಪ್ರತಿಪಾದಿಸುವ ಸುಳ್ಳುಗಳನ್ನು ಸಾಬೀತುಪಡಿಸಲಾಗುವುದಿಲ್ಲ. ಈಗ ಜಿರಳೆಗಳು ಕೂಡಾ ಯಾವುದೇ ವಾದಗಳನ್ನು ಮಂಡಿಸುತ್ತಿಲ್ಲ. ಜಿರಳೆಗಳು ಕೇವಲ ಜಿರಳೆಗಳಾಗಿವೆ. 2024ರ ಚುನಾವಣಾ ಫಲಿತಾಂಶ ನಡೆದೇ ಇಲ್ಲ ಎಂಬಂತೆ ಬಿಂಬಿಸಲಾಗುತ್ತಿದೆ.

ಈ ಮೂರು ಹಂತಗಳಲ್ಲಿರುವ ಸಮಾನ ಅಂಶಗಳೆಂದರೆ ಭಾರತದ ಮತದಾರರು ನೀಡಿದ ಚುನಾವಣಾ ತೀರ್ಪಿನ ಕುರಿತಂತೆ ನಿರಂತರವಾಗಿ ಅನುಮಾನ ವ್ಯಕ್ತಪಡಿಸುವುದು. ಚುನಾವಣಾ ಫಲಿತಾಂಶವು ಸಂಶಯಾಸ್ಪದವಾಗಿದೆ ಎಂಬಂತೆ ಬಿಂಬಿಸುವುದು. ಇಂಥ ಪರಿಸ್ಥಿತಿಯು ಈ ಹೊಸ ಬಗೆಯ ರಾಜಕೀಯ ವ್ಯವಸ್ಥೆಗೆ ಹೇಗೂ ಅನುಕೂಲಕರವಾಗಿದೆ. ಅವರಿಗೆ ಹಣ ಹರಿದು ಬರುತ್ತಿರುತ್ತದೆ. ಮಾಧ್ಯಮಗಳು ಪ್ರಚಾರ ನೀಡುತ್ತಿರುತ್ತವೆ. ಅಂತಾರಾಷ್ಟ್ರೀಯ ಮಾಧ್ಯಮಗಳೂ ಪ್ರಚಾರ ಒದಗಿಸುತ್ತವೆ.

ಕಾಕ್ರೋಚ್ ಜನತಾ ಪಾರ್ಟಿ ಕೂಡಾ ಈ ವ್ಯವಸ್ಥೆಯಡಿ ಸೂಕ್ತವಾಗಿ ಹೊಂದಿಕೊಳ್ಳುತ್ತದೆ. ಅದು ಕೂಡಾ ನಿರ್ದಿಷ್ಟ ಚುನಾವಣಾ ಫಲಿತಾಂಶವನ್ನು ಒಪ್ಪಿಕೊಳ್ಳುವುದಿಲ್ಲ, ಅದು ಯಾವುದೇ ಚುನಾವಣಾ ಪರಿಹಾರವನ್ನೂ ತಿಳಿಸುವುದಿಲ್ಲ. ಅದು ಕೇವಲ ಶಾಶ್ವತ ವಿಪಕ್ಷ ಶಕ್ತಿಯಾಗಿ ಉಳಿಯುತ್ತದೆ ಅಷ್ಟೆ. ಯಾವುದೇ ಸಮಸ್ಯೆಗೆ ಯಾವುದೇ ಕ್ಷಣದಲ್ಲಿ ಸ್ಪಂದಿಸುವ ಶಕ್ತಿಯಾಗಿ ವರ್ತಿಸುತ್ತದೆ. ಮುಂದಿನ ಚುನಾವಣೆ ಬರುವಾಗ ಅದು ತಾನೇ ಚುನಾವಣಾ ಸಂಘಟನೆಯಾಗಿಯೇನೂ ಬದಲಾಗದು. ಅದು ಕೇವಲ ವಿರೋಧ ಪಕ್ಷಗಳಿಗೆ ಬೆಂಬಲ ನೀಡಬಲ್ಲ ಮೀಮ್ ಶಕ್ತಿಯಾಗಿಯೇ ಉಳಿಯುತ್ತದೆ.

ರಾಜಕೀಯ ಸಿದ್ಧಾಂತಗಳಲ್ಲಿ ಅದಕ್ಕೂ ಒಂದು ಹೆಸರಿದೆ. ಅದನ್ನು 'ನಿರಂತರ ದಂಗೆಯ ರಾಜಕೀಯ' ಎನ್ನುತ್ತಾರೆ. 20ನೇ ಶತಮಾನದಲ್ಲಿ ಮಾರ್ಕ್ಸಿಸ್ಟ್ ಚಿಂತನೆಯಿಂದ ಇದು ಹುಟ್ಟಿಕೊಂಡಿತು. ಅದರ ಪ್ರಕಾರ ದಂಗೆ ಎಂಬುದು ಏಕೈಕ ಘಟನೆಯಲ್ಲ, ಬದಲಾಗಿ ಅದು ಒಂದು ನಿರಂತರ ಪ್ರಕ್ರಿಯೆ. ಪ್ರಜಾತಾಂತ್ರಿಕ ಸಮಾಜದಲ್ಲಿ ಇರುವ ಸಂಸ್ಥೆಗಳು ಈ ನಿರಂತರ ಪ್ರಕ್ರಿಯೆಯಲ್ಲಿರುವ ನಿಲುದಾಣಗಳು ಮಾತ್ರ. ಈ ಪ್ರಕ್ರಿಯೆಗೆ ಯಾವುದೇ ಅಂತಿಮ ಗುರಿಯಿಲ್ಲ, ಮತದಾರರು ತಮಗೆ ಮತ ನೀಡುವ ತನಕ ತಮ್ಮ ಪಾಲಿಗೆ ಉಪಯುಕ್ತರು. ತಮಗೆ ಮತ ನೀಡದಿದ್ದರೆ ಅವರೊಂದು ಅಡ್ಡಿ ಎಂಬಂತೆ ಪರಿಗಣಿಸಲಾಗುತ್ತದೆ.

ಭಾರತವು ಮಾರ್ಕ್ಸಿಸ್ಟ್ ಸಮಾಜವಲ್ಲ, ನಮ್ಮದು ಸಂವಿಧಾನಾತ್ಮಕ ಪ್ರಜಾತಂತ್ರ. ಸೋಲುಗಳನ್ನು ಅರಸಿಗಿಕೊಂಡು ನಿಗದಿತ ಅವಧಿಗಳಲ್ಲಿ ಹೊಸ ಸ್ಪರ್ಧೆಗೆ ಅಣಿಯಾಗುವಂತೆ ನಮ್ಮ ಪ್ರಜಾತಾಂತ್ರಿಕ ಸಂಸ್ಥೆಗಳನ್ನು ರೂಪುಗೊಳಿಸಲಾಗಿದೆ. ಸೋತವರು ಈ ತೀರ್ಪನ್ನು ಒಪ್ಪಿಕೊಳ್ಳುತ್ತಾರೆ. ಗೆದ್ದವರು ತಮ್ಮ ಕಾರ್ಯಸೂಚಿ ಜಾರಿಗೊಳಿಸುತ್ತಾರೆ. ಮುಂದಿನ ಚುನಾವಣೆಯಲ್ಲಿ ಮತ್ತದೇ ಸ್ಪರ್ಧೆ ಏರ್ಪಡುತ್ತದೆ. ಆದರೆ ಕಾಕ್ರೋಚ್ ಜನತಾ ಪಾರ್ಟಿಯಂತಹುದು ಬೇರೆಯೇ ವರ್ಗಕ್ಕೆ ಸೇರಿದುದು. ಅದು 'ಮತ್ತೊಂದು ಬಾರಿ' ನೋಡೋಣ ಎಂಬ ನಿಯಮಕ್ಕೆ ಬದ್ಧವಾಗಿಲ್ಲ. 'ಶಾಶ್ವತವಾಗಿ ಈಗಲೇ' ಎಂಬ ನಿಯಮವನ್ನು ಅದು ಬಯಸುತ್ತಿದೆ. ಅದು ಭಾರತದ ಪಾಲಿಗೆ ಸ್ವೀಕಾರಾರ್ಹವಲ್ಲ.

ವೇದಾಭ್ಯಾಸ ಮಾಡಬೇಕು

ವೇದಃ ಶಿವಃ ಶಿವೋ ವೇದಃ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ ಸರ್ವಪ್ರಯತ್ನೇನ ವೇದಮೇವಸದಾಭ್ಯಸೇತ್ ॥ –ಲಿಂಗಪುರಾಣ

ವೇದವೆಂದರೆ ಶಿವನು. ಶಿವನೆಂದರೆ ವೇದವು, ಯಾರೂ ವೇದಾಧ್ಯಯನ ಮಾಡುತ್ತಾನೆ ಅವನು ಸದಾಶಿವ. ಆದ್ದರಿಂದ ಸರ್ವವಿಧದ ಪ್ರಯತ್ನದಿಂದಲೂ ವೇದವನ್ನು ಅಭ್ಯಾಸ ಮಾಡಬೇಕು – ಎಂಬುದು ಶ್ಲೋಕಾರ್ಥ.

ವೇದ ಎಂದರೆ ಜ್ಞಾನ ಎಂದರ್ಥ. 'ವಿದ್ ಜ್ಞಾನೇ' ಎಂಬ ಧಾತುವಿನಿಂದ ಈ ಶಬ್ದ ನಿಷ್ಪನ್ನವಾಗಿದೆ. ಜ್ಞಾನಕ್ಕೆ ಇಂಥವರೇ ವಾರಸುದಾರರು ಎಂಬುದಿಲ್ಲ, ಇಚ್ಛೆಪಟ್ಟು ಪರಿಶ್ರಮದಲ್ಲಿ ತೊಡಗಿಕೊಳ್ಳುವವರೆಲ್ಲರೂ ಜ್ಞಾನಕ್ಕೆ ಅಧಿಕಾರಿಗಳು. ವೇದಾಧ್ಯಯನ ಒಂದಷ್ಟು ನಿಯಮವಿದೆ. ಕಟ್ಟಳೆಗಳಿವೆ. ಇಂಥವರಿಗೆ ಮಾತ್ರ ಎಂಬುದಿಲ್ಲ, ಇದನ್ನು ಮಾಡಿದವರು ನಾವು. ಇದನ್ನೇ ನಂಬಿ ಪ್ರತಿಪಾದಿಸುವವರು ಅಲ್ಪಜ್ಞರು.



ನನಗೆ ತಿಳಿದಂತೆ ಮೂವತ್ತೆರಡಕ್ಕೂ ಹೆಚ್ಚು ಜನ ಮಂತ್ರದ್ರಷ್ಟಾರರು ಬ್ರಾಹ್ಮಣೇತರರು. ಮಂತ್ರಗಳ ರಾಜ ಗಾಯತ್ರಿಯನ್ನು ಕಂಡುಕೊಂಡು ಲೋಕಮುಖಕ್ಕೆ ನೀಡಿದ ವಿಶ್ವಾಮಿತ್ರ ಬ್ರಾಹ್ಮಣನಲ್ಲ. ಇಪ್ಪತ್ತೆಂಟಕ್ಕೂ ಹೆಚ್ಚು ಸ್ತ್ರೀಯರು ವೇದಮಂತ್ರಗಳ ದ್ರಷ್ಟಾರೆಯರಾಗಿದ್ದಾರೆ. ಆದ್ದರಿಂದ ವೇದಕ್ಕೆ ಬೇಲಿ ಹಾಕುವುದು ಸಾಧುವಲ್ಲ.

'ವಿದ್ಯತೇ ಅನೇನ ಧರ್ಮಾದಿ ಇತಿ ವೇದಃ' 'ವಿಂದಂತಿ ಅನೇನ ಇತಿ ವೇದಃ' 'ವೇದಯತಿ ಇತಿ ವೇದಃ' 'ವಿದ್ಯಾತಿ ಇತಿ ವೇದಃ'– ವೇದದ ಕುರಿತಾದ ಈ ಎಲ್ಲ ನಿರ್ವಚನಗಳೂ ಯಾವುದೇ ಗುಂಪಿಗೆ ಸಂಬಂಧಿಸಿದ್ದು ಎನ್ನುವುದಿಲ್ಲ, ಬದಲಾಗಿ ಜೀವನಧರ್ಮವನ್ನು ತಿಳಿಸಿಕೊಡುವುದು, ಮೋಕ್ಷಾದಿಗಳನ್ನು ಪಡೆಯಲು ಪೂರಕವಾದದ್ದು, ಜ್ಞಾನವನ್ನು ಹಂಚುವಂತದ್ದು ಎಂಬುದನ್ನು ಪ್ರಧಾನವಾಗಿ ಪ್ರತಿಪಾದಿಸುತ್ತೇವೆ. ಯಾವ ಫಲಾಪೇಕ್ಷೆಯಿಲ್ಲದೇ ಕೇವಲ ಜ್ಞಾನಕ್ಕಾಗಿ ಅಪೂರ್ವ ಜ್ಞಾನದ ರಕ್ಷಣೆಗಾಗಿ ವೇದವನ್ನು ಓದಬೇಕು ಎಂಬುದನ್ನು 'ನಿಷ್ಕಾರಣೋ ವೇದಃ ಅಧೀತವ್ಯಃ' ಎಂಬ ಸೂಕ್ತಿ ಪ್ರತಿಪಾದಿಸುತ್ತದೆ. ಸಂಪೂರ್ಣವಾಗಿ ಎಲ್ಲ ವಿಧದ ಜ್ಞಾನವನ್ನೂ ಸಾರ್ವತ್ರಿಕವಾಗಿ, ಸಾರ್ವಕಾಲಿಕವಾಗಿ ವೇದಗಳು ನೀಡುತ್ತವೆ.

ವಸ್ತುತಃ ವೇದವು ಒಂದೇ ಆಗಿದ್ದರೂ ಅವರ ವೈಶಾಲ್ಯ ರಕ್ಷಣೆ ಪ್ರಯೋಜನ... ಇತ್ಯಾದಿಗಳನ್ನು ಗಮನಿಸಿ ನಾಲ್ಕಾಗಿ ವಿಭಾಗಿಸಿದ್ದಾರೆ. 'ವಿಜ್ಞಾನಂ ಬ್ರಹ್ಮ' 'ಪ್ರಜ್ಞಾನಂ ಬ್ರಹ್ಮ' ಎಂದಿರುವುದರಿಂದ ವೇದವೆಂದರೆ ಪರಬ್ರಹ್ಮ ಅಥವಾಗಿ ಶಿವ. ಅಂತೆಯೇ ಶಿವ ಎಂದರೆ ವೇದ. ಇವೆರಡರ ನಡುವೆ ಅಂತರವಿಲ್ಲ, ಯಾರು ನಿರಂತರ ವೇದಾಧ್ಯಯನ ನಡೆಸುತ್ತಾರೋ ಅವನು ಸದಾಶಿವ. ವೇದವನ್ನರಿತರೆ ಶಿವನನ್ನರಿತಂತೆ. ಶಿವನನ್ನು ತಿಳಿದರೆ ವೇದವನ್ನು ತಿಳಿದಂತೆ. ಅವುಗಳ ನಡುವೆ ಬೇಧವಿಲ್ಲ, ಆದ್ದರಿಂದ ಎಲ್ಲ ಬಗೆಯ ಪ್ರಯತ್ನದಿಂದಲೂ ವೇದವನ್ನು ಅರಿತುಕೊಳ್ಳಬೇಕು. ನಿರಂತರ ಅಭ್ಯಸಿಸಬೇಕು.

ವೇದ ಪ್ರಪಂಚದ ಪ್ರಥಮ ಸಾಹಿತ್ಯ, ಗದ್ಯ, ಪದ್ಯ, ಚಂಪೂ ಪ್ರಕಾರಗಳನ್ನು ನಾವಿಲ್ಲಿ ಕಾಣಬಹುದು. ಸ್ತೋತ್ರ ಕಾವ್ಯವನ್ನೂ ನೋಡಬಹುದು. ಇವೆಲ್ಲವೂ ಭಗವಂತನನ್ನೂ ಸಮಾಜ ಸ್ವರೂಪಿ ಭಗವಂತನನ್ನು ತಿಳಿಸಿಕೊಡುವ ಪ್ರಯತ್ನ ಮಾಡುತ್ತವೆ. ಆದ್ದರಿಂದ ಸಮಾಜವನ್ನು ಭಗವಂತನನ್ನು, ಸನಾತನೆಯನ್ನು, ಪ್ರೀತಿಸುವವರು ವೇದವನ್ನು ಪ್ರೀತಿಸಬೇಕು. ಆಗ ಶಿವನನ್ನು ಪ್ರೀತಿಸಿದಂತೆ. ವೇದೋಪಾಸನೆ ಮಾಡಿದರೆ ಶಿವೋಪಾಸನೆ ಮಾಡಿದಂತೆ.

ಭಾರತದ ತಂತ್ರಜ್ಞಾನ ಅಭಿವೃದ್ಧಿಗೆ ವಿದೇಶಿ ಮೈತ್ರಿಗಳು ಅಗತ್ಯ

ರಾಮ್ ಮಾಧವ್

ಪ್ರಧಾನಿ ನರೇಂದ್ರ ಮೋದಿಯವರು ನಾರ್ಡಿಕ್ ದೇಶಗಳಿಗೆ ನೀಡಿದ ಭೇಟಿಯು ಅಲ್ಲಿನ ಒಬ್ಬ ಪತ್ರಕರ್ತೆಯ ಬೇಜವಾಬ್ದಾರಿಯುತ ವರ್ತನೆಯಿಂದ ಅನವಶ್ಯ ವಿವಾದಕ್ಕೆರವಾಯಿತು. ಪ್ರಧಾನಿ ಮೋದಿಯವರು ನಾರ್ವೆಯ ಪ್ರಧಾನಿ ಜೊನಾಸ್ ಸ್ಟೋರ್ ಅವರೊಂದಿಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದಾಗ ಹೆಲ್ಲೆ ಲಿಂಗ್ ಸ್ವೆಂಡ್ಸನ್ ಎಂಬ ಪತ್ರಕರ್ತೆಯು ಸಭೆಯ ಮಧ್ಯದಿಂದಲೇ ದೊಡ್ಡದಾಗಿ ಕಿರುಚಿ ಪ್ರಧಾನಿಯೆಡೆಗೆ ಪ್ರಶ್ನೆ ಎಸೆದಳು. ಪತ್ರಕರ್ತರಿಗೆ ಮಾಹಿತಿ ನೀಡುವ ಗೋಷ್ಠಿ ಅದಾಗಿತ್ತೇ ಹೊರತು ಪತ್ರಕರ್ತರು ಪ್ರಶ್ನೆ ಕೇಳುವ ಅವಕಾಶ ಅಲ್ಲಿ ಇರಲಿಲ್ಲ. ಆದರೆ ಆಕೆ ತನ್ನ ವರ್ತನೆಯನ್ನು ಸಮರ್ಥಿಸಿಕೊಂಡು ಇದು 'ಸಂಘರ್ಷಾತ್ಮಕ ಪತ್ರಿಕೋದ್ಯಮ', ಜಗತ್ತಿನ ಪತ್ರಿಕಾ ಸ್ವಾತಂತ್ರ್ಯವನ್ನು ಪ್ರತಿನಿಧಿಸುವ ತಾನು ಇಂತಹ ವರ್ತನೆಯನ್ನು ತೋರುವುದು ತನ್ನ ಕರ್ತವ್ಯವೆಂದೂ ನುಡಿದಳು. ಎಂತಹ ಹಾಸ್ಯಾಸ್ಪದ ಸಮರ್ಥನೆ!

ನಾರ್ವೆ ಕೇವಲ 50 ಲಕ್ಷ ಜನಸಂಖ್ಯೆಯುಳ್ಳ ಒಂದು ದೇಶ. ಭಾರತದ ಪುಣೆ ಮತ್ತು ಹೈದರಾಬಾದ್‌ನಲ್ಲಿರುವ ಜನಸಂಖ್ಯೆಗಿಂತಲೂ ಇದು ಕಡಿಮೆ. ಹೆಲ್ಲೆ ಲಿಂಗ್ ಪ್ರತಿನಿಧಿಸುತ್ತಿದ್ದ ಪತ್ರಿಕೆಯ ಹೆಸರು ಡಾಗ್ಸವಿಸನ್. ಈ ಪತ್ರಿಕೆಯ ಮಾಲಕ ಮೆಂಟರ್ ಮೀಡಿಯರ್ ಎಂಬಾತ. ಈ ಪತ್ರಿಕೆಯ ಪ್ರಮುಖ ಪಾಲುದಾರರು ನಾರ್ವೆಯ ಕ್ರೈಸ್ತ ಮಿಶನರಿ ಸಂಘಗಳು. ಆಕೆ ಪ್ರತಿನಿಧಿಸುವ ಈ ಪತ್ರಿಕೆಯು ನಾರ್ವೆಯಲ್ಲಿ ಅತ್ಯಂತ ಸಣ್ಣ ಪತ್ರಿಕೆ. ಅದರ ಪ್ರಸರಣ ದಿನಕ್ಕೆ 15 ಸಾವಿರ ಪ್ರತಿಗಳು ಮಾತ್ರ. ಆದರೆ ಈ ಪತ್ರಕರ್ತೆಯ ಅಹಂ ಮಾತ್ರ ಅದನ್ನು ಮೀರಿದ್ದಾಗಿದೆ.

ಭಾರತದಲ್ಲಿ 1.55 ಲಕ್ಷಕ್ಕಿಂತಲೂ ಹೆಚ್ಚು ನೋಂದಾಯಿತ ಪತ್ರಿಕೆಗಳು ಹಾಗೂ ಪತ್ರಿಕಾ ಸಂಸ್ಥೆಗಳಿದ್ದರೆ, ನಾರ್ವೆಯಲ್ಲಿರುವುದು 300ಕ್ಕೂ ಕಡಿಮೆ ಸುದ್ದಿ ಸಂಸ್ಥೆಗಳು. ಭಾರತದ 22 ಭಾಷೆಗಳಲ್ಲಿ 17000 ದಿನಪತ್ರಿಕೆಗಳು ಪ್ರಕಟವಾಗುತ್ತವೆ. ಭಾರತದಲ್ಲಿ 900ಕ್ಕೂ ಅಧಿಕ ಉಪಗ್ರಹಾಧಾರಿತ ಟಿವಿ ಚಾನೆಲ್‌ಗಳಿದ್ದು, ಅವುಗಳಲ್ಲಿ ಸುಮಾರು 400 ಚಾನೆಲ್‌ಗಳು ಕೇವಲ ಸುದ್ದಿ ಪ್ರಸಾರ ಮತ್ತು ಪ್ರಚಲಿತ ವಿದ್ಯಮಾನಗಳಿಗೆ ಮೀಸಲಾಗಿವೆ. ಭಾರತದಲ್ಲಿ 3700ಕ್ಕೂ ಅಧಿಕ ಡಿಜಿಟಲ್ ಮಾಧ್ಯಮಗಳಿವೆ. ಭಾರತದ ಈ ಎಲ್ಲಾ ಮಾಧ್ಯಮ ಗಳೂ ಮುಕ್ತ ಸ್ವಾತಂತ್ರ್ಯವನ್ನು ಅನುಭವಿಸುತ್ತಿವೆ. ಹಲವಾರು ಮಾಧ್ಯಮ ಸಂಸ್ಥೆಗಳಂತೂ ಕೇವಲ ಸರಕಾರವನ್ನು ಟೀಕಿಸಲೆಂದೇ ಮೀಸಲಾಗಿವೆ. ಭಾರತದ ಪತ್ರಿಕಾ ಸ್ವಾತಂತ್ರ್ಯವನ್ನು ಟೀಕಿಸುವ ಮೊದಲು ಪಾಶ್ಚಿಮಾತ್ಯ ದೇಶಗಳ ಈ ಕುಬ್ಜ ಮಾಧ್ಯಮಗಳು ಭಾರತೀಯ ಪತ್ರಿಕೋದ್ಯಮದ ವೈಶಾಲ್ಯ ಮತ್ತು ವೈವಿಧ್ಯತೆಯನ್ನು ಅರ್ಥ ಮಾಡಿಕೊಳ್ಳಬೇಕು.

"ಪ್ರಧಾನಿ ಮೋದಿಯವರು ನಮ್ಮ ಸರಕಾರದ ವಿಶ್ವಾಸವನ್ನು ಗಳಿಸಲು ಅರ್ಹರೇ" ಎಂಬುದಾಗಿ ಹೆಲ್ಲೆ ಲಿಂಗ್ ಪ್ರಶ್ನಿಸಿದ್ದು ಮತ್ತು ಆಕೆ ಪ್ರಶ್ನಿಸಿದ ರೀತಿ ಎರಡೂ ಪಾಶ್ಚಿಮಾತ್ಯ ಲಿಬರಲ್ ಮಾಧ್ಯಮಗಳ ಜನಾಂಗೀಯ ಅಹಂಕಾರದ ದ್ಯೋತಕವಾಗಿವೆ. ಜನಾಂಗೀಯವಾಗಿ ತಾವು ಶ್ರೇಷ್ಠರು ಎಂಬ ಭಾವನೆಯಿಂದ ಈ ಪಾಶ್ಚಿಮಾತ್ಯ ಲಿಬರಲ್ ಮಾಧ್ಯಮಗಳು ಇನ್ನೂ ಹೊರಬಂದಿಲ್ಲ. 1927ರಲ್ಲಿ ಅಮೆರಿಕದ ಪತ್ರಕರ್ತೆ ಕ್ಯಾಥರಿನ್ ಮಾಯೋ ಎಂಬಾಕೆ ಭಾರತವನ್ನು ಕೆಟ್ಟದಾಗಿ ಚಿತ್ರಿಸಿ ವರದಿ ಮಾಡಿದ್ದಾಗ ಮಹಾತ್ಮಾ ಗಾಂಧಿಯವರು ಅದನ್ನು "ಇದು ಚರಂಡಿ ತಪಾಸಣೆಯವರ ವರದಿ" ಎಂಬುದಾಗಿ ಬಣ್ಣಿಸಿದ್ದರು. ಅದೇ ರೀತಿ ಹೆಲ್ಲೆ ಲಿಂಗ್ ಭಾರತದ ಪತ್ರಿಕಾ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳನ್ನು ಪ್ರಶ್ನಿಸಿದ್ದನ್ನು ಕೂಡಾ ಆಕೆಯ "ಗಟಾರ ಪತ್ರಿಕೋದ್ಯಮ" ಎಂಬುದಾಗಿ ಬಣ್ಣಿಸಬೇಕಾಗುತ್ತದೆ.



ಮಾಧ್ಯಮಗಳೆಲ್ಲಾ ಈ ವಿವಾದಕ್ಕೇ ಹೆಚ್ಚು ಪ್ರಾಮುಖ್ಯತೆ ನೀಡಿದವಾದರೂ ನಿಜವಾಗಿ ನಾರ್ಡಿಕ್ ದೇಶಗಳಿಗೆ ಮತ್ತು ಇಟಲಿ, ನೆದರ್ಲೆಂಡ್‌ಗೆ ಮೋದಿಯವರು ನೀಡಿದ ಭೇಟಿಯು ಅತ್ಯಂತ ಮಹತ್ವದ್ದಾಗಿತ್ತು ಎಂಬುದನ್ನು ಮಾಧ್ಯಮಗಳು ಗಮನಿಸದೆ ಹೋದವು. ಪ್ರಧಾನಿ ಮೋದಿಯವರು ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿ ಜತೆಗೂಡಿ ಮಾಧ್ಯಮಗಳಲ್ಲಿ ಲೇಖನವೊಂದನ್ನು ಬರೆದು ವಿವಿಧ ದೇಶಗಳ ಮುಖಂಡರೊಂದಿಗಿನ ತಮ್ಮ ಭೇಟಿಯ ಫಲವನ್ನು ವಿವರಿಸಿದ್ದನ್ನು ಗಮನಿಸಬಹುದು. "ನಮ್ಮ ಸಹಕಾರವು ನಾವು ಹಂಚಿಕೊಂಡಿರುವ ಜಾಗೃತಿಯನ್ನು ಪ್ರತಿಬಿಂಬಿಸುತ್ತದೆ. 21ನೇ ಶತಮಾನದ ಭದ್ರತೆ ಮತ್ತು ಅಭಿವೃದ್ಧಿಯು ವಿವಿಧ ದೇಶಗಳು ನಡೆಸುವ ಆವಿಷ್ಕಾರ, ಇಂಧನ ನಿರ್ವಹಣೆ ಮತ್ತು ಸಾರ್ವಭೌಮತ್ವ ಬಲಪಡಿಸುವ ಪ್ರಕ್ರಿಯೆಯನ್ನು ಅವಲಂಬಿಸಿದೆ" ಎಂಬುದಾಗಿ ಅವರು ಲೇಖನದಲ್ಲಿ ಬರೆದಿದ್ದರು.

ಜಗತ್ತು ಈಗ ವೇಗವಾಗಿ ಬದಲಾಗುತ್ತಿದೆ. ತಂತ್ರಜ್ಞಾನವು ಜಗತ್ತಿನ ಆಗುಹೋಗು ನಿಭಾಯಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಕೃತಕ ಬುದ್ಧಿಮತ್ತೆ, ಸೆಮಿಕಂಡಕ್ಟರ್‌ಗಳು, ಕ್ವಾಂಟಮ್ ವಿಜ್ಞಾನ, ಬಯೋಟೆಕ್ನಾಲಜಿ, ವ್ಯೋಮ ಸಂಶೋಧನೆ, ರೋಬೋಟಿಕ್ಸ್ ಮತ್ತು ಕ್ರಿಪ್ಟೋ ಮುಂತಾದ ಹೊಸಹೊಸ ತಂತ್ರಜ್ಞಾನಗಳು ಜಗತ್ತಿನಲ್ಲಿ ದೇಶವೊಂದರ ಶಕ್ತಿ ಸಾಮರ್ಥ್ಯ ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಭವಿಷ್ಯದಲ್ಲಿ ದೇಶವೊಂದರ ಜಿಡಿಪಿಯನ್ನು ಆ ದೇಶದ 'ಜಿಟಿಪಿ' (gross technological prowess –ಒಟ್ಟು ತಂತ್ರಜ್ಞಾನ ಸಾಮರ್ಥ್ಯ) ನಿರ್ಧರಿಸಲಿದೆ. ಪ್ರಸ್ತುತ 'ಎಐ ತಂತ್ರಜ್ಞಾನ'ವು ಮುಂಚೂಣಿಯಲ್ಲಿದೆ. ಆದರೆ ಅಮೆರಿಕ ಚೀನಾದಂತಹ ಕೆಲವು ರಾಷ್ಟ್ರಗಳು ಅದರ ಮೇಲೆ ಏಕಸ್ವಾಮ್ಯ ಸಾಧಿಸಿರುವುದು ಇತರ ದೇಶಗಳಿಗೆ ಪ್ರತಿಕೂಲವಾಗಿ ಪರಿಣಮಿಸಿದೆ. ಇವುಗಳು ಒಂದು ರೀತಿಯಲ್ಲಿ ತಂತ್ರಜ್ಞಾನ ವಸಾಹತುಶಾಹಿಯನ್ನು ಸ್ಥಾಪಿಸಿರುವುದು ಇನ್ನಿತರ ಹಲವಾರು ದೇಶಗಳ ಪಾಲಿಗೆ ಗಂಭೀರ ಬೆದರಿಕೆಯನ್ನು ಒಡ್ಡಿವೆ.

ತಂತ್ರಜ್ಞಾನ ಗುಲಾಮ ಎಂಬುದು ಈಗ ಕೇವಲ ಕವಿಕಲ್ಪನೆಯಾಗಿ ಉಳಿದಿಲ್ಲ. ಇತ್ತೀಚೆಗೆ ಫ್ರಾನ್ಸ್‌ನ ಪ್ರಮುಖ ಎಐ ಕಂಪೆನಿಯೊಂದರ ಮುಖ್ಯಸ್ಥರಾದ ಆರ್ಥರ್ ಮೆಂಚ್ ಎಂಬವರು ತಮ್ಮ ದೇಶದ ಸಂಸತ್ತಿನಲ್ಲಿ ಮಾತನಾಡುತ್ತಾ, ಯುರೋಪ್ ಎರಡು ವರ್ಷಗಳೊಳಗೆ ಕೃತಕ ಬುದ್ಧಿಮತ್ತೆಯಲ್ಲಿ ಹೆಚ್ಚಿನ ಪರಿಣತಿ ಸಾಧಿಸಬೇಕು. ಇಲ್ಲದಿದ್ದರೆ ಅಮೆರಿಕದಂತಹ ದೇಶಗಳ ಅಡಿಯಾಳಾಗಿ ವರ್ತಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದರು. "ಒಂದು ಬಾರಿ ಅಮೆರಿಕದ ಕಂಪೆನಿಗಳು ಇವುಗಳ ಮೇಲೆ ಏಕಸ್ವಾಮ್ಯ ಸಾಧಿಸಿದರೆ ಹಠಾತ್ತನೆ ನಮಗೆ ಅದರ ಪೂರೈಕೆ ನಿಂತುಹೋಗಬಹುದು. ಅದರಿಂದಾಗಿ ನಾವು ತಂತ್ರಜ್ಞಾನದಲ್ಲಿ ಪ್ರಗತಿ ಸಾಧಿಸುವುದೇ ಸ್ಥಗಿತಗೊಳ್ಳಬಹುದು. ಯುರೋಪ್ ಅಮೆರಿಕದ ಗುಲಾಮ ದೇಶವಾಗಬಹುದು" ಎಂದು ಅವರು ಎಚ್ಚರಿಸಿದ್ದರು. ಪ್ರಧಾನಿ ಮೋದಿಯವರು ಯುರೋಪ್ ಮತ್ತು ಏಷ್ಯಾದ ಹಲವು ದೇಶಗಳ ಜತೆ ಹೆಚ್ಚೆಚ್ಚು ಸೌಹಾರ್ದತೆ ಸಾಧಿಸಲು ಯತ್ನಿಸುತ್ತಿರುವುದು ಕೂಡಾ ಈ ರೀತಿ ಗುಲಾಮ ದೇಶಗಳಾಗುವ ಸಾಧ್ಯತೆಯನ್ನು ತಪ್ಪಿಸುವ ಉದ್ದೇಶಕ್ಕಾಗಿಯೇ. ತಂತ್ರಜ್ಞಾನದಲ್ಲಿ ಯುರೋಪಿನ ದೇಶಗಳೊಂದಿಗೆ ಸಹಕಾರ ವೃದ್ಧಿಸಿಕೊಂಡು ಚೀನಾ, ಅಮೆರಿಕದ ಮೇಲಿನ ಅವಲಂಬನೆಯನ್ನು ತಪ್ಪಿಸುವುದು ಭಾರತದ ಗುರಿಯಾಗಿದೆ.

ಮೋದಿ ನೇತೃತ್ವದಲ್ಲಿ ಕಳೆದೊಂದು ದಶಕದಲ್ಲಿ ಭಾರತವು 'ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ'(ಡಿಪಿಐ)ಗಳ ಅಭಿವೃದ್ಧಿಯಲ್ಲಿ ಉತ್ತಮ ಬೆಳವಣಿಗೆ ಸಾಧಿಸುತ್ತಾ ಬಂದಿದೆ. ಹಲವಾರು ದೇಶಗಳು ಈಗ ಇದರ ಲಾಭ ಪಡೆಯುತ್ತಿವೆ ಕೂಡಾ. ಆದರೆ ಈಗ ಪರಿಸ್ಥಿತಿ ಬದಲಾಗುತ್ತಿದೆ. ಎಐ, ಸೆಮಿಕಂಡಕ್ಟರ್‌ಗಳು, ಕ್ವಾಂಟಮ್ ಮುಂತಾದ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ನಡೆಯಬೇಕಾದ ಅಗತ್ಯ ಕಂಡುಬಂದಿದೆ. ಭಾರತದಲ್ಲಿ ತಂತ್ರಜ್ಞಾನ ಮಾನವ ಸಂಪನ್ಮೂಲವು ಸಮೃದ್ಧವಾಗಿವೆ. ತನ್ನ ಮೂಲ ಡಿಜಿಟಲ್ ಮೂಲಸೌಕರ್ಯವನ್ನು ವಿಶ್ವದರ್ಜೆಗೆ ಏರಿಸಲೂ ಸಮರ್ಥವಾಗಿದೆ. ಆದರೆ ಸಮಸ್ಯೆ ಕಾಣುತ್ತಿರುವುದು ಎಐ ಅಥವಾ ಸೆಮಿಕಂಡಕ್ಟರ್‌ಗಳ ಉತ್ಪಾದನೆಯಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಕೊಳ್ಳುವಲ್ಲಿ. ಮೋದಿಯವರು ಸದ್ಯಕ್ಕೆ ಈ ಕ್ಷೇತ್ರದ ಮೇಲೆಯೇ ಹೆಚ್ಚು ಗಮನ ಕೇಂದ್ರೀಕರಿಸಿದ್ದಾರೆ. ಅದಕ್ಕಾಗಿ ರಾಷ್ಟ್ರೀಯ ಎಐ ಯೋಜನೆ, ರಾಷ್ಟ್ರೀಯ ಕ್ವಾಂಟಮ್ ಯೋಜನೆ ಮತ್ತು ಅನುಸಂಧಾನ ಸಂಶೋಧನೆ ಹಾಗೂ ಅಭಿವೃದ್ಧಿ ಯೋಜನೆ ಮುಂತಾದವುಗಳನ್ನು ಆರಂಭಿಸಿದ್ದಾರೆ. ಆದರೆ ಮುಖ್ಯವಾಗಿ ಇವೆಲ್ಲವೂ ಸರಕಾರಿ ಪ್ರಾಯೋಜಿತ ಯೋಜನೆಗಳಾಗಿವೆ. ಖಾಸಗಿ ಕಂಪೆನಿಗಳು ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ತೋರಿಲ್ಲ, ಇದು ಭಾರತದ ಪಾಲಿಗೆ ಹಿನ್ನಡೆಯಾಗಿದೆ. ಖಾಸಗಿ ಕಂಪೆನಿಗಳು ಕೂಡಾ ಇತ್ತ ಹೆಚ್ಚು ಗಮನಹರಿಸಬೇಕಾಗಿರುವುದು ಅಗತ್ಯವಾಗಿದೆ.

ಕ್ರಿಕೆಟಿನ ಹೊಸ ಕಣ್ಮಣಿ–ಸೂರ್ಯವಂಶಿ

ರಾಧಾಕೃಷ್ಣ ಬಿ.

ಈ ಬಾರಿಯ ಐಪಿಎಲ್‌ನ ಬಹುತೇಕ ಪಂದ್ಯಗಳು ಮುಗಿದಿವೆ. ಕೊನೆಯ ಎರಡು ಪಂದ್ಯಗಳು ಮಾತ್ರ ಬಾಕಿಯುಳಿದಿವೆ. ಪಂದ್ಯಾವಳಿಗೆ ಮುನ್ನ ದೊಡ್ಡ ಸುದ್ದಿ ಮಾಡಿದ್ದ, ಭಾರೀ ಬೆಲೆಗೆ ಖರೀದಿಯಾಗಿದ್ದ ಆಟಗಾರರನೇಕರು ನಿರಾಶಾಜನಕ ಪ್ರದರ್ಶನ ನೀಡಿ ಮೂಲೆ ಸೇರಿಯಾಗಿದೆ. ಕೆಲವು ಆಟಗಾರರು ಮಾತ್ರ ನಿರೀಕ್ಷೆಗೆ ತಕ್ಕಂತೆ ಆಟ ಪ್ರದರ್ಶಿಸಿದ್ದಾರೆ. ಇನ್ನು ಕೆಲವರು ನಿರೀಕ್ಷೆಗಿಂತಲೂ ಉನ್ನತ ಮಟ್ಟದ ಆಟ ಪ್ರದರ್ಶಿಸಿದ್ದಾರೆ. ಅವರೆಲ್ಲರ ಮಧ್ಯೆ ಈಗ ಎಲ್ಲರ ಮನೆಮಾತಾಗಿ ಕಂಗೊಳಿಸುತ್ತಿರುವುದು ವೈಭವ್ ಸೂರ್ಯವಂಶಿ.

ಲೀಗ್ ಹಂತದಲ್ಲಿ ಉತ್ಕೃಷ್ಟ ಪ್ರದರ್ಶನ ನೀಡುತ್ತಾ ಬಂದ ಸೂರ್ಯವಂಶಿ ಎಲಿಮಿನೇಟರ್ ಪಂದ್ಯದಲ್ಲಂತೂ ತನ್ನ ನಿರ್ವಹಣೆಯನ್ನು ಇನ್ನೊಂದು ಹಂತ ಮೇಲಕ್ಕೊಯ್ದಿದ್ದಾನೆ. ಕೇವಲ 29 ಎಸೆತಗಳಲ್ಲಿ 97 ರನ್ ಬಾರಿಸಿದ ಆತ, ಅತಿವೇಗದ ಶತಕ ದಾಖಲಿಸುವ ಗೈಲ್‌ರ ದಾಖಲೆಯನ್ನು ಮುರಿಯುವುದರಿಂದ ಒಂದು ಎಸೆತದಲ್ಲಿ ವಂಚಿತನಾದ ಬಗ್ಗೆ ಎಲ್ಲರದು ಬೇಸರದ ಮಾತಾದರೂ, ಸೂರ್ಯವಂಶಿ ತಾನೆದುರಿಸಿದ ಮೊದಲ 28 ಎಸೆತಗಳನ್ನು ಉಡಾಯಿಸಿದ ರೀತಿ ಮಾತ್ರ ಮತ್ತೊಂದು ಸ್ತರದ್ದು ಎಂಬುದರಲ್ಲಿ ಎರಡು ಮಾತಿಲ್ಲ.

ಸನ್‌ರೈಸರ್ಸ್ ತಂಡವು ಸೂರ್ಯವಂಶಿಗೆ ಕಡಿವಾಣ ಹಾಕಲು ತನ್ನದೇ ಆದ ಯೋಜನೆ ರೂಪಿಸಿತ್ತೆಂಬುದು ನಿರ್ವಿವಾದ. ರಾಜಸ್ಥಾನದ ವಿರುದ್ಧದ ಮೊದಲೆರಡು ಪಂದ್ಯಗಳಲ್ಲಿ ಸೂರ್ಯವಂಶಿ ಆಟದ ವೈಖರಿಯನ್ನು ಅದಾಗಲೆ ಸನ್‌ರೈಸರ್ಸ್ ಪರಿಚಯಿಸಿಕೊಂಡಿತ್ತು. ಸೂರ್ಯವಂಶಿಯನ್ನು ಬೇಗ ಪೆವಿಲಿಯನ್‌ಗೆ ಮರಳಿಸಿದರೆ ತಮ್ಮ ಗುರಿ ಸಾಧನೆ ಸುಲಭವಾಗಲಿದೆ ಎಂಬುದು ಅವರಿಗೂ ಗೊತ್ತಿತ್ತು. ಆದರೆ ಅವರ ರಣತಂತ್ರವನ್ನು ಪುಡಿಗಟ್ಟಿದ್ದು ಸೂರ್ಯವಂಶಿಯ 'ವೈಭವ'ದ ಸಾಧನೆ.

ಸನ್‌ರೈಸರ್ಸ್‌ನ ನಾಯಕ ಅನುಭವಿ ಬೌಲರ್ ಕಮಿನ್ಸ್ ಸೂರ್ಯವಂಶಿಗೆ ಎಸೆದ ಮೊದಲ ಎರಡೂ ಎಸೆತಗಳು ಯಾರ್ಕರ್. ಸೂರ್ಯವಂಶಿ ಆ ಎಸೆತಗಳಿಗೆ ಕೊಡಬೇಕಾದ ಗೌರವ ಕೊಡದಿರಲಿಲ್ಲ, ಕೇವಲ 1 ರನ್ ಮಾತ್ರ ಬಂತು. ಆದರೆ ಕಮಿನ್ಸ್ ತಮ್ಮ ಲೈನ್‌ನಲ್ಲಿ ಕೆಲವೇ ಸೆಂಟಿಮೀಟರ್‌ಗಳಷ್ಟು ಎಡವಿದಾಗ ಸೂರ್ಯವಂಶಿ ಆ ಚೆಂಡನ್ನು ಕಳಿಸಿದ್ದು ಸಿಕ್ಸರ್‌ಗೆ. ಅಲ್ಲಿಂದ ಬಳಿಕ ಸೂರ್ಯವಂಶಿ ನಡೆಸಿದ್ದು ವಸ್ತುಶಃ ಬೌಲರುಗಳ ಹತ್ಯಾಕಾಂಡವನ್ನೆ. ಬೌನ್ಸರ್, ಶಾರ್ಟ್ ಪಿಚ್ ಎಸೆತ,



ಲೋ ಫುಟ್‌ಟಾಸ್, ಯಾರ್ಕರ್ ... ಮುಂತಾಗಿ ಬೌಲರುಗಳು ಪ್ರಯೋಗಿಸಿದ ವೈವಿಧ್ಯಮಯ ಎಸೆತಗಳೆಲ್ಲವೂ ವಿಧವಿಧವಾಗಿ ಒಂದೋ ಬೌಂಡರಿಗೆ ಇಲ್ಲವೇ ಸಿಕ್ಸರ್‌ಗೆ ಎಗರಿಹೋದವು. ಹಾಗೆ ಶರವೇಗದಲ್ಲಿ ರನ್ ಗಳಿಕೆ ಸಾಗಿದಂತೆ ಹೊಸ ಹೊಸ ದಾಖಲೆಗಳು ಕೂಡಾ ಸೂರ್ಯವಂಶಿ ಹೆಸರಿಗೆ ವರ್ಗಾವಣೆಗೊಳ್ಳುತ್ತಾ ಸಾಗಿದವು.

ಎಲಿಮಿನೇಟರ್ ಪಂದ್ಯದಲ್ಲಿ ಕ್ರೀಸಿಗಿಳಿಯುವ ಮುನ್ನ ಸೂರ್ಯವಂಶಿ ಈ ಐಪಿಎಲ್‌ನಲ್ಲಿ ಅದಾಗಲೆ 232 ಸ್ಟ್ರೈಕ್‌ರೇಟ್‌ನಲ್ಲಿ 583 ರನ್ ಗಳಿಸಿಯಾಗಿತ್ತು. ಐಪಿಎಲ್ ಋತುವೊಂದರಲ್ಲಿ ಅತ್ಯಧಿಕ ಸಿಕ್ಸರ್‌ಗಳ ಗೈಲ್ (59) ದಾಖಲೆ ಮುರಿಯಲು 7 ಸಿಕ್ಸರ್‌ಗಳ ಅಗತ್ಯವಿದ್ದವು. ಪಂದ್ಯ ಶುರುವಾದ ಮೂರು ಓವರುಗಳೊಳಗೆ ಸೂರ್ಯವಂಶಿ ಗೈಲ್‌ರ ಸಿಕ್ಸರ್ ದಾಖಲೆಯನ್ನು ಮುರಿದಾಗಿತ್ತು. ಆತನ ಇನ್ನಿಂಗ್ಸ್ ಮುಗಿದಾಗ ಆತ ಒಟ್ಟು 12 ಸಿಕ್ಸರ್‌ಗಳನ್ನು ತನ್ನ ಬಗಲಲ್ಲಿ ಸೇರಿಸಿಕೊಂಡಾಗಿತ್ತು. ಐಪಿಎಲ್‌ನಲ್ಲಿ ಈವರೆಗೆ ಒಟ್ಟು 680 ರನ್ ಗಳಿಸಿರುವ ಆತ ಈಗ 'ಆರೆಂಜ್ ಕ್ಯಾಪ್'ಧಾರಿ.

ಆದರೆ ಅತಿವೇಗದ ಶತಕ ಬಾರಿಸುವ ಹಾಗೂ ಆ ಮೂಲಕ ಗೈಲ್‌ರ ದಾಖಲೆ ಮುರಿಯುವ ಸಾಧ್ಯತೆಯನ್ನು ಕೇವಲ 3 ರನ್‌ಗಳಿಂದ ಕಳಕೊಳ್ಳುವಂತಾದುದು ಮಾತ್ರ ಕ್ರಿಕೆಟ್ ಪ್ರೇಮಿಗಳ ಪಾಲಿಗೆ ಅತ್ಯಂತ ದುಃಖದ ವಿಷಯವಾಯಿತು. ಸೂರ್ಯವಂಶಿ ಕೂಡಾ ಔಟಾದ ಬಳಿಕ ಕ್ರೀಸ್ ಬಿಡಲೇ ತಯಾರಿಲ್ಲವೆಂಬಂತೆ ವರ್ತಿಸಿದ್ದು, ಪೆವಿಲಿಯನ್‌ನತ್ತ ಅತ್ಯಂತ ನಿರ್ಧಾರ ಹೆಜ್ಜೆ ಹಾಕಿದ್ದು ಆತನಿಗಾದ ನಿರಾಶೆಯನ್ನು ಪ್ರತಿಬಿಂಬಿಸುತ್ತಿತ್ತು.

ಸೂರ್ಯವಂಶಿಯ ಪಾಲಿಗೆ ಇದಿನ್ನೂ ಆರಂಭ. ಹಾಗಾಗಿ ಹೆಚ್ಚಿನ ನಿರಾಶೆ ಬೇಕಾಗಿಲ್ಲ, ಆತ ಸಾಗಬೇಕಾದ ಹಾದಿ ಬಹಳಷ್ಟಿದೆ. ವಯಸ್ಸೂ ಅವನ ಪರವಾಗಿದೆ. ಹಾಗಾಗಿ ಮುಂದಿನ ದಿನಗಳಲ್ಲಿ ಆತನಿಂದ ಇನ್ನಷ್ಟು ದಾಖಲೆಗಳನ್ನು ಖಂಡಿತಾ ನಿರೀಕ್ಷಿಸಬಹುದು.

ಈ ಐಪಿಎಲ್‌ನಲ್ಲಿ ಸೂರ್ಯವಂಶಿ ಈಗಾಗಲೆ ಎಲ್ಲರ ಮನೆಮಾತಾಗಿದ್ದಾನೆ. ಬಹಳಷ್ಟು ಮಂದಿ ಕ್ರಿಕೆಟ್ ಪ್ರೇಮಿಗಳು ಆತನ ಅಭಿಮಾನಿಗಳಾಗಿ ಬದಲಾಗಿದ್ದಾರೆ. ಭಾರತವಷ್ಟೇ ಅಲ್ಲದೆ ವಿದೇಶಗಳಲ್ಲೂ ಆತನ ಅಭಿಮಾನಿಗಳು ಹೆಚ್ಚುತ್ತಿದ್ದಾರೆ.

ಸೂರ್ಯವಂಶಿ ಯಾವುದೇ ಬೌಲರ್‌ನನ್ನು ಎದುರಿಸಲೂ ಅಂಜಿಕೆ ತೋರಿದವನಲ್ಲ. ಬೂಮ್ರಾ, ಕಮಿನ್ಸ್, ಹೇಜಲ್‌ವುಡ್, ಸ್ಟಾರ್ಕ್ ಮುಂತಾಗಿ ವಿಶ್ವವಿಖ್ಯಾತ ಬೌಲರುಗಳನ್ನೆಲ್ಲಾ ಸಿಕ್ಸರ್‌ಗೆತ್ತುವ ಮೂಲಕ ಎಲ್ಲರನ್ನು ಅಚ್ಚರಿಗೆ ಕೆಡವಿದ್ದಾನೆ. ಕ್ರೀಸಿನಲ್ಲಿದ್ದಾಗ ಆತ ಯಾರು ಬೌಲಿಂಗ್ ನಡೆಸುತ್ತಿದ್ದಾರೆಂಬುದನ್ನು ನೋಡುವುದಿಲ್ಲ, ತನ್ನೆಡೆಗೆ ಧಾವಿಸಿ ಬರುವ ಚೆಂಡನ್ನಷ್ಟೇ ಗಮನಿಸುತ್ತಾನೆ. ಅದನ್ನು ಬೌಂಡರಿ ರೇಖೆಯ ಹೊರಗಡೆ ಕಳಿಸುವುದಕ್ಕಷ್ಟೇ ಗಮನ ಕೇಂದ್ರೀಕರಿಸುತ್ತಾನೆ.

ಒಟ್ಟಿನಲ್ಲಿ ಭಾರತಕ್ಕೊಬ್ಬ ಅಪೂರ್ವ ಪ್ರತಿಭೆ ದೊರಕಿದ್ದಾನೆ. ಮೈದಾನದಲ್ಲಿ ತೋರುತ್ತಿರುವ ಅಪ್ರತಿಮ ಆಟ ಸದ್ಯಕ್ಕಂತೂ ಅವನ ತಲೆಕೆಡಿಸಿಲ್ಲ, ಬಾಲ್ಯ ಸಹಜ ಸಂಕೋಚ, ಮುಗ್ಧತೆ, ವಿನಯ ಅವನಲ್ಲಿ ಇನ್ನೂ ಮಾಸಿಲ್ಲ. ಅವನನ್ನು ಜತನದಿಂದ ನೋಡಿಕೊಳ್ಳುವ, ಅವನ ಪ್ರತಿಭೆಯನ್ನು ಸಮರ್ಥವಾಗಿ ಬಳಸಿಕೊಳ್ಳುವ ಹೊಣೆಗಾರಿಕೆಯನ್ನು ದೇಶದ ಕ್ರೀಡಾ ವ್ಯವಸ್ಥೆ ವಹಿಸಿಕೊಳ್ಳಬೇಕಾಗಿದೆ.

ಜನರು ಮಾಡುತ್ತಿದ್ದ ಖರ್ಚು ಶೇ.21 ಇಳಿಕೆ

ಆರೋಗ್ಯ ವೆಚ್ಚದಲ್ಲಿ ಗಮನಾರ್ಹ ಏರಿಕೆ

ಹೊಸದಿಲ್ಲಿ: ಕೇಂದ್ರ ಸರ್ಕಾರದ ಆರೋಗ್ಯ ಕ್ಷೇತ್ರದ ವೆಚ್ಚ ಹೆಚ್ಚಿದಂತೆ, ಜನರು ತಮ್ಮ ಸ್ವಂತ ಹಣದಿಂದ ಮಾಡುವ ಆರೋಗ್ಯ ವೆಚ್ಚದಲ್ಲೂ ಗಮನಾರ್ಹ ಇಳಿಕೆ ಕಂಡುಬಂದಿದೆ. 2013–14ರಲ್ಲಿ ಒಟ್ಟು ಆರೋಗ್ಯ ವೆಚ್ಚದಲ್ಲಿ ಶೇ.64.2 ಇದ್ದ ಸ್ವಯಂ ಖರ್ಚು ಪ್ರಮಾಣವು 2022–23ರಲ್ಲಿ ಶೇ.43.4ಕ್ಕೆ ಇಳಿದಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಬಿಡುಗಡೆ ಮಾಡಿದ ರಾಷ್ಟ್ರೀಯ ಆರೋಗ್ಯ ಲೆಕ್ಕಪತ್ರ ವರದಿ ತಿಳಿಸಿದೆ.

ಸುಮಾರು ಶೇ.21ಕ್ಕೆ ಇಳಿಕೆಯಾದ ಈ ಪ್ರವೃತ್ತಿ, ಆರೋಗ್ಯ ಸೇವೆಗಳ ಲಭ್ಯತೆ ಹೆಚ್ಚಿದ್ದು ಜನರ ಮೇಲಿನ ಆರ್ಥಿಕ ಭಾರ ಕಡಿಮೆಯಾಗುತ್ತಿರುವುದನ್ನು ಸೂಚಿಸುತ್ತದೆ ಎಂದು ಸಚಿವಾಲಯ ಅಭಿಪ್ರಾಯಪಟ್ಟಿದೆ.

ದೇಶಾದ್ಯಂತ 1.8 ಲಕ್ಷಕ್ಕೂ ಅಧಿಕ ಆಯುಷ್ಮಾನ್ ಆರೋಗ್ಯ ಮಂದಿರ ವೆಲ್‌ನೆಸ್ ಕೇಂದ್ರಗಳನ್ನು ಕಾರ್ಯಗತಗೊಳಿಸಿರುವುದೇ ಇದಕ್ಕೆ ಪ್ರಮುಖ ಕಾರಣ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಕೇಂದ್ರಗಳಲ್ಲಿ ತಡೆಗಟ್ಟುವ ಮತ್ತು ಚಿಕಿತ್ಸಾ ಸೇವೆಗಳು ಸಮುದಾಯದ ಹತ್ತಿರದಲ್ಲೇ ಉಚಿತವಾಗಿ ದೊರೆಯುತ್ತಿವೆ.

ಪ್ರಸೂತಿ ಮತ್ತು ಶಿಶು ಆರೋಗ್ಯ, ಸಾಂಕ್ರಾಮಿಕ ಹಾಗೂ ಅಸಾಂಕ್ರಾಮಿಕ ರೋಗಗಳ ಚಿಕಿತ್ಸೆ, ಉಚಿತ ಔಷಧಿ, ಪರೀಕ್ಷಾ ಸೇವೆಗಳು, ಟೆಲಿ-ಕನ್ಸಲ್ಟೇಶನ್ ಹಾಗೂ ಆರೋಗ್ಯ ಜಾಗೃತಿ ಕಾರ್ಯಕ್ರಮಗಳನ್ನು ಒಳಗೊಂಡ 12 ವಿಸ್ತೃತ ಪ್ಯಾಕೇಜ್‌ಗಳ ಸೇವೆಗಳನ್ನು ಈ ಕೇಂದ್ರಗಳು ಒದಗಿಸುತ್ತಿವೆ.

ಆರೋಗ್ಯ ಸಚಿವಾಲಯದ ಪ್ರಕಾರ, ಆರೋಗ್ಯ ಕೇಂದ್ರಗಳಿಂದ ಔಷಧಿ, ವಿಟಮಿನ್, ಪ್ರೋಟೀನ್ ಮತ್ತು ಇತರ ಪೂರಕ ಆಹಾರಗಳ ಖರೀದಿ ಇನ್ನೂ ಸ್ವಯಂ ಖರ್ಚು ಇಳಿಕೆಗೆ ಪ್ರಮುಖ ಕಾರಣವಾಗಿದೆ.

ಜಿಡಿಪಿಯಲ್ಲಿ ಆರೋಗ್ಯ ವೆಚ್ಚ ಹೆಚ್ಚಳ: ವರದಿ ಪ್ರಕಾರ, ದೇಶದ ಒಟ್ಟು ದೇಶೀಯ ಉತ್ಪನ್ನದಲ್ಲಿ ಸರ್ಕಾರದ ಆರೋಗ್ಯ ವೆಚ್ಚದ ಪಾಲು 2013–14ರ ಶೇ.1.15ರಿಂದ 2022–23ರಲ್ಲಿ ಶೇ.1.43ಕ್ಕೆ ಏರಿಕೆಯಾಗಿದೆ. ಇದೇ ಅವಧಿಯಲ್ಲಿ ಒಟ್ಟು ಸರ್ಕಾರಿ ವೆಚ್ಚದಲ್ಲಿ ಆರೋಗ್ಯ ಕ್ಷೇತ್ರದ ಪಾಲು ಶೇ.3.78ರಿಂದ ಶೇ.4.89ಕ್ಕೆ ಹೆಚ್ಚಾಗಿದೆ.

ಪ್ರತಿ ವ್ಯಕ್ತಿಗೆ ಸರ್ಕಾರ ಮಾಡುವ ಆರೋಗ್ಯ ವೆಚ್ಚವೂ 2.7 ಪಟ್ಟು ಏರಿಕೆ ಕಂಡಿದ್ದು, 2013–14ರಲ್ಲಿ 1,042 ರೂ. ಇದ್ದದ್ದು 2022–23ರಲ್ಲಿ 2,786 ರೂ.ಗೆ ತಲುಪಿದೆ.

ಕೋವಿಡ್ ಅವಧಿಯಲ್ಲಿ ಹೆಚ್ಚಿದ ವೆಚ್ಚ: ಕೋವಿಡ್ ಮಹಾಮಾರಿ ಸಂದರ್ಭದಲ್ಲಿಯೂ ಸರ್ಕಾರ ಆರೋಗ್ಯ ಕ್ಷೇತ್ರಕ್ಕೆ ಭಾರೀ ಪ್ರಮಾಣದಲ್ಲಿ ವೆಚ್ಚ ಮಾಡಿತ್ತು. 2021–22ರಲ್ಲಿ ಆರೋಗ್ಯ ವೆಚ್ಚ ಶೇ.1.84ಕ್ಕೆ ಏರಿಕೆಯಾಗಿತ್ತು. ಇದರ ಪರಿಣಾಮವಾಗಿ ಜನರ ಖಾಸಗಿ ವೆಚ್ಚದ ಪ್ರಮಾಣ ಶೇ.39.4ಕ್ಕೆ ಇಳಿದಿತ್ತು ಎಂದು ವರದಿ ಹೇಳಿದೆ.

ಆರೋಗ್ಯ ವಿಮೆ ಬಳಕೆ ಏರಿಕೆ: ಸಾಮಾಜಿಕ ಭದ್ರತಾ ವೆಚ್ಚವೂ 2013–14ರ ಶೇ.6ರಿಂದ 2022–23ರಲ್ಲಿ ಶೇ.9.9ಕ್ಕೆ ಏರಿಕೆಯಾಗಿದೆ. ಖಾಸಗಿ ಆರೋಗ್ಯ ವಿಮೆಯ ಪಾಲು ಸಹ ಶೇ.3.4ರಿಂದ ಶೇ.9.2ಕ್ಕೆ ಏರಿಕೆಯಾಗಿದೆ. ಇದು ಜನರಲ್ಲಿ ಆರೋಗ್ಯ ಜಾಗೃತಿ ಹಾಗೂ ವಿಮೆ ಬಳಕೆಯ ಪ್ರವೃತ್ತಿ ಹೆಚ್ಚುತ್ತಿರುವುದನ್ನು ತೋರಿಸುತ್ತದೆ ಎಂದು ಸಚಿವಾಲಯ ತಿಳಿಸಿದೆ.



ಸುಮಾರು 15,000 ಕೋಟಿ ರೂ. ಮೌಲ್ಯದ ಅತ್ಯಾಧುನಿಕ ಮಧ್ಯಮ ಯುದ್ಧ ವಿಮಾನಗಳ (ಎಎಂಸಿಎ) ನಿರ್ಮಾಣ ಯೋಜನೆಗಾಗಿ ರಕ್ಷಣಾ ಸಚಿವಾಲಯ ಪ್ರಸ್ತಾವನೆಯ ಮನವಿ(ಆರ್‌ಎಫ್‌ಪಿ)ಯನ್ನು ಬುಧವಾರ ಜಾರಿಗೊಳಿಸಿದ್ದು, ಖಾಸಗಿ ರಕ್ಷಣಾ ಉತ್ಪಾದನಾ ಕ್ಷೇತ್ರದ ಪ್ರಮುಖ ಮೂರು ಕಂಪನಿಗಳು ಬಿಡ್ ಪ್ರಕ್ರಿಯೆಗೆ ಶಾರ್ಟ್‌ಲಿಸ್ಟ್ ಆಗಿವೆಯೆಂದು ರಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ. ಇದರಿಂದಾಗಿ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ದೇಶೀಯ ತಂತ್ರಜ್ಞಾನದಿಂದ ನಿರ್ಮಿಸುವ ಐದನೇ ತಲೆಮಾರಿನ ಯುದ್ಧ ವಿಮಾನಗಳ ಯೋಜನೆ ಬುಧವಾರ ಒಂದು ಮಹತ್ವದ ಹಂತವನ್ನು ಪ್ರವೇಶಿಸಿದೆ. ಈ ವಿಚಾರ ಬಗ್ಗೆ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಫೈಟರ್ ಜೆಟ್ ನಿರ್ಮಾಣ: ಖಾಸಗಿ ಸಂಸ್ಥೆಗಳ ತೆಕ್ಕೆಗೆ?

ಖಾಸಗಿ ಕಂಪನಿಗಳು ಶಾರ್ಟ್‌ಲಿಸ್ಟ್

ಖಾಸಗಿ ರಕ್ಷಣಾ ಉತ್ಪಾದನೆಗೆ ಉತ್ತೇಜಿಸುವ ಉದ್ದೇಶದಿಂದ ರಕ್ಷಣಾ ಇಲಾಖೆಯು ಖಾಸಗಿ ಕಂಪನಿಗಳಿಗೆ ಬಿಡ್ಡಿಂಗ್ ಅವಕಾಶ ನೀಡಿರುವ ಸಾಧ್ಯತೆಯಿದೆ. ಟಾಟಾ, ಲಾರ್ಸನ್ ಆ್ಯಂಡ್ ಟರ್ಬೊ(ಎಲ್ ಆ್ಯಂಡ್ ಟಿ) ಮತ್ತು ಭಾರತ್ ಫೋರ್ಜ್ (ಬಿಇಎಂಎಲ್ ಜತೆ ಪಾಲುದಾರಿಕೆ) ಬಿಡ್ಡಿಂಗ್ ಪ್ರಕ್ರಿಯೆಗೆ ಶಾರ್ಟ್‌ಲಿಸ್ಟ್ ಆಗಿರುವ ಕಂಪನಿಗಳಾಗಿವೆ. ಜೂ.11ರಿಂದ ಬಿಡ್ಡಿಂಗ್ ಆರಂಭವಾಗಲಿದ್ದು, ಈಗಾಗಲೇ ಆಯ್ಕೆ ಆಗಿರುವ ಟಾಟಾ, ಎಲ್ ಆ್ಯಂಡ್ ಟಿ ಮತ್ತು ಭಾರತ್ ಫೋರ್ಜ್‌ಗಷ್ಟೇ ಅವಕಾಶ ನೀಡಲಾಗುವುದು. ಜು.28ರ ವೇಳೆಗೆ ಬಿಡ್ಡಿಂಗ್ ಕಾಲಾವಕಾಶ ಕೊನೆಗೊಳ್ಳಲಿದೆ. ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಖಾಸಗಿ ಸಂಸ್ಥೆ ರಕ್ಷಣಾ ಸಚಿವಾಲಯದ ಅನ್ವಯ ಕಾರ್ಯಾಚರಿಸುವ ವೈಮಾನಿಕ ಅಭಿವೃದ್ಧಿ ಸಂಸ್ಥೆಯ(ಎಡಿಎ) ಜತೆಗೂಡಿ ಕೆಲಸ ಮಾಡಬೇಕಾಗುತ್ತದೆ. ಯೋಜನೆಗೆ ಸೂಕ್ತ ಖಾಸಗಿ ರಕ್ಷಣಾ ಸಂಸ್ಥೆಯ ಆಯ್ಕೆ ಪ್ರಕ್ರಿಯೆ 4ರಿಂದ 5 ತಿಂಗಳ ಸಮಯ ತೆಗೆದುಕೊಳ್ಳಲಿದೆ.

ಅತ್ಯಾಧುನಿಕ 5ನೇ ತಲೆಮಾರಿನ ಯುದ್ಧ ವಿಮಾನಗಳು

- ಎಫ್-35 ಲೈಟ್ನಿಂಗ್-2(ಅಮೆರಿಕ): ಗುಪ್ತ ಯುದ್ಧ ವಿಮಾನ ಮತ್ತು ಸೂಪರ್‌ಕ್ರೂಸ್.
- ಎಫ್-22 ರ್‍ಯಾಪ್ಟರ್ (ಅಮೆರಿಕ): ಗುಪ್ತ ಯುದ್ಧ ವಿಮಾನ ಮತ್ತು ಸೂಪರ್‌ಕ್ರೂಸ್.
- ಸುಖೋಯ್ ಎಸ್‌ಯು-57 (ರಷ್ಯಾ): ಗುಪ್ತ ಯುದ್ಧ ವಿಮಾನ ಮತ್ತು ಸೂಪರ್‌ಕ್ರೂಸ್.
- ಚೆಂಗ್ಡು ಜೆ-20 (ಚೀನಾ): ಗುಪ್ತ ಯುದ್ಧ ವಿಮಾನ ಮತ್ತು ಸೂಪರ್ ಕ್ರೂಸ್.
- ಎಎಂಸಿಎ (ಭಾರತ): ಗುಪ್ತ ಯುದ್ಧ ವಿಮಾನ ಮತ್ತು ಸೂಪರ್‌ಕ್ರೂಸ್ ಯುದ್ಧ ವಿಮಾನಗಳ ನಿರ್ಮಾಣ ಯೋಜನೆ ಜಾರಿಯಲ್ಲಿದೆ.

ಸ್ಟೆಲ್ತ್‌ಗೂ ಮತ್ತು ಸೂಪರ್‌ಕ್ರೂಸ್‌ಗೂ ಏನು ವ್ಯತ್ಯಾಸ?

ಸ್ಟೆಲ್ತ್ (ಗುಪ್ತ) ಯುದ್ಧ ವಿಮಾನಗಳೂ ಯಾವುದೇ ರಡಾರ್ ವ್ಯೂಹಗಳನ್ನು ಭೇದಿಸಿ ಯಾರಿಗೂ ಕಾಣದಂತೆ ಗುರಿಯನ್ನು ನಾಶ ಮಾಡಿ ಹಿಂದಿರುಗುವ ಸಾಮರ್ಥ್ಯವನ್ನು ಹೊಂದಿದ್ದರೆ, ಸೂಪರ್‌ಕ್ರೂಸ್ ಯುದ್ಧ ವಿಮಾನಗಳು ಸೂಪರ್‌ಸೋನಿಕ್ ವೇಗದಲ್ಲಿ ಸಂಚರಿಸುವ ಸಾಮರ್ಥ್ಯ ಹೊಂದಿರುತ್ತವೆ. ಭಾರತದ ಎಎಂಸಿಎ ಎರಡೂ ಸಾಮರ್ಥ್ಯ ಹೊಂದಿರುವ ಸಾಧ್ಯತೆಯಿದೆ.

ಖಾಸಗಿ ರಕ್ಷಣಾ ಉತ್ಪಾದನೆಯಲ್ಲಿ ಇದು ಮಹತ್ವದ ಬೆಳವಣಿಗೆ | 15,000 ಕೋಟಿ ರೂ. ವೆಚ್ಚದಲ್ಲಿ ಎಎಂಸಿಎ ನಿರ್ಮಾಣ ಯೋಜನೆ

ಪ್ರಸ್ತುತ ಐಎಎಫ್ ಯುದ್ಧ ವಿಮಾನಗಳ ಸಮೂಹ

1. **ಸುಖೋಯ್-30ಎಂಕೆಐ:** ಇದು 4+ ತಲೆಮಾರಿನ ಯುದ್ಧ ವಿಮಾನವಾಗಿದೆ. ವಾಯು ಪ್ರಾಧಾನ್ಯತೆ ಮತ್ತು ಪರಿಣಾಮಕಾರಿ ದಾಳಿ ಮಾಡುವುದು ಇದರ ಪ್ರಮುಖ ಪಾತ್ರವಾಗಿದೆ. ದೀರ್ಘ ದೂರವ್ಯಾಪ್ತಿ, ಹೆಚ್ಚು ಪೇಲೋಡ್ ಮತ್ತು ಅಸಾಧಾರಣ ಯುದ್ಧ ಚಲನಶೀಲತೆ ಅಥವಾ ಕಸರತ್ತು ಸಾಮರ್ಥ್ಯ ಹೊಂದಿರುತ್ತದೆ. ಇದು ವಾಯುಪಡೆಯ ಯುದ್ಧ ವಿಮಾನಗಳ ಫ್ಲೀಟ್‌ನ ಬೆನ್ನೆಲುಬಾಗಿದೆ.
2. **ದಸ್ಸಾಲ್ಟ್ ರಾಫೆಲ್:** ಇದು 4.5 ತಲೆಮಾರಿನ ಅತ್ಯಾಧುನಿಕ ಯುದ್ಧ ವಿಮಾನ. ಇದು ಹಲವು ಪಾತ್ರಗಳನ್ನು ನಿರ್ವಹಿಸಬಲ್ಲದು. ಇದರಲ್ಲಿ ಎಇಎಸ್‌ಎ ರಡಾರ್, ಅತ್ಯಾಧುನಿಕ ಇಡಬ್ಲ್ಯು ಸೂಟ್, ಸಂಪರ್ಕಜಾಲ ಆಧಾರಿತ ಯುದ್ಧ ಸಾಮರ್ಥ್ಯ ಹೊಂದಿದೆ. ಸದ್ಯ ಐಎಎಫ್‌ನಲ್ಲಿ ಕಾರ್ಯನಿರ್ವಹಿಸುತ್ತಿದೆ.
3. **ಎಚ್‌ಎಎಲ್ ತೇಜಸ್ ಎಂಕೆ-1/ಎಂಕೆ-1ಎ:** ಇದು 4ನೇ ತಲೆಮಾರಿನ ಯುದ್ಧ ವಿಮಾನಗಳಲ್ಲೊಂದು. ವಾಯು ಪ್ರದೇಶ ರಕ್ಷಣೆ ಸಹಿತ ಹಲವು ಪಾತ್ರಗಳನ್ನು ನಿಭಾಯಿಸಬಲ್ಲ ಸಾಮರ್ಥ್ಯವಿದೆ. ದೇಸಿ ವಿನ್ಯಾಸ, ಆಧುನಿಕ ಏವಿಯೋನಿಕ್ಸ್ ಹೊಂದಿರುವ ಹಗುರವಾದ ಯುದ್ಧ ವಿಮಾನ. ಐಎಎಫ್‌ನಲ್ಲಿ ನಿಯೋಜನೆ ಮಾಡಲಾಗಿದ್ದು, ಎಂಕೆ-1ಎ ಪೂರೈಕೆ ಆಗಬೇಕಿದೆ.
4. **ಮಿಗ್-29 (ಯುಪಿಜಿ):** ಇದು 4ನೇ ತಲೆಮಾರಿನ ಯುದ್ಧ ವಿಮಾನವಾಗಿದೆ. ವಾಯು ರಕ್ಷಣೆ ಇದರ ಪ್ರಮುಖ ಪಾತ್ರ. ಆಧುನಿಕ ರಡಾರ್, ಸುಧಾರಿತ ಏವಿಯೋನಿಕ್ಸ್ ಮತ್ತು ಶಸ್ತ್ರಾಸ್ತ್ರ ವ್ಯವಸ್ಥೆ ಒಳಗೊಂಡಿದೆ. ಮುಂದಿನ ಆವೃತ್ತಿಯ ಮಿಗ್-29 ಶೀಘ್ರ ಐಎಎಫ್‌ನಲ್ಲಿ ಕಾರ್ಯಾಚರಿಸಲಿವೆ.
5. **ಮಿರಾಜ್ 2000 (ಐ/ಟಿಐ):** ಇದು 4ನೇ ತಲೆಮಾರಿನ ಫೈಟರ್ ಜೆಟ್ ಆಗಿದ್ದು, ದಾಳಿ ಸಹಿತ ಒಂದಕ್ಕಿಂತ ಹೆಚ್ಚು ಪಾತ್ರ ನಿಭಾಯಿಸಬಲ್ಲದು. ನಿಖರ ದಾಳಿ ಸಾಮರ್ಥ್ಯ ಹೊಂದಿದ್ದು, ಸದ್ಯ ಐಎಎಫ್‌ನಲ್ಲಿ ಕಾರ್ಯಾಚರಿಸುತ್ತಿದೆ.
6. **ಜಾಗ್ವಾರ್ (ಡಾರಿನ್-3):** ಇದು 3+/4ನೇ ತಲೆಮಾರಿನ ಯುದ್ಧ ವಿಮಾನ. ಆಳವಾದ ಪರಿಣಾಮಕಾರಿ ದಾಳಿ ನಡೆಸುವುದು ಇದರ ಮುಖ್ಯ ಪಾತ್ರವಾಗಿದೆ. ದೀರ್ಘ ದೂರವ್ಯಾಪ್ತಿ ದಾಳಿ, ಆಧುನಿಕ ಕಣ್ಗಾವಲು ವ್ಯವಸ್ಥೆ ಹಾಗೂ ದಾಳಿ ವ್ಯವಸ್ಥೆಯನ್ನು ಹೊಂದಿದೆ. ಸದ್ಯ ಐಎಎಫ್‌ನಲ್ಲಿ ಕಾರ್ಯಾಚರಿಸುತ್ತಿದ್ದು, ಶೀಘ್ರ ಸೇವೆಯಿಂದ ನಿವೃತ್ತಿ ನೀಡುವ ಸಾಧ್ಯತೆಯಿದೆ.



ಡಿಆರ್‌ಡಿಒ/ಎಡಿಎ ವಿನ್ಯಾಸ ಮತ್ತು ನೈಪುಣ್ಯ

ಅತ್ಯಾಧುನಿಕ ಮಧ್ಯಮ ಯುದ್ಧ ವಿಮಾನಗಳ ಯೋಜನೆಯಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಅನ್ವಯ ಕಾರ್ಯಾಚರಿಸುವ ವೈಮಾನಿಕ ಅಭಿವೃದ್ಧಿ ಸಂಸ್ಥೆಯ (ಎಡಿಎ) ವಿನ್ಯಾಸ ಮತ್ತು ನೈಪುಣ್ಯ ಬಳಸಿಕೊಳ್ಳಲಾಗುವುದು. ಬಿಡ್ ಗೆಲ್ಲುವ ಖಾಸಗಿ ರಕ್ಷಣಾ ಸಂಸ್ಥೆ, ಯುದ್ಧ ವಿಮಾನಗಳ ಹಾರಾಟ ಪರೀಕ್ಷೆ ಮತ್ತು ಪ್ರಮಾಣಪತ್ರ ಇತ್ಯಾದಿ ಚಟುವಟಿಕೆಗಳ ಜವಾಬ್ದಾರಿ ವಹಿಸಿಕೊಳ್ಳಲಿವೆ.

2027ರ ವೇಳೆಗೆ ಮೊದಲ ಮಾದರಿ?

ಎಎಂಸಿಎ ಮೊದಲ ಮಾದರಿ 2027ರಲ್ಲಿ ಪೂರ್ಣಗೊಳ್ಳಲಿದೆ. ಇದರ ಮೊದಲ ಹಾರಾಟ 2028–29ರೊಳಗೆ ನಡೆಯಲಿದೆ. 2030ರ ನಡುವೆ ಇಂತಹಾ ಯುದ್ಧ ವಿಮಾನಗಳ ಸರಣಿ ಉತ್ಪಾದನೆ ಆರಂಭವಾಗಲಿದೆ.

ಎಎಂಸಿಎ ಯುದ್ಧ ವಿಮಾನಗಳ ವಿಶೇಷತೆ

- ತಲೆಮಾರು: 5/5.5ನೇ ತಲೆಮಾರಿನ ಯುದ್ಧ ವಿಮಾನಗಳು
- ಗರಿಷ್ಠ ವೇಗ: ಮ್ಯಾಕ್-2
- ಯುದ್ಧ ಪರಿಧಿ: 1,000+ ಕಿ.ಮೀ.
- ಶಸ್ತ್ರಾಸ್ತ್ರಗಳು: ಕ್ಷಿಪಣಿಗಳು, ಬಾಂಬ್‌ಗಳು
- ಆಂತರಿಕ ಶಸ್ತ್ರ ಸಾಮರ್ಥ್ಯ: 1,500 ಕೆ.ಜಿ.
- ಬಾಹ್ಯ ಶಸ್ತ್ರ ಸಾಮರ್ಥ್ಯ: 5,500 ಕೆ.ಜಿ.
- ಆಪರೇಷನಲ್ ಸೀಲಿಂಗ್: 55,000 ಫೀಟ್

ಸೋರಿಕೆ ವಿವಾದದ ಬಳಿಕ ಕೇಂದ್ರದ ಮಹತ್ವದ ಚಿಂತನೆ

ನೀಟ್ ಪ್ರಶ್ನೆಪತ್ರಿಕೆ ಸಾಗಣೆಗೆ ಸೇನಾ ಲಾಜಿಸ್ಟಿಕ್ಸ್ ಬಳಕೆ?

ಹೊಸದಿಲ್ಲಿ: ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ವಿವಾದ ದೇಶವ್ಯಾಪಿ ಆಕ್ರೋಶಕ್ಕೆ ಕಾರಣವಾಗಿರುವ ನಡುವೆಯೇ, ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಪ್ರಶ್ನೆಪತ್ರಿಕೆಗಳ ಸಾಗಣೆಗೆ ಸೇನಾ ಲಾಜಿಸ್ಟಿಕ್ಸ್ ವ್ಯವಸ್ಥೆ ಬಳಸುವ ಬಗ್ಗೆ ಕೇಂದ್ರ ಸರ್ಕಾರ ಗಂಭೀರ ಚಿಂತನೆ ನಡೆಸುತ್ತಿದೆ ಎಂದು ವರದಿಯಾಗಿದೆ. ಪ್ರಸ್ತುತ ಪ್ರಶ್ನೆಪತ್ರಿಕೆಗಳನ್ನು ಮುದ್ರಣ ಕೇಂದ್ರಗಳಿಂದ ಪರೀಕ್ಷಾ ಕೇಂದ್ರಗಳಿಗೆ ಖಾಸಗಿ ಲಾಜಿಸ್ಟಿಕ್ಸ್ ಜಾಲದ ಮೂಲಕ ರವಾನಿಸಲಾಗುತ್ತದೆ. ಆದರೆ, ನೀಟ್-ಯುಜಿ 2026 ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ನಂತರ ಈ ವ್ಯವಸ್ಥೆಯ ಸುರಕ್ಷತೆ ಕುರಿತು ಪ್ರಶ್ನೆಗಳು ಎದ್ದಿವೆ. ಇದರಿಂದಾಗಿ ರಕ್ಷಣಾ ಪಡೆಗಳ ನಿಯಂತ್ರಣದಲ್ಲಿರುವ ಭದ್ರ ಸಾಗಣೆ ವ್ಯವಸ್ಥೆಯನ್ನು ಬಳಸುವ ಸಾಧ್ಯತೆಗಳನ್ನು ಕೇಂದ್ರ ಪರಿಶೀಲಿಸುತ್ತಿದೆ ಎನ್ನಲಾಗಿದೆ. ಪ್ರಶ್ನೆಪತ್ರಿಕೆ ಸಾಗಣೆ, ಸಂಗ್ರಹಣೆ ಮತ್ತು ವಿತರಣೆಯ ಪ್ರತಿಯೊಂದು ಹಂತಕ್ಕೂ ಕಠಿಣ ಡಿಜಿಟಲ್ ಟ್ರ್ಯಾಕಿಂಗ್, ಜಿಪಿಎಸ್ ನಿಗಾವ್ಯವಸ್ಥೆ ಹಾಗೂ ಬಹುಪದರ ಭದ್ರತಾ ಕ್ರಮಗಳನ್ನು ಜಾರಿಗೆ ತರುವ ಕುರಿತೂ ಚರ್ಚೆಗಳು ನಡೆದಿವೆ. ಮುಂದಿನ ವರ್ಷದಿಂದ ನೀಟ್ ಪರೀಕ್ಷೆಯನ್ನು ಸಂಪೂರ್ಣ ಕಂಪ್ಯೂಟರ್ ಆಧಾರಿತ ಮಾದರಿಗೆ ಪರಿವರ್ತಿಸುವ ಪ್ರಸ್ತಾವನೆಯೂ ಕೇಂದ್ರದ ಮುಂದಿದೆ ಎಂದು ಮೂಲಗಳು ಹೇಳಿವೆ. ಇತ್ತೀಚೆಗೆ ನಡೆದ ನೀಟ್-ಯುಜಿ 2026 ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂಬ ಆರೋಪದ ಹಿನ್ನೆಲೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ತೀವ್ರ ಟೀಕೆಗೆ ಗುರಿಯಾಗಿದೆ. ಪ್ರಕರಣದ ತನಿಖೆಯನ್ನು ಸಿಬಿಐ ಕೈಗೆತ್ತಿಕೊಂಡಿದ್ದು, ಈಗಾಗಲೇ ಹಲವರನ್ನು ಬಂಧಿಸಲಾಗಿದೆ.

ಕಿರುಸುದ್ದಿ

ಇಡಿ ಅಧಿಕಾರಿಗಳ ಮೇಲೆ ದಾಳಿ: 8 ಮಂದಿ ಬಂಧನ

ತಿರುವನಂತಪುರಂ: ಕೇರಳ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ನಿವಾಸದಲ್ಲಿ ಶೋಧ ಕಾರ್ಯ ನಡೆಸಿ ಹಿಂತಿರುಗುವ ವೇಳೆ ಇಡಿ ಅಧಿಕಾರಿಗಳು ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ವಾಹನಗಳ ಮೇಲೆ ಸಿಪಿಎಂ ದುಷ್ಕರ್ಮಿಗಳು ನಡೆಸಿದ ದಾಳಿಗೆ ಸಂಬಂಧಿಸಿ ಈ ವರೆಗೆ ಎಂಟು ಮಂದಿಯನ್ನು ಬಂಧಿಸಲಾಗಿದೆ. ಉಳಿದವರನ್ನೂ ಶೀಘ್ರವೇ ಬಂಧಿಸಲಾಗುವುದು ಎಂದು ಕೇರಳ ಡಿಜಿಪಿ ರಾವಡ ಎ .ಚಂದ್ರಶೇಖರ್ ತಿಳಿಸಿದ್ದಾರೆ. ದುಷ್ಕರ್ಮಿಗಳಿಗೆ ಸೂಕ್ತ ಶಿಕ್ಷೆಯಾಗುವಂತೆ ಮಾಡಲಾಗುವುದು ಎಂದೂ ಅವರು ಹೇಳಿದ್ದಾರೆ. ಈ ದಾಳಿಗೆ ಭದ್ರತಾ ವೈಫಲ್ಯವೇ ಕಾರಣ ಎಂಬುದನ್ನು ನಿರಾಕರಿಸಿದ ಅವರು , ಈ ದಾಳಿ ಬಗ್ಗೆ ಇಡಿಯಿಂದ ಮಾಹಿತಿ ಇರಲಿಲ್ಲ ಎಂದು ಹೇಳಿಕೊಂಡರು. ಆದಾಗ್ಯೂ ಮಾಹಿತಿ ಲಭಿಸಿದ ಕೂಡಲೇ ಸೂಕ್ತ ಭದ್ರತೆ ಒದಗಿಸಿದ್ದು, 300ಮಂದಿ ಪೊಲೀಸರನ್ನು ನಿಯೋಜಿಸಿರುವುದಾಗಿ ನುಡಿದರು.ಈ ದಾಳಿ ತಡೆಯುವಲ್ಲಿ ಕೇರಳ ಪೊಲೀಸ್ ಇಲಾಖೆ ಸೂಕ್ತ ಮುನ್ನೆಚ್ಚರಿಕೆ ವಹಿಸದಿದ್ದುದೇ ಕಾರಣ ಎಂಬ ಆರೋಪ ಕೇಳಿಬಂದಿತ್ತು.

ಹಾರ್ಮುಜ್ ಮೂಲಕ ಸುರಕ್ಷಿತ ವ್ಯಾಪಾರ ಮುಖ್ಯ

ಹೊಸದಿಲ್ಲಿ: ಹಾರ್ಮುಜ್ ಜಲಸಂಧಿಯ ಮೂಲಕ ತಡೆರಹಿತ ಹಾಗೂ ಸುರಕ್ಷಿತ ವ್ಯಾಪಾರ ಬಹಳ ಅವಶ್ಯಕ, ಪಶ್ಚಿಮ ಏಷ್ಯಾ ವಿಚಾರದಲ್ಲಿ ವಿಶೇಷ ಗಮನಹರಿಸಬೇಕು ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಅಜಿತ್ ದೋವಲ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ರಷ್ಯಾ ರಾಜಧಾನಿ ಮಾಸ್ಕೋದಲ್ಲಿ ನಡೆದ ಭದ್ರತೆಯ ಉನ್ನತ ಪ್ರತಿನಿಧಿಗಳ 14ನೇ ಹಾಗೂ ಅಂತಾರಾಷ್ಟ್ರೀಯ ಭದ್ರತಾ ವೇದಿಕೆಯ ಮೊದಲ ಸಭೆಯಲ್ಲಿ ಭಾರತವನ್ನು ಪ್ರತಿನಿಧಿಸಿ ಮಾತನಾಡಿದ ದೋವಲ್, ಹಾರ್ಮುಜ್ ಮತ್ತು ಕೆಂಪು ಸಮುದ್ರ ಸಹಿತ ಅಂತಾರಾಷ್ಟ್ರೀಯ ಜಲಮಾರ್ಗಗಳಲ್ಲಿ ತಡೆರಹಿತ ಮತ್ತು ಸುರಕ್ಷಿತ ವ್ಯಾಪಾರ ಖಚಿತಪಡಿಸುವುದು ಬಹಳ ಅವಶ್ಯಕ ಎಂದು ಹೇಳಿದ್ದಾರೆ. ಅಂತಾರಾಷ್ಟ್ರೀಯ ಅಪಾಯಗಳನ್ನು ಎದುರಿಸುವಲ್ಲಿ ಮತ್ತು ಜಾಗತಿಕ ದಕ್ಷಿಣವನ್ನು ಪ್ರತಿನಿಧಿಸುವಲ್ಲಿ ನಾವು ಇನ್ನಷ್ಟು ಪರಿಣಾಮಕಾರಿ ಆಗಬೇಕು. ದ್ವಿತೀಯ ವಿಶ್ವಯುದ್ಧ ಬಳಿಕ ಜಾಗತಿಕ ಸುಧಾರಣೆಗಾಗಿ ಹಲವು ಸಂಸ್ಥೆಗಳನ್ನು ಕಟ್ಟಲಾಯಿತೆಂದು ದೋವಲ್ ಉಲ್ಲೇಖಿಸಿದ್ದಾರೆ.

ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಇಬ್ಬಗೆಯ ನೀತಿ ಸಲ್ಲದು ಎಂಬ ಭಾರತದ ನಿಲುವನ್ನು ಅಜಿತ್ ದೋವಲ್ ಅಂತಾರಾಷ್ಟ್ರೀಯ ಭದ್ರತಾ ವೇದಿಕೆಯಲ್ಲಿ ಪುನರುಚ್ಚರಿಸಿದ್ದಾರೆ. ಚೀನಾ ಇಬ್ಬಗೆಯ ನೀತಿ ಮತ್ತು ಭಯೋತ್ಪಾದನೆ ಪೋಷಿಸುವ ಪಾಕಿಸ್ತಾನವನ್ನು ನೇರ ಉಲ್ಲೇಖಿಸದೆ ದೋವಲ್ ಭಾರತದ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಭಯೋತ್ಪಾದನೆಗೆ ಬೆಂಬಲಿಸುವುದೋ ಅಥವಾ ಅದರ ವಿರುದ್ಧ ಹೋರಾಡುವುದೋ ಆ ರಾಷ್ಟ್ರಗಳು ನಿರ್ಧರಿಸಬೇಕು ಎಂದಿದ್ದಾರೆ.

ಭಾರತ, ಚೀನಾ ನಡುವೆ ಎಲ್‌ಒಸಿ ಕುರಿತು ಚರ್ಚೆ

ಹೊಸದಿಲ್ಲಿ: ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯ ಗಡಿ ಪರಿಸ್ಥಿತಿ ಕುರಿತು ಚರ್ಚಿಸಲು ಭಾರತ ಮತ್ತು ಚೀನಾ ಬುಧವಾರ ಬೀಜಿಂಗ್‌ನಲ್ಲಿ ರಾಜತಾಂತ್ರಿಕ ಮಾತುಕತೆ ನಡೆಸಿವೆ.

ವರ್ಕಿಂಗ್ ಮೆಕಾನಿಸಂ ಫಾರ್ ಕನ್ಸಲ್ಟೇಶನ್ ಅಂಡ್ ಕೋಆರ್ಡಿನೇಷನ್ ಸಭೆ, ಗಡಿ ಪ್ರದೇಶಗಳ ಪರಿಶೀಲನೆಯ ಮೇಲೆ ಬೆಳಕು ಚೆಲ್ಲಿತು. ಗಡಿಯಲ್ಲಿ ಶಾಂತಿ ಕಾಪಾಡುವುದು ಒಟ್ಟಾರೆ ಬಾಂಧವ್ಯದ ಸಹಜ ಸ್ಥಿತಿಗೆ ಸಹಕಾರಿ ಎಂದು ಉಭಯ ದೇಶಗಳ ಪ್ರತಿನಿಧಿಗಳು ಅಭಿಪ್ರಾಯಪಟ್ಟಿದ್ದಾರೆ.

ಚೀನಾದಲ್ಲಿ ನಡೆಯಲಿರುವ ಮುಂದಿನ ವಿಶೇಷ ಪ್ರತಿನಿಧಿಗಳ ಸಭೆಗೆ ಸಿದ್ಧತೆ ನಡೆಸಲು ಉಭಯ ದೇಶಗಳು ಒಪ್ಪಿಕೊಂಡಿವೆ. ಈ ಮಾತುಕತೆ, ಗಡಿ ನಿರ್ಣಯ, ಗಡಿ ನಿರ್ವಹಣೆ ಮತ್ತು ಗಡಿಯಾಚೆಗಿನ ಸಹಕಾರವನ್ನು ಒಳಗೊಂಡಿತ್ತು ಎಂದು ತಿಳಿದುಬಂದಿದೆ. ಭಾರತ ಗಡಿಯಾಚೆಗಿನ ನದಿಗಳ ಕುರಿತು ಶೀಘ್ರದಲ್ಲೇ ತಜ್ಞರ ಮಟ್ಟದ ಸಭೆ ನಡೆಸುವಂತೆ ವಿನಂತಿಸಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಿತ್ ಘೋಷ್, ಭಾರತೀಯ ನಿಯೋಗದ ನೇತೃತ್ವ ವಹಿಸಿದ್ದರು. ಚೀನಾದ ಅಧಿಕಾರಿಗಳಾದ ಹೌ ಯಾನ್ಕಿ, ಲಿಯು ಜಿನ್ಸಾಂಗ್ ಮತ್ತು ಹಾಂಗ್ ಲೀ ಅವರನ್ನು ನಿಯೋಗ ಭೇಟಿಯಾಯಿತು.

ಈ ಸಭೆ, 2024 ರ ಡೆಪ್ಸಾಂಗ್ ಮತ್ತು ಡೆಮ್‌ಚೋಕ್ ಗಡಿ ವಾಪಸಾತಿ ಒಪ್ಪಂದದ ಮುಂದುವರಿದ ಭಾಗ. 2020 ರ ಗಲ್ವಾನ್ ಕಣಿವೆ ಸಂಘರ್ಷ ಮತ್ತು ನಾಲ್ಕು ವರ್ಷಗಳ ಮಿಲಿಟರಿ ಮುಖಾಮುಖಿಯ ನಂತರ ಹಳಸಿದ್ದ ಬಾಂಧವ್ಯವನ್ನು ಸರಿದಾರಿಗೆ ತರಲು ಪ್ರಯತ್ನ ನಡೆದಿದೆ.

ಗೋ ಹತ್ಯೆ ನಿಷೇಧಕ್ಕೆ ಮದ್ರಾಸ್ ಹೈ ಆದೇಶ

ಚೆನ್ನೈ: ಹಾಲುತ್ಪಾದನೆ ಮತ್ತು ಗ್ರಾಮೀಣ ಆರ್ಥಿಕತೆಯ ಸುಧಾರಣೆ ಹಿನ್ನೆಲೆಯಲ್ಲಿ ಗೋಹತ್ಯೆಯನ್ನು ನಿಷೇಧಿಸಿ ತಮಿಳುನಾಡು ಸರಕಾರ 1976ರ ಆ.30ರಂದು ಹೊರಡಿಸಿರುವ ಆದೇಶವನ್ನು ಅನುಷ್ಠಾನಿಸಬೇಕು. ತನ್ಮೂಲಕ ಬಕ್ರೀದ್ ಮತ್ತಿತರ ಹಬ್ಬದ ದಿನಗಳಲ್ಲಿ ರಾಜ್ಯದಲ್ಲಿ ಗೋವು, ಕರುಗಳ ಹತ್ಯೆಯಾಗದಂತೆ ತಡೆಯಬೇಕೆಂದು ಮದ್ರಾಸ್ ಹೈಕೋರ್ಟ್ ತಮಿಳುನಾಡು ಸರಕಾರಕ್ಕೆ ಮಹತ್ವದ ಆದೇಶವಿತ್ತಿದೆ. ನ್ಯಾಯಾಲಯದ ಆದೇಶ ಯಾವ



ಕಾರಣಕ್ಕೂ ಉಲ್ಲಂಘನೆಯಾಗಕೂಡದು ಮತ್ತು ಈ ನಿಟ್ಟಿನಲ್ಲಿ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಅಗತ್ಯ ನಿರ್ದೇಶ ನೀಡುವಂತೆ, ಹೈಕೋರ್ಟ್‌ನ ನ್ಯಾಯಮೂರ್ತಿ ಜಿ.ಆರ್.ಸ್ವಾಮಿನಾಥನ್ ಮತ್ತು ವಿ.ಲಕ್ಷ್ಮೀನಾರಾಯಣನ್ ಅವರನ್ನು ಒಳಗೊಂಡ ನ್ಯಾಯಪೀಠ ರಾಜ್ಯ ಸರ್ಕಾರದ ಮುಖ್ಯಕಾರ್ಯದರ್ಶಿ ಹಾಗೂ ಹೆಚ್ಚುವರಿ ಡಿಜಿಪಿ ಅವರಿಗೆ ಆದೇಶಿಸಿದೆ. ಬಕ್ರೀದ್ ಅಥವಾ ಯಾವುದೇ ಇತರ ದಿನಗಳಲ್ಲಿ ಗೋವು ಅಥವಾ ಕರುಗಳ ಹತ್ಯೆಯಾಗಕೂಡದೆಂದು ರಾಜ್ಯ ಸರಕಾರಕ್ಕೆ ನಿರ್ದೇಶ ಹೊರಡಿಸುವುದರೊಂದಿಗೆ, ಈ ಕುರಿತ ಮೇಲ್ಮನವಿಯನ್ನು ನ್ಯಾಯಾಲಯ ವಿಚಾರಣೆಗೆ ಎತ್ತಿಕೊಂಡಿದೆ ಎಂದು ನ್ಯಾಯಪೀಠ ಹೇಳಿದೆ.ಸಾರ್ವಜನಿಕ ಸ್ಥಳಗಳಲ್ಲಿ ಗೋಹತ್ಯೆ ನಿಷೇಧಿಸಿ ಆದೇಶ ಹೊರಡಿಸುವಂತೆ ವಿನಂತಿಸಿ, ಕೊಯಮತ್ತೂರು ಮೂಲದ ಕೆ.ಸೂರ್ಯ ಯಾನೆ ಕೆ. ಸೂರ್ಯ ಪ್ರಶಾಂತ್ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ಪಶ್ಚಿಮ ಬಂಗಾಳ: ಬಿಎಸ್‌ಎಫ್‌ಗೆ ಗಡಿ ಭೂಮಿ ಹಸ್ತಾಂತರ


ಕೋಲ್ಕತ್ತಾ: ಭಾರತ ಮತ್ತು ಬಾಂಗ್ಲಾದೇಶ ಗಡಿಯಲ್ಲಿ ಬೇಲಿ ಹಾಗೂ ಹೊರಠಾಣೆಗಳನ್ನು ನಿರ್ಮಿಸಲು ಪಶ್ಚಿಮ ಬಂಗಾಳ ಸರ್ಕಾರ 142.79 ಎಕರೆ ಭೂಮಿಯನ್ನು ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ಹಸ್ತಾಂತರಿಸಿದೆ. ಭಾರತ–ಬಾಂಗ್ಲಾದೇಶ ಗಡಿಯುದ್ದಕ್ಕೂ ಭದ್ರತಾ ಮೂಲಸೌಕರ್ಯಗಳನ್ನು ಬಲಪಡಿಸಲು ಈ ಭೂಮಿಯನ್ನು ವರ್ಗಾಯಿಸಲಾಗಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ತಿಳಿಸಿದ್ದಾರೆ. ಈ ಭೂಮಿ ಒಂಬತ್ತು ಜಿಲ್ಲೆಗಳಲ್ಲಿ ಹರಡಿಕೊಂಡಿದ್ದು, ಮುರ್ಷಿದಾಬಾದ್‌ನಲ್ಲಿ 38.8 ಎಕರೆ, ಜಲ್ಪೈಗುರಿಯಲ್ಲಿ 35.16 ಎಕರೆ, ಕೂಚ್‌ಬೆಹಾರ್‌ನಲ್ಲಿ 22.92 ಎಕರೆ ಮತ್ತು ದಕ್ಷಿಣ ದಿನಾಜ್‌ಪುರದಲ್ಲಿ 20.17 ಎಕರೆ ಭೂಮಿ ಇದೆ. ಉಳಿದ ಭೂಮಿಯನ್ನು ಮಾಲ್ಡಾ, ಡಾರ್ಜಿಲಿಂಗ್, ಉತ್ತರ ದಿನಾಜ್‌ಪುರ, ಉತ್ತರ 24 ಪರಗಣ ಮತ್ತು ನಾಡಿಯಾ ಜಿಲ್ಲೆಗಳಲ್ಲಿ ವರ್ಗಾಯಿಸಲಾಗಿದೆ.

ಸಚಿವ ಮಲ್ಹೋತ್ರಾಗೆ ದಿಲ್ಲಿ ಅಧ್ಯಕ್ಷತೆ | ಹರ್ಯಾಣಕ್ಕೆ ಅರ್ಚನಾ ಗುಪ್ತಾ | ಪಂಜಾಬ್‌ಗೆ ಧಿಲ್ಲಾನ್

4 ರಾಜ್ಯಗಳಿಗೆ ಬಿಜೆಪಿ ಹೊಸ ರಾಜ್ಯಾಧ್ಯಕ್ಷರು

ಹೊಸದಿಲ್ಲಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಗುರುವಾರ ದಿಲ್ಲಿ ಸಹಿತ ನಾಲ್ಕು ರಾಜ್ಯ ಬಿಜೆಪಿ ಘಟಕಗಳಿಗೆ ಪಕ್ಷಾಧ್ಯಕ್ಷರನ್ನು ನಿಯುಕ್ತಿಗೊಳಿಸಿದ್ದಾರೆ. ಕೇಂದ್ರ ಸಚಿವ ಹರ್ಷ ಮಲ್ಹೋತ್ರಾ ಬಿಜೆಪಿ ದಿಲ್ಲಿ ಘಟಕಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಹರ್ಯಾಣ ಬಿಜೆಪಿ ಘಟಕಾಧ್ಯಕ್ಷರಾಗಿ ಅರ್ಚನಾ ಗುಪ್ತಾ, ಪಂಜಾಬ್ ಘಟಕಕ್ಕೆ ಸರ್ದಾರ್ ಕೇವಲ್ ಸಿಂಗ್ ಧಿಲ್ಲಾನ್ ಹೊಸ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆಂದು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಹೊರಡಿಸಿರುವ ಪ್ರತ್ಯೇಕ ಅಧಿಸೂಚನೆಗಳಲ್ಲಿ ಹೇಳಲಾಗಿದೆ. ತ್ರಿಪುರಾದ ಮಾತಾಬರಿ ವಿಧಾನಸಭಾ ಕ್ಷೇತ್ರ ಶಾಸಕ ಅಭಿಷೇಕ್ ದೇಬ್ರೋಯ್ ತ್ರಿಪುರಾ ಬಿಜೆಪಿ ಘಟಕಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.ಇವೆಲ್ಲ ನೇಮಕಗಳು ತಕ್ಷಣದಿಂದಲೇ ಕಾರ್ಯಾನುಷ್ಠಾನಗೊಳ್ಳಲಿವೆ ಎಂದು ಅರುಣ್ ಸಿಂಗ್ ತಿಳಿಸಿದ್ದಾರೆ.

ಹೊಸತಾಗಿ ಆಯ್ಕೆಯಾಗಿರುವ ಬಿಜೆಪಿ ರಾಜ್ಯ ಘಟಕಾಧ್ಯಕ್ಷರ ಪೈಕಿ ಹರ್ಷ ಮಲ್ಹೋತ್ರಾ ಮಾತ್ರ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಂಪುಟದಲ್ಲಿ ಸಚಿವರಾಗಿರುವವರು. ದಿಲ್ಲಿ ಬಿಜೆಪಿ ಘಟಕಾಧ್ಯಕ್ಷರಾಗಿದ್ದ ವೀರೇಂದ್ರ ಸಚ್‌ದೇವಾ ಅವರ ಕರ್ತವ್ಯಾವಧಿ ಈ ವರ್ಷ ಮಾರ್ಚ್‌ಗೆ ಪೂರ್ತಿಯಾಗಿದ್ದು, ತೆರವಾಗಿದ್ದ ಜಾಗಕ್ಕೆ



ಮಲ್ಹೋತ್ರ ನೇಮಕ ನಡೆದಿದೆ. ಸಚಿವರಾಗೋ ಮುನ್ನ ದಿಲ್ಲಿ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿಯಾಗಿದ್ದ ಮಲ್ಹೋತ್ರಾ, ಪಕ್ಷದ ಸಂಘಟನಾತ್ಮಕ ವಿಚಾರಗಳು ಮತ್ತು ಸ್ಥಳೀಯಾಡಳಿತ ಸಂಸ್ಥೆಗಳ ಕಾರ್ಯ ಚಟುವಟಿಕೆ ಇತ್ಯಾದಿಗಳಲ್ಲಿ ತಜ್ಞತೆ ಹೊಂದಿದವರು. 2015ರಲ್ಲಿ ನಿಕಟಪೂರ್ವ ದಿಲ್ಲಿ ಮಹಾನಗರಪಾಲಿಕೆಯ ಮೇಯರ್ ಆಗಿ ಆಯ್ಕೆಯಾಗಿದ್ದರು.

ಹರ್ಯಾಣ ಬಿಜೆಪಿ ಅಧ್ಯಕ್ಷ ಮೋಹನ್ ಲಾಲ್ ಬಡೋಲಿ ಅವರ ಕರ್ತವ್ಯಾವಧಿ ಮುಗಿದ ಹಿನ್ನೆಲೆಯಲ್ಲಿ ಹೊಸ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಅರ್ಚನಾ ಗುಪ್ತಾ ವೃತ್ತಿಯಲ್ಲಿ ವೈದ್ಯೆ ಮತ್ತು ಈ ಮುನ್ನ ಹರ್ಯಾಣ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಹೊಣೆ ನಿಭಾಯಿಸಿದವರು. ಪಾಣಿಪತ್ ಮೂಲದ ಅರ್ಚನಾ ಗುಪ್ತಾ, ಬಿಜೆಪಿ ಪ್ರಮುಖ ನಾಯಕಿ ಖ್ಯಾತ ಕಮಲಾ ವರ್ಮಾ ನಂತರ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನ ವಹಿಸುತ್ತಿರುವ ದ್ವಿತೀಯ ಮಹಿಳೆಯೆನಿಸಿದ್ದಾರೆ.

ಬರ್ನಾಲಾ ಕ್ಷೇತ್ರದಿಂದ ಸತತ ಎರಡು ಬಾರಿ ಕಾಂಗ್ರೆಸ್ ಶಾಸಕರಾಗಿ ಆಯ್ಕೆಯಾಗಿದ್ದ ಸರ್ದಾರ್ ಕೇವಲ್ ಸಿಂಗ್ ಧಿಲ್ಲಾನ್ 2022ರಲ್ಲಿ ಬಿಜೆಪಿ ಸೇರಿದ್ದರು ಮತ್ತು ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷರಾಗಿ ಕರ್ತವ್ಯ ನಿಭಾಯಿಸಿದ್ದರು. ಹರ್ಯಾಣ ಬಿಜೆಪಿ ನೂತನ ಅಧ್ಯಕ್ಷರು ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಕ್ಯಾ. ಅಮರಿಂದರ್ ಸಿಂಗ್ ಅವರ ನಿಕಟ ನಂಬಿಗಸ್ಥರಲ್ಲೋರ್ವರು. ಕ್ಯಾ. ಸಿಂಗ್ ಕೂಡ ಕಾಂಗ್ರೆಸ್‌ನಿಂದಾದ ಸಖತ್ ಕಹಿ ಅನುಭವಗಳಿಂದ ರೋಸಿ 2022ರಲ್ಲಿ ಬಿಜೆಪಿ ಸೇರಿದವರು. ಬಿಜೆಪಿ ಪಂಜಾಬ್ ಘಟಕದ ಹೊಸ ಅಧ್ಯಕ್ಷ ಸಿಖ್ ಸಮುದಾಯದ ಧಿಲ್ಲಾನ್ ಕೂಡ ಸಮರ್ಥ ನಾಯಕತ್ವ ಗುಣವುಳ್ಳವರೆಂದು ಹೇಳಲಾಗಿದೆ. 2027ರಲ್ಲಿ ಪಂಜಾಬ್‌ನ ಆಮ್ ಆದ್ಮಿ ಪಾರ್ಟಿ ಸರಕಾರವನ್ನು ಪದಚ್ಯುತಗೊಳಿಸುವುದು ಬಿಜೆಪಿ ಸಂಕಲ್ಪವಾಗಿದೆ.


ಭಾವಿ ಅಳಿಯನ ಬಗ್ಗೆ ಮಾವನ ಫುಲ್ ಚೆಕಪ್

ಸಂಚಾರಿ ಚಲನ್ ಪರಿಶೀಲನೆ!

ರಾಯುಡುಪಾಳ್ಯಂ: ಮದುವೆಗೆ ಮುನ್ನ ಜಾತಕ ನೋಡುವುದೇನೋ ಸರಿ. ಆದರೆ ಕಾಕಿನಾಡ ಜಿಲ್ಲೆಯ ವ್ಯಕ್ತಿಯೊಬ್ಬರು ತಮ್ಮ ಮಗಳ ಮದುವೆ ನಿಶ್ಚಯಿಸುವ ಮುನ್ನ ಭಾವಿ ಅಳಿಯನ ಜನ್ಮ ಜಾಲಾಡಿದ್ದಾರೆ. ಅರ್ಥಾತ್, ಆತನ ವಾಹನಗಳ ಸಂಚಾರಿ ಚಲನ್ ಚೆಕ್ ಮಾಡಲು ಪೊಲೀಸರನ್ನು ಸಂಪರ್ಕಿಸಿದ್ದಾರೆ. ಭಾವಿ ಅಳಿಯನ ಜವಾಬ್ದಾರಿ ಮತ್ತು ಚಾಲನಾ ನಡವಳಿಕೆಯನ್ನು ಪರೀಕ್ಷಿಸುವುದು ಅವರ ಉದ್ದೇಶವಂತೆ!


ಅಪ್‌ಡೇಟ್ ಆಗಿರುವ ಮಾವ!: ಸಾಂಪ್ರದಾಯಿಕ ಆಚರಣೆ ಬದಿಗಿಟ್ಟು ಈ ತಂದೆ, ರಸ್ತೆಯಲ್ಲಿನ ನಡವಳಿಕೆಯ ಮೂಲಕ ವರನ ವಿಚಾರಣೆ ನಡೆಸಲು ಮುಂದಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ. ಭಾವಿ ಅಳಿಯ ಅತಿವೇಗದ ಚಾಲನೆ, ಮದ್ಯಪಾನ ಮಾಡಿ ವಾಹನ ಚಾಲನೆ ಅಥವಾ ಸರಣಿ ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆಯೇ ಎಂದು ಅಮೂಲಾಗ್ರ ಪರಿಶೀಲನೆ ಮಾಡಿದ್ದಾರಂತೆ ಈ ಮಾವ! ಬಯಸಿದ್ದರು.

ಮಗಳೇ ಸರ್ವಸ್ವ: ಹಲವು ವರ್ಷಗಳ ಹಿಂದೆ ಪತ್ನಿಯನ್ನು ಕಳೆದುಕೊಂಡಿದ್ದ ಈ ವ್ಯಕ್ತಿ ಕಷ್ಟಗಳ ನಡುವೆಯೂ



ಮಗಳನ್ನು ಎಂಜಿನಿಯರ್ ಆಗಿ ಬೆಳೆಸಿದ್ದಾರೆ. ಮಗಳಿಗೆ ಸೂಕ್ತ ಸಂಬಂಧ ಬಂದ ನಂತರ, ಅವರು ಮಂಗಳವಾರ ರಾಯುಡುಪಾಳ್ಯಂ ಸಂಚಾರಿ ಪೊಲೀಸರನ್ನು ವರನ ಕಾರು ಮತ್ತು ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆಗಳೊಂದಿಗೆ ಭೇಟಿ ಮಾಡಿದ್ದಾರೆ.

ನಿರಾಕ್ಷೇಪಣಾ ವರದಿ!: ಒಬ್ಬ ವ್ಯಕ್ತಿಯ ಚಾಲನಾ ಶೈಲಿ, ಶಿಸ್ತು, ತಾಳ್ಮೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಪ್ರತಿಫಲಿಸುತ್ತದೆ ಎಂಬುದು ಅವರ ನಂಬಿಕೆಯಾಗಿತ್ತು. ಪೊಲೀಸರು ಪರಿಶೀಲಿಸಿದಾಗ ವಾಹನಗಳಿಗೆ ಯಾವುದೇ ಬಾಕಿ ಚಲನ್‌ಗಳು ಅಥವಾ ಗಂಭೀರ ನಿಯಮ ಉಲ್ಲಂಘನೆ ಪತ್ತೆಯಾಗಿಲ್ಲ. ಪೊಲೀಸರು ಈ ಅಪರೂಪದ, ಆದರೆ ಜವಾಬ್ದಾರಿಯುತ ನಡವಳಿಕೆಯನ್ನು ಶ್ಲಾಘಿಸಿದ್ದಾರೆ.



ಕಿರುಸುದ್ದಿ

ಕರ್ನಾಟಕಕ್ಕೆ ಮತ್ತೆ 3 ಪದಕ



ಬೆಂಗಳೂರು: ಮೂರುದಿನಗಳ ಕಾಲ ನಡೆದ ಇಂಡಿಯನ್ ಓಪನ್ ಪ್ಯಾರಾ ಅಥ್ಲೆಟಿಕ್ ಕೂಟದ ಕೊನೆ ದಿನ ಕರ್ನಾಟಕ ಮತ್ತೆ ಮೂರುಪದಕ ಗೆದ್ದಿತು. ಇದರೊಂದಿಗೆ ಕೂಟದಲ್ಲಿ ಒಟ್ಟು 21 ಪದಕ ಗೆದ್ದಿರುವ ಕರ್ನಾಟಕ ಅಥ್ಲೆಟಿಕ್ಸ್ ಕೂಟದಲ್ಲಿ ಪ್ರಾಬಲ್ಯ ಸಾಧಿಸಿದೆ. ಪ್ರತಿಷ್ಠಿತ 8ನೇ ಅಂತಾರಾಷ್ಟ್ರೀಯ ಅಥ್ಲೆಟಿಕ್ಸ್ ಕೂಟಕ್ಕೆ ಆತಿಥ್ಯ ವಹಿಸಿದ ಕರ್ನಾಟಕ ಆಟದಲ್ಲಿ ಮತ್ತು ಅಚ್ಚುಕಟ್ಟಾದ ಆಯೋಜನೆಯಲ್ಲಿ ಗೆದ್ದಿದೆ. ಮೊದಲನೇ ದಿನ 9 ಪದಕ ಗೆದ್ದಿದ್ದ ಕನ್ನಡಿಗರು, ಎರಡನೇ ದಿನವೂ 9 ಪದಕಗಳನ್ನು ಗೆದ್ದಿದ್ದರು, ಮೂರನೇ ದಿನ ಅಂದರೆ ಗುರುವಾರದಂದು ಮತ್ತೆ 3 ಪದಕಗಳನ್ನು ಗೆದ್ದಿದ್ದಾರೆ. ಪುರುಷರ 500ಮೀ. ಟಿ12 ಓಟದಲ್ಲಿ ಶರತ್ ಮಕನಹಳ್ಳಿ ಬೆಳ್ಳಿ ಪದಕ ಗೆದ್ದರು. 16:12.60 ಸಮಯದಲ್ಲಿ ಗುರಿ ಕ್ರಮಿಸಿದ ಅವರು, ಸೌರಭ್ ಶರ್ಮ ಅವರ ಹಿಂದಿದ್ದರು. ಮೂರನೇ ಸ್ಥಾನವನ್ನು ನಾಗೇಂದ್ರ ಸಿಂಗ್ ಅವರು ಪಡೆದುಕೊಂಡರು. ಪುರುಷರ ಟಿ–63 ಲಾಂಗ್ ಜಂಪ್ ವಿಭಾಗದಲ್ಲಿ ರಕ್ಷಿತ್ ಸೋಮಶೇಖರ ಕಂಚಿನ ಪದಕ ಗೆದ್ದುಕೊಂಡರು. 5.01 ಮೀ. ದೂರ ಜಿಗಿದ ಅವರು, ಕಾಂತಿನಾನ್ 5.32, ಮಹೇಂದ್ರ 5.74ಮೀ. ಹಿಂದಿದ್ದರು.

ಬ್ಯಾಡ್ಮಿಂಟನ್: ಕ್ವಾರ್ಟರ್ ಫೈನಲ್‌ಗೆ ಸಿಂಧು

ಸಿಂಗಾಪುರ: ಇಲ್ಲಿ ನಡೆಯುತ್ತಿರುವ ಸಿಂಗಾಪುರ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಮೆಂಟ್‌ನ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಅವಳಿ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ನೇರ ಗೇಮ್‌ಗಳ ಗೆಲುವಿನೊಂದಿಗೆ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದರು. ಸಿಂಧು ಕೇವಲ 37 ನಿಮಿಷಗಳಲ್ಲಿ ಜಪಾನ್‌ನ ರಿಕೊ ಗುಂಜಿ ಅವರನ್ನು ಎರಡನೇ ಸುತ್ತಿನ ಪಂದ್ಯದಲ್ಲಿ 21–9, 21–12 ಅಂತರದಿಂದ ಸೋಲಿಸಿದರು. ಆದರೆ ಕೊನೆಯ ಎಂಟನೇ ಸುತ್ತಿನಲ್ಲಿ ಅಗ್ರ ಶ್ರೇಯಾಂಕಿತ ಕೊರಿಯಾದ ಆನ್ ಸೆ ಯಂಗ್ ವಿರುದ್ಧ ಸಿಂಧು ಸೆಣಸಲಿದ್ದಾರೆ. ನಾಲ್ಕನೇ ಶ್ರೇಯಾಂಕಿತ ಭಾರತೀಯ ಪುರುಷರ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಕೂಡ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದರು. ತೈವಾನ್ ಜೋಡಿಯಾದ ಲೀ ಜೆ–ಹುಯಿ ಮತ್ತು ಯಾಂಗ್ ಪೊ–ಹುವಾನ್ ಅವರನ್ನು 21–15, 11–21, 21–18 ಅಂತರದಿಂದ ಸೋಲಿಸಿದರು. ಸಾತ್ವಿಕ್ ಮತ್ತು ಚಿರಾಗ್ ಮುಂದಿನ ಸುತ್ತಿನಲ್ಲಿ ಮಲೇಷ್ಯಾದ ಇೈ ಕ್ಸಿಂಗ್ ಕಾಂಗ್ ಮತ್ತು ಆರನ್ ಟೈ ಅವರನ್ನು ಎದುರಿಸಲಿದ್ದಾರೆ. ಭಾರತದ ಮಿಶ್ರ ಡಬಲ್ಸ್ ಜೋಡಿ ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೊ ಕೂಡ ಜಪಾನಿನ ಯುಟಾ ವಟನಾಬೆ ಮತ್ತು ಮಾಯಾ ಟಾಗುಚಿ ಅವರನ್ನು 8–21, 21–17, 21–16 ಸೆಟ್‌ಗಳಿಂದ ಸೋಲಿಸಿ ಕ್ವಾರ್ಟರ್ ಫೈನಲ್‌ಗೆ ತಲುಪಿದ್ದಾರೆ.

ಮಹಿಳಾ ವಿಶ್ವಕಪ್‌ಗೆ 4 ಭಾರತೀಯ ನಿರ್ಣಾಯಕರು

ಲಂಡನ್: ಭಾರತದ ಜಿ. ಎಸ್. ಲಕ್ಷ್ಮಿ ರೆಫ್ರಿಯಾಗಿ ಮತ್ತು ಇನ್ನೂ ಮೂರು ಜನ ಅಂಪೈರ್‌ಗಳನ್ನಾಗಿ ಒಟ್ಟು ನಾಲ್ವರು ಭಾರತೀಯರನ್ನು ಮುಂದಿನ ತಿಂಗಳಿನಿಂದ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್ ಪಂದ್ಯಾವಳಿಯ ಮ್ಯಾಚ್ ಆಫಿಷಿಯಲ್‌ಗಳಾಗಿ ನೇಮಿಸಲಾಗಿದೆ. ಇಂಗ್ಲೆಂಡಿನಲ್ಲಿ ನಡೆಯಲಿರುವ ಪಂದ್ಯಾವಳಿಯ ನಿರ್ಣಾಯಕರ ಮತ್ತು ರೆಫ್ರಿಗಳ 18 ಜನರ ಪಟ್ಟಿಯನ್ನು ಐಸಿಸಿ ಬಿಡುಗಡೆ ಮಾಡಿದೆ. ಇದರಲ್ಲಿ 4 ಭಾರತೀಯರು ಇರಲಿದ್ದಾರೆ. ಈ ಹಿಂದೆ ಎಲ್ಲಾ ಮಹಿಳಾ ಪಂದ್ಯಗಳಿಗೆ ಮಹಿಳೆಯರೇ ಮ್ಯಾಚ್ ಆಫಿಷಿಯಲ್‌ಗಳಾಗಬೇಕೆಂಬ ಘೋಷಣೆಯೂ ಆಗಿದೆ. ಕ್ಯಾಂಡೇಸ್ ಲಾ ಬೋರ್ಡೆ, ಗಾಯತ್ರಿ ವೇಣುಗೋಪಾಲನ್, ಕೆರ್ರಿನ್ ಕ್ಲಾಸ್ಟೆ ಮತ್ತು ಶಥಿರಾ ಜಾಕಿರ್ ಜೆಸಿ ಅವರು ಟೂರ್ನಮೆಂಟ್‌ಗೆ ಪಾದಾರ್ಪಣೆ ಮಾಡಲಿದ್ದಾರೆ. ವೃಂದಾ ರಾಠಿ ಮತ್ತು ಜನನಿ ಎನ್. ಫೀಲ್ಡ್ ನಿರ್ಣಾಯಕರಾಗಿ ಆಯ್ಕೆಯಾಗಿದ್ದಾರೆ. 33 ಪಂದ್ಯಗಳಿಗಾಗಿ 14 ಅಂಪೈರ್‌ಗಳು, 4 ಮ್ಯಾಚ್ ರೆಫ್ರಿಗಳ ಪಟ್ಟಿಯನ್ನು ನಾವು ಬಿಡುಗಡೆ ಮಾಡುತ್ತೇವೆ. ಪಂದ್ಯಾವಳಿ ಸ್ಪಷ್ಟ ಮತ್ತು ಸುಗಮವಾಗಿ ನಡೆಯಲೆಂದು ನಾವು ಆಶಿಸುತ್ತೇವೆ ಎಂದು ಐಸಿಸಿ ತಿಳಿಸಿದೆ.

ಕ್ವಾಲಿಫೈಯರ್–2 | ಗುಜರಾತ್–ರಾಜಸ್ಥಾನ ಮುಖಾಮುಖಿ | ಸೋತವರು ಮನೆಗೆ

ಫೈನಲ್‌ನಲ್ಲಿ ಬೆಂಗಳೂರು VS ?



ಚಂಡೀಗಢ: ಇಂಡಿಯನ್ ಪ್ರೀಮಿಯರ್ ಲೀಗ್ ಕೊನೆ ಹಂತಕ್ಕೆ ಬಂದಿದ್ದು, ಫೈನಲಿಸ್ಟ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಸೆಣಸುವವರಾರು ಎಂಬ ಪ್ರಶ್ನೆಗೆ ಶುಕ್ರವಾರ ಉತ್ತರ ಸಿಗಲಿದೆ.

ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಮಣಿಸಿರುವ ರಾಜಸ್ಥಾನ ಮತ್ತು ಬೆಂಗಳೂರು ತಂಡದೊಂದಿಗೆ ಸೋತಿರುವ ಗುಜರಾತ್ ತಂಡಗಳು ಎರಡನೇ ಕ್ವಾಲಿಫೈಯರ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಗೆದ್ದವರು ಫೈನಲ್ ಗೇರಲಿದ್ದರೆ ಸೋತವರ ಅಭಿಯಾನಕ್ಕೆ ಶುಕ್ರವಾರ ತೆರೆ ಬೀಳಲಿದೆ. ಐಪಿಎಲ್ ಮಾದರಿಯ ಪ್ರಕಾರ ಮೊದಲೆರಡು ಸ್ಥಾನಗಳನ್ನು ಬೆಂಗಳೂರು ಮತ್ತು ಗುಜರಾತ್ ತಂಡಗಳು ಪಡೆದುಕೊಂಡರೆ, ಎರಡನೇ ಹಾಗೂ ಮೂರನೇ ಸ್ಥಾನಗಳನ್ನು ಹೈದರಾಬಾದ್ ಮತ್ತು ರಾಜಸ್ಥಾನ ತಂಡಗಳು ಪಡೆದಿದ್ದವು. ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಆರ್‌ಸಿಬಿ ಮತ್ತು ಗುಜರಾತ್ ಎದುರಾಗಿದ್ದವು. ಆ ಪಂದ್ಯದಲ್ಲಿ ಪಾಟಿದಾರ್ ಪಡೆ ಗೆಲುವು ಸಾಧಿಸಿ ಫೈನಲ್‌ಗೇರಿದೆ. ಮೂರು ಮತ್ತು ನಾಲ್ಕನೇ ಸ್ಥಾನಗಳಲ್ಲಿದ್ದ ಹೈದರಾಬಾದ್ ಮತ್ತು ರಾಜಸ್ಥಾನ ತಂಡಗಳು ಕ್ವಾಲಿಫೈಯರ್ 2 ಅರ್ಹತೆಗಾಗಿ ಬುಧವಾರದ ಪಂದ್ಯದಲ್ಲಿ ಎದುರಾಗಿದ್ದವು. ಈ ಪಂದ್ಯದಲ್ಲಿ ಗೆಲುವು ಸಾಧಿಸಿರುವ ರಾಜಸ್ಥಾನ ಮತ್ತು ಕ್ವಾಲಿಫೈಯರ್‌ನಲ್ಲಿ ಸೋತಿರುವ ಗುಜರಾತ್ ತಂಡಗಳು ಶುಕ್ರವಾರ ಎದುರಾಗಲಿವೆ.

ಮಳೆ ಸಾಧ್ಯತೆ

ಹೊಸ ಚಂಡೀಗಢದಲ್ಲಿ ಪಂದ್ಯ ನಡೆಯಲಿದೆ. ಹಾಲಿ ರನ್ನರ್–ಅಪ್ ಪಂಜಾಬ್ ಕಿಂಗ್ಸ್ ತಂಡದ ತವರಾಗಿದ್ದು ಬ್ಯಾಟಿಂಗ್ ಪಿಚ್ ಅನ್ನುವ ಹೆಸರೂ ಪಡೆದಿದೆ. ಹೆಚ್ಚಿನ ಬೌನ್ಸ್, ಫ್ಲಾಟ್ ಪಿಚ್ ಮತ್ತು ಹತ್ತಿರದ ಬೌಂಡರಿ ಬ್ಯಾಟರ್‌ಗಳಿಗೆ ಲಾಭ ತಂದಿವೆ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟ ಕೂಡ ಇರಬಹುದು. ಹವಾಮಾನ ಇಲಾಖೆ ಆಲಿಕಲ್ಲು ಮಳೆಯಾಗುವ ಸಾಧ್ಯತೆ ಇದೆ ಎಂದು ಹೇಳಿದೆ. ಒಂದು ವೇಳೆ ರದ್ದಾದರೆ ಗುಜರಾತ್ ಫೈನಲ್ ತಲುಪಲಿದೆ.



ಮುಖಾಮುಖಿ

ಎದುರು	ಗುಜರಾತ್	ರಾಜಸ್ಥಾನ
10	7	3

ಪಂದ್ಯದ ವಿವರ

ಯಾವಾಗ: ಶುಕ್ರವಾರ, ಎಲ್ಲಿ: ಚಂಡೀಗಢ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಗುಜರಾತ್ ಆಟ

ಇತ್ತ ಶುಭಮನ್ ಗಿಲ್ ನೇತೃತ್ವದ ಗುಜರಾತ್ ಟೈಟಾನ್ಸ್ ಟೂರ್ನಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡುತ್ತಾ ಬಂದಿದೆ. ಹಿಂದಿನ ಪಂದ್ಯದಲ್ಲಿ ಬೆಂಗಳೂರು ವಿರುದ್ಧ ಸೋತಿದ್ದಾದರೂ, ಗೆಲುವಿನ ನಾಗಾಲೋಟದ ಹಿನ್ನೆಲೆ ತಂಡ ಹೊಂದಿದೆ. ಸಾಯಿ ಸುದರ್ಶನ್ ಅವರ ಕನ್ಸಿಸ್ಟನ್ಸಿ, ಗಿಲ್ ಅವರ ಸಮಯೋಚಿತ ಬ್ಯಾಟಿಂಗ್ ಮತ್ತು ಬಟ್ಲರ್ ಅವರ ಆಕ್ರಮಣಕಾರಿ ಮನಸ್ಥಿತಿ ತಂಡಕ್ಕೆ ದೊಡ್ಡ ಬಲ ನೀಡಿದೆ. ವಾಷಿಂಗ್ಟನ್ ಸುಂದರ್ ಅಂತಹ ಆಲ್‌ರೌಂಡರ್‌ಗಳು ತಂಡದಲ್ಲಿದ್ದಾರೆ. ಹೊಸ ಆಟಗಾರನಾದ ನಿಶಾಂತ್ ಸಿಂಧು ಕೂಡ ತಂಡದಲ್ಲಿ ನಿರಂತರವಾಗಿ ಕಾಣಿಸಿಕೊಂಡಿದ್ದಾರೆ. ಕಳೆದ ಪಂದ್ಯದಲ್ಲಿ ಹೀನಾಯ ಸೋಲು ಕಂಡರೂ, ಮಧ್ಯಮ ಕ್ರಮಾಂಕಿತ ಬ್ಯಾಟರ್ ರಾಹುಲ್ ಟೇವಾಟಿಯ ಮಿಂಚಿರುವುದು ತಂಡಕ್ಕಿರುವ ಮತ್ತೊಂದು ಬಲ. ಬೌಲಿಂಗ್ ವಿಚಾರದಲ್ಲಿ ಗುಜರಾತ್ ಶಕ್ತಿಶಾಲಿ ಪಡೆಯನ್ನು ಹೊಂದಿದೆ. ಹಿಂದಿನ ಪಂದ್ಯದಲ್ಲಿ ಎಲ್ಲರೂ ದುಬಾರಿಯಾದರೂ ತಂಡದಲ್ಲಿ ಅನುಭವವಿದೆ. ಹೋಲ್ಡರ್, ರಬಾಡ, ಸಿರಾಜ್, ಕೃಷ್ಣ ಮತ್ತು ರಶೀದ್ ತಂಡದಲ್ಲಿದ್ದಾರೆ. ಹೆಚ್ಚುವರಿ ಸ್ಪಿನ್ನರ್ ಆಗಿ ವಾಷಿ ಕೂಡ ಬೌಲಿಂಗ್ ಮಾಡುವ ಸಾಮರ್ಥ್ಯ ಹೊಂದಿದ್ದಾರೆ.

ಕೀ ಪ್ಲೇಯರ್ಸ್

ಬ್ಯಾಟಿಂಗ್
- ಸಾಯಿ ಸುದರ್ಶನ್: 652
- ಶುಭಮನ್ ಗಿಲ್: 618 ರನ್
- ಜಾಸ್ ಬಟ್ಲರ್: 498 ರನ್
- ವಾಷಿಂಗ್ಟನ್ ಸುಂದರ್: 311 ರನ್

ಬೌಲಿಂಗ್
- ಕಾಗಿಸೋ ರಬಾಡ: 26 ವಿಕೆಟ್
- ರಶೀದ್ ಖಾನ್: 19 ವಿಕೆಟ್
- ಮೊಹಮ್ಮದ್ ಸಿರಾಜ್: 17 ವಿಕೆಟ್
- ಜೇಸನ್ ಹೋಲ್ಡರ್: 15 ವಿಕೆಟ್

ಕೂಟದಲ್ಲಿ ಪ್ರದರ್ಶನ

ಪಂದ್ಯ	ಗೆಲುವು	ಸೋಲು
15	9	6

ಕಡೆ ಪಂದ್ಯದ ಫಲಿತಾಂಶ: ಬೆಂಗಳೂರು ವಿರುದ್ಧ 92 ರನ್‌ಗಳ ಸೋಲು

ರಾಜಸ್ಥಾನ ಗೆಲುವಿನೋಟ

ಪಂದ್ಯಾವಳಿಯ ಆರಂಭಕ್ಕೂ ಮುನ್ನ ಸಂಜು ಸ್ಯಾಮ್ಸನ್ ಅಂಥ ಪ್ರಮುಖ ಆಟಗಾರರನ್ನು ಬಿಟ್ಟುಕೊಟ್ಟಿದ್ದ ರಾಜಸ್ಥಾನ ರಾಯಲ್ಸ್ ಜಡೇಜಾ ಅವರನ್ನು ಟ್ರೇಡ್ ಮಾಡಿಕೊಂಡಿತ್ತು. ವೈಭವ್ ಸೂರ್ಯವಂಶಿ, ಯಶಸ್ವಿ ಜೈಸ್ವಾಲ್, ರವೀಂದ್ರ ಜಡೇಜಾ ಅವರೊಂದಿಗೆ ಮಿಂಚಬೇಕಿತ್ತು. ಈ ಸಮಯದಲ್ಲಿ ನಾಯಕತ್ವದ ಬದಲಾವಣೆ, ಇದೇ ಮೊದಲ ಬಾರಿಗೆ ರಿಯಾನ್ ಪರಾಗ್ ಅವರಿಗೆ ಸಂಪೂರ್ಣ ನಾಯಕತ್ವ ನೀಡಲಾಗಿತ್ತು. ಆರಂಭಿಕ ಪಂದ್ಯದಲ್ಲಿ ಚೆನ್ನೈ ತಂಡವನ್ನು ಎದುರಿಸಿದ ಆರ್‌ಆರ್ ಗೆಲುವಿನ ಆರಂಭ ಮಾಡಿತು. ಮುಂದೆ ಗೆಲುವಿನ ಹಾದಿಯಲ್ಲೇ ನಡೆಯಿತು. 15 ವರ್ಷದ ವೈಭವ್ ಸೂರ್ಯವಂಶಿ ತಮ್ಮ ಬ್ಯಾಟಿಂಗ್‌ನೊಂದಿಗೆ ಇತಿಹಾಸವನ್ನೇ ಬದಲಿಸುತ್ತಿದ್ದಾರೆ. ಬೇಕಾದಾಗೆಲ್ಲಾ ಜೈಸ್ವಾಲ್ ತಮ್ಮ ಕರಾರುವಾಕ್ ಬ್ಯಾಟಿಂಗ್‌ನೊಂದಿಗೆ ಮಿಂಚುತ್ತಾರೆ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ ಧ್ರುವ್ ಜುರೇಲ್ ಕೂಡ ಅಷ್ಟೇ ಪರಿಣಾಮಕಾರಿ ಪ್ರದರ್ಶನ ನೀಡುತ್ತಿರುವುದು ತಂಡಕ್ಕೆ ದೊಡ್ಡ ಬಲ. ರಿಯಾನ್ ಪರಾಗ್ ಹೇಳಿಕೊಳ್ಳುವ ಇನ್ನಿಂಗ್ಸ್ ಆಡದಿದ್ದರೂ ನಾಯಕತ್ವದಲ್ಲಿ ಪಾಸ್ ಆಗಿದ್ದಾರೆ. ಈ ನಡುವೆ ಆಲ್‌ರೌಂಡರ್‌ಗಳಾದ ಜೋಫ್ರಾ ಆರ್ಚರ್, ಜಡೇಜಾ ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದಾರೆ.

ಕೀ ಪ್ಲೇಯರ್ಸ್

ಬ್ಯಾಟಿಂಗ್
- ಸೂರ್ಯವಂಶಿ: 680 ರನ್
- ಧ್ರುವ್ ಜುರೇಲ್: 508 ರನ್
- ಯಶಸ್ವಿ ಜೈಸ್ವಾಲ್: 426 ರನ್
- ರಿಯಾನ್ ಪರಾಗ್: 298 ರನ್

ಬೌಲಿಂಗ್
- ಜಡೇಜಾ: 221 ರನ್, 10 ವಿಕೆಟ್
- ಆರ್ಚರ್: 24 ವಿಕೆಟ್
- ಬ್ರಿಜೇಶ್ ಶರ್ಮ: 13 ವಿಕೆಟ್
- ರವಿ ಬಿಷ್ಣೋಯ್: 11 ವಿಕೆಟ್

ಕೂಟದಲ್ಲಿ ಪ್ರದರ್ಶನ

ಪಂದ್ಯ	ಗೆಲುವು	ಸೋಲು
15	9	6

ಕಡೆ ಪಂದ್ಯದ ಫಲಿತಾಂಶ: ಹೈದರಾಬಾದ್ ವಿರುದ್ಧ 47 ರನ್‌ಗಳ ಗೆಲುವು

ಅಂಡರ್–23 ಏಷ್ಯನ್ ಕುಸ್ತಿ: ಭಾರತೀಯರಿಗೆ 27 ಪದಕ!



ಹೊಸದಿಲ್ಲಿ: ವಿಯೆಟ್ನಾಂನ ಡಾ ನಾಂಗ್‌ನಲ್ಲಿ ನಡೆದ ಅಂಡರ್–23 ಏಷ್ಯನ್ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯರು ಒಟ್ಟು 27 ಪದಕಗಳನ್ನು ಬಾಚಿಕೊಂಡರೆ, ಕೇವಲ ಭಾರತೀಯ ಪುರುಷರ ಫ್ರೀಸ್ಟೈಲ್ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಫ್ರೀಸ್ಟೈಲ್ ವಿಭಾಗದಲ್ಲಿ ಅಗ್ರಸ್ಥಾನ ಪಡೆದು ಭಾರತ ತಂಡ ಪ್ರಶಸ್ತಿ ತನ್ನದಾಗಿಸಿಕೊಂಡಿದ್ದು, ಕಿರ್ಗಿಸ್ತಾನ್ ಹಾಗೂ ಕಜಕಿಸ್ತಾನ್ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದವು.

ಭಾರತೀಯ ತಂಡ ಟೂರ್ನಿಯಲ್ಲಿ ಒಟ್ಟು 27 ಪದಕಗಳನ್ನು ಗೆದ್ದು ಸಾಧನೆ ಮಾಡಿತು. ಇದರಲ್ಲಿ 11 ಚಿನ್ನ, 7 ಬೆಳ್ಳಿ ಹಾಗೂ 9 ಕಂಚಿನ ಪದಕಗಳು ಸೇರಿವೆ. ಫ್ರೀಸ್ಟೈಲ್ ವಿಭಾಗದಲ್ಲಿ ಭಾರತ 9 ಪದಕಗಳನ್ನು ಗೆದ್ದಿದ್ದು, ಅಕ್ಷಯ್ ಟಿ. ಧರೆ (57 ಕೆ.ಜಿ.), ವಿಕ್ಕಿ (97 ಕೆ.ಜಿ.), ಕುಮಾರ್ ಮೋಹಿತ್ (65 ಕೆ.ಜಿ.) ಹಾಗೂ ಚಂದರ್‌ಮೋಹನ್ (79 ಕೆ.ಜಿ.) ಚಿನ್ನದ ಪದಕ ಜಯಿಸಿದರು. ದೀಪಕ್ ರಾಠಿ, ಪುನೀತ್ ಕುಮಾರ್ ಹಾಗೂ ಲಕ್ಕಿ ಬೆಳ್ಳಿ ಪದಕ ಪಡೆದರೆ, ದೀಪಕ್ ಬೆರ್ವಾಲ್ ಮತ್ತು ಮೋರ್ ಸಚಿನ್ ಕಂಚಿನ ಪದಕ ಗೆದ್ದರು.

ಮಹಿಳೆಯರಿಂದಲೂ ಪರಾಕ್ರಮ: ಮಹಿಳಾ ವಿಭಾಗದಲ್ಲೂ ಭಾರತೀಯರು ಮಿಂಚಿದ್ದು, 10 ಪದಕಗಳನ್ನು



ತಮ್ಮದಾಗಿಸಿಕೊಂಡರು. ಮುಸ್ಕಾನ್, ತಪಸ್ಯಾ, ಭಾಗ್ಯಶ್ರೀ, ಪುಲ್ಕಿತ್, ಮಾನ್ಸಿ ಹಾಗೂ ಕಾಜಲ್ ಚಿನ್ನದ ಪದಕ ಗೆದ್ದರು. ನೇಹಾ ಮತ್ತು ಸ್ವೀಟಿ ಬೆಳ್ಳಿ ಪದಕ ಜಯಿಸಿದರೆ, ಅಮೃತಾ ಹಾಗೂ ಅಹಿಲ್ಯಾ ಕಂಚಿನ ಪದಕ ಪಡೆದುಕೊಂಡರು.

ಪ್ರಧಾನಿ ಮೋದಿ ಅಭಿನಂದನೆ: ಈ ಸಾಧನೆಗಾಗಿ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ಸಲ್ಲಿಸಿದ್ದಾರೆ. ಈ ಬಗ್ಗೆ ತಮ್ಮ ಎಕ್ಸ್(ಟ್ವಿಟ್ಟರ್) ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ಕುಸ್ತಿಪಟುಗಳ ಪ್ರದರ್ಶನ ಅತ್ಯುತ್ತಮವಾಗಿತ್ತು. ಗೆಲುವಿಗಾಗಿ ನನ್ನ ಅಭಿನಂದನೆಗಳು ಮತ್ತು ಮುಂದಿನ ಸ್ಪರ್ಧೆಗಳಿಗೆ ಶುಭಹಾರೈಸುತ್ತೇನೆ ಎಂದಿದ್ದಾರೆ.

ಫ್ರೆಂಚ್ ಓಪನ್‌ನಿಂದ ಔಟ್ | ರಬಕಿನಾಗೂ ಸೋಲು

ಪ್ಯಾರಿಸ್ ಬಿಸಿಲಿಗೆ ಬಿದ್ದ ಸಿನ್ನರ್

ಪ್ಯಾರಿಸ್: ವಿಶ್ವದ ನಂಬರ್ 1 ಟೆನಿಸ್ ಆಟಗಾರ, ಫ್ರೆಂಚ್ ಓಪನ್ ಗೆಲುವಿನ ಫೇವರಿಟ್ ಯಾನಿಕ್ ಸಿನ್ನರ್ ತಮ್ಮ ಎರಡನೇ ಸುತ್ತಿನ ಪಂದ್ಯದ ವೇಳೆ ಅಸ್ವಸ್ಥರಾಗಿದ ಪರಿಣಾಮ ಸೋತು ರೋಲ್ಯಾಂಡ್ ಗ್ಯಾರೋಸ್‌ನಿಂದ ಹೊರಬಿದ್ದಿದ್ದಾರೆ. ಮಹಿಳೆಯರ ವಿಭಾಗದಲ್ಲಿ ರೈಬೇಕಿನಾ ಸೋತ ನಂತರ ಆಸ್ಟ್ರೇಲಿಯನ್ ಓಪನ್ ವಿಜೇತರು ಎರಡನೇ ಸುತ್ತಿನ ಪಂದ್ಯದಲ್ಲೇ ಸೋತು ಹೊರನಡೆದರು. ಮಂಗಳವಾರ ನಡೆದಿದ್ದ ಮೊದಲ ಪಂದ್ಯದಲ್ಲಿ ಗೆದ್ದು ಎರಡನೇ ಸುತ್ತಿನ ಪಂದ್ಯದಲ್ಲಿ ಅವರು ಜುವಾನ್ ಮ್ಯಾನ್ಯುಲ್ ಅವರೊಂದಿಗೆ ಆಡಿದ್ದರು. ಗೆಲುವಿನ ಹಾದಿಯಲ್ಲೇ ಇದ್ದ ಇಟಲಿ ಸ್ಟಾರ್ ಸಿನ್ನರ್ ಪಂದ್ಯದ ವೇಳೆ ಬಿಸಿಲಿನಿಂದಾಗಿ ಅಸ್ವಸ್ಥರಾದರು. ಎರಡು ಸೆಟ್ ಮುಂದಿದ್ದ ಅವರು, ದಿಢೀರ್ ಹಿನ್ನಡೆಯಲ್ಲಿ ಮೂರು ಸೆಟ್‌ಗಳನ್ನು ಬಿಟ್ಟುಕೊಟ್ಟು ಹೊರಬಿದ್ದರು. ಪಂದ್ಯ 6–3, 6–2, 5–7, 1–6, 1–6ರಿಂದ ಸೋತ ಸಿನ್ನರ್ ಫ್ರೆಂಚ್ ಓಪನ್ ಗೆಲ್ಲುವ ಅವಕಾಶ ಕಳೆದುಕೊಂಡಿದ್ದಾರೆ.

ಗುರುವಾರ ನಡೆದ ಪಂದ್ಯದಲ್ಲಿ ಮೊದಲನೇ ಸೆಟ್‌ನಲ್ಲಿ 6–3ರಿಂದ, ಎರಡನೇ ಸೆಟ್‌ನಲ್ಲಿ 6–2ರಿಂದ ಮುನ್ನಡೆ ಸಾಧಿಸಿದ್ದ ಸಿನ್ನರ್ ಗೆಲುವಿನ ಹಾದಿಯಲ್ಲಿದ್ದರು. ಏಸ್ ಪಾಯಿಂಟ್‌ಗಳನ್ನು ಬಳಸುತ್ತಾ, ಸರ್ವ್ ಪಾಯಿಂಟ್‌ಗಳ ಲಾಭ ಪಡೆಯುತ್ತಾ ಗೆಲುವಿನತ್ತ ಹೆಜ್ಜೆ ಹಾಕುತ್ತಿದ್ದರು. ಇದೇ ವೇಳೆ ದೊಡ್ಡ ಆಘಾತ ಎದುರಿಸಿದ ಅವರು, ಬಿಸಿಲಿನ ತಾಪಮಾನಕ್ಕೆ ಸುಸ್ತಾದರು. ಐಸ್ ಪ್ಯಾಕ್ ಬಳಸಿ



ಚೇತರಿಸಿಕೊಂಡರಾದರೂ, ಮೂರನೇ ಸೆಟ್ 5–7ರಲ್ಲಿ ಬಿಟ್ಟುಕೊಟ್ಟರು. ನಾಲ್ಕನೇ ಸೆಟ್‌ನಲ್ಲಿ ಅರ್ಜೆಂಟಿನಾದ ಮ್ಯಾನ್ಯುಲ್ ಮುನ್ನಡೆ ಸಾಧಿಸುತ್ತಿದ್ದಂತೆ ಸಿನ್ನರ್ ಆಡಲೂ ಆಗದೆ ಸುಸ್ತಾದರು. ಕಡೆ ಕಡೆಗೆ ಸರ್ವ್ ಪಿಕ್ ಮಾಡುವುದಕ್ಕೂ ಪರದಾಟ ನಡೆಸಿದರು. ಅಂತಿಮದಲ್ಲಿ ಎರಡು ಸೆಟ್‌ಗಳನ್ನು ಸೋತ ಸಿನ್ನರ್ ಪಂದ್ಯವನ್ನು ಬಿಟ್ಟರು. ಇದು ಜುವಾನ್ ಅವರಿಗೆ ಅತಿ ದೊಡ್ಡ ಗೆಲುವಾಗಿದೆ.

ರಬಕಿನಾ ಔಟ್: ಆಸ್ಟ್ರೇಲಿಯನ್ ಓಪನ್ ಪಂದ್ಯಾವಳಿಯ ವಿಜೇತೆ ರಬಕಿನಾ ತಮ್ಮ ಎರಡನೇ ಸುತ್ತಿನ ಪಂದ್ಯದಲ್ಲೇ ಸೋತು ಹೊರಬಿದ್ದರು. ಯುಲಿಯಾ ಅವರೊಂದಿಗೆ ಆಡಿದ ಅವರು, ಮೂರು ಸೆಟ್‌ಗಳ ಕಠಿಣ ಹೋರಾಟದಲ್ಲಿ ಸೋತು ಹೊರಬಿದ್ದರು. ಮೊದಲಿನ ಸೆಟ್ 6–3ರಿಂದ ಗೆದ್ದಿದ್ದ ರಬಕಿನಾ ಮುಂದಿನ 2 ಸೆಟ್‌ಗಳಲ್ಲಿ 1–6, 6(4)–7(10)ರಿಂದ ಸೋತರು.

ಮ್ಯಾಗ್ನಸ್ ಕಾರ್ಲ್ಸನ್ ಮಣಿಸಿದ ಪ್ರಜ್ಞಾನಂದ!

ಓಸ್ಲೊ(ನಾರ್ವೆ): ಇಲ್ಲಿ ನಡೆಯುತ್ತಿರುವ ಪ್ರತಿಷ್ಠಿತ ನಾರ್ವೆ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ವಿಶ್ವ ನಂ.1 ಆಟಗಾರ ಮ್ಯಾಗ್ನಸ್ ಕಾರ್ಲ್ಸನ್ ಅವರನ್ನು ಕ್ಲಾಸಿಕಲ್ ವಿಭಾಗದಲ್ಲಿ ಮಣಿಸಿ ದಾಖಲೆ ಬರೆದಿದ್ದಾರೆ.

ಇನ್ನೊಂದು ಪ್ರಮುಖ ಪಂದ್ಯದಲ್ಲಿ ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಹಾಗೂ ಟೂರ್ನಿಯ ಅಗ್ರಸ್ಥಾನದಲ್ಲಿರುವ ಅಲಿರೇಜಾ ಫಿರೌಜಾ ನಡುವಿನ ಕ್ಲಾಸಿಕಲ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಬಳಿಕ ನಡೆದ ಆರ್ಮಗೆಡ್ಡನ್ ಪಂದ್ಯದಲ್ಲಿ ಫಿರೌಜಾ ಗೆದ್ದು ಹೆಚ್ಚುವರಿ ಅಂಕಗಳನ್ನು ತಮ್ಮದಾಗಿಸಿಕೊಂಡು ಅಗ್ರಸ್ಥಾನವನ್ನು ಭದ್ರಪಡಿಸಿಕೊಂಡರು.

ದಿವ್ಯಾಗೆ ಆರ್ಮಗೆಡ್ಡನ್ ಜಯ: ಭಾರತದ ದಿವ್ಯಾ ದೇಶಮುಖ್ ನಡುವಿನ ಕ್ಲಾಸಿಕಲ್ ಕದನ ಡ್ರಾದಲ್ಲಿ ಅಂತ್ಯಗೊಂಡಿತು. ಆದರೆ ಆರ್ಮಗೆಡ್ಡನ್‌ನಲ್ಲಿ ದಿವ್ಯಾ ಗೆದ್ದು ಅಮೂಲ್ಯ ಹೆಚ್ಚುವರಿ ಅಂಕಗಳನ್ನು ಕಲೆಹಾಕಿದರು.

ಸೂರ್ಯವಂಶಿ ಆಟಕ್ಕೆ ಬಹುಪರಾಕ್

ಚಂಡೀಗಢ: ಪ್ಯಾಟ್ ಕಮ್ಮಿನ್ಸ್ ಅಂಥ ವಿಶ್ವದರ್ಜೆ ಬೌಲರ್‌ನಿಂದ ಹಿಡಿದು ಸಾಕೀಬ್ ಹುಸೈನ್ ಅಂಥ ದೇಶಿ ಪ್ರತಿಭೆಗಳವರೆಗೂ ವೈಭವ್ ಸೂರ್ಯವಂಶಿ ಕಂಡರೆ ಒತ್ತಡ, ಸಿಕ್ಸ್ ಹೊಡೆಸಿಕೊಳ್ಳುವ ಆತಂಕ. ಬಂದ ಬೌಲರ್‌ಗಳನ್ನೆಲ್ಲಾ ದಂಡಿಸುತ್ತಾ, ಸಿಕ್ಸರ್‌ಗಳ ಸಪ್ತಸ್ವರ ಮೂಡಿಸುತ್ತಾ ವೈಭವ್ ದಾಖಲೆಗಳನ್ನು ಗೀಚಿದರು. ಐಪಿಎಲ್ ಎಲಿಮಿನೇಟರ್ ಪಂದ್ಯದಲ್ಲಿ ಅಸಾಮಾನ್ಯ ಇನ್ನಿಂಗ್ಸ್ ಒಂದನ್ನು ಕಟ್ಟಿರುವ 15 ವರ್ಷದ ಹುಡುಗ ವಿಶ್ವ ಕ್ರಿಕೆಟ್ ಅಭಿಮಾನಿಗಳ ಹುಬ್ಬೇರುವಂತೆ ಮಾಡಿದರು. ಕ್ರಿಕೆಟಿಗರನ್ನು ನಿಬ್ಬೆರಗಾಗುವಂತೆ ಮಾಡಿದ್ದಲ್ಲದೆ, ಹಿರಿಯ ಮತ್ತು ನಿವೃತ್ತ ಕ್ರಿಕೆಟಿಗರಿಂದ ಬಹುಪರಾಕ್ ಅನ್ನಿಸಿಕೊಂಡರು.

ಎಲಿಮಿನೇಟರ್ ಪಂದ್ಯ ಕೇವಲ ಪಂದ್ಯಾವಾಗಿರಲಿಲ್ಲ, ಭಾರತದ ಉಜ್ವಲ ಭವಿಷ್ಯದ ಪ್ರಮಾಣವಾಗಿತ್ತು. ದೇಶದ ಕ್ರಿಕೆಟ್ ಯಾವ ಮಟ್ಟಕ್ಕೆ ಹೋಗಲಿದೆ ಎಂಬ ವಿಚಾರದ ಜಲಕ್ ಆಗಿತ್ತು. ಇದಕ್ಕೆ ದಿಗ್ಗಜರಾದ ಸಚಿನ್ ತೆಂಡೂಲ್ಕರ್, ಕ್ರಿಸ್ ಗೇಲ್ ಅಂಥವರು ಮೆಚ್ಚುಗೆ ವ್ಯಕ್ತಪಡಿಸಿದರು.



ಅತ್ಯುತ್ತಮ ಬ್ಯಾಟ್ ಸ್ವಿಂಗ್: ಸಚಿನ್: ಸಚಿನ್ ತೆಂಡೂಲ್ಕರ್ ವೈಭವ್ ಸೂರ್ಯವಂಶಿಯ ಬ್ಯಾಟ್ ಸ್ವಿಂಗ್ ಬಗ್ಗೆ ಉಲ್ಲೇಖಿಸಿದರು. ಇನ್ನಿಂಗ್ಸ್ ಬಗ್ಗೆ ತಮ್ಮ ಟ್ವಿಟ್ಟರ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ವೈಭವ್ ಸೂರ್ಯವಂಶಿ ಬ್ಯಾಟ್ ಸ್ವಿಂಗ್ ನಿಜಕ್ಕೂ ಮೆಚ್ಚುವಂಥದ್ದು. ಅದಕ್ಕೂ ಹೆಚ್ಚಾಗಿ ಬ್ಯಾಟಿಂಗ್ ಸೌಂದರ್ಯತೆ ಹೆಚ್ಚಿಸಿದ್ದು ಅವರ ಫುಟ್‌ವರ್ಕ್. ಬೌಂಡರಿ ಬಾರಿಸಲು ಜಾಗ ಮಾಡಿಕೊಳ್ಳುವ ಅವರ ಕಾರ್ಯವೈಖರಿಯೇ ವಿಶೇಷ. ಇದೊಂದು ಅದ್ಭುತ ಇನ್ನಿಂಗ್ಸ್ ಎಂದು ಹೇಳಿದ್ದಾರೆ.


ಸ್ವಂತ ದಾಖಲೆ ಉಡೀಸ್: ಗೇಲ್ ಸಂಭ್ರಮ: ಕ್ರಿಕೆಟ್ ಲೋಕದ ಸಿಕ್ಸ್ ಹಿಟ್ಟರ್, ವಿಂಡೀಸ್ ದಿಗ್ಗಜ ಕ್ರಿಸ್ ಗೇಲ್ ತಮ್ಮದೇ ದಾಖಲೆ ಮುರಿಯುವುದನ್ನು ನೋಡಿ ಆನಂದಿಸಿದರು. 65 ಸಿಕ್ಸರ್‌ಗಳನ್ನು ಬಾರಿಸಿರುವ ವೈಭವ್ ಗೇಲ್ ಅವರ ಒಂದೇ ಸೀಸನ್‌ನಲ್ಲಿ ಅತಿ ಹೆಚ್ಚು ಸಿಕ್ಸರ್ ದಾಖಲೆ ಮುರಿದಿದ್ದಾರೆ. ವೈಭವ್ ಬಾರಿಸಿದ ಸಿಕ್ಸರ್‌ಗಳು ನಿಜಕ್ಕೂ ಆಕರ್ಷಕ. ಅವರು ಯುನಿವರ್ಸಲ್ ಬಾಸ್ ಎಂದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಪೋಸ್ಟ್‌ನಲ್ಲಿ ಗೇಲ್ ಅಭಿಪ್ರಾಯಪಟ್ಟಿದ್ದಾರೆ. ಇವರಿಬ್ಬರಲ್ಲದೆ ಕ್ರಿಕೆಟ್ ಲೋಕದ ದಿಗ್ಗಜರು, ವೈಭವ್ ಅವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಂಕ್ಷಿಪ್ತ ಸ್ಕೋರ್

ರಾಜಸ್ಥಾನ 20 ಓವರ್‌ಗಳಲ್ಲಿ 243/8: ವೈಭವ್ 97, ಧ್ರುವ್ 50; ಪ್ರಫುಲ್ 54/3
ಹೈದರಾಬಾದ್ 19.2 ಓವರ್‌ಗಳಲ್ಲಿ 196/10: ನಿತಿಶ್‌ಕುಮಾರ್ 38, ಸಲೀಲ್ 35; ಆರ್ಚರ್ 58/3

ಪದಬಂಧ

ರಾಜಾ ಸಂಗಮೇಶ ಹಿರೇಮಠ



5998

5997 ಉತ್ತರ

ಎಡದಿಂದ ಬಲಕ್ಕೆ:
1.ಗರತಿ 3.ಕೊಂಕುನುಡಿ
5.ತಮಿಂಗಿಲ 7.ಗೋರಸ
8.ಅಂಕಿತ 10.ರಹಿತ
12.ರಂಗೋಲಿ
16.ದಾರಿತಪ್ಪು
17.ವಿದಳನ 18.ಗೆಬರು

ಮೇಲಿನಿಂದ ಕೆಳಕ್ಕೆ:
1 ಗಡಿಗೆ 2.ತಿತಿಕ್ಷೆ
4.ಕುಮಾರ 6.ಗಿರಕಿ
7.ಗೋಪುರ 9.ತಬ್ಬಲಿ
11.ಹಿಜರಿ 13.ಗೋಮಾಳ
14.ಅಪ್ಪುಗೆ 15.ನವಿರು

ಎಡದಿಂದ ಬಲಕ್ಕೆ
3.ಉರಿಯುತ್ತ ಹೆಚ್ಚು ಪ್ರಕಾಶಿಸುತ್ತಿರುವುದು (5)
5.ಹಗುರವಾಗಿಲ್ಲದ ಜಲಸಾರಿಗೆಯಿದು (3)
6.ಊರ್ಮಿಳೆಯ ಪತಿ–ಶ್ರೀರಾಮ ಸಹೋದರ (3)
8.ಮನೆಯು ಎರಡು ಕಂಬಗಳ ನಡುವಿನ ಪ್ರದೇಶ (3)
9.ಅರ್ಥಪೂರ್ಣವಾಗಿ ಜೋಡಿಸಿದ ಪದಸಮೂಹ (2)
10.ಭಯವನ್ನುಂಟು ಮಾಡುವಂಥಾದ್ದು (2)
13.ಮಿತಿಯನ್ನು ಕಡೆಯಲ್ಲಿಟ್ಟುಕೊಂಡ ರೇಖಾಗಣಿತ (3)
15.ವ್ಯಕ್ತಿಗೆ ನೀಡುವ ಅಧಿಕೃತ ಹುದ್ದೆ (3)
17.ಮಲಗುವಾಗ ಹೊದ್ದುಕೊಳ್ಳುವ ಬಟ್ಟೆ (3)
18.ಪ್ರತಿನಿತ್ಯ ಉಪಯೋಗಿಸುವಂಥಾದ್ದು (5)

ಮೇಲಿನಿಂದ ಕೆಳಕ್ಕೆ
1.ಹಿತ–ಹಸು ಒಳಗೊಂಡ ಆತುರಪಡು (5)
2.ಬೆರಳು ಬಳಸುವ ಅಳತೆಯ ಪ್ರಮಾಣ (3)
4.ಮಾಲಿಕೆಯು ಬಗ್ಗೆ ತಿಳಿದುಕೊಂಡ ಒಡೆಯ (3)
7.ಶಿವನ ಪ್ರಮಥರ ಸಮೂಹ ತಲೆಕೆಳಗಾಗಿದೆ (2)
8.ಪೌಷ್ಟಿಕ–ಔಷಧೀಯ ಗುಣವುಳ್ಳ ಹಣ್ಣು (3)
9.ಮಾತಿನ ಒಡೆಯ–ವಾಗ್ಮಿ (3)
11.ಅತಿಯಾದ ಮಾತು (5)
12. ಧರ್ಮಕ್ಕೆ ವಿರುದ್ಧವಾದ ಕರ್ಮ (2)
14.ಜೋಡಿ ಎಂಬರ್ಥದ ಹನ್ನೆರಡು ರಾಶಿಗಳಲ್ಲೊಂದು (3)
16.ಪರ್ಯಾಲೋಚನೆಯ ಸಮಾನಪದ (3)

ಕಿರುಸುದ್ದಿ

ಟಿಪ್ಪರ್ ಡಿಕ್ಕಿ: ಪ್ರಾಣಾಪಾಯದಿಂದ ವ್ಯಕ್ತಿ ಪಾರು

ಸಿಂಧನೂರು: ಅತಿ ವೇಗ ಹಾಗೂ ಬೇಜವಾಬ್ದಾರಿತನದಿಂದ ಚಲಿಸುತ್ತಿದ್ದ ಟಿಪ್ಪರ್ ವಾಹನವೊಂದು ಬೈಕ್‌ನ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ, ಬೈಕ್ ಸವಾರರು ಮತ್ತು ಜೊತೆಗೆ ಇದ್ದ ವ್ಯಕ್ತಿ ಕೂದಲೆಳೆಯ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿರುವ



ಭೀಕರ ಘಟನೆ ಏಳೂರಾಗಿ ಕ್ಯಾಂಪ್‌ನ ಹತ್ತಿರ ನಡೆದಿದೆ. ಇನ್ನೂ ಈ ಅಪಘಾತದ ರಭಸಕ್ಕೆ ಬೈಕ್ ಜಖಂಗೊಂಡಿದ್ದು,ಹಿಂಬದಿ ಕುಳಿತಿದ್ದ ಸವಾರನ ಮೂಳೆ ಮುರಿದು ಆಸ್ಪತ್ರೆಗೆ ದಾಖಲಾಗಿದ್ದಾರೆ. ತಾಲೂಕಿನ ಏಳೂರಾಗಿ ಕ್ಯಾಂಪ್ ನಿವಾಸಿಗಳಾದ ಆದೇಶ ತಂದೆ ನಿಂಗಪ್ಪ (27) ಮತ್ತು ನಿಂಗಪ್ಪ ತಂದೆ ದುರಗಪ್ಪ (40) ಎಂಬುವರು ತಮ್ಮ ಬೈಕಿನಲ್ಲಿ ಕ್ಯಾಂಪ್ ಹತ್ತಿರ ಹೋಗುತ್ತಿದ್ದಾಗ ಈ ಘಟನೆ ಸಂಭವಿಸಿದೆ.ಹಿಂಬದಿಯಿಂದ ಅತಿ ವೇಗವಾಗಿ ಬಂದ ಟಿಪ್ಪರ್ ಬೈಕಿಗೆ ಜೋರಾಗಿ ಡಿಕ್ಕಿ ಹೊಡೆದಿದೆ ಈ ಡಿಕ್ಕಿಯ ರಭಸಕ್ಕೆ ಬೈಕ್ ಸವಾರರು ಕೆಳಗೆ ಬಿದ್ದಿದ್ದು,ಟಿಪ್ಪರ್ ಅವರ ಮೇಲೆಯೇ ಹತ್ತಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಿತ್ತು.ಈ ವೇಳೆ ಬೈಕ್ ಸವಾರರು ಜೋರಾಗಿ ಚೀರಿದ್ದರಿಂದ ಚಾಲಕ ಬ್ರೇಕ್ ಹಾಕಿದ್ದು,ಕ್ಷಣಾರ್ಧದಲ್ಲಿ ಭೀಕರ ದುರಂತವೊಂದು ತಪ್ಪಿದಂತಾಗಿದೆ ಆದರೆ ಅಪಘಾತದಲ್ಲಿ ಬೈಕ್ ಮಾತ್ರ ಸಂಪೂರ್ಣ ಜಖಂಗೊಂಡಿದ್ದು,ಹಿಂಬದಿ ಕುಳಿತಿದ್ದ ನಿಂಗಪ್ಪ ಅವರ ಸೊಂಟದ ಮೂಳೆ ಮುರಿದಿದೆ ಆಗ ತಕ್ಷಣ ಸ್ಥಳೀಯರು ಗಾಯಾಳುವನ್ನು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದ್ದಾರೆ. ಈ ಟಿಪ್ಪರ್ ತುರ್ವಿಹಾಳ ಪಟ್ಟಣದ ಸುನಿಲ್ ಎಂಬುವವರಿಗೆ ಸೇರಿದ್ದಾಗಿದೆ ಈ ಅಪಘಾತದ ಬಳಿಕ ಬೈಕ್ ಸವಾರ ಆದೇಶ ಅವರ ಟಿಪ್ಪರ್ ಚಾಲಕನನ್ನು,''ಯಾಕೆ ಕಣ್ಣು ಕಾಣಿಸುವುದಿಲ್ಲವೇ? ನಮ್ಮ ಮೇಲೆಯೇ ಗಾಡಿ ಹತ್ತಿಸುತ್ತಿದ್ದೆಯಲ್ಲಾ?'' ಎಂದು ಪ್ರಶ್ನಿಸಿದ್ದಾರೆ. ಇದಕ್ಕೆ ಉಡಾಫೆಯಿಂದ ಉತ್ತರಿಸಿದ ಚಾಲಕ, ನಾನು ನಿದ್ದೆಗಣ್ಣಿನಲ್ಲಿದ್ದೆ, ಹಾಗಾಗಿ ಗಮನಿಸಿಲ್ಲ ಎಂದು ಹೇಳಿ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ಆದೇಶ ಹೇಳಿದರು. ಈ ಘಟನಾ ಸ್ಥಳಕ್ಕೆ ಪೊಲೀಸ್ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು,ಮಾಹಿತಿ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ ಎಂದು ಬೈಕ್ ಸವಾರ ಆದೇಶ ನಾಯಕ ತಿಳಿಸಿದ್ದಾರೆ.

ಕಲೆಗಳಿಂದ ನಮ್ಮ ಸಂಸ್ಕೃತಿ ಉಳಿಸೋಣ

ಬಳ್ಳಾರಿ: ಕಲೆಗಳ ಪ್ರದರ್ಶನಕ್ಕೆ ಪ್ರೋತ್ಸಾಹ ನೀಡಬೇಕು, ಆಗಲೇ ನಮ್ಮ ಸಂಸ್ಕೃತಿಯನ್ನು ಉಳಿಸಿ, ಬೆಳೆಸಲು ಸಾಧ್ಯ ಎಂದು ಕಿಷ್ಕಿಂದ ವಿಶ್ವವಿದ್ಯಾಲಯದ ಕುಲಸಚಿವ ಡಾ.ರಾಜು ಜಡಾರ್ ತಿಳಿಸಿದರು. ನಗರದ ಹೊಂಗಿರಣ ರಂಗ ಮಂದಿರದಲ್ಲಿ ತುಂಗಾ ಗಂಗಾ ಸಾಂಸ್ಕೃತಿಕ ಕಲಾ ಟ್ರಸ್ಟ್ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಆಶ್ರಯದಲ್ಲಿ ಹಮ್ಮಿಕೊಂಡಿದ್ದ ತುಂಗಾ ಅಧಿಕಮಾಸ ಸಾಂಸ್ಕೃತಿಕ ವೈಭವ 2026 ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ನಮ್ಮ ದೇಶದ, ನಾಡಿನ ಕಲೆಗಳು, ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸ ನಮ್ಮೆಲ್ಲರಿಂದಾಗಬೇಕು ಎಂದು ಅವರು ಅಭಿಪ್ರಾಯಪಟ್ಟರು. ಹಿರಿಯ ರಂಗ ಕಲಾವಿದ ಎಂ.ರಾಮಂಜಿನೆಯುಲು ಮಾತನಾಡಿ, ಕಲೆಗಳ ಉಳಿವಿಗೆ ಉದಯೋನ್ಮುಖ ಕಲಾವಿದರನ್ನು ಬೆಳೆಸಲು ಈ ಸಂಸ್ಥೆ ಮಾಡುತ್ತಿರುವ ಸೇವೆ ಅಪಾರ ಎಂದು ಸ್ಮರಿಸಿದರು. ಕರ್ನಾಟಕ ಕ್ರಿಯಾಶೀಲ ಶಿಕ್ಷಕರ ವೇದಿಕೆ ಜಿಲ್ಲಾಧ್ಯಕ್ಷ ರವಿ ಚೆಳಗುರ್ಕಿ ಮಾತನಾಡಿದರು. ಹವ್ಯಾಸಿ ಕಲಾವಿದರ ಒಕ್ಕೂಟದ ಜಿಲ್ಲಾ ಸಂಚಾಲಕರು ಜಿ.ಎಂ. ಚಂದ್ರಶೇಖರಯ್ಯ ಸ್ವಾಮಿ, ಆದೋನಿ ವೀಣ, ಶೇಷರೆಡ್ಡಿ, ವೀರೇಶ, ಗುರುಸ್ವಾಮಿ, ಪಂಪಾಪತಿ, ಹುಸೇನಸಾಬ, ಬಸವರಾಜ್ ಸ್ವಾಮಿ, ವೆಂಕಟೇಶಲು ಇತರರು ಇದ್ದರು. ಹಿರಿಯ ರಂಗ ಕಲಾವಿದ, ಪತ್ರಕರ್ತ ನಾಗಭೂಷಣ್ ಅವರು ನಿರೂಪಿಸಿದರು. ನಾಗರಾಜ್ ಗೌಡ ವಂದಿಸಿದರು.

ಕಾಲಮಿತಿಯಲ್ಲಿ ಜನನ, ಮರಣ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಿ

ಬಳ್ಳಾರಿ: ಜಿಲ್ಲೆಯಲ್ಲಿ ಜನನ ಮತ್ತು ಮರಣ ನೋಂದಣಿ ಪ್ರಕ್ರಿಯೆಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಕೆಸ್ವಾನ್ ಹಾಲ್ ನಲ್ಲಿ ಮಂಗಳವಾರ ಜನನ ಮತ್ತು ಮರಣ ನೊಂದಣಿ ಪ್ರಕ್ರಿಯೆ, ಬೆಳೆ ಅಂದಾಜು ಸಮೀಕ್ಷೆ ಹಾಗೂ ಕೃಷಿ ಗಣತಿಯ ವಿವಿಧ ಹಂತಗಳ ಪ್ರಗತಿ ಕುರಿತು ಆಯೋಜಿಸಿದ್ದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಯಾವುದೇ ಜನನ ಅಥವಾ ಮರಣ ಸಂಭವಿಸಿದಾಗ ಅದನ್ನು ನಿಗದಿತ ಅವಧಿಯೊಳಗೆ ನೋಂದಾಯಿಸುವುದು ಕಡ್ಡಾಯವಾಗಿದೆ. ತಾಲ್ಲೂಕು ಮಟ್ಟದ ಜನನ ಮತ್ತು ಮರಣ ಸಮನ್ವಯ ಸಮಿತಿ ಸಭೆಗಳು ಕಡ್ಡಾಯವಾಗಿ ಜರುಗಿಸಬೇಕು. ಈ ಕುರಿತು ಆಯಾ ತಾಲ್ಲೂಕು ತಹಶೀಲ್ದಾರರು ಮೇಲ್ವಿಚಾರಣೆ ನಡೆಸಬೇಕು ಎಂದು ಸೂಚಿಸಿದರು.

ಜನನ ಅಥವಾ ಮರಣ ಸಂಭವಿಸಿದ 21 ದಿನಗಳ ಒಳಗಾಗಿ ಉಚಿತವಾಗಿ ನೋಂದಣಿ ಮಾಡಬಹುದು. 21 ದಿನಗಳು ಕಳೆದ ನಂತರ ಮತ್ತು 30 ದಿನಗಳ ಒಳಗಾಗಿ ಸಣ್ಣ ಪ್ರಮಾಣದ ತಡಶುಲ್ಕ ಪಾವತಿಸಿ ನೋಂದಾಯಿಸಬಹುದು. 30 ದಿನಗಳ ನಂತರ ಮತ್ತು 1 ವರ್ಷದ ಒಳಗಾಗಿ ನೋಂದಣಿ ಮಾಡಬೇಕಾದರೆ ನಿಗದಿತ ಪ್ರಾಧಿಕಾರದ ಅನುಮತಿ ಮತ್ತು ತಡಶುಲ್ಕ ಬೇಕಾಗುತ್ತದೆ. ಒಂದು ವರ್ಷ ಕಳೆದರೆ ಮ್ಯಾಜಿಸ್ಟ್ರೇಟ್ ಆದೇಶದ ಮೇರೆಗೆ ಮಾತ್ರ ನೋಂದಣಿ ಮಾಡಲು ಅವಕಾಶವಿರುತ್ತದೆ. ಹಾಗಾಗಿ ಸಾರ್ವಜನಿಕರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ನಿಗದಿತ ಅವಧಿಯೊಳಗೆ ನೋಂದಾಯಿಸಿಕೊಳ್ಳುವಂತೆ ಸೂಚಿಸಬೇಕು ಎಂದರು.

ಕೆಲವು ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳು ಮಗುವಿನ ಜನನ ಅಥವಾ ವ್ಯಕ್ತಿಯ ಮರಣದ ಮಾಹಿತಿಯನ್ನು ನಿಗದಿತ ಸಮಯದೊಳಗೆ ಸಾರ್ವಜನಿಕ ಆರೋಗ್ಯ ಅಧಿಕಾರಿಗಳಿಗೆ ಆನ್‌ಲೈನ್ ನಲ್ಲಿ ಅಪ್‌ಲೋಡ್ ಮಾಡದಿರುವುದು ವಿಳಂಬಕ್ಕೆ ಕಾರಣವಾಗಿದೆ. ಆಧಾರ್ ಕಾರ್ಡ್, ವಿಳಾಸದ ಪುರಾವೆ ಮತ್ತು ಆಸ್ಪತ್ರೆಯ ದಾಖಲೆಗಳಲ್ಲಿ ಸಣ್ಣ ತಪ್ಪುಗಳಿದ್ದರೂ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ ಅಥವಾ ಮರುಪರಿಶೀಲನೆಗೆ ಕಳುಹಿಸಲಾಗುತ್ತಿದೆ. ಜನನ ಮತ್ತು ಮರಣ ಪ್ರಮಾಣಪತ್ರಗಳು ಸಕಾಲದಲ್ಲಿ ಸಿಗದೇ ಇರುವುದರಿಂದ ಜನಸಾಮಾನ್ಯರ ದೈನಂದಿನ ಕೆಲಸಗಳಿಗೆ ಭಾರಿ ಹಿನ್ನಡೆಯಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಡಿಎಚ್‌ಒ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳಿದ್ದರೂ.

ವಿದ್ಯಾರ್ಥಿಗಳಿಗೆ ಗಾಂಧಾರಿ ವಿದ್ಯೆ ತರಬೇತಿ

ಬಳ್ಳಾರಿ: ನಗರದ ಸಂಗಮೇಶ್ವರ ಬಡಾವಣೆಯ ಶ್ರೀಸಂಗಮೇಶ್ವರ ದೇವಸ್ಥಾನದಲ್ಲಿ ಶ್ರೀನಂದಿಪುರ ಅಜ್ಜನವರ ಪುಣ್ಯಾರಾಧನೆ ನಿಮಿತ್ತ ಪೂರ್ವಭಾವಿ ಸಭೆಯನ್ನು ಗುರುವಾರ ಹಮ್ಮಿಕೊಳ್ಳಲಾಗಿತ್ತು.

ಜಮಾಯಿಸಿದ ಗಣ್ಯರು ಪುಣ್ಯಾರಾಧನೆ ಆಚರಣೆ ನಿಮಿತ್ತ ಸುದೀರ್ಘ ಚರ್ಚಿಸಿ, ಅರ್ಥಪೂರ್ಣವಾಗಿ, ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಿದರು.

ನಂತರ ಚಿರಂಬರರಾವ್ ಅವರ ನೇತೃತ್ವದಲ್ಲಿ ಗಾಂಧಾರಿ ವಿದ್ಯೆಯನ್ನೂ ಉಮಾ ಗಡಗಿ ಅವರು, 15 ಮಕ್ಕಳಿಗೆ ಕಲಿಸಿದರು. ಈ ತಂಡದ ಜೊತೆ ಚಿದಂಬರ ರಾವ್, ಸಿ.ಕೆ.ಪ್ರಕಾಶ್ ಹಾಗು ಎ. ರಾಘವೇಂದ್ರ ಅವರೂ ಜೊತೆ ಗೂಡಿ ಈ ಗಾಂಧರಿ ವಿದ್ಯೆಯನ್ನು ಹೇಳಿಕೊಟ್ಟರು. ವನಜಾಕ್ಷಿ ಅವರು ಕೈಜೋಡಿಸಿದರು.

ಅಧ್ಯಕ್ಷರಾಧ ಕೆ.ರಾಮಲಿಂಗಪ್ಪ, ಪತಂಜಲಿ ಇಸ್ವಿ ಪಂಪಾಪತಿ, ಉದ್ಯಮಿ ಜೋಳದರಾಶಿ ತಿಮ್ಮಪ್ಪ ಅವರು ಮಾತನಾಡಿದರು. ಸುಮಾ ರೆಡ್ಡಿ, ಅಶೋಕ್ ದಿನ್ನಿ, ವಸ್ತ್ರದ ವಾಮಣ್ಣ, ಪ್ರಕಾಶ್, ರಾಘವೇಂದ್ರ, ರಮೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು. ನಂತರ ಮಕ್ಕಳಿಗೆ ಪ್ರಮಾಣಪತ್ರ ವಿತರಿಸಲಾಯಿತು.

ಪತಂಜಲಿ ಸಮಿತಿ, ಶಂಕರಾಚಾರ್ಯ, ಚೈತನ್ಯ ವೇದಿಕೆ ಹಾಗೂ ಎಸ್‌ಆರ್‌ಕೆ ಯೋಗಾ ಕೇಂದ್ರದ ಮುಖ್ಯಸ್ಥರು, ಗಣ್ಯರು ಭಾಗವಹಿಸಿದ್ದರು.



ಪ್ರಶ್ನಾ ಚಿಂತನೆಯಲ್ಲಿ ಉತ್ತರ ಸಿಕ್ಕಿ ಉರುಳಿಹೋಗಿದೆ ಈಗ ತಿಂಗಳು ಎರಡು

ಇನ್ನೂ ಹಾಳುಕೊಂಪೆಯಲ್ಲೇ 'ಮಹಾದೇವ'!

ಪುತ್ತೂರು: ಇತಿಹಾಸ ಪ್ರಸಿದ್ಧ ಮುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯದ ಹೊರ ಪ್ರಾಂಗಣದಲ್ಲಿ ಒಂದು ಸಮಯದಲ್ಲಿ ಆಕರ್ಷಣೆಯ ಕೇಂದ್ರವಾಗಿದ್ದ ಶಿವನ ಸುಂದರ ವಿಗ್ರಹ ಈಗ ದೇವರಮಾರು ಗದ್ದೆಯ ತುದಿಯಲ್ಲಿ ಅನಾಥ ಸ್ಥಿತಿಯಲ್ಲಿದೆ!

ದೇವರಮಾರು ಗದ್ದೆಯ ತುದಿಗೆ...

ದೇವಾಲಯದ ಹೊರಾಂಗಣದಲ್ಲಿ ಹಾಲಿ ರಾಜಗೋಪುರ ಇರುವ ಸ್ಥಳದಲ್ಲಿ ಹಸನ್ಮುಖಿ ಶಿವನ ಬೃಹತ್ ಗಾತ್ರದ ವಿಗ್ರಹವನ್ನು ಹಿಂದೆ ಸ್ಥಾಪಿಸಲಾಗಿತ್ತು. ಅನಂತರ ಪ್ರಶ್ನಾ ಚಿಂತನೆಯಲ್ಲಿ ಕಂಡುಬಂದಂತೆ ಕಾರಣಗಳಿಗಾಗಿ ತೆರವುಗೊಳಿಸಲಾಗಿತ್ತು. ಬಳಿಕ ದೇವರಮಾರು ಗದ್ದೆಯ ತುತ್ತ ತುದಿಯ ಸ್ಮಶಾನದ ಸನಿಹ ವಿಗ್ರಹವನ್ನು ಸ್ಥಾಪಿಸಿ ಪಾರ್ಕ್ ರೀತಿಯಲ್ಲಿ



ಸುಂದರಗೊಳಿಸಲಾಗಿತ್ತು. ಅನಂತರದ ಕೆಲವು ಸಮಯ ಈಶ ಸಂಸ್ಥೆಯಿಂದ ಪಾರ್ಕ್‌ನ ನಿರ್ವಹಣೆ ಮಾಡಲಾಗಿತ್ತು. ಕಾರಂಜಿ, ಹುಲ್ಲು ಹಾಸು ಇದ್ದು ಭಕ್ತರು ಆಕರ್ಷಣೆಯ ಕೇಂದ್ರವಾಗಿತ್ತು. ಅದಾಗಿ ಕೆಲವು ವರ್ಷಗಳೇ ಕಳೆದಿವೆ. ಈಗ ಕಸ ಕೊಂಪೆಯ ಮಧ್ಯೆ ಹೊಳಪು ಕಳೆದು ಕೊಂಡಿರುವ ಶಿವನ ವಿಗ್ರಹ ಅನಾಥ ಸ್ಥಿತಿಯಲ್ಲಿದೆ.

ದೇವರ ವಿಗ್ರಹದ ಅನಾಥ ಸ್ಥಿತಿಯ ಕುರಿತು ಹಾಲಿ ದೇವಾಲಯದ ವ್ಯವಸ್ಥಾಪನ ಸಮಿತಿಯವರ ಗಮನಸೆಳೆದಾಗ ಶೀಘ್ರ ಪ್ರಶ್ನಾ ಚಿಂತನೆ ಇರಿಸಿ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎನ್ನುವ ಉತ್ತರ ಲಭಿಸಿದೆ. ಈ ಉತ್ತರ ಲಭಿಸಿಯೇ ಎರಡು ತಿಂಗಳು ಕಳೆದಿದೆ. ಭಕ್ತರ ನಂಬಿಕೆಯ ಪ್ರತೀಕವಾಗಿರುವ ದೇವರ ವಿಗ್ರಹವನ್ನು ಈ ರೀತಿ ಅನಾಥವಾಗಿ ಹಾಳು ಕೊಂಪೆಯಲ್ಲಿ ಬಿಡುವುದು ಎಷ್ಟು ಸರಿ ಎನ್ನುವುದು ಪ್ರಶ್ನೆ!

ನಾಳೆಯಿಂದ ಮಹಿಳಾ ಕ್ರಿಕೆಟ್ ಪಂದ್ಯಾವಳಿ



ಬಳ್ಳಾರಿ: ಬಳ್ಳಾರಿಯ ಇತಿಹಾಸದಲ್ಲೇ ಮೊದಲ ಬಾರಿಗೆ ನಗರದ ಕಂಟೋನ್ಮೆಂಟ್ ಪ್ರದೇಶದ ವಿಮ್ಸ್ ಗ್ರೌಂಡ್‌ನಲ್ಲಿ ಮಹಿಳಾ ಕ್ರಿಕೆಟ್ ಪಂದ್ಯಾವಳಿಯನ್ನು ಮೇ 30 ಹಾಗೂ 31ರಂದು ಆಯೋಜಿಸಲಾಗಿದೆ ಎಂದು ಬಳ್ಳಾರಿ ಜಿಲ್ಲಾ ಮಹಿಳಾ ಕ್ರಿಕೆಟ್ ಅಕಾಡೆಮಿ ಅಧ್ಯಕ್ಷ ಬ್ರಹ್ಮಯ್ಯ ನಾಯ್ಡು ತುಮ್ಮನೇನಿ ಹೇಳಿದರು. ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಳ್ಳಾರಿಯಲ್ಲಿ ಮೊದಲ ಬಾರಿಗೆ ಬಳ್ಳಾರಿ ಜಿಲ್ಲಾ ಮಹಿಳಾ ಕ್ರಿಕೆಟ್ ಅಕಾಡೆಮಿ ವತಿಯಿಂದ ಮಹಿಳೆಯರಿಗಾಗಿಯೇ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸುತ್ತಿರುವುದು ಸಂತಸ ಮೂಡಿಸಿದೆ. ಇಲ್ಲಿನ ನಮ್ಮ ವಿಮ್ಸ್ ಗ್ರೌಂಡ್ ನಲ್ಲಿ ಈ ಹಿಂದೆ ಹೈದ್ರಾಬಾದನ ಅಂತಾರಾಷ್ಟ್ರೀಯ ಆಟಗಾರ್ತಿ ಡಯಾನ ಅವರು, ಬೆಂಗಳೂರು, ಹೈದರಾಬಾದ್, ಪೂನಾ, ವಿಜಯಪುರ ತಂಡಗಳ ಮಧ್ಯೆ ಕ್ರಿಕೆಟ್ ಪಂದ್ಯಾವಳಿಯಲ್ಲಿ ಆಡಿದ್ದು ಅವಿಸ್ಮರಣೀಯ. ಇವರ ಜೊತೆಗೆ ವಿಶ್ವಕಪ್ ಕ್ರೀಡಾಪಟು ರಾಜೇಶ್ವರಿ ಗಾಯಕವಾಡ, ವೇದ ಕೃಷ್ಣಮೂರ್ತಿ ಇತರರೊಂದಿಗೆ ನಮ್ಮ ಬಳ್ಳಾರಿಯ ಮಹಿಳಾ ಕ್ರೀಡಾಪಟುಗಳು ಆಡಿದ್ದಾರೆ. ನಮ್ಮ ಬಳ್ಳಾರಿಯ ತಂಡ ಬೆಂಗಳೂರು, ವಿಜಯಪುರ ತಂಡದೊಂದಿಗೆ ಆಟವಾಡಿರುವ ಹೆಗ್ಗಳಿಕೆಯಿದೆ. ಈ ಅಕಾಡೆಮಿಯು ನಾನಾ ಕಾರಣಗಳಿಂದ ಆಕ್ಟಿವ್ ಆಗಿರಲಿಲ್ಲ, ಈಗ ಮತ್ತೆ ತಂಡಕ್ಕೆ ಎಲ್ಲರ ಸಹಕಾರದಿಂದ ಹೊಸ ರೂಪ ಸಿಕ್ಕಂತಾಗಿದೆ. ಇದಕ್ಕೆ ಅಕಾಡೆಮಿಯ ಸಂಸ್ಥಾಪಕ ಅಧ್ಯಕ್ಷ ವಿರೂಪಾಕ್ಷ ಸ್ವಾಮಿ ಹಿರೇಮಠ ಅವರ ಶ್ರಮ ಅಡಗಿದೆ. ಗಣಿ ಪ್ರಾಪರ್ಟಿಯ ಮಾಲೀಕ ಅಶೋಕ ಚೌಹಾಣ್ ಸೇರಿದಂತೆ ಅನೇಕ ಗಣ್ಯರ ಸಹಕಾರದಿಂದ ಮತ್ತೆ ಮಹಿಳಾ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದರು.

ಸಂಸ್ಥಾಪಕ ಅಧ್ಯಕ್ಷ ಡಾ.ವಿರೂಪಾಕ್ಷಯ್ಯ ಮಾತನಾಡಿ, ನಗರದ ವಿಮ್ಸ್ ಗ್ರೌಂಡ್ ನಲ್ಲಿ ರಾಜ್ಯಮಟ್ಟದ ಆಹ್ವಾನಿತ ಮಹಿಳಾ ಕ್ರಿಕೆಟ್ ಟೂರ್ನಮೆಂಟ್ ನ್ನೂ ಮೇ 30 ಹಾಗೂ 31ರಂದು ಆಯೋಜಿಸಲಾಗಿದೆ. 20 ಓವರ್‌ಗಳನ್ನ ಒಳಗೊಂಡಿದೆ. ಇದಕ್ಕೆ ಶ್ರೇಷ್ಠಾ ಇಂಟರನ್ಯಾಷನಲ್ ಶಾಲೆ ಹಾಗೂ ಗಣಿ ಪ್ರಾಪರ್ಟಿ ಬಳ್ಳಾರಿ ಅವರ ಸಹಕಾರ ಮಾಡಿದ್ದಾರೆ. ವಿಜೇತ ತಂಡಕ್ಕೆ ಮೊದಲ ಬಹುಮಾನ 25 ಸಾವಿರ, ಎರಡನೇ ಬಹುಮಾನ 15 ಸಾವಿರ, ಬೆಸ್ಟ್ ಬಾಲರಗೆ 5 ಸಾವಿರ, ಬೆಸ್ಟ್ ಬೆಟರ್ ಆಫ್ ದ ಟೂರ್ನಮೆಂಟ್ 5 ಸಾವಿರ, ನೀಡಲಾಗುವುದು. ನಮ್ಮ ಮಕ್ಕಳು ಶಿಕ್ಷಣದ ಜೊತೆಗೆ ಕ್ರೀಡೆಗಳಲ್ಲಿ ಮುಂದೆ ಬರಬೇಕು, ಸಾಧನೆ ಮಾಡಬೇಕು, ಅದರಲ್ಲೂ ಮಹಿಳೆಯರು ಕ್ರೀಡೆಯಲ್ಲಿ ಸಾಧನೆ ಮಾಡಬೇಕು ಎಂಬುದು ನಮ್ಮ ಬಯಕೆ, ನಮ್ಮ ಬಳ್ಳಾರಿಯ ಮಹಿಳಾ ಕ್ರಿಕೆಟ್ ಆಟಗಾರರು ಪಂದ್ಯಾವಳಿಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಅಕಾಡೆಮಿಯ ವರ್ಕಿಂಗ್ ಪ್ರೆಸಿಡೆಂಟ್ ಅಶೋಕ್ ಚೌಹಾಣ್, ಉಪಾಧ್ಯಕ್ಷೆ ಪಿ.ಉಜ್ವಲಾ ಶ್ರೀಧರ್, ಪ್ರಧಾನ ಕಾರ್ಯದರ್ಶಿ ನಾಗವೇಣಿ ಇತರರಿದ್ದರು.

ಮಾಧ್ಯಮ ಸಮಾಜದ ಬದಲಾವಣೆಯ ಸಂಕೇತ

ಕುರುಗೋಡು: ಮಾಧ್ಯಮ ರಂಗ ಎಂಬುದು ಬರೀ ಬರವಣಿಗೆಗೆ ಮಾತ್ರ ಸೀಮಿತವಲ್ಲ, ಅದು ಇಡೀ ಸಮಾಜದ ಬದಲಾವಣೆಯನ್ನೇ ಬಯಸುತ್ತದೆ ಎಂದು ಎಸ್ಸಿ, ಎಸ್ಟಿ, ಆಲೆಮಾರಿ ಸಮುದಾಯದ ಅಧ್ಯಕ್ಷೆ ಪಲ್ಲವಿ ತಿಳಿಸಿದರು.

ಸಮೀಪದ ಶಿರಿಗೇರಿ ಗ್ರಾಮದ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಸಿರಿಗೇರಿ ಯರಿಸ್ವಾಮಿಯವರ ಅನ್ನಪೂರ್ಣ ಪ್ರಕಾಶನ ಸಂಸ್ಥೆಯಿಂದ ಕೊಡಗಿನ ಶಕ್ತಿ ಪತ್ರಿಕೆಯ ಸಂಸ್ಥಾಪಕ ಅನಂತಶಯನ ಇವರಿಗೆ ಕೊಡ ಮಾಡಲ್ಪಡುವ ಪಿ. ಲಂಕೇಶ್ ಪ್ರಶಸ್ತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಾ,ಶಾಸಕಾಂಗ,ಕಾರ್ಯಾಂಗ, ನ್ಯಾಯಾಂಗದ ಆಗು ಹೋಗುಗಳನ್ನು ಗಮನಿಸಿ, ವಾಸ್ತವತೆ ಮತ್ತು ಬದ್ಧತೆಯಿಂದ ನಿಷ್ಪೂರವಾದಿಯಾಗಿ ಬರೆಯುವುದು ಅಷ್ಟು ಸುಲಭದ ಮಾತಲ್ಲ, ಆದಾಗ್ಯೂ ಸಹ ತಮ್ಮ ಕೌಟುಂಬಿಕ ಸಮಸ್ಯೆಗಳನ್ನು ಬದಿಗಿಟ್ಟು ಹೋರಾಡುತ್ತಿರುವ ಪತ್ರಕರ್ತರ ವೃತ್ತಿ



ಶ್ಲಾಘನೀಯ ಎಂದರು.

ಟಿವಿ ಮಾಧ್ಯಮ ಹಾಗೂ ಮೊಬೈಲ್ ಜಾಲತಾಣಗಳು ಮಹಿಳೆಯರ ಮೇಲಿನ ದೌರ್ಜನ್ಯ, ದಬ್ಬಾಳಿಕೆ, ಹಿಂಸಾಚಾರ, ಅತ್ಯಾಚಾರ ಸೇರಿದಂತೆ ಎಲ್ಲಾ ವಿಧದ ಕೃತ್ಯಗಳನ್ನು ಪದೇ ಪದೆ ಬಿತ್ತರಿಸಿ ಮಹಿಳೆಯರ ಮಾನ ಹರಾಜು ಹಾಕುತ್ತಿವೆ. ಆದರೆ ಪತ್ರಕರ್ತರು ನೈಜ ಸ್ವರೂಪದ ವರದಿಯನ್ನು ಲೇಖನಿಯಿಂದ ಬರೆಯುವ ಮೂಲಕ ಜನಮಾನಸದಲ್ಲಿ ಉಳಿದುಕೊಳ್ಳುತ್ತಾರೆ ಎಂದರು.

ಪಿ.ಲಂಕೇಶ್ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶಕ್ತಿ ಪತ್ರಿಕೆಯ ಅನಂತಶಯನ, ಕೊಡಗು ಪ್ರದೇಶದಲ್ಲಿ ಸಾಹಿತ್ಯದ ಗಂಧ ಗಾಳಿಯೇ ಗೊತ್ತಿಲ್ಲ, ಅಂತಹ ಪ್ರದೇಶದಲ್ಲಿ ಹಲವು ದಶಕಗಳ ಹಿಂದೆ ಬಿಳಿ ಕಪ್ಪು ವರ್ಣಿತ ಪತ್ರಿಕೆ ಶಕ್ತಿ ಪತ್ರಿಕೆಯನ್ನು ಹೊರತಂದಿದ್ದು ಸಾಮಾನ್ಯವಲ್ಲ, ಅಂದಿನ ಕಾಲಘಟ್ಟದಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆ ಮುಚ್ಚುವ ಸ್ಥಿತಿಗೆ ಒದಗಿತ್ತು, ಆ ಸಂದರ್ಭದಲ್ಲಿ ಸರ್ಕಾರದ ಆಶ್ರಯದಲ್ಲಿ ಬೆಳೆಯಬೇಕಾದ ಸ್ಥಿತಿ ಒದಗಿತು. ಇತ್ತೀಚಿನ ವಿದ್ಯಮಾನ ನೋಡಿದರೆ ಮೊಬೈಲ್ ಪ್ರಪಂಚ ಹೆಚ್ಚಾಗಿ ಬೆಳೆದಿದೆ. ಪತ್ರಿಕೋದ್ಯಮ ನಡೆಸುವುದೇ ಕಷ್ಟದಾಯಕವಾಗಿದೆ. ಇದಕ್ಕೆ ಮೂಲ ದಾರಿ ಜಾಹೀರಾತುಗಳು ಇಲ್ಲದೆ ಬದುಕಲಾರವು ಎಂಬ ಸ್ಥಿತಿಗೆ ಬಂದು ಒದಗಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ಅನಂತರ ಪ್ರಸ್ತಾವಿಕವಾಗಿ ಅನ್ನಪೂರ್ಣ ಪ್ರಕಾಶನ ಸಂಸ್ಥೆಯ ಸಿರಿಗೇರಿ ಯರಿಸ್ವಾಮಿ ಮಾತನಾಡಿದರು. ಇದೆ ವೇಳೆ ಅನಂತಶಯನ ಇವರಿಗೆ ಪಿ. ಲಂಕೇಶ್ ಪ್ರಶಸ್ತಿ ಪ್ರಧಾನ ನೀಡಿ ಗೌರವಿಸಲಾಯಿತು. ಸಹಾಯಕ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ದೇವಸ್ಥಾನದ ಧರ್ಮ ಅಧಿಕಾರಿ ಹೂಗಾರ್ ಬಸವರಾಜ, ತೆಕ್ಕಲಕೋಟೆ ವೃತ್ತ ನಿರೀಕ್ಷಕ ಚಂದನ್ ಗೋಪಾಲ್, ಸಿರಿಗೇರಿ ಪಿಎಸ್‌ಐ ಶಶಿಧರ ನಾಯಕ್, ಶಾನವಾಸಪುರ ಶಾಂತನಗೌಡ, ಬಿ.ಈರಯ್ಯ, ರಮೇಶ್ ಭಜಂತ್ರಿ, ಗೋಪಾಲಪ್ಪ ಪತ್ರಿಕಾ ಮಾಧ್ಯಮದವರು, ಸಾರ್ವಜನಿಕರು ಸೇರಿದಂತೆ ಇತರರು ಇದ್ದರು.

ಅಹಿಂದ ವರ್ಗದ ಬೆನ್ನಿಗೆ ಚೂರಿ ಹಾಕಿದ ಕಾಂಗ್ರೆಸ್: ಪರಣ್ಣ

ಗಂಗಾವತಿ: 2023ರ ಚುನಾವಣೆಯಲ್ಲಿ ಕರ್ನಾಟಕ ರಾಜ್ಯದ ಮತದಾರರು ಹಾಗೂ ಅಹಿಂದ ವರ್ಗದ ಜನರು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು 5 ವರ್ಷಗಳ ಅವಧಿಗೆ ಮುಖ್ಯಮಂತ್ರಿಯಾಗಿರಲೆಂದು ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ. ಆದರೆ ಕಾಂಗ್ರೆಸ್ ಹೈಕಮಾಂಡ್ ಜನರ ಅಭಿಪ್ರಾಯವನ್ನು ಧಿಕ್ಕರಿಸಿ ಅಹಿಂದ ವರ್ಗದ ಪ್ರಬಲ ನಾಯಕ ಸಿದ್ದರಾಮಯ್ಯನವರ ರಾಜಿನಾಮೆ ಪಡೆದು ಅಹಿಂದ ವರ್ಗದ ಬೆನ್ನಿಗೆ ಚೂರಿ ಹಾಕಿದ್ದಾರೆ ಎಂದು ಮಾಜಿ ಶಾಸಕ ಪರಣ್ಣ ಮುನವಳ್ಳಿ ಆರೋಪಿಸಿದರು.



ಈ ಕುರಿತು ಪ್ರಕಟಣೆ ನೀಡಿದ ಅವರು, ಅಹಿಂದ ವರ್ಗದ ನಾಯಕರು ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬರುವುದು ಕಾಂಗ್ರೆಸ್ ಹೈಕಮಾಂಡ್ ಇಷ್ಟವಿಲ್ಲ, ಕೇವಲ ಅಹಿಂದ ವರ್ಗದ ಮತಗಳು ಮಾತ್ರ ಬೇಕಾಗಿದ್ದು ಅಹಿಂದ ವರ್ಗದ ನಾಯಕರಿಗೆ ಅಧಿಕಾರ ನೀಡಲು ಕಾಂಗ್ರೆಸ್‌ಗೆ ಇಷ್ಟವಿಲ್ಲ, ಈಗಾಲಾದರು ಅಹಿಂದ ವರ್ಗದ ಮತದಾರ ಪ್ರಭುಗಳು 2028 ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಶಾಸ್ತಿ ಮಾಡಬೇಕು. ಮುಂದಿನ ದಿನಮಾನಗಳಲ್ಲಿ ಕಾಂಗ್ರೆಸ್ ಪಕ್ಷವನ್ನ ಸಂಪೂರ್ಣವಾಗಿ ಕರ್ನಾಟಕದಿಂದ ಕಿತ್ತೊಗೆದು ಸರ್ವಜನಾಂಗದ ಅಭಿವೃದ್ಧಿಗೆ ಬಿಜೆಪಿಯನ್ನು ಅಧಿಕಾರಕ್ಕೆ ತರಲು ನಾವೆಲ್ಲರೂ ಒಂದಾಗಿ ಮುನ್ನಡೆಯೋಣ ಎಂದರು.



ಹಿಂದುಳಿದವರ ರಾಮಯ್ಯ

ಹೆಚ್ಚು ಬಜೆಟ್ ಮಂಡಿಸಿದ ಅರ್ಥರಾಮಯ್ಯ

ಮೇ 28 ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟ ಸಹೋದ್ಯೋಗಿಗಳ ಮುಖಗಳ ಮೇಲೆ ಮಾತಿಗಿಂತ ಮೌನವೇ ದಟ್ಟವಾಗಿತ್ತು. ಹೈಕಮಾಂಡ್ ರಾಜೀನಾಮೆ ನೀಡುವಂತೆ ಹೇಳಿದೆ. ನಾನು ಒಪ್ಪಿದ್ದೇನೆ ಎಂಬ ಒಂದೇ ಸಾಲಿನಲ್ಲಿ, ಎಪ್ಪತ್ತೇಳು ವರ್ಷ ವಯಸ್ಸಿನ ಆ ಧೀಮಂತ ತನ್ನ ರಾಜಕೀಯ ಜೀವನದ ಅತ್ಯಂತ ದೊಡ್ಡ ಗದ್ದುಗೆಯನ್ನು ಇಳಿದು ನಿಂತ. ಮಧ್ಯಾಹ್ನ ಮೂರು ಗಂಟೆಗೆ ರಾಜಭವನಕ್ಕೆ ಹೋಗಿ ರಾಜೀನಾಮೆ ಪತ್ರ ಸಲ್ಲಿಸುವ ಮೂಲಕ ಸಿದ್ದರಾಮಯ್ಯ ಎಂಬ ಒಂದು ಯುಗ ಹೀಗೆ, ತೀರಾ ಸದ್ದಿಲ್ಲದೇ, ತೆರೆ ಸರಿಸಿಕೊಂಡಿದೆ. ಆದರೆ ಯಾವ ಗದ್ದುಗೆಯೂ ಒಂದು ಜೀವನದ ಕಥನವನ್ನು ಹೇಳಲಾರದು. ಗದ್ದುಗೆ ಎಂಬುದು ಕೇವಲ ಒಂದು ತಂಗುದಾಣ ಅಷ್ಟೆ. ಮುಖ್ಯವಾದದ್ದು ಅಲ್ಲಿಯವರೆಗೆ ನಡೆದು ಬಂದ ಹಾದಿ. ಆ ಹಾದಿ ಆರಂಭವಾಗಿದ್ದು ವಿಧಾನಸೌಧದ ಮೆಟ್ಟಿಲುಗಳಲ್ಲಿ ಅಲ್ಲ, ಮೈಸೂರಿನಿಂದ ನೂರ ಅರವತ್ತು ಮೈಲಿ ದೂರದ, ಕುರಿಮಂದೆಗಳ ಧೂಳಿನ ಗೆರೆಗಳಲ್ಲಿ. ಇಂದು ಆ ಆರಂಭದ ದಿನಗಳನ್ನು ಒಮ್ಮೆ ಹಿಂದಿರುಗಿ ನೋಡುವುದು ಸೂಕ್ತ.

ಸಿದ್ದರಾಮಯ್ಯ ರಾಜಕೀಯ

ಲೋಕದಳದಿಂದ ಸಿದ್ದರಾಮಯ್ಯ ಅವರ ರಾಜಕೀಯ ಜೀವನ ಆರಂಭವಾಯ್ತು. ಜನತಾದಳ ಸೇರಿದ ಸಿದ್ದರಾಮಯ್ಯ ಅವರು ಜನಪ್ರಿಯರಾದ್ರು. ಬಳಿಕ ಜೆಡಿಎಸ್ ಪಕ್ಷ ತೊರೆದು 2006 ರಲ್ಲಿ ಕಾಂಗ್ರೆಸ್ ಗೂಡು ಸೇರಿದ್ರು. ಕಾಂಗ್ರೆಸ್ ಪಕ್ಷದ ಬಲಿಷ್ಠ ನಾಯಕರಾಗಿ ಬೆಳೆದ ಸಿದ್ದರಾಮಯ್ಯ, ಪಕ್ಷ ಸಂಘಟನೆಗಾಗಿ ತನು-ಮನ ಅರ್ಪಿಸಿ ದುಡಿದಿದ್ದಾರೆ. ಇದೀಗ 2 ಬಾರಿ ಸಿಎಂ ಆಗುವ ಮೂಲಕ ರಾಜ್ಯದಲ್ಲಿ ದೀರ್ಘಕಾಲದ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಸಿದ್ದರಾಮನಹುಂಡಿಯ ಕುರಿಗಾಹಿ



ಮೈಸೂರಿನ ವರುಣಾ ಹೋಬಳಿಯ ಒಂದು ಪುಟ್ಟ ಹಳ್ಳಿ, ಹೆಸರು ಸಿದ್ದರಾಮನಹುಂಡಿ. 1948ರ ಆಗಸ್ಟ್ 12ರಂದು, ಹಾಲುಮತ ಸಮುದಾಯದ ಸಿದ್ದರಾಮೇಗೌಡ ಮತ್ತು ಬೋರಮ್ಮ ದಂಪತಿಗೆ ಜನಿಸಿದ ಮಗ ಇವನು. ಕುರಿ ಕಾಯುವುದು, ದನ ಮೇಯಿಸುವುದು, ಹೊಲ ಉಳುವುದು – ಇದೇ ಆ ಮನೆಯ ಬದುಕಿನ ಲಯ. ಬಾಲ್ಯದ ಆ ದಿನಗಳಲ್ಲಿ, ಬೇರೆ ಹುಡುಗರು ಅಕ್ಷರ ಕಲಿಯುತ್ತಿದ್ದಾಗ, ಸಿದ್ದರಾಮಯ್ಯ ತಂದೆಯ ಜತೆ ಮಂದೆ ಹೊಡೆಯುತ್ತಿದ್ದ. ಶಾಲೆಯ ಬಾಗಿಲು ಅವನಿಗೆ ತೆರೆದದ್ದು ಸುಮಾರು ಹತ್ತು ವರ್ಷ ತುಂಬಿದ ಮೇಲೆ ನೇರವಾಗಿ ನಾಲ್ಕನೆಯ ತರಗತಿಗೆ. ಅಕ್ಷರ ತಡವಾಗಿ ಬಂದರೂ, ಬಂದ ಮೇಲೆ ಅದು ಆ ಹುಡುಗನನ್ನು ಬಿಡಲೇ ಇಲ್ಲ.

ತಂದೆಗೆ ಮಗನ ಓದಿನ ಮೇಲೆ ನಂಬಿಕೆಯಿತ್ತು, ಆದರೆ ರಾಜಕೀಯದ ಮೇಲೆ ಇಲ್ಲ. ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸೋತು ಕಹಿ ಅನುಭವಿಸಿದ್ದ ಸಿದ್ದರಾಮೇಗೌಡ, ರಾಜಕೀಯದವರನ್ನು ನಂಬಬೇಡ ಎಂದು ಮಗನಿಗೆ ಎಚ್ಚರಿಕೆ ನೀಡಿದ್ದರು. ಮುಂದೆ ಆ ಮಗ ಐದು ದಶಕ ರಾಜಕೀಯದ ಆಳ ಸಮುದ್ರದಲ್ಲಿ ಈಜುತ್ತಾನೆ, ಎರಡು ಬಾರಿ ಮುಖ್ಯಮಂತ್ರಿಯಾಗುತ್ತಾನೆ ಎಂದು ಆ ತಂದೆ ಊಹಿಸಿರಲಿಕ್ಕಿಲ್ಲ. ಆದರೆ ಆ ಎಚ್ಚರಿಕೆ, ಆ ಜಾಗರೂಕತೆಯೇ ಮುಂದೆ ಸಿದ್ದರಾಮಯ್ಯ ಎಂಬ ರಾಜಕಾರಣಿಯ ಒಳಗೆ ಗಟ್ಟಿಯಾಗಿ ಕುಳಿತುಬಿಟ್ಟಿತು ಎನ್ನಬಹುದು.



ಸುದೀರ್ಘ ಶಿಷ್ಯ ಪರ್ವ

ರಾಜಕೀಯದ ಮೊದಲ ಹೆಜ್ಜೆ 1978ರಲ್ಲಿ. ತಾಲ್ಲೂಕು ಬೋರ್ಡ್ ಚುನಾವಣೆ ಸದಸ್ಯನಾಗಿ ಪದಾರ್ಪಣೆ. ತಂದೆಯ ವಿರೋಧವನ್ನು ಮೀರಿ ಸ್ಪರ್ಧಿಸಿ ಗೆದ್ದರು. ಅದೇ ವರ್ಷ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಿಂದ ಲೋಕದಳದ ಅಭ್ಯರ್ಥಿಯಾಗಿ ನಿಂತು ಸೋತರು. 1980ರಲ್ಲಿ ಮೈಸೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಮತ್ತೆ ಸೋಲು. ಸೋಲು ಅವರಿಗೆ ಹೊಸದಲ್ಲ, ಆದರೆ ಅದು ಅವರನ್ನು ಹಿಮ್ಮೆಟ್ಟಿಸಲಿಲ್ಲ. 1983ರಲ್ಲಿ ಚಾಮುಂಡೇಶ್ವರಿಯಿಂದ ಗೆದ್ದು ಮೊದಲ ಬಾರಿ ಶಾಸಕರಾದರು. ಆ ಗೆಲುವಿನ ಬೆನ್ನಲ್ಲೇ ಕನ್ನಡ ಕಾವಲು ಸಮಿತಿಯ ಮೊದಲ ಅಧ್ಯಕ್ಷ ಪಟ್ಟವೂ ಸಿಕ್ಕಿತು. ಕನ್ನಡವನ್ನು ರಾಜ್ಯಭಾಷೆಯಾಗಿ ನೆಲೆಗೊಳಿಸುವ ಮಹತ್ತರ ಜವಾಬ್ದಾರಿ ಇವರ ಮೇಲಿತ್ತು.


ನಂತರದ್ದು ಜನತಾ ಪರಿವಾರದ ಸುದೀರ್ಘ ಪರ್ವ. 1985ರಲ್ಲಿ ಜನತಾ ಪಕ್ಷದ ಅಭ್ಯರ್ಥಿಯಾಗಿ ಮರು ಆಯ್ಕೆಯಾಗಿ ರಾಮಕೃಷ್ಣ ಹೆಗಡೆ ಸಂಪುಟದಲ್ಲಿ ರೇಷ್ಮೆ, ಪಶುಸಂಗೋಪನೆ, ಸಾರಿಗೆ, ಹೀಗೆ ಒಂದರ ಮೇಲೊಂದು ಖಾತೆಗಳು. 1989ರಲ್ಲಿ ಒಂದು ಸೋಲು, 1991ರಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಮತ್ತೊಂದು ಸೋಲು. ಆದರೆ 1994ರಲ್ಲಿ ಮತ್ತೆ ಗೆದ್ದು, ದೇವೇಗೌಡ ಸರ್ಕಾರದಲ್ಲಿ ಹಣಕಾಸು ಸಚಿವರಾದರು. ಕುರಿ ಲೆಕ್ಕ ಹಾಕುವವನು ರಾಜ್ಯದ ಹಣಕಾಸು, ಬಜೆಟ್ ಹೇಗೆ ಲೆಕ್ಕ ಹಾಕುತ್ತಾನೆ ಎಂದು ಹೀಯಾಳಿಸಿದವರೇ ಹೆಚ್ಚು. ಮುಂದೆ ಜೆ.ಎಚ್. ಪಟೇಲ್ ನೇತೃತ್ವದಲ್ಲಿ ಉಪಮುಖ್ಯಮಂತ್ರಿ. ಹಣಕಾಸು ಸಚಿವನಾಗಿ ಅವರು ಮಂಡಿಸಿದ ಬಜೆಟ್‌ಗಳ ಸಂಖ್ಯೆ ಹದಿಮೂರು. ರಾಜ್ಯದ ಇತಿಹಾಸದಲ್ಲೇ ದಾಖಲೆ. ಆ ಲೆಕ್ಕದ ಪುಸ್ತಕಗಳ ಮೇಲೆ ಅವರ ಹಿಡಿತ ಎಷ್ಟು ಗಟ್ಟಿ ಎಂದರೆ, ಬಜೆಟ್ ಮನುಷ್ಯ ಎಂಬ ಬಿರುದೇ ಅಂಟಿಕೊಂಡಿತು.

ದೇವೇಗೌಡರೊಂದಿಗಿನ ಸಿದ್ದರಾಮಯ್ಯನ ಸಂಬಂಧ ಕನ್ನಡ ರಾಜಕೀಯದ ಒಂದು ದಂತಕಥೆ. ಒಂದು ಕಾಲಕ್ಕೆ ಗುರು, ಮುಂದೆ ಕಡು ಪ್ರತಿಸ್ಪರ್ಧಿ. ಸಿದ್ದರಾಮಯ್ಯ ತನ್ನ ಪಕ್ಷದೊಳಗೇ ಒಂದು ಸಮಾನಾಂತರ ಶಕ್ತಿಯಾಗಿ ಬೆಳೆಯುತ್ತಿರುವುದನ್ನು ಚಾಣಾಕ್ಷ ದೇವೇಗೌಡರು ಗಮನಿಸದೇ ಇರಲಿಲ್ಲ. ಆ ಗಮನವೇ ಮುಂದೆ ಬಿರುಕಾಯಿತು, ಆ ಬಿರುಕೇ ಒಂದು ಚಳವಳಿಯಾಯಿತು.



ಗಡ್ಡದ ಲೋಹಿಯಾವಾದಿ

ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ. ಪದವಿ, ನಂತರ ಕಾನೂನು ಪದವಿ. ವೈದ್ಯಕೀಯ ಓದಲು ಬೇಕಾದ ಅಂಕಗಳು ಬಾರದ ಕಾರಣ ಕಾನೂನಿನ ಹಾದಿ ಹಿಡಿದ ಎಂದು ಸ್ವತಃ ಅವರೇ ಹಲವಾರು ಕಾರ್ಯಕ್ರಮಗಳಲ್ಲಿ ಹೇಳಿಕೊಂಡಿದ್ದಾರೆ. ಮೈಸೂರಿನಲ್ಲಿ ಕಿರಿಯ ವಕೀಲನಾಗಿ ಕೆಲಸ, ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಕೆಲಕಾಲ ಪಾಠ. ಆದರೆ ಆ ತಾರುಣ್ಯದ ದಿನಗಳಲ್ಲಿ ಅವನನ್ನು ರೂಪಿಸಿದ್ದು ಪಠ್ಯ ಪುಸ್ತಕಗಳಿಗಿಂತ ಹೆಚ್ಚಾಗಿ ರಾಮಮನೋಹರ ಲೋಹಿಯಾರ ವಿಚಾರಗಳು. ಸಮಾಜವಾದ, ಜಾತಿ ವಿನಾಶ, ಹಿಂದುಳಿದವರ ಪ್ರಾತಿನಿಧ್ಯ ಎಂಬ ಈ ಪದಗಳು ಆ ಯುವಕನ ರಕ್ತದಲ್ಲಿ ಬೆರೆತುಹೋದವು. ಆಗಿನ ಲೋಹಿಯಾವಾದಿಗಳ ಹಾಗೆ ಇವರೂ ಗಡ್ಡ ಬಿಟ್ಟರು. ವೈಚಾರಿಕ ಪ್ರವೃತ್ತಿ ಬೆಳೆಸಿಕೊಂಡರು. ಆಗಿನ ಕಾಲದಲ್ಲಿ ಕಾಂಗ್ರೆಸ್ ವಿರೋಧ ಆ ಪೀಳಿಗೆಯ ಉಸಿರು, ಸಿದ್ದರಾಮಯ್ಯ ಅವರೂ ಅದೇ ಉಸಿರನ್ನೇ ಎಳೆದುಕೊಂಡರು. ಮುಂದೆ ಇದೇ ಮನುಷ್ಯ ಕಾಂಗ್ರೆಸ್ ಪಕ್ಷದ ದಕ್ಷಿಣದ ಅಧಿಪತಿ ಆಗುತ್ತಾನೆ ಎಂಬುದು ಆಗ ಯಾರ ಊಹೆಗೂ ನಿಲುಕದ ವಿಪರ್ಯಾಸ. ಆದರೆ ಆ ವಿಪರ್ಯಾಸದ ಒಳಗೇ ಸಿದ್ದರಾಮಯ್ಯನ ಇಡೀ ರಾಜಕೀಯ ಜೀವನದ ತಿರುಳು ಅಡಗಿದೆ. ಪಕ್ಷ ಬದಲಾದರೂ, ಬದಲಾಗದ ಒಂದು ನಿಷ್ಠೆ ಅವರಲ್ಲಿತ್ತು. ಅದು ಹಿಂದುಳಿದವರ ಪರವಾದ ನಿಷ್ಠೆ.



ಅಹಿಂದ ಒಂದು ಮಹಾಸಮ್ಮಿಲನದ ಕನಸು

ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರು. ಈ ಮೂರು ಸಮುದಾಯಗಳ ಮೊದಲಕ್ಷರಗಳಿಂದ ಹುಟ್ಟಿದ ಪದ ಅಹಿಂದ'. ಇದು ಸಿದ್ದರಾಮಯ್ಯನ ರಾಜಕೀಯ ಕನಸಿನ ಹೃದಯ. ಶತಮಾನಗಳಿಂದ ಅಂಚಿಗೆ ತಳ್ಳಲ್ಪಟ್ಟ ಜಾತಿಗಳನ್ನು ಒಂದೇ ಸಾಮಾಜಿಕ ಒಕ್ಕೂಟದ ಅಡಿಯಲ್ಲಿ ತರುವುದು ಒಬ್ಬ ಸಮಾಜವಾದಿಗೆ ಇದು ದೊಡ್ಡ ಸವಾಲಾಗಿತ್ತು. ಅಷ್ಟೇ ದೊಡ್ಡ ಆನಂದ. ಧರಂ ಸಿಂಗ್ ಸಂಪುಟದಲ್ಲಿ ಉಪಮುಖ್ಯಮಂತ್ರಿಯಾಗಿ, ಜೆಡಿಎಸ್ ರಾಜ್ಯಾಧ್ಯಕ್ಷನಾಗಿ ಇದ್ದುಕೊಂಡೇ ಅವರು ಈ ಚಳವಳಿಗೆ ಜೀವ ತುಂಬಿದರು. ಅಹಿಂದದ ಹೆಸರಿನಲ್ಲಿ ಗುರುತಿಸಿಕೊಳ್ಳಬೇಡ ಎಂದು ದೇವೇಗೌಡರು ಎಚ್ಚರಿಸಿದರೂ, ಸಿದ್ದರಾಮಯ್ಯ ಬಗ್ಗಲಿಲ್ಲ. ಹುಬ್ಬಳ್ಳಿಯ ಬೃಹತ್ ಅಹಿಂದ ಸಮಾವೇಶದಲ್ಲಿ ಭಾಗವಹಿಸಿದ್ದೇ ಜೆಡಿಎಸ್‌ನೊಂದಿಗಿನ ನಂಟಿಗೆ ಕೊನೆಯ ದಿನ. ಪಕ್ಷ ವಿರೋಧಿ ಚಟುವಟಿಕೆ ಎಂಬ ಆರೋಪದ ಮೇಲೆ 2005ರಲ್ಲಿ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಯಿತು, ಜತೆಗೆ ಉಪಮುಖ್ಯಮಂತ್ರಿ ಸ್ಥಾನವೂ ಕೈತಪ್ಪಿತು. 2006ರ ಜುಲೈನಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು. ತನಗಾಗಿ ಸೋನಿಯಾ ಗಾಂಧಿಯ ಬಳಿ ದೇವೇಗೌಡರು ಮುಖ್ಯಮಂತ್ರಿ ಸ್ಥಾನ ಕೇಳಲೇ ಇಲ್ಲ ಎಂಬ ಸಂಗತಿ ಸಿದ್ದರಾಮಯ್ಯನ ಮನಸ್ಸಿನಲ್ಲಿ ಆಳವಾದ ಗಾಯ ಮಾಡಿತ್ತು ಎಂದು ಹೇಳಲಾಗುತ್ತದೆ.



ಕಾಂಗ್ರೆಸ್‌ಗೆ ದಡ ದಾಟಿದ ಘಳಿಗೆ



ಚಳವಳಿಗೆ ಆದರ್ಶ ಬೇಕು, ಆದರೆ ಅದನ್ನು ಮುನ್ನಡೆಸಲು ಸಂಘಟನೆ ಮತ್ತು ಸಂಪನ್ಮೂಲ ಬೇಕು. ಪಕ್ಷದ ನೆರಳಿಲ್ಲದೇ ಅಹಿಂದ ಚಳವಳಿಯನ್ನು ಬಹುಕಾಲ ಸಾಗಿಸುವುದು ಕಷ್ಟ ಎಂದು ಮನಗಂಡ ಸಿದ್ದರಾಮಯ್ಯ, 2006ರಲ್ಲಿ ಒಂದು ಕಠಿಣ ನಿರ್ಧಾರ ಕೈಗೊಂಡರು. ತಾವು ತಾರುಣ್ಯದಿಂದ ವಿರೋಧಿಸುತ್ತಾ ಬಂದಿದ್ದ ಕಾಂಗ್ರೆಸ್ ಪಕ್ಷಕ್ಕೇ ಸೇರ್ಪಡೆಯಾದರು. ಹಿಂದುಳಿದ ವರ್ಗಗಳ ಬೆಂಬಲವನ್ನು ಬಂಡವಾಳ ಮಾಡಿಕೊಳ್ಳಲು ಕಾಂಗ್ರೆಸ್‌ಗೂ ಇದು ಬೇಕಾಗಿತ್ತು. ಎರಡೂ ಕಡೆಯ ಲೆಕ್ಕಾಚಾರಗಳು ಒಂದೇ ಬಿಂದುವಿನಲ್ಲಿ ಸಂಧಿಸಿದವು.

ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಮೇಲೆ ಸ್ಪರ್ಧಿಸಿದ ಸಿದ್ದರಾಮಯ್ಯ ಗೆದ್ದದ್ದು ಕೇವಲ 257 ಮತಗಳ ಅಂತರದಿಂದ. ಆಗ ಇವರನ್ನು ಸೋಲಿಸಲು ವಿರೋಧ ಪಕ್ಷಗಳೆಲ್ಲವೂ ಒಂದಾಗಿದ್ದವು. ಒಂದು ಸುದೀರ್ಘ ರಾಜಕೀಯ ಜೀವನದ ಅತ್ಯಂತ ತೆಳ್ಳಗಿನ ಗೆಲುವು. ಆದರೆ ಗೆಲುವು ಗೆಲುವೇ. 2008ರಲ್ಲಿ ವರುಣಾ ಕ್ಷೇತ್ರದಿಂದ ನಿರಾಯಾಸ ಜಯ, ಪಕ್ಷ ಅವರಿಗೆ ವಿಧಾನಸಭಾ ವಿಪಕ್ಷ ನಾಯಕ ಸ್ಥಾನ ನೀಡಿತು. ಹೊರಗಿನವ ಎಂದು ಆರಂಭದಲ್ಲಿ ಮೂದಲಿಸಿದ್ದ ಪಕ್ಷದಲ್ಲೇ, ಮುಂದೆ ಅವರು ಎಲ್ಲರನ್ನೂ ಮೀರಿಸಿ ನಿಂತರು.



ಮೊದಲ ಪೂರ್ಣಾವಧಿ-2013ರ ಗದ್ದುಗೆ

2013ರ ಮೇ 13ರಂದು ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿಯಾದರು. ಮುಂದಿನ ಐದು ವರ್ಷ ಅಧಿಕಾರ ಪೂರ್ಣಗೊಳಿಸಿದ್ದು ಇನ್ನೂ ದೊಡ್ಡ ಸಾಧನೆ. ಆ ಹೊತ್ತಿಗೆ ಎರಡು ದಶಕಗಳಿಗೂ ಹೆಚ್ಚು ಕಾಲ ಯಾವ ಮುಖ್ಯಮಂತ್ರಿಯೂ ಪೂರ್ಣಾವಧಿ ಪೂರೈಸಿರಲಿಲ್ಲ. ಅನ್ನಭಾಗ್ಯ, ಕ್ಷೀರಭಾಗ್ಯ, ಇಂದಿರಾ ಕ್ಯಾಂಟೀನ್, ಕೃಷಿಭಾಗ್ಯ, ಬಡವರ ಹೊಟ್ಟೆ ಮತ್ತು ಜೇಬನ್ನು ಗುರಿಯಾಗಿಸಿದ ಯೋಜನೆಗಳ ಸಾಲು. ಭಾಗ್ಯ ಎಂಬ ಪದವೇ ಆ ಸರ್ಕಾರದ ಮುದ್ರೆಯಾಯಿತು. ಜಾತಿ ಗಣತಿಯ ಪ್ರಯತ್ನ, ಸಾಮಾಜಿಕ-ಆರ್ಥಿಕ ಸಮೀಕ್ಷೆ - ಇವೆಲ್ಲ ಅವರ ಸಾಮಾಜಿಕ ನ್ಯಾಯದ ಬದ್ಧತೆಯ ಗುರುತುಗಳು. ಆದರೆ ರಾಜಕೀಯ ಸಂಪೂರ್ಣ ಸುಗಮ ಹಾದಿಯಲ್ಲ. 2018ರಲ್ಲಿ ಕಾಂಗ್ರೆಸ್ ಬಹುಮತ ಕಳೆದುಕೊಂಡಿತು, ಸ್ವತಃ ಸಿದ್ದರಾಮಯ್ಯ ಚಾಮುಂಡೇಶ್ವರಿಯಲ್ಲಿ ಸೋತು ಬಾದಾಮಿಯಲ್ಲಿ ಮಾತ್ರ ಪಾರಾದರು. ಕೈಗೆ ಬಂದ ತುತ್ತು ಬಾಯಿಗೆ ಬಾರದ ಆ ಸನ್ನಿವೇಶ ಅವರಿಗೆ ಹೊಸದಲ್ಲ. ಆದರೂ ಪ್ರತಿ ಸೋಲಿನ ನಂತರವೂ ಅವರು ಮತ್ತೆ ಎದ್ದು ನಿಲ್ಲುತ್ತಿದ್ದರು. ಒಂದು ಹಳೆಯ ಯುದ್ಧಾಶ್ವದ ಹಾಗೆ.

ಇತಿಹಾಸ ಬರೆದ ಮುಖ್ಯಮಂತ್ರಿ

2013-2018ರ ಅವಧಿಯಲ್ಲಿ ಮೊದಲ ಬಾರಿಗೆ ಸಿಎಂ ಆದ ಸಿದ್ದರಾಮಯ್ಯ ಅವರು 1,829 ದಿನಗಳ ಕಾಲ ಅಧಿಕಾರದಲ್ಲಿದ್ದರು. ಸಿದ್ದರಾಮಯ್ಯ ಮೊದಲ ಅವಧಿ ಪೂರ್ಣಗೊಂಡ ಬಳಿಕ ಮತ್ತೆ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರಲಿಲ್ಲ. 2018ರ ವಿಧಾನ ಸಭೆ ಚುನಾವಣೆ ಫಲಿತಾಂಶ ಅತಂತ್ರವಾಗಿತ್ತು. ಜೆಡಿಎಸ್ ಜೊತೆ ಸೇರಿ ಕಾಂಗ್ರೆಸ್ ಮೈತ್ರಿ ಸರ್ಕಾರ ರಚಿಸಿತ್ತು. ಆದ್ರೆ ಕುಮಾರಸ್ವಾಮಿ ಅವರ ನೇತೃತ್ವದ ಸರ್ಕಾರ 14 ತಿಂಗಳಿಗೇ ಪತನವಾಗಿತ್ತು. ಬಳಿಕ ಅಧಿಕಾರಕ್ಕೆ ಬಂದ ಬಿಜೆಪಿಯಿಂದ ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಕ್ರಮವಾಗಿ ಮುಖ್ಯಮಂತ್ರಿಗಳಾಗಿದ್ದರು. ಅದಾದ ಬಳಿಕ 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತ ಪಡೆಯಿತು. ಈಗ ಎರಡನೇ ಅವಧಿಗೆ ಆಡಳಿತದ ಸೂತ್ರ ಹಿಡಿದಿರುವ ಸಿದ್ದರಾಮಯ್ಯ ಹೊಸ ಇತಿಹಾಸ ಸೃಷ್ಟಿಸಿದ್ದಾರೆ.

ಅರಸು ದಾಖಲೆ ಸರಿಗಟ್ಟಿದ ಸಿದ್ದರಾಮಯ್ಯ



ಒಬ್ಬ ಮನುಷ್ಯನ ಜೀವನವನ್ನು ಅಧಿಕಾರದ ವರ್ಷಗಳಿಂದ ಅಳೆಯುವುದು ಸುಲಭ, ಆದರೆ ಅದು ಅಪೂರ್ಣ. ಸಿದ್ದರಾಮಯ್ಯ ಎಂಬ ಹೆಸರನ್ನು ನೆನೆದಾಗ ಉಳಿಯುವುದು ಗದ್ದುಗೆಯಲ್ಲ, ಕುರಿ ಕಾಯುತ್ತಿದ್ದ ಒಬ್ಬ ಹುಡುಗ, ಅಕ್ಷರವನ್ನು ತಡವಾಗಿ ಕಲಿತೂ ಒಂದು ರಾಜ್ಯದ ಹಣೆಬರಹವನ್ನು ಬರೆಯುವ ಲೆಕ್ಕದ ಪುಸ್ತಕವನ್ನು ಹದಿನೇಳು ಬಾರಿ ಬರೆದದ್ದು, ತನ್ನ ಜಾತಿಯ ಗಡಿಯನ್ನು ದಾಟಿ, ಅಂಚಿನ ಎಲ್ಲ ಸಮುದಾಯಗಳ ದನಿಯಾಗಲು ಹೊರಟದ್ದು. ಅಹಿಂದ ಎಂಬ ಮೂರಕ್ಷರ ಇದು ಅವರ ಯಶಸ್ಸಿನ ಮೂಲವೂ ಹೌದು, ಅವರ ಮಿತಿಗಳ ಕನ್ನಡಿಯೂ ಹೌದು. ಪಕ್ಷ ಬದಲಾಯಿತು, ಗದ್ದುಗೆ ಬದಲಾಯಿತು, ಆದರೆ ನಿಷ್ಠೆ ಮಾತ್ರ ಐದು ದಶಕ ಬದಲಾಗಲಿಲ್ಲ. ಅತಿ ಹೆಚ್ಚು ಅವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ದಾಖಲೆಯನ್ನು ಸಿಎಂ ಸಿದ್ದರಾಮಯ್ಯ ಬ್ರೇಕ್ ಮಾಡಿದ್ದಾರೆ. ದೇವರಾಜ ಅರಸು ಅವರು ಸತತವಾಗಿ ಏಳೂವರೆ ವರ್ಷಗಳ ಕಾಲ ಅಧಿಕಾರದಲ್ಲಿದ್ದರು. ದೇವರಾಜ ಅರಸು ಅವ್ರು 2,789 ದಿನ ಅಂದ್ರೆ 7 ವರ್ಷ– 239 ದಿನಗಳ (ಎರಡು ಅವಧಿ) ಕಾಲ ರಾಜ್ಯದ ಮುಖ್ಯಮಂತ್ರಿ ಆಗಿದ್ದರು.

ಒಪ್ಪಂದದ ಗಡಿಯಾರ ಮತ್ತು ಇಂದಿನ ತೆರೆ

2023ರ ಗೆಲುವಿನ ನಂತರ ಸಿಎಂ ಸ್ಥಾನಕ್ಕಾಗಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ನಡೆದ ಪೈಪೋಟಿಯ ಪರಿಹಾರವಾಗಿ ಅಧಿಕಾರ ಹಂಚಿಕೆಯ ಒಪ್ಪಂದ ರೂಪುಗೊಂಡಿತು ಎಂದು ಹೇಳಲಾಗುತ್ತದೆ. ಅವಧಿಯ ಮೊದಲ ಭಾಗ ಸಿದ್ದರಾಮಯ್ಯನವರಿಗೆ, ಮುಂದಿನ ಭಾಗ ಶಿವಕುಮಾರ್ ಅವರಿಗೆ. 2028ರ ಚುನಾವಣೆಗೆ ಪಕ್ಷವನ್ನು ಮುನ್ನಡೆಸುವ ಜವಾಬ್ದಾರಿ. ದೆಹಲಿಯಲ್ಲಿ ನಡೆದ ಸುದೀರ್ಘ ಸಮಾಲೋಚನೆಗಳ ನಂತರ, ಆ ಗಡಿಯಾರ ಮೇ 28, 2026ರಂದು ಗಂಟೆ ಬಾರಿಸಿತು. ಬೆಳಗಿನ ಸಂಪುಟ ಸಹೋದ್ಯೋಗಿಗಳ ಸಭೆಯಲ್ಲಿ, ಹೈಕಮಾಂಡ್ ಸೂಚನೆಯಂತೆ ರಾಜೀನಾಮೆ ನೀಡಲು ಸಂತೋಷದಿಂದ ಒಪ್ಪಿದ್ದೇನೆ. ಮುಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಅದಕ್ಕೂ ಒಪ್ಪಿಗೆ ನೀಡಿದ್ದೇನೆ ಎಂದು ಅವರು ಸ್ಪಷ್ಟವಾಗಿ ಹೇಳಿದರು. ಯಾವುದೇ ಬಿರುಕಿಲ್ಲ, ಭಿನ್ನಮತವಿಲ್ಲ, ಇದು ಸರ್ವಾನುಮತದ ತೀರ್ಮಾನ ಎಂಬ ಸಚಿವರ ಮಾತುಗಳಲ್ಲಿ ಪಕ್ಷದ ಶಿಸ್ತಿನ ಧ್ವನಿಯಿತ್ತು.



ಮರಳಿ ಬಂದ ಗದ್ದುಗೆ ಮತ್ತು ಐದು ಗ್ಯಾರಂಟಿಗಳು

2023ರ ಮೇ 20ರಂದು ಸಿದ್ದರಾಮಯ್ಯ 2ನೇ ಬಾರಿ ಮುಖ್ಯಮಂತ್ರಿ. ಆ ಚುನಾವಣೆಯ ಗೆಲುವಿನ ಬೆನ್ನೆಲುಬು, ಐದು ಗ್ಯಾರಂಟಿಗಳು. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಶಕ್ತಿ, ಮನೆಯ ಯಜಮಾನಿಗೆ ಮಾಸಿಕ ನೆರವಿನ ಗೃಹಲಕ್ಷ್ಮಿ, ಉಚಿತ ವಿದ್ಯುತ್ತಿನ ಗೃಹ ಜ್ಯೋತಿ, ಉಚಿತ ಅಕ್ಕಿಯ ಅನ್ನಭಾಗ್ಯ, ನಿರುದ್ಯೋಗಿ ಯುವಕರಿಗೆ ಭತ್ಯೆಯ ಯುವನಿಧಿ. ಬಡವರ ಬದುಕಿನ ಗಲ್ಲಿಗಳಿಗೆ ನೇರವಾಗಿ ತಲುಪುವ ಈ ಯೋಜನೆಗಳು. ಒಂದು ಸಮಾಜವಾದಿಯ ಅಂತಃಕರಣದ ಪ್ರತಿಬಿಂಬ. ಇದೇ ಕಾರಣಕ್ಕೆ ರಾಜಕೀಯ ವಿಶ್ಲೇಷಕರು ಸಿದ್ದರಾಮಯ್ಯನನ್ನು ದೇವರಾಜ ಅರಸು ನಂತರದ ಸಾಲಿನಲ್ಲಿ ನಿಲ್ಲಿಸುತ್ತಾರೆ. ಅರಸು ಹಿಂದುಳಿದವರ ಪ್ರಾತಿನಿಧ್ಯದ ಬಾಗಿಲನ್ನು ತೆರೆದಿದ್ದರೆ, ಸಿದ್ದರಾಮಯ್ಯ ಆ ಬಾಗಿಲನ್ನು ಮತ್ತಷ್ಟು ಅಗಲ ಮಾಡಿದರು. ಕರ್ನಾಟಕದ ಹಿಂದುಳಿದ ವರ್ಗಗಳ ಬಗ್ಗೆ ಅರಸು ನಂತರ ಇಷ್ಟು ಆಳವಾಗಿ, ಇಷ್ಟು ನಿರಂತರವಾಗಿ ಯೋಚಿಸಿದ ಮತ್ತೊಬ್ಬ ನಾಯಕನಿಲ್ಲ ಎಂಬ ಮಾತು ಅತಿಶಯೋಕ್ತಿಯಲ್ಲ. ಹಿಂದುಳಿದವರ ರಾಮಯ್ಯ ಎಂಬ ಪ್ರೀತಿಯ ಹೆಸರು ಹುಟ್ಟಿದ್ದು ಹೀಗೆ. ದೇವರಾಜ ಅರಸು ಬಾಗಿಲು ತೆರೆದರು. ಸಿದ್ದರಾಮಯ್ಯ ಆ ಬಾಗಿಲನ್ನು ಅಗಲ ಮಾಡಿದರು.

ಬಜೆಟ್ ಮಂಡನೆಯಲ್ಲೂ ದಾಖಲೆ



ಕರ್ನಾಟಕದ ಇತಿಹಾಸದಲ್ಲಿ ಅತಿ ಹೆಚ್ಚು ಅವಧಿಗೆ ಮುಖ್ಯಮಂತ್ರಿ ಯಾಗಿದ್ದವರಲ್ಲಿ ದೇವರಾಜ ಅರಸು ಮೊದಲಿಗರು ನಂತರ ಎಸ್ ನಿಜಲಿಂಗಪ್ಪ (7 ವರ್ಷ 175 ದಿನಗಳು), ರಾಮಕೃಷ್ಣ ಹೆಗಡೆ (5 ವರ್ಷ 216 ದಿನಗಳು), ಬಿ.ಎಸ್. ಯಡಿಯೂರಪ್ಪ (5 ವರ್ಷ 82 ದಿನಗಳು). ಈ ಎಲ್ಲ ದಾಖಲೆಗಳನ್ನು ಮೆಟ್ಟಿ ನಿಂತವರು ಮುಖ್ಯಮಂತ್ರಿ ಸಿದ್ದರಾಮಯ್ಯ. ದೇವರಾಜು ಅರಸು ಅವರ ದಾಖಲೆಯನ್ನೂ ಮುರಿದಿದ್ದಾರೆ. ರಾಜ್ಯ ಬಜೆಟ್ ಮಂಡನೆಯಲ್ಲೂ ಸಿಎಂ ಸಿದ್ದರಾಮಯ್ಯ ದಾಖಲೆ ಬರೆದಿದ್ದಾರೆ. ಮುಖ್ಯ ಮಂತ್ರಿ ಸಿದ್ದರಾಮಯ್ಯ ಇದುವರೆಗೂ 17 ಬಜೆಟ್ ಮಂಡನೆ ಮಾಡಿದ್ದು, ಈ ಮೂಲಕ ರಾಜ್ಯದಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿದವರಾಗಿದ್ದಾರೆ. ಎರಡನೇ ಸ್ಥಾನದಲ್ಲಿ ರಾಮಕೃಷ್ಣ ಹೆಗಡೆ ಅವರಿದ್ದು, ಒಟ್ಟು 13 ಬಜೆಟ್ ಮಂಡಿಸಿದ್ದಾರೆ.

2013ರಲ್ಲಿ ಹೊಸ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಲು ಕಾಂಗ್ರೆಸ್ ರಹಸ್ಯ ಮತದಾನವನ್ನು ಅಂಗೀಕರಿಸಿದ ನಂತರ ಸಿದ್ದರಾಮಯ್ಯ ಅವರನ್ನು ಸಿಎಂ ಆಗಿ ಆಯ್ಕೆ ಮಾಡಲಾಯಿತು. 2013ರ ಶಾಸಕಾಂಗ ಚುನಾವಣೆಯಲ್ಲಿ 122/224 ಸ್ಥಾನಗಳ ಸಂಪೂರ್ಣ ಬಹುಮತ ಸಾಧಿಸುವ ಮೂಲಕ ಅವರು ಕಾಂಗ್ರೆಸ್ ಅನ್ನು ಗೆಲುವಿನತ್ತ ಕೊಂಡೊಯ್ದರು.

ಮೇ 15, 2018 ರಂದು ಅವರು ಕರ್ನಾಟಕದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. 40 ವರ್ಷಗಳ ಅವರ ರಾಜಕೀಯ ಪಯಣದಲ್ಲಿ ಪೂರ್ಣ 5 ವರ್ಷಗಳ ಅವಧಿಯನ್ನು ಪೂರೈಸಿದ ಕರ್ನಾಟಕದ ಮೊದಲ ಮುಖ್ಯಮಂತ್ರಿಯಾದರು ಮತ್ತು ದೇವರಾಜ್ ಅರಸ್ ನಂತರ ದಕ್ಷಿಣದ ರಾಜ್ಯದ ಇತಿಹಾಸದಲ್ಲಿ 2ನೆಯವರಾದರು. ಅವರು ಹಣಕಾಸು ಸಚಿವರಾಗಿ 17 ಬಾರಿ ರಾಜ್ಯ ಬಜೆಟ್ ಮಂಡಿಸಿದ ದಾಖಲೆಯನ್ನು ಹೊಂದಿದ್ದಾರೆ. ಸಿದ್ದರಾಮಯ್ಯ ಅವರು ತಮ್ಮ ಮೊದಲ ಬಜೆಟ್ ಅನ್ನು 1995-1996ರಲ್ಲಿ ದೇವೇಗೌಡರ ಅವರ ನೇತೃತ್ವದಲ್ಲಿ ಮಂಡಿಸಿದರು. ಇದರ ಬಜೆಟ್ ಗಾತ್ರ ಸುಮಾರು 12,616 ಕೋಟಿ ರೂ.ಆಗಿತ್ತು.

ಸಿಎಂ ಆಗಿ ಮೊದಲ ಅವಧಿ

- 2013-14ರಲ್ಲಿ 1,21,611 ಕೋಟಿ ರೂ.
- 2014-15ರಲ್ಲಿ 1,38,008 ಕೋಟಿ ರೂ.
- 2015-16ರಲ್ಲಿ 1,42,534 ಕೋಟಿ ರೂ.
- 2016-17ರಲ್ಲಿ 1,63,419 ಕೋಟಿ ರೂ.
- 2017-18ರಲ್ಲಿ 1,86,561ಕೋಟಿ ರೂ.
- 2018-19ರಲ್ಲಿ 2,09,181 ಕೋಟಿ ರೂ.

ಸಿಎಂ ಆಗಿ 2ನೇ ಅವಧಿ

- 2023-24ರಲ್ಲಿ 3,27,453 ಕೋಟಿ ರೂ.,
- 2024-25ರಲ್ಲಿ 3,71,383 ಕೋಟಿ ರೂ.
- 2026-27ರಲ್ಲಿ 4,48,004 ಕೋಟಿ ರೂ. ಬಜೆಟ್ ಮಂಡಿಸಿದ್ದಾರೆ.

ಕಿರುಸುದ್ದಿ

ಗುರುವಂದನಾ ಕಾರ್ಯಕ್ರಮ



◆**ಗದಗ:** ತಮ್ಮ ಬದುಕಿನ ಭವಿಷ್ಯವನ್ನು ರೂಪಿಸಲು ಕಾರಣರಾದ ಪ್ರಾಥಮಿಕ ಮತ್ತು ಪ್ರೌಢಶಾಲೆಯ 24 ಶಿಕ್ಷಕರನ್ನು ಗೌರವ ಸನ್ಮಾನ ಸಲ್ಲಿಸುವ ಶ್ರದ್ಧಾ ಭಕ್ತಿಯ ಗುರುವಂದನಾ ಕಾರ್ಯಕ್ರಮವು ತಾಲೂಕಿನ ಲಕ್ಕುಂಡಿ ಗ್ರಾಮದ ಶತಮಾನ ಕಂಡ ಇಲ್ಲಿಯ ಸರ್ಕಾರಿ ಮಾದರಿಯ ಪ್ರಾಥಮಿಕ ದ್ವಿ ಭಾಷಾ ಶಾಲೆಯ ಆವರಣದಲ್ಲಿ ಅದ್ಧೂರಿಯಾಗಿ ಜರುಗಿತು.

1999 ರಿಂದ 2000 ನೇ ಅವಧಿಯೊಳಗೆ ಸರಕಾರಿ ಗಂಡು ಮಕ್ಕಳ ಪ್ರಾಥಮಿಕ ಮತ್ತು ಸರಕಾರಿ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆ ಹಾಗೂ ಬಿ.ಎಚ್.ಪಾಟೀಲ ಪ್ರೌಢಶಾಲೆಯವರೆಗೆ ಕಲಿತ ಸುಮಾರು 85 ಹಳೆಯ ವಿದ್ಯಾರ್ಥಿಗಳು 24 ಶಿಕ್ಷಕ ಮತ್ತು ಶಿಕ್ಷಕಿಯರಿಗೆ ಶಾಲು, ಹಣ್ಣು, ಲಕ್ಕುಂಡಿಯ ಬ್ರಹ್ಮ ಜಿನಾಲಯ ಸ್ಮಾರಕ, ಶತಮಾನ ಕಂಡ ಶಾಲಾ ಕಟ್ಟಡದ ಭಾವಚಿತ್ರವಿರುವ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಅಲ್ಲಮಪ್ರಭುದೇವರ ಮಠದ ಸಿದ್ಧಲಿಂಗೇಶ್ವರ ಶ್ರೀಗಳು ಕಾರ್ಯಕ್ರಮ ಉದ್ಘಾಟಿಸಿದರು. ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಆಯುಕ್ತ ಶರಣು ಗೋಗೇರಿ, ಮುಖ್ಯೋಪಾಧ್ಯಾಯ ಕೆ.ಬಿ. ಕೊಣ್ಣೂರು, ಎ.ಕೆ. ಪೂಜಾರ, ಎಸ್‌ಡಿಎಂಸಿ ಅಧ್ಯಕ್ಷ ಗವಿಸಿದ್ದಯ್ಯ ಯಲಿಶಿರುಂಜ ಇತರರಿದ್ದರು. ಗುರುರಾಜ ಬೆಂತೂರು ಸ್ವಾಗತಿಸಿದರು. ಮಹೇಶ ವಡ್ಡಿನ ನಿರೂಪಿಸಿದರು. ಹನುಮಂತಪ್ಪ ಹಟ್ಟಿ ವಂದಿಸಿದರು.

ಅಧಿಕಾರ ಸ್ವೀಕಾರ



◆**ಮುಂಡರಗಿ:** ತಾಲೂಕು ಪಂಚಾಯತಿಯ ಪ್ರಭಾರಿ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ ಕಚೇರಿಯ ಯೋಜನಾ ಅಧಿಕಾರಿ ವಿಜಯಕುಮಾರ ಬೆಣ್ಣೆ ಅಧಿಕಾರ ಸ್ವೀಕರಿಸಿದರು. ನೂತನವಾಗಿ ಅಧಿಕಾರ ವಹಿಸಿಕೊಂಡ ವಿಜಯಕುಮಾರ ಬೆಣ್ಣೆ ಅವರನ್ನು ತಾಪಂ ಸಭಾಗಣದಲ್ಲಿ ತಾಲೂಕು ಪಂಚಾಯತ್ ಸಿಬ್ಬಂದಿ ಸನ್ಮಾನಿಸಿ ಸ್ವಾಗತಿಸಿದರು. ಸರ್ಕಾರಿ ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷ ಮಹೇಶ ಅಲ್ಲಿಪ್ಪೂರ, ಸಹಾಯಕ ಲೆಕ್ಕಾಧಿಕಾರಿ ಗುರುರಾಜ ಚವ್ಹಾಣ, ಪಿಡಿಒ ಸಂಘದ ತಾಲೂಕು ಘಟಕದ ಅಧ್ಯಕ್ಷ ಫಕ್ರುದ್ದಿನ್ ನಧಾಪ, ಸಹಾಯಕ ನಿರ್ದೇಶಕ ಪ್ರವೀಣ ಗೋಣೆಮ್ಮನವರ ಇತರರಿದ್ದರು.

ಇಬ್ಬರಿಗೆ ಸನ್ಮಾನ



◆**ಗದಗ:** ಕರ್ನಾಟಕ ಜನಶಕ್ತಿ ಕಟ್ಟಡ ಕಾರ್ಮಿಕ ಮತ್ತು ಇತರೆ ನಿರ್ಮಾಣ ಸಂಘದ ರಾಜ್ಯಾಧ್ಯಕ್ಷ ನಾಗರಾಜ ಎಂ., ರಾಜ್ಯ ಸಂಚಾಲಕ ಬಸವರಾಜ ಅವರನ್ನು ಜಿಲ್ಲಾ ಘಟಕದಿಂದ ನಗರದ ಗಂಗಾಪೂರ ಪೇಟೆಯಲ್ಲಿ ಸನ್ಮಾನಿಸಲಾಯಿತು. ಮಹಿಳಾ ರಾಜ್ಯಾಧ್ಯಕ್ಷೆ ನಾಗವೇಣಿ ಕೆ.ಯು, ರಾಜ್ಯ ಖಜಾಂಚಿ ವಿಷಕಂಠ ಗೌಡ್ರು, ಜಿಲ್ಲಾಧ್ಯಕ್ಷ ಮಹಮ್ಮದ ಅಲಿ ಬಾವಾಜಿ, ಉಪಾಧ್ಯಕ್ಷ ಮೋಹನ ಇಮರಾಪೂರ, ಪ್ರಧಾನ ಕಾರ್ಯದರ್ಶಿ ಸುರೇಶ ಕುಂಬಾರ, ಧಾರವಾಡ ಜಿಲ್ಲಾ ಮಹಿಳಾ ಅಧ್ಯಕ್ಷ ಮಂಜುಳಾ, ಲಕ್ಷ್ಮೇಶ್ವರ ತಾಲೂಕು ಅಧ್ಯಕ್ಷ ಪ್ರಶಾಂತ, ಪದಾಧಿಕಾರಿ ಸವಿತಾ ಇಮರಾಪೂರ, ಮಂಜುನಾಥ ನರೇಗಲ್, ಶಿವಪ್ಪ ಕಿತ್ತೂರ, ಸಿದ್ದಪ್ಪ ಗಳಗಂಟಿ ಸೇರಿದಂತೆ ಮುಂತಾದ ಕಟ್ಟಡ ಕಾರ್ಮಿಕರು ಹಾಗೂ ಇತರರಿದ್ದರು.

ನಿವೃತ್ತ ಸೈನಿಕರಿಗೆ ಸನ್ಮಾನ



◆**ಗದಗ:** ನಗರದಲ್ಲಿ ನಿವೃತ್ತ ಸೈನಿಕ ಹನುಮಂತಪ್ಪ ಬುರಡಿ ಹಾಗೂ ಭೀಮಪ್ಪ ದೊಡ್ಡನಿಯವರ ಸೇವೆಯನ್ನು ಗುರುತಿಸಿ ಕುಲಕ್ಕೆ ತಿಲಕ ಸಾಂಸ್ಕೃತಿಕ ಬಳಗದ ವತಿಯಿಂದ ಸನ್ಮಾನ ಕಾರ್ಯಕ್ರಮ ನಡೆಯಿತು. ತರಳುಬಾಳು ಸರ್ಕಾರಿ ವಸತಿಯುಕ್ತ ಮಾದರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಸಹ ಪ್ರಾಧ್ಯಾಪಕ ಡಾ.ಈರಣ್ಣ ಲಗಳೂರು, ಪ್ರಾಚಾರ್ಯ ಜಿ.ಬಿ.ಗುಡಿಮನಿ, ಉಪನ್ಯಾಸಕ ಬಸವರಾಜ ಜೋಗಣ್ಣವರ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಆರ್.ಎಸ್. ಬುರಡಿ, ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಸುಣಗಾರ, ಎಚ್.ಎಸ್. ಮಂಗಳೂರು ಇದ್ದರು.



ನರಗುಂದ: ರಾಷ್ಟ್ರದ ಸ್ವಾತಂತ್ರ್ಯ ಹೋರಾಟಕ್ಕಾಗಿ ಜೀವನವನ್ನೇ ಮುಡುಪಾಗಿಟ್ಟ ವೀರ ಸಾವರ್ಕರ್ ಎಂದೇ ಪ್ರಸಿದ್ಧರಾದ ವಿನಾಯಕ ದಾಮೋದರ ಸಾವರ್ಕರ್ ಅವರ ಜನ್ಮದಿನವನ್ನು ನಗರದ ಸಾವರ್ಕರ್ ವೃತ್ತದಲ್ಲಿ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಲಾಯಿತು. ಸಿದ್ದೇಶ ಹೂಗಾರ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಶರಣು ಪಿಡ್ನಾಯ್ಕರ, ನಾಗೇಶ ಅಪ್ಪೋಜಿ, ಕಿರಣ ಮುದೊಳೆ, ನವೀನ ಯಳ್ಳೂರು, ಮಂಜು ಹೂಗಾರ, ಶಿವು ಬಿರನೂರ, ವಿರುಪಾಕ್ಷ ಮಿಕ್ಕಲ್, ರಾಜೇಶ ಜಾದವ, ಶಿವಯ್ಯ ಸಿಂಧೋಗಿಮಠ ಮುಂತಾದವರಿದ್ದರು.

ಗೊತ್ತಿಲ್ಲದವರೊಂದಿಗೆ ರೈತರ ವ್ಯವಹಾರ ಸಲ್ಲ

◆**ಗದಗ:** ತಾಲೂಕಿನ ಲಕ್ಕುಂಡಿಯ ಮಾರುತಿ ದೇವಸ್ಥಾನದ ಆವರಣದಲ್ಲಿ ಗ್ರಾಮೀಣ ಪೊಲೀಸ್ ಠಾಣೆಯ ವತಿಯಿಂದ ಸೈಬರ್ ಅಪರಾಧಗಳನ್ನು ತಡೆಗಟ್ಟುವ ಕುರಿತು ಕಾನೂನು ಅರಿವು ಕಾರ್ಯಕ್ರಮ ನಡೆಯಿತು.

ಲಕ್ಕುಂಡಿ ಬೀಟ್ ಪೊಲೀಸ್ ಪೇದೆ ಪ್ರವೀಣ ಶಾಂತಪ್ಪನವರ ಮಾತನಾಡಿ, ರೈತರು ಪರಿಚಯವಿಲ್ಲದವರ ಜೊತೆ ತಮ್ಮ ಕೃಷಿ ದಾಸ್ತಾನನ್ನು ಮಾರಬೇಡಿ. ಕೇವಲ ನೂರಾರು ರೂಪಾಯಿ ಉಳಿತಾಯ ಮಾಡುವ ಉದ್ದೇಶದಿಂದ ದೂರದ ಊರಿಂದ ಬಂದ ಖರೀದಿದಾರರಿಗೆ ದಾಸ್ತಾನು ಕೊಡಬೇಡಿ ಅವರು ತೂಕ ಮತ್ತು ಇತರೆ ಮೋಸ ಮಾಡುವುದು ತಮಗೆ ಗೊತ್ತಾಗುವುದಿಲ್ಲ, ಸರ್ಕಾರದ ಪರವಾಗಿ ಇರುವ ಕೃಷಿ ಉತ್ಪನ್ನ ಮಾರುಕಟ್ಟೆಗೆ ಹೋಗಿ ಮರಾಟ ಮಾಡಿ ಪ್ರಮಾಣಿಕ ಬೆಲೆಯನ್ನು ಪಡೆದುಕೊಳ್ಳಿ ಎಂದರು.

ಆನ್‌ಲೈನ್ ಸೈಬರ್ ಅಪರಾಧಗಳು ಹೆಚ್ಚಾಗುತ್ತಿದ್ದು ರೈತರು ತಮ್ಮ ಬ್ಯಾಂಕ್ ಖಾತೆಯನ್ನು ಯಾರಿಗೂ ನೀಡಬೇಡಿ ಮತ್ತು ಮೊಬೈಲ್‌ಗೆ ಬರುವ ಒಟಿಪಿ ಸಂದೇಶವನ್ನು ಹಂಚಿಕೊಳ್ಳಬೇಡಿ. ಒಂದು ವೇಳೆ ಮೋಸ ಹೋಗಿದ್ದರೆ ತಕ್ಷಣವೇ ಸಹಾಯವಾಣಿ 1930 ಮತ್ತು 112ಕ್ಕೆ ಕರೆ ಮಾಡಿ ನಿಮ್ಮ ಹಣವನ್ನು ರಕ್ಷಿಸಿಕೊಳ್ಳಿ, ತಮ್ಮ ಕೃಷಿ ಕಾರ್ಯಕ್ಕೆ ಉಪಯೋಗಿಸುವ ಮತ್ತೊಬ್ಬರಿಂದ ಟ್ರ್ಯಾಕ್ಟರ್ ಖರೀದಿ ಮಾಡುವಾಗ ಅಧಿಕೃತ ದಾಖಲಾತೆಯನ್ನು ಪರಿಶೀಲಿಸಿ ಖರೀದಿಸಿ ಮತ್ತು ವಾಹನದ ಟ್ರೈಲರ್ ಹಿಂದುಗಡೆ ರೇಡಿಯಂ ಅಂಟಿಸಿ ಹಿಂದಿನಿಂದ ಬರುವ ವಾಹನಗಳಿಗೆ ರಾತ್ರಿ ವೇಳೆ ವಾಹನ ಕಾಣುವಂತೆ ಮಾಡಿ ಅಪಘಾತವನ್ನು ತಡೆಗಟ್ಟಿ ಎಂದರು. ಎ.ಎಸ್.ಐ. ವಿ.ಎಸ್.ಭಿಕ್ಷಾವತಿಮಠ ಇದ್ದರು.



ಗದಗ: ತಾಲೂಕಿನ ಲಕ್ಕುಂಡಿಯ ಮಾರುತಿ ದೇವಸ್ಥಾನದ ಆವರಣದಲ್ಲಿ ಗ್ರಾಮೀಣ ಪೊಲೀಸ್ ಠಾಣೆಯ ವತಿಯಿಂದ ಸೈಬರ್ ಅಪರಾಧಗಳನ್ನು ತಡೆಗಟ್ಟುವ ಕುರಿತು ಕಾನೂನು ಅರಿವು ಕಾರ್ಯಕ್ರಮ ನಡೆಯಿತು.

ಮುಂಗಾರು ಬಿತ್ತನೆಗೆ ವರುಣನ ಆಗಮನಕ್ಕೆ ಕಾಯುತ್ತಿರುವ ಅನ್ನದಾತ

ಕೃಷಿ ಚಟುವಟಿಕೆಗಳು ಕ್ಷೀಣ

▸ರಮೇಶ ಮೋಟೆ

ದಿಗಂತ ವಿಶೇಷ

◆**ನರಗುಂದ:** ಪ್ರಸಕ್ತ ವರ್ಷ ಮುಂಗಾರು ಹಂಗಾಮಿನ ಆರಂಭದಲ್ಲಿ ಮಳೆ ಕೊರತೆ ಎದ್ದು ಕಾಣುತ್ತಿದೆ. ಮುಂಗಾರಿನ ಕೃಷಿ ಚಟುವಟಿಕೆಗಳು ಕಾಣುತ್ತಿಲ್ಲ, ನೆಪಕ್ಕೆ ಎಂಬಂತೆ ಅಲ್ಲೊಂದು, ಇಲ್ಲೊಂದು ಕೃಷಿ ಚಟುವಟಿಕೆ ನಡೆದರೂ ಬಿತ್ತನೆಗೆ ಅನುಕೂಲವಾಗುವ ಯಾವುದೇ ಪೂರಕ ವಾತಾವರಣ ಇಲ್ಲ, ವಾಡಿಕೆ ಮಳೆಗಿಂತ ಶೇ.80ರಷ್ಟು ಕೊರತೆ ಕಾಣುತ್ತದೆ. ಮುಂಗಾರು ಬಿತ್ತನೆಗೆ ರೈತರು ವರುಣನ ಆಗಮನ ನೋಡುತ್ತಿದ್ದಾರೆ. ಮುಂಗಾರು ಅವಧಿಯಲ್ಲಿ ತಾಲೂಕಿನ ರೈತರು ಹೆಸರು ಕಾಳು, ಮೆಕ್ಕೆಜೋಳ ಬೆಳೆಯುತ್ತಾರೆ. ಆದರೆ ಬೀಜ ಬಿತ್ತನೆಗೆ ಅಗತ್ಯವಿರುವ ಮಳೆ ಸುರಿಯುತ್ತಿಲ್ಲ, ನರಗುಂದ ತಾಲೂಕು ಹೊರತುಪಡಿಸಿ ಸುತ್ತಲಿನ ಬಹುತೇಕ ತಾಲೂಕುಗಳಲ್ಲಿ ಮಳೆ ಸುರಿದಿದೆ. ಮೂರು ದಿನಗಳಿಂದ ಅಲ್ಲಲ್ಲಿ ತುಂತುರು ಮಳೆಯಾಗಿದ್ದು ರೈತರನ್ನು ಖುಷಿಗೊಳಿಸಿಲ್ಲ.



- 15,623 ಹೆಕ್ಟೇರ್ ಮೆಕ್ಕೆಜೋಳ ಬಿತ್ತನೆ ಗುರಿ
- 19,420 ಹೆಕ್ಟೇರ್ ಹೆಸರುಕಾಳು ಬಿತ್ತನೆ ಗುರಿ
- 3250 ಹೆಕ್ಟೇರ್ ಹತ್ತಿ ಬೀಜ ಬಿತ್ತನೆ ಗುರಿ
- 600 ಹೆಕ್ಟೇರ್ ಜಮೀನನಲ್ಲಿ ಇತರೇ ಬೆಳೆ ಬೆಳೆಯುವ ಗುರಿ

ಹೆಸರು ಬೀಜ ದಾಸ್ತಾನು

ಕೃಷಿ ಇಲಾಖೆ ಮುಂಗಾರು ಬಿತ್ತನೆಗೆ ಹೆಸರು ಬೀಜ ಒದಗಿಸಲು ಎಲ್ಲ ಸಿದ್ದತೆ ನಡೆಸಿದೆ. ನರಗುಂದ ಹಾಗೂ ಕೊಣ್ಣೂರ ರೈತ ಸಂಪರ್ಕ ಕೇಂದ್ರಗಳಲ್ಲಿ 40 ಕ್ವಿಂಟಲ್ ಹೆಸರುಕಾಳು ಬೀಜದ ದಾಸ್ತಾನು ಮಾಡಿಕೊಂಡಿದೆ. ಸಾಮಾನ್ಯ ವರ್ಗದ ರೈತರಿಗೆ 5 ಕೆಜಿ 1 ಪಾಕೀಟಗೆ ರೂ. 510, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ 5ಕೆಜಿ 1 ಪಾಕೀಟಗೆ ರೂ.447.50 ಸಿಗಲಿದೆ. ರಸಗೊಬ್ಬರ ಸಮರ್ಪಕವಾಗಿ ರೈತರಿಗೆಲ್ಲ ಸಿಗಲಿದೆ. ಆದರೆ ಮಳೆ ಆಗಬೇಕಾಗಿದೆ ಅಷ್ಟೇ ಎನ್ನುತ್ತಾರೆ ಅಧಿಕಾರಿಗಳು.

ಲಾಭಕ್ಕಿಂತ ಖರ್ಚು ಜಾಸ್ತಿ!

ಬಿತ್ತನೆಗೆ ಬೇಕಾದ ಮಳೆ ಸುರಿಯದೇ ರೈತರನ್ನು ಚಿಂತೆಗೀಡು ಮಾಡಿದೆ. ಕಳೆದ ವರ್ಷ ಹಿಂಗಾರು, ಮುಂಗಾರು ಸಹಿತ ಬೆಳೆ ಹಾನಿ, ಕಳಪೆ ಬೀಜ, ಅಸಮರ್ಪಕ ಮಳೆ ಹೀಗೆ ಲಾಭ ನೀಡದೆ ಕೃಷಿಗಾಗಿ ಕೇವಲ ಖರ್ಚನ್ನೇ ಮಾಡಲಾಯಿತು. ಇದರಿಂದ ರೈತರಿಗೆ ನೆಮ್ಮದಿ ಇಲ್ಲದಂತಾಗಿದೆ. ಈ ಸಲ ಮುಂಗಾರು ಆರಂಭದಲ್ಲಿ ಉತ್ತಮ ಮಳೆ ಸುರೀದೀತು ಎಂಬ ಆಶಾಭಾವನೆಯಲ್ಲಿರುವ ರೈತರಿಗೆ ವರುಣದೇವ ಕೃಪೆ ತೋರಬೇಕಿದೆ ಎಂಬುದು ಅನ್ನದಾತರ ಆಶಯ.

❝ ಮುಂಗಾರು ಬಿತ್ತನೆಗೆ ಬೇಕಾದ ಹೆಸರುಕಾಳು ಹಾಗೂ ಮೆಕ್ಕೆಜೋಳ ಬೀಜಗಳು ಸಮರ್ಪಕವಾಗಿ ಸಿಗಲಿದೆ. ರೈತರು ಪ್ರಸಕ್ತ ವರ್ಷದಲ್ಲಿ ಯೂರಿಯಾ ಗೊಬ್ಬರ ಬಳಕೆ ಕಡಿಮೆ ಮಾಡುವುದರ ಜೊತೆಗೆ ಸಾವಯವ ಗೊಬ್ಬರ ಬಳಕೆ ಮಾಡಬೇಕು. ಇದು ಭೂಮಿಯ ಫಲವತ್ತತೆಯನ್ನು ರಕ್ಷಿಸಲಿದೆ.

■ ಎಸ್.ಎಫ್. ಬೆಳವಟಗಿ, ಸಹಾಯಕ ಕೃಷಿ ನಿರ್ದೇಶಕ, ನರಗುಂದ

❝ ಮೊನ್ನೆ ಸ್ವಲ್ಪಮಟ್ಟಿಗೆ ಮಳೆಯಾಗಿದೆ. ಬಿತ್ತಿದರೆ ಹುಟ್ಟುವ ಹಸಿ ಇಲ್ಲ. ಮಳೆ ಆಗಬಹುದೆಂಬ ನಂಬಿಗೆಯ ಮೇಲೆ ಹೆಸರು ಬೀಜ ಬಿತ್ತುತ್ತಿದ್ದೇವೆ. ಈ ದಿನ 10 ಎಕರೆ ಹೆಸರು ಬೀಜ ಬಿತ್ತಿದ್ದೇವೆ. ಮಳೆ ಆಗದೇ ಇದ್ದರೆ ಬಿತ್ತಿದ ಬೀಜ ಭೂಮಿತಾಯಿ ಪಾಲಾಗುತ್ತದೆ.

■ ನಜೀರಸಾಬ ಮಕ್ತುಮಸಾಬ ನಾಯ್ಕರ, ಕಸಬಾ ರೈತ, ನರಗುಂದ

ಮುಂಬರುವ ಚುನಾವಣೆ ಬಹಿಷ್ಕಾರದ ಎಚ್ಚರಿಕೆ!

◆**ನರೇಗಲ್ಲ:** ಸಮೀಪದ ಜಕ್ಕಲಿ ಗ್ರಾಮದಲ್ಲಿ ಹಲವು ದಶಕಗಳಿಂದಲೂ ಮುಂದುವರಿದಿರುವ ಆಗಸರ ಹಳ್ಳ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಇದೀಗ ಮುಂಬರುವ ಚುನಾವಣೆಗಳನ್ನು ಬಹಿಷ್ಕರಿಸುವ ಚಿಂತನೆ ನಡೆಸಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ರೈತರೊಂದಿಗೆ ದುರ್ವರ್ತನೆ ನಡೆಸಿದ ಆರೋಪದ ಹಿನ್ನೆಲೆ ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಳೆದ ಭಾವಾರ ಸುರಿದ ಭಾರೀ ಮಳೆಯಿಂದ ಆಗಸರ ಹಳ್ಳ ತುಂಬಿ ಹರಿದ ಪರಿಣಾಮ ರೋಣ-ಜಕ್ಕಲಿ ರಸ್ತೆ ಸಂಪರ್ಕ ಸಂಪೂರ್ಣ ಕಡಿತಗೊಂಡಿತ್ತು. ನೀರು ಸರಾಗವಾಗಿ ಹರಿಯಬೇಕಾದ ಸ್ಥಳದಲ್ಲಿ ಖಾಸಗಿ ವಿಂಡ್ ಕಂಪನಿಯವರು ಅನಧಿಕೃತವಾಗಿ ತಾತ್ಕಾಲಿಕ ರಸ್ತೆ ಹಾಗೂ ಸೇತುವೆ ನಿರ್ಮಿಸಿರುವುದರಿಂದ ನೀರು ರೈತರ ಜಮೀನುಗಳಿಗೆ ನುಗ್ಗಿ ಬೆಳೆ ಹಾನಿಯಾಗುತ್ತಿದೆ. ಮಳೆಯ ನೀರು ರೈತ ಶೇಖಣ್ಣ ಮೇಟಿ ಅವರ ಜಮೀನಿಗೆ ನುಗ್ಗಿ ಬೆಳೆ ಹಾನಿಗೊಳಗಾದ ಹಿನ್ನೆಲೆಯಲ್ಲಿ ಅವರು ಸೋಮವಾರ ಸ್ವಂತ ಖರ್ಚಿನಲ್ಲಿ ಜೆಸಿಬಿ ತರಿಸಿ ಅಕ್ರಮ ರಸ್ತೆ ತೆರವುಗೊಳಿಸಿದ್ದಾರೆ. ಗ್ರಾಮಸ್ಥರು ಈ ಕ್ರಮಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಸ್ಥಳ ಪರಿಶೀಲನೆಗೆ ಬಂದ ತಹಶೀಲ್ದಾರ್ ನಾಗರಾಜ ಕೆ. ಅವರು ಸಮಸ್ಯೆ ಆಲಿಸುವ ಬದಲು ರೈತರನ್ನೇ ಗದರಿಸಲು ಮುಂದಾದರು ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಮೇಲ್ಸೇತುವೆ ನಿರ್ಮಾಣ ಕುರಿತು ಮೇಲಾಧಿಕಾರಿಗಳಿಗೆ ಪತ್ರ ಬರೆದಿದ್ದೇವೆ ಎಂಬ ಅಧಿಕಾರಿಗಳ ಉತ್ತರಕ್ಕೆ ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿ ತಕ್ಷಣ ಶಾಶ್ವತ ಪರಿಹಾರಕ್ಕೆ ಒತ್ತಾಯಿಸಿದರು.



ಹೋರಾಟದ ಸ್ಥಿತಿ

ಕರ್ನಾಟಕ ಏಕೀಕರಣದ ರೂವಾರಿ ಅಂದಾನಪ್ಪ ದೊಡ್ಡಮೇಟಿ ಅವರ ಜನ್ಮಭೂಮಿಯಲ್ಲೇ ಮೂಲಭೂತ ಸೌಕರ್ಯಕ್ಕಾಗಿ ಜನ ಹೋರಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಹಿಂದೆ ಇದೇ ಹಳ್ಳದಲ್ಲಿ ವೃದ್ದೆಯೊಬ್ಬಳು ನೀರಿನಲ್ಲಿ ಕೊಚ್ಚಿಕೊಂಡು ಹೋದ ಘಟನೆ ನಡೆದಿದ್ದರೂ ಆಡಳಿತ ಎಚ್ಚೆತ್ತುಕೊಂಡಿಲ್ಲ ಎಂದು ರೈತ ಮುಖಂಡ ಸಿದ್ದಲಿಂಗೇಶ ಹಡಪದ ಆಕ್ರೋಶ ವ್ಯಕ್ತಪಡಿಸಿದರು.

ಜಮೀನಿಗೆ ಹಾನಿ

ವಿಂಡ್ ಕಂಪನಿಯ ತಾತ್ಕಾಲಿಕ ರಸ್ತೆ ನೀರಿನ ಹರಿವಿಗೆ ಅಡ್ಡಿಯಾಗಿದ್ದು ನಮ್ಮ ಜಮೀನುಗಳಿಗೆ ಹಾನಿಯಾಗಿದೆ. ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಸ್ಪಂದನೆ ಸಿಗಲಿಲ್ಲ. ಆದ್ದರಿಂದಲೇ ನಾನು ಸ್ವಂತ ಖರ್ಚಿನಲ್ಲಿ ಜೆಸಿಬಿ ತರಿಸಿ ಅಕ್ರಮ ರಸ್ತೆ ತೆರವುಗೊಳಿಸಿದ್ದೇನೆ ಎಂದು ಹಿರಿಯ ರೈತ ಮುಖಂಡ ಶೇಖಣ್ಣ ಮೇಟಿ ಹೇಳಿದರು.

ಕಠಿಣ ಪರಿಶ್ರಮವೇ ಉಜ್ವಲ ಭವಿಷ್ಯದ ಬುನಾದಿ

◆**ಶಿರಹಟ್ಟಿ:** ವಿದ್ಯಾರ್ಥಿ ಭವಿಷ್ಯ ಉಜ್ವಲವಾಗಲು ಮತ್ತು ತಂದೆ-ತಾಯಿ ಕನಸು ನನಸು ಮಾಡಲು ಕಲಿಕಾ ಹಂತದಲ್ಲಿ ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಓದಬೇಕು. ಅಂದಾಗ ಮಾತ್ರ ಉಜ್ವಲ ಭವಿಷ್ಯ ಕಟ್ಟಿಕೊಳ್ಳಲು ಸಾಧ್ಯ ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಪಟ್ಟಣದ ಶ್ರೀ ಜಗದ್ಗುರು ಫಕೀರೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 2025-26ನೇಸಾಲಿನವಾರ್ಷಿಕಸ್ನೇಹಸಮ್ಮೇಳನ ಹಾಗೂ ಸ್ವಯಂ ಚಾಲಿತ ಗ್ರಂಥಾಲಯ ಲೋಕಾರ್ಪಣೆ ಹಾಗೂ ಕನ್ನಡ ಮತ್ತು ಇತಿಹಾಸ ವಿಭಾಗಗಳು ಸಂಪಾದಿಸಿದ ಪುಸ್ತಕ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಉನ್ನತ ಗುರಿ, ಸಾಧಿಸುವ ಛಲ, ಅಚಲವಾದ ಆತ್ಮವಿಶ್ವಾಸ ಇಟ್ಟುಕೊಂಡು ತಾತ್ಕಾಲಿಕ ಸೋಲು-ಗೆಲುವುಗಳನ್ನು ಲೆಕ್ಕಿಸದೆ ನಿರಂತರ ಪ್ರಯತ್ನ ಮಾಡಿದರೆ ಭವಿಷ್ಯ ಬಂಗಾರವಾಗುತ್ತದೆ ಎಂದರು.

ಪ್ರಾಂಶುಪಾಲ ಡಾ. ಉಮೇಶ ಅರಹುಣಸಿ ಮಾತನಾಡಿ, ಪ್ರತಿ ವರ್ಷ ಒಂದು ಹೊಸ ಯೋಜನೆ ವಿದ್ಯಾರ್ಥಿಗಳಿಗೆ ಸಮರ್ಪಿಸಲಾಗುತ್ತಿದ್ದು, ಕಳೆದ ವರ್ಷ ವಿದ್ಯಾಪಥ ಎಂಬ ವಿದ್ಯಾರ್ಥಿ ಮಾರ್ಗದರ್ಶಿ ಹೊತ್ತಿಗೆ ಕಲ್ಪಿಸಿದೆ, ಈ ವರ್ಷ ಸ್ವಯಂ ಚಾಲಿತ ಗ್ರಂಥಾಲಯ ವ್ಯವಸ್ಥೆ ನೀಡಿದ್ದು, ಇದಕ್ಕೆಲ್ಲಾ ವಿದ್ಯಾರ್ಥಿಗಳ ಸಹಕಾರ, ಸಿಬ್ಬಂದಿ ಶ್ರಮ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ನಿರಂತರ ಬೆಂಬಲ ಪ್ರೇರಣೆಯಾಗಿದೆ ಎಂದರು.

ಹಳೆ ವಿದ್ಯಾರ್ಥಿ ಸಂಘದ ಜಂಟಿ ಕಾರ್ಯದರ್ಶಿ ಗೂಳಪ್ಪ ಕರಿಗಾರ ಮಾತನಾಡಿ, ನಾವು ಓದುವ ವೇಳೆ ಕಡಿಮೆ ಸೌಕರ್ಯವಿತ್ತು. ಈಗ ಉನ್ನತ ಮಟ್ಟದ ಶಿಕ್ಷಣ ಲಭ್ಯವಿದೆ. ನುರಿತ ಉಪನ್ಯಾಸಕ ಬಳಗ, ಡಿಜಿಟಲ್ ಲೈಬ್ರರಿ, ಮೂಲಭೂತ ಸೌಲಭ್ಯಗಳು ಅತ್ಯುತ್ತಮವಾಗಿವೆ. ಕಾಲೇಜು ಇನ್ನಷ್ಟು ಸುಧಾರಣೆಯಾಗಲು ಹಳೆ ವಿದ್ಯಾರ್ಥಿಗಳು ಕೈಜೋಡಿಸಬೇಕು ಎಂದರು.

ಡಾ. ರಾಜಶೇಖರ್ ದಾನರಡ್ಡಿ, ಸಿ.ಪಿ. ಕಾಳಗಿ, ಡಾ. ಎಸ್. ಆರ್. ಶಿರಹಟ್ಟಿ, ಹುಮಾಯೂನ್ ಮಾಗಡಿ, ಡಾ. ಸುನೀಲ ಬುರಬುರೆ, ಅಜ್ಜಪ್ಪ ಪಾಟೀಲ, ಮಂಜುನಾಥ ಸೊಂಟನೂರ, ಎಚ್.ಎಂ. ದೇವಗಿರಿ, ನಂದಾ ಪಲ್ಲೇದ, ಸಿಪಿಐ ಬಿ. ವಿ. ನ್ಯಾಮಗೌಡ, ವಿ.ವಿ. ಕಪ್ಪತ್ತನವರ, ಕೆ.ಎ. ಬಳಿಗಾರ, ನಾಗರಾಜ ಲಕ್ಕುಂಡಿ, ಸಿ.ಸಿ. ನೂರಶೆಟ್ಟರ, ಗೀತಾ ಪ್ರಭು ಹಲಸೂರ, ಪರಶುರಾಮ ಡೊಂಕಬಳ್ಳಿ, ಫಕೀರೇಶ ರಟ್ಟಿಹಳ್ಳಿ, ದೀಪು ಕಪ್ಪತ್ತನವರ, ಜಾನು ಲಮಾಣಿ, ಡಾ. ಎಚ್. ಎನ್. ತಳ್ಳಿಹಳ್ಳಿ ಇದ್ದರು.





ನರಗುಂದ: ತಾಲೂಕಿನಾದ್ಯಂತ ತ್ಯಾಗ ಮತ್ತು ಬಲಿದಾನದ ಪ್ರತೀಕವಾಗಿರುವ ಬಕ್ರೀದ್ ಸಂಭ್ರಮದಿಂದ ಆಚರಣೆಗೊಂಡಿತು. ಶಾಹಿ ಫತ್ತೆ ಮಸ್ಜಿದ್ ಇಮಾಮ ಮೌಲಾನಾ ಆಝುಮ್ ಸರ್ಕಾಜಿ, ಅಂಜುಮನ್ ಎ ಇಸ್ಲಾಂ ಸಂಸ್ಥೆ ಅಧ್ಯಕ್ಷ ಜನಾಬ್ ಐ.ಪಿ.ಚಂದೂನವರ, ಬಾಬುಸಾಬ ಜಮಾದಾರ ಇತರರಿದ್ದರು.

ಮಸೀದಿಗಳಲ್ಲಿ ಸಾಮೂಹಿಕ ಪ್ರಾರ್ಥನೆ



◆**ರೋಣ:** ಮುಸ್ಲಿಂರು ಧಾರ್ಮಿಕ ಚಿಂತನೆಗಳ ಜೊತೆಗೆ ಮಕ್ಕಳ ಗುಣ ಮಟ್ಟದ ಅಕ್ಷರ ಜ್ಞಾನಕ್ಕೆ ಹೆಚ್ಚಿನ ಮಹತ್ವ ನೀಡಬೇಕು. ಅಂದಾಗ ಮಾತ್ರ ಸಮುದಾಯ ಹಾಗೂ ಸಮಾಜ ಅಭಿವೃದ್ಧಿ ಹೊಂದಲು ಸಾದ್ಯ ಎಂದು ಮೌಲಾನ ಮಲೀಕ ಹೇಳಿದರು.

ಅವರು ಗುರುವಾರ ಬಕ್ರೀದ್ ಹಬ್ಬದ ನಿಮಿತ್ತ ಮಾರನಬಸರಿ ಗ್ರಾಮದ ಈದ್ಗಾ ಮೈದಾನದಲ್ಲಿ ಜರುಗಿದ ಸಾಮೂಹಿಕ ಪ್ರಾರ್ಥನೆಯ ನೇತೃತ್ವ ವಹಿಸಿ ಮಾತನಾಡಿ, ಬಕ್ರೀದ್ ಹಬ್ಬವು ತ್ಯಾಗ ಬಲಿದಾನಗಳ ಸಂಕೇತವಾಗಿದೆ ಎಂದರು. ರೋಣ ಪಟ್ಟಣದ ಈದ್ಗಾ ಮೈದಾನದಲ್ಲಿ ಮಳೆ ನೀರು ನಿಂತ ಪ್ರಯುಕ್ತ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಲಾಯಿತು. ತಾಲೂಕಿನ ಅನೇಕ ಗ್ರಾಮಗಳಲ್ಲಿ ಮುಸ್ಲಿಂ ಭಾಂದವರು ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಹಿಂದುಗಳ ಮನೆಗಳಿಗೆ ತೆರಳಿ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಕಾಶೀಮಸಾಬ ದೋಟಿಹಾಳ, ರೈಮಾನಸಾಬ ಮೋತೆಖಾನ್, ಮರ್ತುಜಸಾಬ ಮೋತೆಖಾನ್, ಖಾಧಿರಸಾಬ ಕಳಕಾಪೂರ, ಅಲ್ಲಿಸಾಬ ಸವಡಿ, ನಬಿಸಾಬ ಹುಡೇದ, ಪಕ್ರುಸಾಬ ಹಜರತನವರ, ಬಾಬು ಆತ್ತಾರ ,ಬಾಬು ಮೋತೆಖಾನ್ ಇತರರು ಭಾಗಿಯಾಗಿದ್ದರು.



ಗಜೇಂದ್ರಗಡ: ತ್ಯಾಗ ಮತ್ತು ಬಲಿ ದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ನಗರ ಸೇರಿದಂತೆ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಗುರುವಾರ ಅತ್ಯಂತ ಸಡಗರ, ಸಂಭ್ರಮ ಹಾಗೂ ಧಾರ್ಮಿಕ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಬೆಳಗ್ಗೆಯಿಂದಲೇ ಸಾಂಪ್ರದಾಯಿಕ ಉಡುಪು ಧರಿಸಿದ ಮುಸ್ಲಿಂ ಬಾಂಧವರು ಸ್ಥಳೀಯ ಈದ್ಗಾ ಮೈದಾನದಲ್ಲಿ ಸಾಮೂಹಿಕ ವಿಶೇಷ ನಮಾಜ್ ಸಲ್ಲಿಸಿದರು.

ಬಕ್ರೀದ್: ಶುಭಾಶಯ ವಿನಿಮಯ

◆**ಮುಂಡರಗಿ:** ಪಟ್ಟಣದ ಈದ್ಗಾ ಮೈದಾನದಲ್ಲಿ ಸ್ಥಳೀಯ ಮುಸ್ಲಿಂರು ಬಕ್ರೀದ್ ಹಬ್ಬದ ಪ್ರಯುಕ್ತ ಗುರುವಾರ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ನಂತರ ಪರಸ್ಪರವಾಗಿ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಪಟ್ಟಣದ ಎಸ್.ಎಸ್.ಪಾಟೀಲ ನಗರ, ಹುಡ್ಕೊ ಕಾಲನಿ, ಕಡ್ಲಿಪೇಟೆ, ಮಾಬುಸುಬಾನಿ ನಗರ, ಭೀಮಾಂಬಿಕಾ ಕಾಲನಿ, ಬ್ಯಾಲವಾಡಗಿ ಮೊದಲಾದ ಭಾಗಗಳಿಂದ ಮುಸ್ಲಿಂರು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಈದ್ಗಾ ಮೈದಾನಕ್ಕೆ ತಲುಪಿ ಧರ್ಮ ಗುರುಗಳ ಸಮ್ಮುಖ ಹಾಗೂ ಅವರ ಮಾರ್ಗದರ್ಶನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಅಂಜುಮನ್ ಏ ಇಸ್ಲಾಂ ಕಮಿಟಿ ಅಧ್ಯಕ್ಷ ಮೆಹಬೂಬಸಾಬ್ ಹವಾಲ್ದಾರ್, ಎ.ಕೆ. ಕೊಕ್ಕರಗುಂದಿ, ಎಸ್.ಡಿ.ಮಕಾಂದಾರ, ಸರ್ಫರಾಜ್ ಹಣಗಿ, ಎಂ.ಎಂ.ಸರಗಿ, ನಬಿಸಾಬ್ ಕೆಲೂರ, ಡಿ.ಎಂ.ಕಾತರಕಿ, ರಾಜಾಭಕ್ಷಿ ಬೆಟಗೇರಿ, ರಫಿಕ್ ಮುಲ್ಲಾ, ಹಾಜಿ ಮಹ್ಮದ್‌ಸಾಬ್ ಬೈನದ್, ಹಾಜಿ ಬಾಷಾಸಾಬ್ ನಾಯ್ಕರ್, ಮುಲ್ಲಾಸಾಬ್ ಹಾಜಿ, ಹಾಜಿ ಅಲ್ಲಭಕ್ಷಿ ಬನ್ನಿಗೋಳ, ಎ.ಕೆ.ಮುಲ್ಲಾನವರ, ಮಾಬುಸಾಬ್ ಕೊಕ್ಕರಗುಂದಿ, ಆರ್.ಎಂ. ಸೈದರ್, ಎ.ಪಿ.ದಂಡಿನ, ಎಂ.ಕೆ.ತಳಗಡೆ, ಆರ್.ಎಂ.ತಪ್ಪಡಿ, ರಿಯಾಜ್ ಅಳವಂಡಿ, ಅಬ್ದುಲ್ ನಾಗರಹಳ್ಳಿ, ಅನ್ವರ್ ಮಕಾಂದಾರ ಇತರರಿದ್ದರು.



ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಡಿ.ಡಿ.ಮೋರನಾಳ ಚಾಲನೆ

◆**ಮುಂಡರಗಿ:** ತಾಲೂಕಿನ ಡಂಬಳ ಹೋಬಳಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಳ್ಳುವುದರ ಮೂಲಕ ಜನಪರ ಕಾಳಜಿಯ ಶಾಸಕರಾಗಿ, ಕ್ಷೇತ್ರದ ಪ್ರತಿಯೊಬ್ಬರಿಗೂ ಗ್ಯಾರಂಟಿ ಯೋಜನೆಗಳು ತಲುಪುವಂತೆ ಕಾಳಜಿ ವಹಿಸಿ ಕಾರ್ಯನಿರ್ವಹಿಸುತ್ತಿರುವ ಜಿ.ಎಸ್.ಪಾಟೀಲ ಅವರು ಮಾದರಿಯಾಗಿದ್ದಾರೆ ಎಂದು ಮುಂಡರಗಿ ತಾಲೂಕು ಗ್ಯಾರಂಟಿ ಯೋಜನೆ ಸಮಿತಿಯ ಅಧ್ಯಕ್ಷ ಡಿ.ಡಿ.ಮೋರನಾಳ ಹೇಳಿದರು.

ಅವರು ತಾಲೂಕಿನ ಡಂಬಳ ಹೋಬಳಿಯ ಗ್ರಾಮಗಳಲ್ಲಿ ಸಮಾಜ ಕಲ್ಯಾಣ ಇಲಾಖೆ 2025-26 ನೇ ಸಾಲಿನ ಪ್ರಗತಿ ಕಾಲೋನಿ ಯೋಜನೆಯ ಅಡಿಯಲ್ಲಿ ವೆಂಕಟಾಪೂರ ಗ್ರಾಮದಲ್ಲಿ ಎಸ್.ಸಿ ಕಾಲೋನಿಯಲ್ಲಿ 25 ಲಕ್ಷ ರೂಗಳ ಸಿ.ಸಿ.ರಸ್ತೆ ಮತ್ತು ಹೈಮಾಸ್ಕ ಅಳವಡಿಕೆ, ಮುರಡಿ ತಾಂಡಾದಲ್ಲಿ 25 ಲಕ್ಷ ರೂಗಳ ಸಿ.ಸಿ.ರಸ್ತೆ ಮತ್ತು ಹೈಮಾಸ್ಕ ಅಳವಡಿಕೆ ಹೀಗೆ ಮುಂತಾದ 50 ಲಕ್ಷ ರೂ.ಗಳ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿ ಮಾತನಾಡಿದರು. ಮಕ್ಕಳ ಉತ್ತಮ ಶೈಕ್ಷಣಿಕ ಪ್ರಗತಿಗಾಗಿ ಉತ್ತಮ ವಾತಾವರಣ ನಿರ್ಮಾಣ ಮತ್ತು ಸರ್ಕಾರಿ ಶಾಲೆಗಳಿಗೆ ಸ್ಮಾರ್ಟ ಕ್ಲಾಸ್ ಅಳವಡಿಕೆಗೆ ಆದ್ಯತೆ ನೀಡಲಾಗುತ್ತಿದೆ ಎಂದರು.



ರೋಣ ತಾಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷ ವಿಥುನಗೌಡ ಪಾಟೀಲ ಮಾತನಾಡಿ, ಜನತೆಯ ಹಿತಕ್ಕಾಗಿ ರೋಣಕ್ಷೇತ್ರಕ್ಕೆ ನೂರಾರು ಕೋಟಿ ಅನುದಾನ ತಂದು ಅಭಿವೃದ್ಧಿ ಕಾರ್ಯಗಳನ್ನು ಶಾಸಕರು ಮಾಡುತ್ತಿದ್ದಾರೆ ಎಂದರು. ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ವಿಜಯಕುಮಾರ ಬೆಣ್ಣಿ,ಉದಯಕುಮಾರ ಯಲಿವಾಳ ಮಾತನಾಡಿದರು. ಈ ವೇಳೆ ರತ್ನವ್ವ ಪವಾರ, ಲಲಿತಾ ಪವಾರ, ವಿಶ್ವನಾಥ ಪಾಟೀಲ, ಸತ್ಯಪ್ಪ ಪೂಜಾರ, ಮನೋಜ ರಾಠೋಡ, ಸಂತೋಷ ನಾಯಕ ಮುಂತಾದವರಿದ್ದರು.

ಜಿಎಸ್‌ಪಾಗೆ ಸಚಿವ ಸ್ಥಾನ ನೀಡಿ: ರಾಠೋಡ

◆**ಗಜೇಂದ್ರಗಡ:** ಅಭಿವೃದ್ಧಿ ಹರಿಕಾರ, ಮತಕ್ಷೇತ್ರದ ಅಭಿವೃದ್ಧಿಗೆ ಪಣ ತೊಟ್ಟಿರುವ, ಎಲ್ಲ ಸಮುದಾಯದವರ ಪ್ರೀತಿಗೆ ಪಾತ್ರರಾಗಿರುವ ರೋಣ ಶಾಸಕ ಜಿ.ಎಸ್. ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಬಂಜಾರ ಸಮಾಜದ ಹಿರಿಯ ಮುಖಂಡ ತಾರಾಸಿಂಗ್ ರಾಠೋಡ ಆಗ್ರಹಿಸಿದರು.



1983ರಿಂದ ಸಕ್ರಿಯ ರಾಜಕಾರಣದಲ್ಲಿರುವ ಶಾಸಕ ಜಿ.ಎಸ್. ಪಾಟೀಲರು ಹಲವು ಬಾರಿ ಸಚಿವ ಸ್ಥಾನಕ್ಕಾಗಿ ಬೇಡಿಕೆ ಇಟ್ಟಿದ್ದರು. ಅವರು ಪ್ರಬುದ್ಧ ಮತ್ತು ಪಕ್ಷ ನಿಷ್ಠೆಯ ನಾಯಕರು. ನಾಲ್ಕು ಬಾರಿ ಶಾಸಕರಾಗಿದ್ದಾರೆ. ಹೀಗಾಗಿ ಸಿಎಂ ಬದಲಾವಣೆಯಾದರೆ ಜಿ.ಎಸ್. ಪಾಟೀಲರಿಗೆ ಸಚಿವ ಸ್ಥಾನ ಒಲಿದು ಬರುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಹಿಂದೆ ಸಿಎಂ ಸಿದ್ದರಾಮಯ್ಯ ಅವರು ರೋಣ ಮತಕ್ಷೇತ್ರಕ್ಕೆ ಭೇಟಿ ನೀಡಿದಾಗ ಜಿ.ಎಸ್. ಪಾಟೀಲರು ಸಚಿವ ಸ್ಥಾನಕ್ಕೆ ಅರ್ಹರು ಎಂದು ಉಲ್ಲೇಖಿಸಿದ್ದನ್ನು ಮರೆಯಬಾರದು. ಉತ್ತರ ಕರ್ನಾಟಕ ಭಾಗದಲ್ಲಿ ಲಿಂಗಾಯತ ಸಮುದಾಯದ ಪ್ರಮುಖ ನಾಯಕರಾಗಿರುವ ಇವರಿಗೆ ಸಚಿವ ಸ್ಥಾನ ನೀಡಬೇಕೆಂದು ದಲಿತ ಸಂಘರ್ಷ ಸಮಿತಿ ಸೇರಿದಂತೆ ಹಲವು ಸಂಘಟನೆಗಳು ಮತ್ತು ಬೆಂಬಲಿಗರು ಸತತವಾಗಿ ಒತ್ತಾಯಿಸುತ್ತಿದ್ದಾರೆ. ಮುಂದಿನ ಮುಖ್ಯಮಂತ್ರಿ ಎಂದು ಹೇಳಲಾಗುತ್ತಿರುವ ಡಿ.ಕೆ. ಶಿವಕುಮಾರ ಬಣದಲ್ಲಿಯೂ ಕೂಡಾ ಜಿ.ಎಸ್.ಪಾಟೀಲರು ಕಾಣಿಸಿಕೊಂಡಿದ್ದು, ಕಳೆದ ತಿಂಗಳು ಹಲವು ಶಾಸಕರೊಂದಿಗೆ ದೆಹಲಿಗೆ ತೆರಳಿ ಹಿರಿಯ ಶಾಸಕರಿಗೆ ಸಚಿವ ಸಂಪುಟ ಪುನರ್ ರಚನೆಯಲ್ಲಿ ಸ್ಥಾನ ನೀಡಬೇಕು ಎಂದು ರೋಣ ಶಾಸಕ ಜಿ.ಎಸ್.ಪಾಟೀಲರು ಹೈಕಮಾಂಡ್‌ಗೆ ಸಚಿವ ಸ್ಥಾನದ ಆಸೆಯನ್ನು ಬಿಚ್ಚಿಟ್ಟಿದ್ದರು. ಈಗಲಾದರೂ ಪಕ್ಷದ ವರಿಷ್ಠರು ಈ ಎಲ್ಲಾ ಅಂಶಗಳನ್ನು ಗಮನಿಸಿ ರೋಣ ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಮಕ್ಕಳಿಗೆ ಪಾಲಕರು ಉತ್ತಮ ಸಂಸ್ಕಾರ ನೀಡಲಿ

◆**ಲಕ್ಷ್ಮೇಶ್ವರ:** ಇಂದಿನ ಮಕ್ಕಳಲ್ಲಿ ಧಾರ್ಮಿಕ ಶ್ರದ್ಧೆ, ಸಂಸ್ಕಾರಗಳು ಕಡಿಮೆಯಾಗುತ್ತಿದೆ, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಜೊತೆ ಉತ್ತಮ ನಡೆ, ನುಡಿ, ಸಂಸ್ಕಾರಗಳು, ಆಚಾರ ವಿಚಾರಗಳನ್ನು ಕಲಿಸುವ ಗುರುತರವಾದ ಜವಾಬ್ದಾರಿ ಪಾಲಕರ ಮೇಲಿದೆ ಎಂದು ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಹಳ್ಳದಕೇರಿಯ ಕರೆವಾಡಿಮಠದಲ್ಲಿ ತಾಲೂಕು ಜಂಗಮ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಗುರುವಾರ ಸಾಧಕರಿಗೆ ಸನ್ಮಾನ ಹಾಗೂ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಯಲ್ಲಿ ಶೇ.90ಕ್ಕೂ ಅಧಿಕ ಅಂಕಗಳಿಸಿದ ಜಂಗಮ ಸಮಾಜದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು. ನರಸಾಪುರ ಹಾಗೂ ಕದಂಪುರ ಮಠದ ವೀರಭದ್ರ ಶಿವಾಚಾರ್ಯರು ಮಾತನಾಡಿ, ಸಾಧನೆ ಮಾಡುವ ವಿಚಾರ ಮಕ್ಕಳಲ್ಲಿ ಬರಬೇಕು. ಅದಕ್ಕೆ ಗುರಿ ಇಟ್ಟು ಶ್ರಮ ಪಡಬೇಕು. ಅದರಂತೆ ಪಾಲಕರು ಸಹಿತ ಮಕ್ಕಳಿಗೆ ವಿದ್ಯಾಭ್ಯಾಸ ಜೊತೆಗೆ ಒಳ್ಳೆಯ ಸಂಸ್ಕಾರ ಕಲಿಸಬೇಕು ಎಂದರು. ಕರೆವಾಡಿಮಠದ ಮಳೆಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಹಾಗೂ ಕರೆವಾಡಿಮಠದ ನಿಯೋಜಿತ ಉತ್ತರಾಧಿಕಾರಿಗಳು ಮಂಜುನಾಥ ದೇವರು ಆಶೀರ್ವಚನ ನೀಡಿದರು. ಮಾಜಿ ಶಾಸಕ ಜಿ.ಎಸ್ ಗಡ್ಡದೇವರಮಠ ಕಾರ್ಯಕ್ರಮ ಉದ್ಘಾಟಿಸಿದರು. ಅಖಿಲ ಭಾರತೀಯ ಜಂಗಮ ಸೇವಾ ಸಮಿತಿ ಜಿಲ್ಲಾ ಉಪಾಧ್ಯಕ್ಷ ಕೆ.ವಿ.ಹಿರೇಮಠ ಉಪಸ್ಥಿತರಿದ್ದರು. ವೀರಭದ್ರಯ್ಯ ಹಿರೇಮಠ ಪ್ರಾಸ್ತಾವಿಸಿದರು. ಶಿರಹಟ್ಟಿ ತಾಲೂಕು ಪ್ರಾ.ಶಾ.ಶಿ.ಸಂ ಅಧ್ಯಕ್ಷ ಶರಣಬಸಪ್ಪ ಪಾಟೀಲ್, ಲಕ್ಷ್ಮೇಶ್ವರ ತಾಲೂಕು ಪ್ರಾ.ಶಾ.ಶಿ.ಸಂ ನಿರ್ದೇಶಕಿ ಸುನಂದಾ ಹಿರೇಮಠ ಅವರನ್ನು ಸನ್ಮಾನಿಸಲಾಯಿತು. ಶಂಕ್ರಯ್ಯ ಪೂಜಾರ ಹಾಗೂ ಮುರುಗೇಂದ್ರಯ್ಯ ಹಿರೇಮಠವೇಧಘೋಷಣೆಮಾಡಿದರು. ಮಹೇಶ. ಲಿಂಬಯ್ಯಸ್ವಾಮಿಮಠ, ಸಿ.ಆರ್.ಲಕ್ಕುಂಡಿಮಠ, ಶಿವಯೋಗಿ ಗಡ್ಡದೇವರಮಠ, ಪಂಚಯ್ಯ ಸಾಲಿಮಠ, ರುದ್ರಮುನಿಸ್ವಾಮಿ ಘಂಟಾಮಠ, ಎಸ್.ಪಿ.ಸಭಾಪತಿಮಠ, ನೀಲಕಂಠಯ್ಯ ಹಿರೇಮಠ, ಶಿವರಾಜ ಕರೆವಾಡಿಮಠ, ಜಿಲ್ಲಾ ಅಖಿಲ ಭಾರತೀಯ ಜಂಗಮ ಸೇವಾ ಸಮಿತಿಯ ವೀರಯ್ಯ ಹೊಸಮಠ, ತೋಟಪಯ್ಯ ಗುಡ್ಡಿಮಠ, ಕುಮಾರಸ್ವಾಮಿ ಹಿರೇಮಠ, ಸಂತೋಷ ಹಿರೇಮಠ ಮುಂತಾದವರಿದ್ದರು.



ಕಿರುಸುದ್ದಿ

ಕೆಟ್ಟು ನಿಂತ ಸರ್ಕಾರಿ ವಾಹನದಲ್ಲಿ ಬೆಳೆದ ಬಿಳಿ ಎಕ್ಕೆ ಗಿಡ



ಬಸವನಬಾಗೇವಾಡಿ: ಗಿಡ ಬಳ್ಳಿಗಳನ್ನು ಹೊಲದ(ಜಮೀನು) ಬದುವಿನಲ್ಲಿ ಮನೆಗಳಲ್ಲಿ ಕುಂಡಲಿಗಳಲ್ಲಿ ಬೆಳೆದಿರುವುದನ್ನು ಕಂಡಿದ್ದೇವೆ. ಆದರೆ, ಪಟ್ಟಣದ ಇಂಗಳೇಶ್ವರ ಮಸಬಿನಾಳಕ್ಕೆ ಹೋಗುವ ರಸ್ತೆಯ ಕೃಷಿ ಪತ್ತಿನ ಬ್ಯಾಂಕ್ ಹತ್ತಿರದಲ್ಲಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಲ್ಯಾಣ ಇಲಾಖೆಯ ಕೆಟ್ಟು ನಿಂತ ವಾಹನದಲ್ಲಿ ಬಿಳಿ ಎಕೆ ಗಿಡ ಹಾಗೂ ಸೀತಾಫಲ ಗಿಡ ಬೆಳೆದು ಕೆಟ್ಟು ನಿಂತ ವಾಹನಕ್ಕೆ ಬಿಸಿಲನ್ನು ದೂರು ಮಾಡಿ ನೆರಳು ಮಾಡಿವೆ.

ಮೊದಲೇ ಬಿಸಿಲೂರಿನಲ್ಲಿ ಬಿಸಿಲಿನ ತಾಪಕ್ಕೆ ಜನರು ಹುಷ್ ನಿಂತುಕೊಳ್ಳಲು, ಕುಳಿತುಕೊಳ್ಳಲು ಹಾಗೂ ಬೈಕ್ ವಾಹನಗಳು ನಿಲ್ಲಿಸಲು ಒಂದೂ ಗಿಡಗಳು ಸಿಗದೆ ಪರದಾಡುವ ಸಮಯದಲ್ಲಿ ಸರ್ಕಾರಿ ವಾಹನಕ್ಕೆ ಬಿಳಿ ಎಕೆ ಗಿಡ ಹಾಗೂ ಸೀತಾಫಲ ಗಿಡ ನೆರಳು ನೀಡಿ ನೋಡುಗರನ್ನು ಹುಬ್ಬೇರಿಸುವಂತೆ ಮಾಡಿವೆ.

ಕ್ಷುಲ್ಲಕ ಕಾರಣಕ್ಕೆ ಯುವಕನ ಹತ್ಯೆ

ಕಾಗವಾಡ: ತಾಲೂಕಿನ ಐನಾಪೂರ ಪಟ್ಟಣದಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ಯುವಕನನ್ನು ಕಲ್ಲಿನಿಂದ ತಲೆ ಜಜ್ಜಿ ಕೊಲೆ ಮಾಡಿದ ಘಟನೆ ಬೆಳಕಿಗೆ ಬಂದಿದೆ.



ಐನಾಪುರ ಪಟ್ಟಣದ ಸಂತೋಶ ಸಿದ್ದಪ್ಪ ಕಮತೆ (33) ಕೊಲೆಯಾದ ದುರ್ದೈವಿ. ಸಂತೋಷ ಕಮತೆ ಅವರ ತೋಟದಲ್ಲಿ ಇದ್ದ ತೆಂಗಿನ ಮರಗಳಿಂದ ತೆಂಗಿನ ಕಾಯಿ ಕಿತ್ತು, ತನ್ನ ಇಬ್ಬರು ಗೆಳೆಯರೊಂದಿಗೆ ಉಗಾರ ಪಟ್ಟಣಕ್ಕೆ ತೆಗೆದುಕೊಂಡು ಹೋಗಿ ಮಾರಾಟ ಮಾಡಿದ್ದರು. ಬಳಿಕ ಮೂವರೂ ಸೇರಿ ಬಾರ್‌ನಲ್ಲಿ ಮದ್ಯಪಾನ ಮಾಡಿ ಐನಾಪುರಕ್ಕೆ ಹಿಂದಿರುಗುವ ವೇಳೆ, ಮಾರಾಟವಾದ ಹಣದ ಬಟವಾಡೆ ವಿಚಾರವಾಗಿ ವಾದ ವಿವಾದ ಆರಂಭಗೊಂಡಿದೆ. ಈ ವೇಳೆ ಉಳಿದ ಇಬ್ಬರು ಗೆಳೆಯರು ಸಂತೋಷ ಮೇಲೆ ಹಲ್ಲೆ ನಡೆಸಿ, ಬಳಿಕ ಕಲ್ಲಿನಿಂದ ತಲೆ ಜಜ್ಜಿ ಕೊಲೆ ಮಾಡಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ.

ಘಟನಾ ಸ್ಥಳಕ್ಕೆ ಬೆಳಗಾವಿಯಿಂದ ಶ್ವಾನದಳ ಹಾಗೂ ಬೆರಳಚ್ಚು ತಜ್ಞರ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಥಣಿ ಡಿವೈಎಸ್ಪಿ ಪ್ರಶಾಂತ ಮುನ್ನೋಳ್ಳಿ, ಸಿಪಿಐ ಸಂತೋಷ ಹಳ್ಳೂರ ಹಾಗೂ ಪಿಎಸ್‌ಐ ರಾಘವೇಂದ್ರ ಖೋತ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣ ಸಂಬಂಧ ಇಬ್ಬರು ಶಂಕಿತರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ.

ವಿಶೇಷ ಸಭೆ ಇಂದು

ಹುಬ್ಬಳ್ಳಿ: ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯು ಉದ್ದಿಮೆದಾರರ, ಎಲ್ಲ ಕೈಗಾರಿಕಾ ಸಂಘಗಳು ಹಾಗೂ ವ್ಯಾಪಾರಸ್ಥರು ಕರ್ನಾಟಕ ರಾಜ್ಯ ಸರ್ಕಾರ ಹೊರಡಿಸಿದ 2026-27ರ ಕನಿಷ್ಠ ವೇತನ ಕರಡು ಅಧಿಸೂಚನೆಯನ್ನು ಅಧ್ಯಯನ ಮಾಡಲು, ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲು ಮತ್ತು ಸರ್ಕಾರಕ್ಕೆ ಸಲ್ಲಿಸಬೇಕಾದ ಏಕೀಕೃತ ಪ್ರಾತಿನಿಧ್ಯವನ್ನು ರೂಪಿಸಲು ವಿಶೇಷ ಸಭೆಯನ್ನು ಮೇ 29ರಂದು ಸಂಜೆ 4 ಗಂಟೆಗೆ ಸಂಸ್ಥೆಯ ಸಭಾಭವನದಲ್ಲಿ ಏರ್ಪಡಿಸಲಾಗಿದೆ.

ಎಲ್ಲಾ ಕೈಗಾರಿಕಾ ಸಂಘಗಳು, ವ್ಯಾಪಾರಿಗಳು, ಉದ್ದಿಮೆದಾರರು ಮತ್ತು ವ್ಯಾಪಾರ ಸಮುದಾಯದ ಸದಸ್ಯರು ಸಭೆಯಲ್ಲಿ ಭಾಗವಹಿಸಿ ಎಂಎಸ್‌ಎಂಇ ಉದ್ಯಮದ ಸಾಮೂಹಿಕ ಕಾಳಜಿಗಳನ್ನು ಸರ್ಕಾರದ ಮುಂದೆ ಪರಿಣಾಮಕಾರಿಯಾಗಿ ಮಂಡಿಸಲು ತಮ್ಮ ಅಮೂಲ್ಯವಾದ ಅಭಿಪ್ರಾಯ ಮತ್ತು ಸಲಹೆ ಸೂಚನೆಗಳನ್ನು ನೀಡಬೇಕೆಂದು ಸಂಸ್ಥೆಯು ಪತ್ರಿಕಾ ಪ್ರಕಟಣೆ ಮೂಲಕ ಕೋರಿದೆ.

21ಲಕ್ಷ ರೂ.ವಂಚನೆ

ಹುಬ್ಬಳ್ಳಿ: ಹಣ ಹೂಡಿಕೆ ಮಾಡಿದರೆ ಹೆಚ್ಚು ಗಳಿಸಬಹುದು ಎಂದು ನಂಬಿಸಿದ ಅಪರಿಚಿತರು ನಗರದ ಪ್ರವೀಣ ಕಲಮನಿ ಎಂಬುವರಿಗೆ 21.01 ಲಕ್ಷ ರೂ. ವರ್ಗಾಯಿಸಿಕೊಂಡು ವಂಚಿಸಿದ್ದಾರೆ.

ಅಪರಿಚಿತರು ಪ್ರವೀಣ ಅವರನ್ನು ಮೊದಲು ಇನ್ವೆಸ್ಟಮೆಂಟ್ ಕ್ಲಬ್ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರಿದ್ದಾರೆ. ಬಳಿಕ ಲಿಂಕ್‌ವೊಂದನ್ನು ಕಳುಹಿಸಿ ಮೊಬೈಲ್ ಆಪ್ ಡೌನಲೋಡ್ ಮಾಡಿಸಿದ್ದಾರೆ. ವಿವಿಧ ಕಂಪನಿ ಸ್ಟಾಕ್‌ಗಳನ್ನು ಖರೀದಿಸಿ ಹೆಚ್ಚು ಲಾಭ ಗಳಿಸಲು ಹೇಳಿ ಹಂತ ಹಂತವಾಗಿ ಹಣ ವರ್ಗಾಯಿಸಿಕೊಂಡು ವಂಚಿಸಿದ್ದಾರೆ. ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಜೆಪಿ ಜಿಲ್ಲಾ ಮಟ್ಟದ ಪ್ರಶಿಕ್ಷಣ ವರ್ಗದ ಸಮಾರೋಪ | ಬಿ.ವೈ.ವಿಜಯೇಂದ್ರ ಕಿಡಿ

ರಾಜ್ಯದ ದಿವಾಳಿಯೇ ಕಾಂಗ್ರೆಸ್ ಕೊಡುಗೆ

ವಿಜಯನಗರ: ಚುನಾವಣಾ ಸಮಯದಲ್ಲಿ ಐದು ಗ್ಯಾರಂಟಿಗಳನ್ನು ಘೋಷಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ, ಅವುಗಳನ್ನು ಪೂರೈಸಲಾಗದೆ ರಾಜ್ಯವನ್ನು ತೀವ್ರ ಆರ್ಥಿಕ ಸಂಕಷ್ಟಕ್ಕೆ ತಳ್ಳಿದೆ ಎಂದು ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ಹೊಸಪೇಟೆ ತಾಲೂಕಿನ ಕಮಲಾಪುರದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾಮಟ್ಟದ ದೀನ ದಯಾಳು ಉಪಾಧ್ಯಾಯ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ರಾಜ್ಯದ ಸರ್ಕಾರಿ ಕಚೇರಿಗಳಲ್ಲಿ ಲಂಚವಿಲ್ಲದೆ ಯಾವುದೇ ಕೆಲಸಗಳು ಆಗುತ್ತಿಲ್ಲ. ಭ್ರಷ್ಟಾಚಾರ ಮುಗಿಲು ಮುಟ್ಟಿದೆ. ಅಹಿಂದ ಹೆಸರಿನಲ್ಲಿ ಅಧಿಕಾರಕ್ಕೆ ಬಂದವರು ಶೋಷಿತ ವರ್ಗಕ್ಕೇ ದೊಡ್ಡ ಅನ್ಯಾಯ ಎಸಗಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಕೋಟ್ಯಂತರ ರೂಪಾಯಿ ಹಣವನ್ನು ಚುನಾವಣಾ ದುರುದ್ದೇಶಕ್ಕೆ ಬಳಸಿಕೊಳ್ಳಲಾಗಿದೆ.

ರಾಜ್ಯದಲ್ಲಿ ಅರಾಜಕತೆ ಸೃಷ್ಟಿಯಾಗಿದೆ. ಯುವಕರಿಗೆ ಉದ್ಯೋಗಗಳಿಲ್ಲ, ಹಿಂದುಗಳಿಗೆ ನಿರಂತರ ಅವಮಾನ ಮಾಡಲಾಗುತ್ತಿದೆ. ಅಲ್ಪಸಂಖ್ಯಾತರ ಓಲೈಕೆ ರಾಜಕಾರಣದಿಂದ ಬೇಸತ್ತಿರುವ ಜನತೆ ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ. ರಾಜ್ಯದ ಅಭಿವೃದ್ಧಿಯ ಬಗ್ಗೆ ಕಿಂಚಿತ್ತೂ ಚಿಂತೆಯಿಲ್ಲದ ಕಾಂಗ್ರೆಸ್‌ಗೆ ಮುಂದಿನ ಚುನಾವಣೆಯಲ್ಲಿ ಜನರೇ ತಕ್ಕ ಬುದ್ಧಿ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.



ಇದೇ ಸಂದರ್ಭದಲ್ಲಿ ಜಿಲ್ಲಾ ಭಾರತೀಯ ಜನತಾ ಪಕ್ಷದ ವತಿಯಿಂದ ರಾಜ್ಯಾಧ್ಯಕ್ಷ ಬಿ. ವೈ.ವಿಜಯೇಂದ್ರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮಾಜಿ ಸಚಿವರಾದ ಶ್ರೀರಾಮುಲು, ಕರುಣಾಕರ್ ರೆಡ್ಡಿ, ಶಾಸಕ ಕೃಷ್ಣ ನಾಯಕ್, ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್, ಬಿಜೆಪಿ ಬಳ್ಳಾರಿ ವಿಭಾಗ ಸಹ ಪ್ರಭಾರಿ ಚನ್ನಬಸವನಗೌಡ ಪಾಟೀಲ್, ಜಿಲ್ಲಾಧ್ಯಕ್ಷ ಎಸ್.ಸಂಜೀವರೆಡ್ಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎಸ್.ರಾಘವೇಂದ್ರ, ಒಬಿಸಿ ರಾಜ್ಯ ಉಪಾಧ್ಯಕ್ಷ ಅಯ್ಯಾಳಿ ತಿಮ್ಮಪ್ಪ, ಎಸ್.ಟಿ.ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರ ಹನುಮಂತು, ಬಲ್ಲಹುಣಸಿ ರಾಮಣ್ಣ, ವಿ. ಕನಕಪ್ಪ, ಜೋಗಿ ಹನುಮಂತಪ್ಪ, ನವೀನ್ ಕುಮಾರ್, ಬೆಣಗಲ್ಲು ಪ್ರಕಾಶ್ ಉಪಸ್ಥಿತರಿದ್ದರು.

ಕಾಂಗ್ರೆಸ್‌ನಿಂದ ದಲಿತ ನಾಯಕರ ಮೂಲೆಗುಂಪು: ಸಂಸದ ಜಿಗಜಿಣಗಿ

ವಿಜಯಪುರ: ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರಿಂದ ಹಿಡಿದು ಇಲ್ಲಿಯವರೆಗೂ ದಲಿತ ನಾಯಕರನ್ನು ಕಾಂಗ್ರೆಸ್ ಮೂಲೆಗುಂಪು ಮಾಡುವ ಪರಂಪರೆ ಮುಂದುವರಿಸಿಕೊಂಡು ಬಂದಿದೆ. ದಲಿತರನ್ನು ಕೇವಲ ವೋಟ್ ಬ್ಯಾಂಕ್‌ಗೆ ಬಳಸಿಕೊಳ್ಳುವುದು ಮತ್ತೊಮ್ಮೆ ಸಾಬೀತಾಗಿದೆ ಎಂದು ಸಂಸದ ರಮೇಶ ಜಿಗಜಿಣಗಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು, ಕಳೆದು 70 ವರ್ಷಗಳಿಂದ ದಲಿತ ವಿರೋಧಿ ಧೋರಣೆಯನ್ನು ಕಾಂಗ್ರೆಸ್ ಮುಂದುವರಿಸಿದೆ. ಇವತ್ತಿಗೂ ದಲಿತ ಶಾಸಕರು ಹಾಗೂ ಸಂಸದರನ್ನು ಮೂಲೆಗುಂಪು ಮಾಡಿ ಕೇವಲ, ಒಂದು ವೋಟ್ ಬ್ಯಾಂಕ್ ಆಗಿ ಪರಿಗಣಿಸಿ ಅವರನ್ನು ಯಾವುದೇ ಸ್ಥಾನಮಾನ ಕೊಡದೆ ಕೇವಲ ಉಪಯೋಗಿಸುವ ಒಂದು ವಸ್ತುವನ್ನಾಗಿ ಮಾಡಿರುವ ಕಾಂಗ್ರೆಸ್ ಪಕ್ಷ ದಲಿತ ವಿರೋಧಿ ಪಕ್ಷವಾಗಿದೆ. 70 ವರ್ಷಗಳಿಂದ ದಲಿತರಿಗೆ ಒಂದು ಬಾರಿನೂ ಮುಖ್ಯಮಂತ್ರಿ ಸ್ಥಾನ ಕೊಡದ ಕಾಂಗ್ರೆಸ್ ಸರ್ಕಾರಕ್ಕೆ ಬರುವಂತ ದಿನಗಳಲ್ಲಿ ಕಾಂಗ್ರೆಸ್ಸಿನ ದಲಿತ ಶಾಸಕರು ಹಾಗೂ ಸಂಸದರು ತಕ್ಕ ಪಾಠ ಕಲಿಸಬೇಕು ಎಂದಿದ್ದಾರುಎ.

ಬಿಎಸ್‌ಎನ್‌ಎಲ್ ನೆಟವರ್ಕ್ ಸಮಸ್ಯೆಯಾಗಿ ಜನರಿಗೆ ವ್ಯಾಪಕ ತೊಂದರೆಯಾಗಿದೆ. ಈ ನೆಟವರ್ಕ್ ಸಮಸ್ಯೆಯನ್ನು ನಿವಾರಣೆ ಮಾಡುವಂತೆ ನಾನೇ ಸ್ವತಃ ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡಿರುವೆ. ಬಿಎಸ್‌ಎನ್‌ಎಲ್ ನೆಟವರ್ಕ್ ತೊಂದರೆ ವಿಜಯಪುರದಲ್ಲಿಯೂ ವ್ಯಾಪಕವಾಗಿದೆ.ಈ ಬಗ್ಗೆ ಅನೇಕ ಗ್ರಾಹಕರು ತೊಂದರೆ ಎದುರಿಸುತ್ತಿದ್ದಾರೆ, ಈ ಸಮಸ್ಯೆಯ ಬಗ್ಗೆ ಅನೇಕ ಗ್ರಾಹಕರು ಸಹ ನನ್ನ ಗಮನಕ್ಕೆ ತಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಿಸಿದ ಅಧಿಕಾರಿಗಳನ್ನು ನಾನು ಈ ವಿಷಯವಾಗಿ ತರಾಟೆಗೆ ತೆಗೆದುಕೊಂಡಿದ್ದು, ಶೀಘ್ರದಲ್ಲಿಯೇ ಎದುರಾಗಿರುವ ತಾಂತ್ರಿಕ ಸಮಸ್ಯೆ ನಿವಾರಣೆ ಮಾಡುವ ಭರವಸೆಯನ್ನು ಅಧಿಕಾರಿಗಳ ನೀಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಸಿಎಂ ರಾಜೀನಾಮೆಗೆ ಕಾರಣ ಸ್ಪಷ್ಟಪಡಿಸಿ: ಸಿವಿಸಿ

ಕೊಪ್ಪಳ: ಅಹಿಂದ ಸಮುದಾಯದ ಪ್ರಬಲ ನಾಯಕರಾಗಿದ್ದ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಅವಮಾನಕರವಾಗಿ ಕೆಳಗಿಳಿಸಿದ್ದಕ್ಕೆ ಕಾಂಗ್ರೆಸ್ ಪಕ್ಷ ಸಕಾರಣಗಳನ್ನು ಕೊಡಬೇಕು ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ. ಚಂದ್ರಶೇಖರ್ ಆಗ್ರಹಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು, ಅಸಮರ್ಥತೆ ಹಾಗೂ ಅದಕ್ಷತೆಯ ಕಾರಣಗಳಿಂದಾಗಿ ವ್ಯಕ್ತಿಗಳನ್ನು ಅಧಿಕಾರದಿಂದ ಇಳಿಸಲಾಗುತ್ತದೆ. ಸಿದ್ದರಾಮಯ್ಯನವರು ಅಸಮರ್ಥರೆ? ಅವರಲ್ಲಿ ದಕ್ಷತೆ ಮತ್ತು ಸಾಮರ್ಥ್ಯ ಇರಲಿಲ್ಲವೆಂದು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲಾಯಿತೆ?

ಈ ಅಂಶಗಳೇ ಕಾರಣವಾಗಿದ್ದರೆ ಮೂರು ವರ್ಷದಿಂದ ಕಾಂಗ್ರೆಸ್ ಪಕ್ಷ ಏನು ಮಾಡುತ್ತಿತ್ತು? ಸಿದ್ದರಾಮಯ್ಯನವರ ನಿರ್ಗಮನಕ್ಕೆ ಕಾಂಗ್ರೆಸ್ ಕಾರಣಗಳನ್ನು ಸ್ಪಷ್ಟಪಡಿಸಬೇಕು. ಸಿದ್ದರಾಮಯ್ಯನವರನ್ನು ಅಧಿಕಾರದಿಂದ ಇಳಿಸಿದ ಕಾಂಗ್ರೆಸ್ ಪಕ್ಷ ಮುಂದಿನ ದಿನಗಳಲ್ಲಿ ಭಾರೀ ಬೆಲೆ ತೆರಲಿದೆ ಎಂದು ತಿಳಿಸಿದ್ದಾರೆ.

ಹಾಗೆ ನೋಡಿದರೆ ಅವೈಜ್ಞಾನಿಕ ಯೋಜನೆಗಳಿಂದ ಆಡಳಿತದ ಮೇಲೆ ಸಿದ್ದರಾಮಯ್ಯನವರು ನಿಯಂತ್ರಣ ಕಳೆದುಕೊಂಡಿದ್ದರು. ಅವರ ದುರಾಡಳಿತದಿಂದ ಹಳಿ ತಪ್ಪಿದ ಆಡಳಿತ ವ್ಯವಸ್ಥೆಯನ್ನು ಸುಧಾರಿಸಲು ಅವರ ಉತ್ತರಾಧಿಕಾರಿಗೆ ಸಾಧ್ಯವೇ ಇಲ್ಲ.

ಈ ಪರಿಸ್ಥಿತಿಯಲ್ಲಿ ವಿಧಾನಸಭೆಯನ್ನು ವಿಸರ್ಜಿಸಿ ಮಧ್ಯಂತರ ಚುನಾವಣೆ ಗಳನ್ನು ಎದುರಿಸುವುದೇ ಸೂಕ್ತ ಎಂದು ಹೇಳಿದ್ದಾರೆ.

ಅಹಿಂದ ವರ್ಗ ಕಾಂಗ್ರೆಸ್ ಪಕ್ಷದಿಂದ ದೂರ ಸರಿಯಲಿದೆ. ವೀರೇಂದ್ರ ಪಾಟೀಲ್ ಅವರನ್ನು ಅವಮಾನಿಸಿ ಪ್ರಬಲ ಸಮುದಾಯದ ವಿರೋಧ ಕಟ್ಟಿಕೊಂಡಿದ್ದ ಕಾಂಗ್ರೆಸ್ ಪಕ್ಷ ಈಗ ಸಿದ್ದರಾಮಯ್ಯನವರನ್ನು ಅವಮಾನಿಸಿ ಅಹಿಂದ ವರ್ಗದ ವಿರೋಧ ಕಟ್ಟಿಕೊಳ್ಳಲಿದೆ. ಸಿದ್ದರಾಮಯ್ಯನವರು ಕಾಂಗ್ರೆಸ್ ಪಕ್ಷದಿಂದ ಹೊರಬಂದು ತಮ್ಮತನವನ್ನು ಕಾಪಾಡಿಕೊಳ್ಳಬೇಕು ಎಂದು ಹೇಳಿದ್ದಾರೆ.

ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಅಹಿಂದ ಒಕ್ಕೂಟ ಆಕ್ರೋಶ

ಹುಬ್ಬಳ್ಳಿ: ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಅವರಿಂದ ಒತ್ತಾಯ ಪೂರ್ವಕವಾಗಿ ರಾಜೀನಾಮೆ ಪಡೆದಿದೆ ಎಂದು ಆರೋಪಿಸಿ ಅಹಿಂದ ಕರ್ನಾಟಕ ರಾಜ್ಯ ಒಕ್ಕೂಟ ಸದಸ್ಯರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಗುರುವಾರ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಘೋಷಣೆ ಕೂಗಿ ಟೈಯರ್‌ಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಅಹಿಂದ ಕರ್ನಾಟಕ ರಾಜ್ಯ ಒಕ್ಕೂಟ ರಾಜ್ಯಾಧ್ಯಕ್ಷ ಸಿದ್ದು ತೇಜಿ ಮಾತನಾಡಿ, ಸಿದ್ದರಾಮಯ್ಯ ಅವರಿಗೆ ಬ್ಲ್ಯಾಕ್‌ಮೇಲ್ ಮಾಡಿ ಸಿಎಂ ಸ್ಥಾನಕ್ಕೆ ರಾಜೀನಾಮೆ ಪಡೆಯಲಾಗಿದೆ. ಅಹಿಂದ ನಾಯಕರ ಹಾಗೂ ಶಾಸಕರ ಅಭಿಪ್ರಾಯ ಹಾಗೂ ಯಾವುದೇ ರೀತಿ ಚರ್ಚೆ ನಡೆಸದೆ ರಾಜೀನಾಮೆ ಪಡೆದಿರುವುದು ಖಂಡನೀಯ ಎಂದು ಕಿಡಿಕಾರಿದರು.



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಅಹಿಂದ ನಾಯಕರಾಗಿದ್ದ ಸಿದ್ದರಾಮಯ್ಯ ಅವರಿಂದ ರಾಜೀನಾಮೆ ಪಡೆದು, ಕಾಂಗ್ರೆಸ್ ಮುಕ್ತ ರಾಜ್ಯ ಮಾಡಲು ಹೊರಟಿದ್ದಾರೆ. ರಾಹುಲ್ ಗಾಂಧಿ ಕಾಂಗ್ರೆಸ್‌ಗೆ ಕೊನೆಯ ಮೊಳೆ ಹೊಡಿದ್ದಾರೆ. ಇದರಿಂದ ಕಾಂಗ್ರೆಸ್ ನಾಶವಾಗಲಿದೆ ಎಂದರು.

ಅಹಿಂದ ವರ್ಗ ಯಾವುದೇ ಕಾರಣಕ್ಕೂ ಸುಮ್ಮನಿರಲ್ಲ. ಪರ್ಯಾಯ ರಾಜಕಾರಣ ಮಾಡಲು ನಿರ್ಧರಿಸುತ್ತದೆ. ಶೇ.80ರಷ್ಟು ಅಹಿಂದ ಸಮುದಾಯ ಸಿದ್ದರಾಮಯ್ಯ ಐದು ವರ್ಷ ಸಿಎಂ ಇರುತ್ತಾರೆ ಎಂಬ ಕಾರಣಕ್ಕೆ ಮತ ಹಾಕಿತ್ತು. ಇದು ಒತ್ತಾಯ ಪೂರ್ವವಾಗಿ ಪಡೆದ ರಾಜೀನಾಮೆಯಾಗಿದೆ. ಇದಕ್ಕೆ ಅಹಿಂದ ವರ್ಗ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದೆ ಎಂದು ತಿಳಿಸಿದರು. ಅಹಿಂದ ಮುಖಂಡರಾದ ನಿಂಗಪ್ಪ ಜಕ್ಕಲಿ, ಎಸ್.ಎಫ್ ಇಬ್ರಾಹಿಂಪೂರ, ಸುಜಾತ ಸನದಿ, ಬಸವರಾಜ ಹೊರಕೇರಿ, ಸಂಜೀವ ದುಮಕನಾಳ, ಎಂ.ಎಸ್ ಕರಿಯೂರ, ಹನುಮಂತಪ್ಪ ಬ್ಯಾಹಟ್ಟಿ, ಎಚ್.ಬಿ.ಕೌಜಗೇರಿ ಇದ್ದರು.

ಹಳೇ ವೈಷಮ್ಯಕ್ಕೆ ಯುವಕನ ಕೊಲೆ: ಆರೋಪಿಗಳು ಪರಾರಿ

ಬೆಳಗಾವಿ: ಹಳೇ ವೈಷಮ್ಯದ ಹಿನ್ನೆಲೆಯಲ್ಲಿ ಯುವಕನೊಬ್ಬನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ, ಭೀಕರವಾಗಿ ಹತ್ಯೆ ಮಾಡಿರುವ ಘಟನೆ ಬೆಳಗಾವಿ ತಾಲೂಕಿನ ಹುಂಚ್ಯಾನಟ್ಟಿ ಗ್ರಾಮದ ಬಳಿ ನಡೆದಿದೆ.

ಮಜಗಾವಿ ನಿವಾಸಿಯಾದ ರಾಹುಲ್ ತಳವಾರ (22) ಕೊಲೆಯಾದ ದುರ್ದೈವಿ ಯುವಕ. ಮೃತ ರಾಹುಲ್ ತಳವಾರನನ್ನು ಕೆಲವು ಯುವಕರ ಗುಂಪು ಹುಂಚ್ಯಾನಟ್ಟಿ ಗ್ರಾಮದ ಬಳಿಯ ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಪೂರ್ವಾಪರ ದ್ವೇಷದ ಹಿನ್ನೆಲೆಯಲ್ಲಿ ಮಾತಿಗೆ ಮಾತು ಬೆಳೆದು, ತಲ್ವಾರ್ ಸೇರಿದಂತೆ ಮಾರಕಾಸ್ತ್ರಗಳಿಂದ ರಾಹುಲ್ ಮೇಲೆ ಯುವಕರು ಭೀಕರವಾಗಿ ದಾಳಿ ಮಾಡಿದ್ದಾರೆ.



ರಾಹುಲ್ ಅವರ ತಲೆ ಹಾಗೂ ಕೈ ಭಾಗಗಳಿಗೆ ಗಂಭೀರವಾಗಿ ಗಾಯಗೊಂಡು ರಕ್ತದ ಮಡುವಿನಲ್ಲಿ ಬಿದ್ದಿದ್ದ ರಾಹುಲ್‌ನನ್ನು ತಕ್ಷಣವೇ ಸ್ಥಳೀಯರು ಮತ್ತು ಪರಿಚಿತರು ಚಿಕಿತ್ಸೆಗಾಗಿ ನಗರದ ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ತೀವ್ರ ರಕ್ತಸ್ರಾವವಾಗಿದ್ದರಿಂದ ಚಿಕಿತ್ಸೆ ಫಲಕಾರಿಯಾಗದೆ ರಾಹುಲ್ ಆಸ್ಪತ್ರೆಯಲ್ಲೇ ಮೃತಪಟ್ಟಿದ್ದಾನೆ.

ಹಳೇ ದ್ವೇಷವೇ ಈ ಕೊಲೆಗೆ ಪ್ರಮುಖ ಕಾರಣ ಎಂದು ಪ್ರಾಥಮಿಕ ತನಿಖೆಯಿಂದ ಶಂಕಿಸಲಾಗಿದೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸದ್ಯ ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಗಳ ಪತ್ತೆಗಾಗಿ ಪೊಲೀಸರು ಜಾಲ ಬೀಸಿದ್ದಾರೆ.

ಅಧಿಕಾರಿಗಳ ವಿರುದ್ಧ ಮೀನುಗಾರರ ಆಕ್ರೋಶ

ಮೀನುಗಾರರ ಟೂರಿಸ್ಟ್ ಬೋಟುಗಳಿಗೆ ಸಿಗದ ಎನ್‌ಒಸಿ

ಗೋಕರ್ಣ: ತದಡಿ ಭಾಗದ ಸುಮಾರು 17 ಮೀನುಗಾರರ ಟೂರಿಸ್ಟ್ ಬೋಟುಗಳಿಗೆ ಪ್ರವಾಸೋದ್ಯಮ ಇಲಾಖೆ ಇನ್ನೂ ನೀರಪೇಕ್ಷಣಾ ಪತ್ರ ನೀಡಿಲ್ಲ ಎಂದು ಮೀನುಗಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

2 ವರ್ಷಗಳ ಹಿಂದೆ ಸರ್ವೆ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಅಧಿಕಾರಿಗಳು ಇಂದಿಗೂ ಎನ್.ಓ.ಸಿ ನೀಡದೇ ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಈ ಕುರಿತು ಪ್ರತಿಕಾ ಹೇಳಿಕೆ ನೀಡಿದ ಮೀನುಗಾರರು, ಮೀನುಗಾರ ಸಮುದಾಯದ ಯುವಕರು ಹೊಸ ಉದ್ಯಮ ನಂಬಿ ಬದುಕು ಕಟ್ಟಿಕೊಂಡಿದ್ದರು. ಆದರೆ, 4 ತಿಂಗಳ ಹಿಂದೆ ಬೋಟ್ ನೋಂದಣಿ ಪತ್ರ ನೀಡಲಾಗಿದ್ದರೂ ಇನ್ನೂ ಎನ್‌ಓಸಿ ಕೊಡದೇ ಕಚೇರಿಗೆ ಅಲೆದಾಡಿಸಲಾಗುತ್ತಿದೆ.

ಮೊದಲು ನೋಂದಣಿ ಪತ್ರ ತೆಗೆದುಕೊಳ್ಳಿ ಎಂದು ಹೇಳಿದ್ದ ಅಧಿಕಾರಿಗಳು, ಈಗ ಆರ್.ಸಿ. ಬಂದ ಮೇಲೂ ಒಂದೇ ಒಂದು ಸಹಿ ಹಾಕಲು ತಿಂಗಳುಗಳ ಕಾಲ ಸತಾಯಿಸುತ್ತಿದ್ದಾರೆ ಎಂದು ಅವರು ದೂರಿದ್ದಾರೆ. ಇದರಿಂದ ಸಾಲ ಮಾಡಿ, ಚಿನ್ನ ಅಡವಿಟ್ಟು ಟೂರಿಸ್ಟ್ ಬೋಟು ನಿರ್ಮಿಸಿರುವ ಮೀನುಗಾರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಇತ್ತೀಚೆಗೆ ಕರಾವಳಿ ಕಾವಲು ಪೊಲೀಸ್ ಪಡೆಯವರು ಎನ್.ಓ.ಸಿ. ಇಲ್ಲದೆ ಬೋಟು ಓಡಿಸಬಾರದು ಎಂಬ ಆದೇಶ ಬಂದಿದೆ ಎಂದು ಮೀನುಗಾರರು ತಿಳಿಸಿದ್ದಾರೆ. ಅದರಂತೆ ಗೋಕರ್ಣ ಹಾಗೂ ತದಡಿ ಭಾಗದ ಬೋಟುಗಳನ್ನು ಕರಾವಳಿ ಕಾವಲು ಪಡೆಯವರು ತಡೆದು ನಿಲ್ಲಿಸುತ್ತಿದ್ದು ಪ್ರವಾಸಿಗರ ಮುಂದೆಯೇ ನಮಗೆ ಅಪಮಾನ ಮಾಡುತ್ತಾರೆ ಎಂದು ಆರೋಪಿಸಿದ್ದಾರೆ.

ಆದರೆ ಹೊನ್ನಾವರದಲ್ಲಿ ನದಿ ಹಿನ್ನೀರಿನಲ್ಲಿ ಅದೆಷ್ಟೋ ಪ್ರವಾಸಿ ಬೋಟ್ ಸಂಚಾರಕ್ಕೆ ಅವಕಾಶ ನೀಡಿದ್ದು, ಆದರೆ ನಮಗೆ ಏಕೆ ನೀಡಿಲ್ಲ, ನಾವು ಇದೇ ರಾಜ್ಯದವರೇ ಅಲ್ಲವೇ ನಮಗೊಂದು ಕಾನೂನು, ಅವರಿಗೊಂದು ಕಾನೂನು ಇದೆಯೇ ಎಂದು ಪ್ರಶ್ನಿಸಿದ್ದಾರೆ.

ಒಂದು ಕಣ್ಣಿಗೆ ಬೆಣ್ಣೆ,ಮತ್ತೊಂದು ಕಣ್ಣಿಗೆ ಸುಣ್ಣ ಎಂಬಂತೆ ತಾರತಮ್ಯ ತೋರುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವರ ನಡೆಯನ್ನ ಖಂಡಿಸಿದ್ದು ತಕ್ಷಣ ಈ ಭಾಗದಲ್ಲಿಯೂ ಬೋಟಿಂಗ್ ಚಟುವಟಿಕೆಗೆ ಅವಕಾಶ ನೀಡ ಬೇಕು ಎಂದಿದ್ದಾರೆ.

ಸಿದ್ದರಾಮಯ್ಯರೊಂದಿಗಿನ ಒಡನಾಟ ಮರೆಯುವಂತದ್ದಲ್ಲ: ಬಿ.ಸಿ.ಪಾಟೀಲ

ಹಾವೇರಿ: ಸಿದ್ದರಾಮಯ್ಯನವರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಮತ್ತು ವಿದಾಯ ನನಗೆ ಗೊತ್ತಿಲ್ಲದೆ ನೋವನ್ನುಂಟು ಮಾಡಿದೆ. ನಾನು ಆ ಪಕ್ಷದಲ್ಲಿ ಇರದೇ ಇರಬಹುದು, ಆದರೆ, ಅವರೊಂದಿಗಿನ ಒಡನಾಟ ಮರೆಯುವಂತದ್ದಲ್ಲ ಎಂದು ಮಾಜಿ ಸಚಿವ ಬಿ.ಸಿ. ಪಾಟೀಲ ಹೇಳಿದ್ದಾರೆ.



ಈ ಕುರಿತು ಪ್ರಕಟಣೆಯಲ್ಲಿ ತಿಳಿಸಿರುವ ಅವರು, ತಾವು ಪೊಲೀಸ್ ಅಧಿಕಾರಿಯಾಗಿದ್ದ ಕಾಲದಿಂದಲೇ ಸಿದ್ದರಾಮಯ್ಯ ಅವರನ್ನು ನೋಡಿದ್ದೇನೆ. 2004ರಿಂದ ಅವರೊಂದಿಗೆ ಶಾಸಕನಾಗಿ ಕೆಲಸ ಮಾಡಿದ್ದೇನೆ. 2006ರಲ್ಲಿ ಅವರು ಕಾಂಗ್ರೆಸ್‌ಗೆ ಹೋಗಿ ಚುನಾವಣೆಗೆ ಸ್ಪರ್ಧಿಸಿದಾಗ ನಾನು ವಿರೋಧಿಸಿದ್ದೂ ಇದೆ. ಆದರೆ, 2008ರಲ್ಲಿ ನಾನು ಕಾಂಗ್ರೆಸ್‌ಗೆ ಬಂದ ನಂತರ ಅದನ್ನಾವುದನ್ನೂ ಅವರು ಮನಸ್ಸಿನಲ್ಲಿ ಇಟ್ಟುಕೊಳ್ಳಲಿಲ್ಲ. ನನ್ನ ಎಲ್ಲ ಚುನಾವಣೆಗಳಲ್ಲಿಯೂ ನನಗೆ ಸಹಾಯ ಮಾಡಿದ್ದಾರೆ ಎಂದು ಸ್ಮರಿಸಿದ್ದಾರೆ.

ಸಿದ್ದರಾಮಯ್ಯನವರು ನನ್ನನ್ನು ಅತ್ಯಂತ ಹತ್ತಿರದಿಂದ 'ಬಿಸಿ' ಎಂದೇ ಕರೆಯುತ್ತಿದ್ದರು. 2013ರಲ್ಲಿ ನಾನು ಚುನಾವಣೆಯಲ್ಲಿ ಸೋತಾಗ ನನ್ನ ಕ್ಷೇತ್ರಕ್ಕೆ ನಾಲ್ಕು ನೀರಾವರಿ ಯೋಜನೆಗಳನ್ನು ನೀಡಿದ್ದಾರೆ. ಅದನ್ನು ನಾನು ಎಂದಿಗೂ ಮರೆಯುವುದಿಲ್ಲ, ನನ್ನ ಕ್ಷೇತ್ರದ ಜನರೂ ಅದನ್ನು ಮರೆಯುವುದಿಲ್ಲ. ಸಿದ್ದರಾಮಯ್ಯ ಅವರ ಗತ್ತು ಮತ್ತು ಗಾಂಭೀರ್ಯ ಮುಖ್ಯಮಂತ್ರಿ ಸ್ಥಾನಕ್ಕೆ ಗೌರವ ತಂದುಕೊಟ್ಟಿತ್ತು. ಅಧಿಕಾರ ಶಾಶ್ವತವಲ್ಲ. ಆದರೆ, ಅವರು ಅಧಿಕಾರ ಬಿಟ್ಟು ಇಳಿದಾಗ ನನಗೆ ತುಂಬಾ ನೋವಾಗಿದೆ ಎಂದಿದ್ದಾರೆ.

ಅವರು ಮುಖ್ಯಮಂತ್ರಿಯಾದ ನಂತರ 2023ರ ಬಳಿಕ ಅವರನ್ನು ಭೇಟಿಯಾಗಲು ಸಾಧ್ಯವಾಗಿರಲಿಲ್ಲ. ಆದರೆ, ದೆಹಲಿಯಲ್ಲಿ ಒಂದು ಬಾರಿ ಭೇಟಿಯಾದಾಗ ಅತ್ಯಂತ ಪ್ರೀತಿ ಮತ್ತು ವಿಶ್ವಾಸದಿಂದ ಮಾತನಾಡಿ ನನ್ನ ಬೆನ್ನು ತಟ್ಟಿದ್ದರು ಎಂದು ಭಾವುಕರಾಗಿ ಸ್ಮರಿಸಿದ್ದಾರೆ. ಸಿದ್ದರಾಮಯ್ಯ ಅವರನ್ನು ಇತಿಹಾಸಕಾರ, ಅರ್ಥಶಾಸ್ತ್ರಜ್ಞ, ಚಾಣಾಕ್ಷ ರಾಜಕಾರಣಿ, ಹೃದಯವಂತ ವ್ಯಕ್ತಿ ಹಾಗೂ ನೇರ-ನಿಷ್ಠುರ ನುಡಿಗೆ ಹೆಸರಾದ ನಾಯಕ ಎಂದು ಬಣ್ಣಿಸಿರುವ ಬಿ.ಸಿ.ಪಾಟೀಲ, ಮುಂದಿನ ದಿನಗಳಲ್ಲಿ ಭಗವಂತ ಅವರಿಗೆ ಆಯುರಾರೋಗ್ಯ ಭಾಗ್ಯ ನೀಡಲಿ. ಆರೋಗ್ಯದ ಕಡೆ ಹೆಚ್ಚಿನ ಗಮನ ನೀಡಿ ಯುವಕರಿಗೆ ಮಾರ್ಗದರ್ಶನ ನೀಡಲಿ ಎಂದು ಹಾರೈಸಿದ್ದಾರೆ.

ಸಾಲಗುಂದ ಗ್ರಾಮದ ಬೆಟ್ಟದಲ್ಲಿ ಚಿರತೆ ಪ್ರತ್ಯಕ್ಷ

ಸಿಂಧನೂರು: ತಾಲೂಕಿನ ಸಾಲಗುಂದ ಗ್ರಾಮದ ಬೆಟ್ಟದಲ್ಲಿ ಚಿರತೆ ಪ್ರತ್ಯಕ್ಷವಾಗಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಅರಣ್ಯ ಇಲಾಖೆಯ ವತಿಯಿಂದ ಡಂಗೂರ ಸಾರಿ ಯಾವುದೇ ಕಾರಣಕ್ಕೂ ದನಕರುಗಳು,ಆಡು ಕುರಿಗಳನ್ನು ಹೊರಗಡೆ ಬಿಡದಂತೆ ಎಚ್ಚರಿಕೆ ನೀಡಿದ್ದಾರೆ.



ಇನ್ನೂ ಈ ಸಾಲಗುಂದ, ಮುಕ್ಕುಂದ, ಹುಡಾ, ಅಂಬಾಮಠ, ರೌಡಕುಂದ, ಸಿಂಗಾಪುರ ಗ್ರಾಮಗಳು ಬೆಟ್ಟ-ಗುಡ್ಡಗಳ ಪ್ರದೇಶಗಳಾಗಿರುವುದರಿಂದ ಚಿರತೆ, ಕರಡಿಯಂತಹ ಕಾಡು ಪ್ರಾಣಿಗಳು ನೆಲೆ ಹುಡುಕಿಕೊಂಡು ಹೊರಗಡೆ ಬರುವುದು ಸಹಜ. ಏಕೆಂದರೆ ಈ ಹಿಂದೆ ಹಿಂದೆ ಮುಕ್ಕುಂದ ಗ್ರಾಮದಲ್ಲಿ ಚಿರತೆ ಪ್ರತ್ಯಕ್ಷವಾಗಿತ್ತು. ಈಗ ಮತ್ತೆ ಸಾಲಗುಂದ ಗ್ರಾಮದಲ್ಲಿ ಕಂಡು ಬಂದಿದೆ ಎಂದರು.

ಈ ಕುರಿತು ಅರಣ್ಯಾಧಿಕಾರಿ ವಿಜಯಕುಮಾರ ಅವರು ಚಿರತೆ ಹೆಜ್ಜೆಗಳು ಪತ್ತೆಯಾಗಿದ್ದರಿಂದ ನಮ್ಮ ಇಲಾಖೆಯ ವತಿಯಿಂದ ಪೆಟ್ರೋಲಿಂಗ್ ಮಾಡುತ್ತಿದ್ದೇವೆ ಹಾಗೂ ಸಿಬ್ಬಂದಿ ಒಳಗೊಂಡು ನಾವು ವಾಚಿಂಗ್ ಮಾಡುತ್ತಿದ್ದೇವೆಂದು ತಿಳಿಸಿದರು.

ಅಪಘಾತ: ಐವರಿಗೆ ಗಂಭೀರ ಗಾಯ

ಗಾದಿಗನೂರು(ವಿಜಯನಗರ): ಇಲ್ಲಿನ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಕೆಟ್ಟು ನಿಂತಿದ್ದ ಗೂಡ್ಸ್ ವಾಹನಕ್ಕೆ ಕ್ರೂಸರ್ ಡಿಕ್ಕಿ ಹೊಡೆದು ಐವರು ಗಾಯಗೊಂಡಿರುವ ಘಟನೆ ಇಂದು ಬೆಳಗಿನ ಜಾವ ಸಂಭವಿಸಿದೆ.

ವಾಹನದಲ್ಲಿದ್ದ 12 ಪ್ರಯಾಣಿಕರಲ್ಲಿ ಐವರಿಗೆ ಗಂಭೀರ ಗಾಯಗಳಾಗಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಗಾಯಗೊಂಡವರನ್ನು ತೋರಣಗಲ್ಲಿನ ಸಂಜೀವಿನಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಗಾಯಾಳುಗಳೆಲ್ಲರೂ ಬಳ್ಳಾರಿ ತಾಲೂಕಿನ ಕಪ್ಪಗಲ್ಲು ಗ್ರಾಮದವರಾಗಿದ್ದು, ಶ್ರೀಕ್ಷೇತ್ರ ಧರ್ಮಸ್ಥಳದ ದರ್ಶನ ಮುಗಿಸಿ ಸ್ವಗ್ರಾಮಕ್ಕೆ ಮರಳುತ್ತಿದ್ದಾಗ ದುರ್ಘಟನೆ ಸಂಭವಿಸಿದೆ.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ ಎಸ್., ಗ್ರಾಮಾಂತರ ಪೊಲೀಸ್ ಠಾಣಾ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ಹೊಸಪೇಟೆ ಹೊಸಪೇಟೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯುತ್ ಸ್ಪರ್ಶಿಸಿ ಬಾಲಕಿ ಸಾವು

ಕುಂದಗೋಳ: ತಾಲೂಕಿನ ಸಂಶಿ ಗ್ರಾಮದ ಸೊಸೈಟಿ ಸಮೀಪದ ಮನೆಯಲ್ಲಿ ಮಹಡಿ ಮೇಲೆ ಆಟವಾಡಲು ತೆರಳಿದ್ದ ಬಾಲಕಿ ವಿದ್ಯುತ್ ತಂತಿ ಸ್ಪರ್ಶಿಸಿ ಮೃತಪಟ್ಟ ಘಟನೆ ಬುಧವಾರ ನಡೆದಿದೆ.

ಹುಬ್ಬಳ್ಳಿ ತಾಲೂಕಿನ ಈಶ್ವರನಗರ ನಿವಾಸಿ ತನಜೀಯಾ ತೌಸಿಫ್ ಪಠಾಣ (6) ಮೃತಪಟ್ಟ ಬಾಲಕಿ. ಅಜ್ಜಿಯ ಮನೆಗೆ ಸಂಶಿ ಗ್ರಾಮಕ್ಕೆ ಬಂದಿದ್ದ ವೇಳೆ, ಮನೆಯ ಮಹಡಿಯ ಮೇಲೆ ಆಟವಾಡಲು ತೆರಳಿದ್ದಳು ಎನ್ನಲಾಗಿದೆ.

ಈ ವೇಳೆ ಆಕಸ್ಮಿಕವಾಗಿ ಕೆಇಬಿಯ ವಿದ್ಯುತ್ ತಂತಿ ಸ್ಪರ್ಶಗೊಂಡು ಬಾಲಕಿ ಅಸ್ವಸ್ಥಳಾಗಿದ್ದಾಳೆ. ತಕ್ಷಣ ಸ್ಥಳೀಯರು ಆಕೆಯನ್ನು ಕುಂದಗೋಳ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರೂ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾಳೆ ಎಂದು ತಿಳಿದುಬಂದಿದೆ.

ಘಟನೆ ಕುರಿತು ಕುಂದಗೋಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ. ಘಟನೆಯಿಂದ ಗ್ರಾಮದಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ.

ಪಿಡಿಒ ಆತ್ಮಹತ್ಯೆ

ಹಾವೇರಿ: ಹೆಂದಿಗನೂರು ಗ್ರಾಪಂ ಪಿಡಿಒ ಉಮೇಶ ದ್ಯಾವಣ್ಣವರ (53) ಗುರುವಾರ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬೆಳಗ್ಗೆ ಕೀಟನಾಶಕ ಸೇವಿಸಿ ಅಸ್ವಸ್ಥಗೊಂಡಿದ್ದ ಉಮೇಶ ಅವರನ್ನು ಹಾವೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿತ್ತು. ಚಿಕಿತ್ಸೆ ಫಲಿಸದೆ ದಾವಣಗೆರೆಯಲ್ಲಿ ಸಂಜೆ ಅವರು ಮೃತಪಟ್ಟಿದ್ದಾರೆ. ಕಚೇರಿ ಕೆಲಸದಲ್ಲಿನ ಒತ್ತಡ ತಾಳಲಾರದೆ ಆತ್ಮಹತ್ಯೆಗೆ ಶರಣಾಗಿದ್ದಾರೆ ಎನ್ನಲಾಗಿದೆ. ಮೃತ ಉಮೇಶ ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ಭಟ್ಕಳಕ್ಕೆ ಬಿ.ವೈ.ವಿಜಯೇಂದ್ರ

ಕಾರವಾರ: ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷ ಬಿ. ವೈ. ವಿಜಯೇಂದ್ರ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಇತರ ಪ್ರಮುಖರು ಶುಕ್ರವಾರ ಮೇ 29 ರಂದು ಬೆಳಗ್ಗೆ 10 ಗಂಟೆಗೆ ಭಟ್ಕಳಕ್ಕೆ ಭೇಟಿ ನೀಡಲಿದ್ದಾರೆ.

ಚಿಪ್ಪಿಕಲ್ಲು ತೆಗೆಯುವಾಗ ಉಂಟಾದ ದುರಂತದಲ್ಲಿ ಸಂತ್ರಸ್ತ ಕುಟುಂಬದವರನ್ನು ಭೇಟಿಯಾಗಿ ಸಾಂತ್ವನ ಹೇಳಲಿದ್ದಾರೆ. ಜೊತೆಗೆ ಮುರಿನಕಟ್ಟೆ ಧ್ವಂಸ ವಿರೋಧಿಸಿ ನಡೆಯುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ರಾಜ್ಯ ಉಪಾಧ್ಯಕ್ಷೆ ಹಾಗೂ ಮಾಜಿ ಶಾಸಕಿ ರೂಪಾಲಿ ಎಸ್. ನಾಯ್ಕ ತಿಳಿಸಿದ್ದಾರೆ.

ಮೇ 30ರವರೆಗೆ ಮದ್ಯ ಮಾರಾಟ ನಿಷೇಧ

ಭಟ್ಕಳ: ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ, ಮೇ 28 ರಿಂದ ಮಧ್ಯರಾತ್ರಿ 12 ಗಂಟೆಯಿಂದ ಮೇ 30ರ ಬೆಳಗ್ಗೆ 6 ಗಂಟೆಯವರೆಗೆ ಭಟ್ಕಳ ತಾಲೂಕಿನಾದ್ಯಂತ ಎಲ್ಲಾ ರೀತಿಯ ಮದ್ಯದ ಅಂಗಡಿಗಳನ್ನು ಬಂದ್ ಮಾಡಿ, ಮದ್ಯ ಮಾರಾಟ ಮತ್ತು ಸಾಗಾಟ ನಿಷೇಧಿಸಿ, ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಆದೇಶಿಸಿದ್ದಾರೆ.

ಕಪ್ಪೆ ಚಿಪ್ಪು ದುರಂತ: ಮೃತ ಕುಟುಂಬಕ್ಕೆ ಉಸ್ತುವಾರಿ ಸಚಿವ ಪರಿಹಾರ ವಿತರಣೆ

ಭಟ್ಕಳ: ಇತ್ತೀಚೆಗೆ ಭಟ್ಕಳದಲ್ಲಿ ನಡೆದ ಕಪ್ಪೆ ಚಿಪ್ಪು ದುರಂತದಲ್ಲಿ ಮೃತ ಪಟ್ಟ 11 ಮಂದಿಯ ಕುಟುಂಬಕ್ಕೆ ಸರ್ಕಾರವು ರೂ. 5 ಲಕ್ಷದಂತೆ ಘೋಷಿಸಿರುವ ಒಟ್ಟು ರೂ.55 ಲಕ್ಷ ಹಾಗೂ ಮೀನುಗಾರಿಕೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಅವರು, ಮೀನುಗಾರಿಕೆ ಇಲಾಖೆಯಿಂದ ತಲಾ 10 ಲಕ್ಷದಂತೆ 11 ಕುಟುಂಬದದವರಿಗೆ ಒಟ್ಟು 1 ಕೋಟಿ 10 ಲಕ್ಷ ರೂಪಾಯಿಯನ್ನು ಘೋಷಿಸಿದ್ದು, ಈ ಎಲ್ಲಾ ಚೆಕ್‌ಗಳನ್ನು ಮೇ 29ರಂದು ಬೆಳಗ್ಗೆ 9 ಗಂಟೆಗೆ ಸಂತ್ರಸ್ತರ ಮನೆಗಳಿಗೆ ತೆರಳಿ ಸಚಿವರು ಹಸ್ತಾಂತರಿಸಲಿದ್ದಾರೆ.



ಗೋಕರ್ಣ: ತಮ್ಮ ಜೀವದ ಹಂಗು ತೊರೆದು ಪ್ರವಾಸಿಗರ ಜೀವ ಉಳಿಸುವ ಇಲ್ಲಿನ ಕಡಲತೀರದಲ್ಲಿ ಕರ್ತವ್ಯ ನಿರ್ವಹಿಸುವ ಜೀವರಕ್ಷಕ ಸಿಬ್ಬಂದಿಗೆ ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ರಾಜ್ಯಕ್ಕೆ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗೆ ಲಯನ್ಸ್ ಕ್ಲಬ್ ವತಿಯಿಂದ ಸನ್ಮಾನ ಕಾರ್ಯಕ್ರಮ ಇಲ್ಲಿನ ಐಶ್ವರ್ಯ ಹೋಂ ಸ್ಟೇನಲ್ಲಿ ನಡೆಯಿತು.

ಹಂದಿ ಸ್ಥಳಾಂತರಕ್ಕೆ ಒತ್ತಾಯ



ಬನವಾಸಿ: ಇಲ್ಲಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಹಂದಿಗಳ ಕಾಟ ವಿಪರೀತವಾಗಿದ್ದು ಗ್ರಾಪಂಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ. ಶಿರಸಿ ತಾಲೂಕಿನಲ್ಲಿ ಅತಿ ಹೆಚ್ಚು ಹೊರರೋಗಿಗಳ ತಪಾಸಣೆ ನಡೆಸುವ ಆಸ್ಪತ್ರೆ ಎಂದರೆ ಅದು ಬನವಾಸಿ ಪ್ರಾಥಮಿಕ ಆರೋಗ್ಯ ಕೇಂದ್ರ. ಬನವಾಸಿ ಮಾತ್ರವಲ್ಲದೆ ಅಕ್ಕಪಕ್ಕದ ತಾಲೂಕಿನವರೂ ಇಲ್ಲಿಗೆ ಚಿಕಿತ್ಸೆಗೆ ಬರುತ್ತಾರೆ. ಈ ಆಸ್ಪತ್ರೆ ಆವರಣದಲ್ಲಿ ಹಂದಿಗಳ ಹಿಂಡು ಕಳೆದ ಒಂದುವರೆ ತಿಂಗಳುಗಳಿಂದ ಬೀಡು ಬಿಟ್ಟಿದೆ. ಇಲ್ಲಿಯೇ ಮರಿಗಳನ್ನು ಹಾಕಿ ಆಸ್ಪತ್ರೆಗೆ ಬಂದು ಹೋಗುವ ರೋಗಿಗಳಿಗೆ ಹಾಗೂ ವೈದ್ಯರು ಸಿಬ್ಬಂದಿಗೆ ಬಹಳ ತೊಂದರೆಗಳಾಗುತ್ತಿದೆ. ಈ ಕುರಿತು ಗ್ರಾಪಂ ಗೆ ಮನವಿ ಸಲ್ಲಿಸಿದರೂ ಸಹ ಇದುವರೆಗೂ ಹಂದಿಯನ್ನು ಹಿಡಿದು ಬೇರೆಡೆ ಕಳುಹಿಸುವ ಕೆಲಸ ಆಗಿಲ್ಲ. ಇದರಿಂದ ಸಾಕಷ್ಟು ಸಮಸ್ಯೆಗಳಾಗುತ್ತಿದೆ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ. ಆಸ್ಪತ್ರೆಯ ಆವರಣದ ಒಳಗೆ ವೈದ್ಯರು ಹಾಗೂ ಸಿಬ್ಬಂದಿಗಳ ವಸತಿಗೃಹವಿದೆ. ಆಸ್ಪತ್ರೆಯಿಂದ ವಸತಿ ಗೃಹಕ್ಕೆ ತೆರಳಲೂ ವೈದ್ಯರು ಹಾಗೂ ಸಿಬ್ಬಂದಿ ಪರದಾಡುವಂತಾಗಿದೆ. ಆದಷ್ಟು ಬೇಗ ಗ್ರಾಪಂ ಹಂದಿಗಳನ್ನು ಹಿಡಿದು ಬೇರೆಡೆ ಕಳುಹಿಸುವ ಕೆಲಸ ಮಾಡಬೇಕು ಎಂಬುದು ವೈದ್ಯರು ಹಾಗೂ ಸಿಬ್ಬಂದಿ ಒತ್ತಾಸೆಯಾಗಿದೆ.



ಮುಂಡಗೋಡ: ತ್ಯಾಗ ಮತ್ತು ಬಲಿದಾನದ ಸಂದೇಶ ಸಾರುವ ಬಕ್ರೀದ್ ಹಬ್ಬವನ್ನು ತಾಲೂಕಿನಾದ್ಯಂತ ಮುಸ್ಲಿಂ ಬಾಂಧವರು ಶ್ರದ್ಧಾಭಕ್ತಿಯಿಂದ ಗುರುವಾರ ಆಚರಿಸಿದರು. ಯಲ್ಲಾಪುರ ರಸ್ತೆಯಲ್ಲಿರುವ ನೂರಾನಿ ಮಸೀದಿ ಹತ್ತಿರ ಪಟ್ಟಣದ ಐದೂ ಮಸೀದಿಗಳ ಮುಸ್ಲಿಂ ಬಾಂಧವರು ಹಾಗೂ ಅಕ್ಕಪಕ್ಕದ ಗ್ರಾಮಸ್ಥರು ಜಮಾವಣೆಗೊಂಡು ಕಾಲ್ನಡಿಗೆಯಿಂದ ಪಟ್ಟಣದ ಕಲಘಟಗಿ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಸಾಮೂಹಿಕವಾಗಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಮೇ 30ರಂದು ಅಘನಾಶಿನಿ ವಿರೋಧಿ ಆಕ್ಷೇಪ ಪತ್ರ ವಿತರಣೆ

ಸಿದ್ದಾಪುರ: ತಾಲೂಕಿನ ಕ್ಯಾದಗಿ ಗ್ರಾಮ ಪಂಚಾಯತ ವ್ಯಾಪ್ತಿಯ ಮಹಾಗಣಪತಿ ದೇವಸ್ಥಾನದ ಆವಾರದಲ್ಲಿ ಮೇ 30ರಂದು ಬೆಳಗ್ಗೆ 10 ಗಂಟೆಗೆ ಅಘನಾಶಿನಿ ನದಿ ಜೋಡಣೆ ವಿರೋಧಿ ಸಭೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಆಕ್ಷೇಪ ಪತ್ರದ ಸ್ವೀಕೃತಿ ಪ್ರತಿ ಮತ್ತು ಯುನೆಸ್ಕೋ ವಿಶ್ವ ಸಂಸ್ಥೆಯಿಂದ ಹೋರಾಟಗಾರರ ವೇದಿಕೆಗೆ ಬಂದಿರುವ ಉತ್ತರದ ಪ್ರತಿ ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ಸಂಘಟನೆಯ ಪ್ರಧಾನ ಸಂಚಾಲಕ ಮಾಬ್ಲೇಶ್ವರ ಬೇಡ್ಕಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಭಾಗವಹಿಸಲಿರುವ ಈ ಕಾರ್ಯಕ್ರಮದಲ್ಲಿ ಅಘನಾಶಿನಿ ವಿರೋಧಿ ಹಾಗೂ ಅರಣ್ಯ ಭೂಮಿ ಹಕ್ಕು ಹೋರಾಟಗಾರರು ಭಾಗವಹಿಸಬೇಕೆಂದು ಅವರು ತಿಳಿಸಿದ್ದಾರೆ.ಪ್ರಥಮ ಹಂತದಲ್ಲಿ ಕ್ಯಾದಗಿ ಗ್ರಾಮ ಪಂಚಾಯತ ವ್ಯಾಪ್ತಿಯ ಕ್ಯಾದಗಿ ಮತ್ತು ಮಾವಿನಕೋಡ ಗ್ರಾಮದಿಂದ ಆಕ್ಷೇಪ ಸಲ್ಲಿಸಿದರಿಗೆ ಆಕ್ಷೇಪ ಪತ್ರ ವಿತರಿಸುವ ಕುರಿತು ಗ್ರೀನ್ ಕಾರ್ಡ ಪ್ರಮುಖರು ಸೂಕ್ತ ಮಾಹಿತಿ ನೀಡಬೇಕೆಂದು ಮಾಬ್ಲೇಶ್ವರ ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯಲ್ಲಾಪುರ: ಮಂಚಿಕೇರಿಯ ಶ್ರೀರಾಜರಾಜೇಶ್ವರಿ ಪ್ರೌಢಶಾಲೆಯಲ್ಲಿ ನೂತನ ಸುಮಾರು 25 ಲಕ್ಷ ರೂ.ವೆಚ್ಚದ ಸಭಾಭವನ ನಿರ್ಮಾಣಕ್ಕೆ ಶಾಸಕ ಶಿವರಾಮ ಹೆಬ್ಬಾರ್ ಚಾಲನೆ ನೀಡಿದರು.

ಪ್ರಮೋದ್ ಮಧ್ವರಾಜ್ ಅಭಿಮತ

ಧರ್ಮ ರಕ್ಷಣೆ ಪ್ರತಿಯೊಬ್ಬ ಹಿಂದುವಿನ ಕರ್ತವ್ಯ

ಕುಮಟಾ/ಹೊಳೆಗದ್ದೆ: ಸನಾತನ ಧರ್ಮವು ಜಗತ್ತಿನ ಅತ್ಯಂತ ಶ್ರೇಷ್ಠ ಧರ್ಮವಾಗಿದ್ದು, ಅದರ ರಕ್ಷಣೆ ಪ್ರತಿಯೊಬ್ಬ ಹಿಂದುವಿನ ಕರ್ತವ್ಯವಾಗಿದೆ ಎಂದು ಪ್ರಮೋದ್ ಮಧ್ವರಾಜ್ ಅಭಿಪ್ರಾಯಪಟ್ಟರು.

ಸನಾತನ ಧರ್ಮ ಜಾಗೃತಿ ಪ್ರತಿಷ್ಠಾನ ಹಾಗೂ ಶಾಂತಿಕಾ ಪರಮೇಶ್ವರಿ ದೇವಾಲಯ ಹೊಳೆಗದ್ದೆ ಇವರ ಆಶ್ರಯದಲ್ಲಿ ಹೊಳೆಗದ್ದೆಯ ಸಭಾಭವನದಲ್ಲಿ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮ ಹಾಗೂ ನನ್ನ ದೇಶ, ನನ್ನ ಧರ್ಮ ರಕ್ಷಣೆಯಲ್ಲಿ ನನ್ನ ಪಾತ್ರ ಎಂಬ ವಿಷಯದ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸನಾತನ ಧರ್ಮದ ಮಹತ್ವವನ್ನು ಪ್ರತಿಪಾದಿಸಿದ ಅವರು, ಧರ್ಮದ ರಕ್ಷಣೆ ಹಾಗೂ ಸಂಸ್ಕೃತಿಯ ಉಳಿವಿಗೆ ಪ್ರತಿಯೊಬ್ಬರೂ ಜಾಗೃತ ಮನೋಭಾವ ಹೊಂದಬೇಕೆಂದು ಹೇಳಿದರು.

ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಪ್ರಮೋದ್ ಮಧ್ವರಾಜ್ ಅವರನ್ನು ಸಂಘಟಕರು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದರು.

ಮುಖ್ಯ ಉಪನ್ಯಾಸ ನೀಡಿದ ಧರ್ಮ ಜಾಗರಣ ವಿಭಾಗದ ಸಂಚಾಲಕ ವಿನೋದ್ ಪ್ರಭು ಮಾತನಾಡಿ, ಭಾರತ ದೇಶ ಹಾಗೂ ಹಿಂದೂ ಧರ್ಮ ಜಗತ್ತಿನಲ್ಲೇ ವಿಶಿಷ್ಟ ಸ್ಥಾನ ಹೊಂದಿವೆ ಎಂದು ಹೇಳಿದರು.



> ಇಂದು ಸಂಘದ ನೂರನೇ ವರ್ಷದ ಆಚರಣೆ ನಡೆಯುತ್ತಿದ್ದು, ಕಳೆದ ನೂರು ವರ್ಷಗಳಿಂದ ಸಂಘವು ಮನೆಮನೆಗೆ ಧರ್ಮ ಜಾಗೃತಿ ಮೂಡಿಸುವ ಕಾರ್ಯ ನಿರಂತರವಾಗಿ ಮಾಡುತ್ತಿದೆ. ಧರ್ಮದ ಅರಿವು ಮತ್ತು ಜಾಗೃತಿ ಮೂಡಿಸುವ ಕಾರ್ಯ ಪ್ರತಿಯೊಬ್ಬರ ಕರ್ತವ್ಯವಾಗಬೇಕು.
>
> ■ ವಿನೋದ್ ಪ್ರಭು, ಧರ್ಮ ಜಾಗರಣ ವಿಭಾಗದ ಸಂಚಾಲಕ

ಪ್ರಸ್ತಾವಿಕವಾಗಿ ಮಾತನಾಡಿದ ಸಾಮಾಜಿಕ ಕಾರ್ಯಕರ್ತ ಎಂ.ಜಿ. ಭಟ್, ಹಿಂದೂ ಧರ್ಮದ ನಾಶಕ್ಕಾಗಿ ಜಾಗತಿಕ ಮಟ್ಟದಲ್ಲಿ ಷಡ್ಯಂತ್ರಗಳು ನಡೆಯುತ್ತಿವೆ ಎಂದು ಅಭಿಪ್ರಾಯಪಟ್ಟರು. ವಿವಿಧ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸವಾಲುಗಳ ಕುರಿತು ಉಲ್ಲೇಖಿಸಿದ ಅವರು, ಹಿಂದೂ ಸಮಾಜವು ಎಚ್ಚರಿಕೆ ಮತ್ತು ಜಾಗೃತಿಯಿಂದ ಇರಬೇಕಾದ ಅಗತ್ಯವಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ವಿಶ್ವ ಹಿಂದೂ ಪರಿಷತ್ತಿನ ಅಧ್ಯಕ್ಷ ರಾಮು ಅಡಿ ಸ್ವಾಗತಿಸಿದರು. ದೇವಾಲಯದ ವಿನಾಯಕ ಜೋಶಿ ಮಾತನಾಡಿದರು. ಹೇಮಂತಕುಮಾರ ವಂದಿಸಿದರು. ಜಯರಾಮ ಭಟ್ಟ ಹಾಗೂ ನಾಗರಾಜ ಜೋಶಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾಳಿ ನದಿಯಲ್ಲಿ ಯುವಕರ ಹುಚ್ಚಾಟ ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಲಿ

▶ ಸಂದೇಶ್ ಎಸ್.ಜೈನ್

ದಿಗಂತ ವಿಶೇಷ

ದಾಂಡೇಲಿ : ಈಗಾಗಲೇ ಐವರ ಬಲಿಪಡೆದುಕೊಂಡ ಕುಖ್ಯಾತಿಗೆ ದಾಂಡೇಲಿಯ ಮೊಸಳೆಗಳು ಪಾತ್ರವಾಗಿರುವುದನ್ನು ನಾವು ನೋಡಿದ್ದೇವೆ. ಮತ್ತೆ ಮತ್ತೆ ಇಂತಹ ದುರ್ಘಟನೆಗಳು ನಡೆಯಬಾರದೆಂದು ಜನ ಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಹಳೆ ದಾಂಡೇಲಿ ಮತ್ತು ಕುಳಗಿ ಸೇತುವೆ ಹತ್ತಿರ ಧ್ವನಿವರ್ಧಕದ ಮೂಲಕ ಜಾಗೃತಿಯನ್ನು ಮೂಡಿಸುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಿದೆ.

ಆದರೂ ಅದರಲ್ಲಿ ಮುಖ್ಯವಾಗಿ ದಾಂಡೇಲಿಗೆ ಬರುವ ಪ್ರವಾಸಿಗರು ಯಾರ ಮಾತನ್ನು ಕೇಳದೆ, ನದಿಗಿಳಿಯುತ್ತಿದ್ದಾರೆ. ಇಂದು ಗುರುವಾರ ಸಂಜೆ 5:00 ಸುಮಾರಿಗೆ ಹಳೆ ದಾಂಡೇಲಿಯಲ್ಲಿ ಕಾಳಿ ನದಿಗಿಳಿದು, ನದಿ ಮಧ್ಯದಲ್ಲಿ ಹುಚ್ಚಾಟ ಮೆರೆಯುತ್ತಿದ್ದದ್ದು ಕಂಡುಬಂದಿದೆ. ಸ್ಥಳೀಯರು ನದಿಯಲ್ಲಿ ಮೊಸಳೆಗಳಿರುವ ಮಾಹಿತಿಯನ್ನು ನೀಡಿದರು ಅದಕ್ಕೆ ಕ್ಯಾರೆ ಎನ್ನದೆ ಪ್ರವಾಸಕ್ಕೆಂದು ಬಂದಿರುವ ಯುವಕರು ನದಿಗಿಳಿದಿದ್ದಾರೆ. ನದಿಯ ಮಧ್ಯಕ್ಕೆ ಹೋಗಿ ಹುಚ್ಚಾಟ ಮೆರೆಯುತ್ತಿರುವ ಯುವಕರ ಮೇಲೆ ಮೊಸಳೆಗಳು ದಾಳಿ ಮಾಡಿದಂತಹ ಸಂದರ್ಭದಲ್ಲಿ ಆಗಬಹುದಾದ ಅನಾಹುತಕ್ಕೆ ಹೊಣೆ ಯಾರು? ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಚರ್ಚೆಯಲ್ಲಿದೆ.

ದಾಂಡೇಲಿ ಹಾಗೂ ದಾಂಡೇಲಿ ಸುತ್ತಮುತ್ತಲಿರುವ ಹೋಂ ಸ್ಟೇ, ರೆಸಾರ್ಟ್‌ಗಳವರು ತಮ್ಮಲ್ಲಿಗೆ ಬರುವ ಪ್ರವಾಸಿಗರಿಗೆ ಈ ನಿಟ್ಟಿನಲ್ಲಿ ಕಠಿಣ ಎಚ್ಚರಿಕೆಯನ್ನು ನೀಡಬೇಕಾಗಿದೆ. ನದಿಗಿಳಿದು ಹುಚ್ಚಾಟ ಮೆರೆಯುವ ಇಂಥವರ ಮೇಲೆ ಪೊಲೀಸ್ ಇಲಾಖೆ ಮತ್ತು ಅರಣ್ಯ ಇಲಾಖೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗಿದೆ.





ಸಿದ್ದಾಪುರ: ಶಂಕರಮಠದ ಆವಾರಣದಲ್ಲಿ ಜನಹಿತ ಸೇವಾ ಫೌಂಡೇಶನ್ ಶಿರಸಿ ಇವರ ಸಂಯೋಜನೆಯಲ್ಲಿ ಪಂಜರ ಪಕ್ಷಿ ಯಕ್ಷಗಾನ, ದುರ್ಗಾಪರಮೇಶ್ವರಿ ದಶಾವತಾರ ಯಕ್ಷಗಾನ ಮಂಡಳಿ ಕ್ಷೇತ್ರ, ಹಾಲಾಡಿ ಇವರಿಂದ ಪ್ರೊ.ಪವನ ಕಿರಣಕೆರೆ ವಿರಚಿತ ಪಂಜರ ಪಕ್ಷಿ ಯಕ್ಷಗಾನ ಪ್ರದರ್ಶನಗೊಂಡಿತು.

ಮುರಿನಕಟ್ಟೆ ಘಟನೆ ಖಂಡಿಸಿ ಇಂದು ಪ್ರತಿಭಟನೆ

ಯಲ್ಲಾಪುರ: ಭಟ್ಕಳದ ಮುರಿನಕಟ್ಟೆಯಲ್ಲಿ ನಡೆದಂತಹ ಘಟನೆ ಬಿಜೆಪಿ ಯಲ್ಲಾಪುರ ಮಂಡಲ ತೀವ್ರವಾಗಿ ಖಂಡಿಸುತ್ತದೆ ಎಂದು ಬಿಜೆಪಿ ಮಂಡಲಾಧ್ಯಕ್ಷ ಪ್ರಸಾದ ಹೆಗಡೆ ಹೇಳಿದರು.

ಅವರು ಗುರುವಾರ ಪಟ್ಟಣದ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮುರಿನಕಟ್ಟದಲ್ಲಿ ಬಹಳ ಹಿಂದಿನಿಂದ ಮಾರಿ ಹೊರೆ ಪದ್ಧತಿ ನಡೆಸಿಕೊಂಡು ಬಂದಿರುವ ಜಾಗಕ್ಕೆ, ಪದ್ಧತಿಗೆ ಭಂಗ ತರುವಂತಹ ಕೆಲಸವನ್ನು ಕೆಲವರು ಮಾಡಿದ್ದಾರೆ. ಅದೇ ಸ್ಥಳದಲ್ಲಿ ಮತ್ತೆ ಸ್ಥಳದ ಪುನರ್ ನಿರ್ಮಾಣ ಆಗಬೇಕು. ಅಲ್ಲಿನ ಏನೇ ಸಮಸ್ಯೆ ಇದ್ದರೂ ಸಹ ಎಲ್ಲರೂ ಒಟ್ಟುಗೂಡಿ ಮಾತನಾಡಿ, ಕಾನೂನಿನ ಮೂಲಕ ಬಗೆಹರಿಸಿಕೊಳ್ಳಲು ಅವಕಾಶವಿತ್ತು. ಆದರೆ ಅನ್ಯಕೋಮಿನವರು ಭಯದ ನಿರ್ಮಾಣ ಸೃಷ್ಟಿಸಲು ಈ ಕಾರ್ಯ ಮಾಡಲಾಗಿದೆ. ಅಂತಹ ಮತಾಂಧರನ್ನು ರಕ್ಷಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ನಿಜವಾದ ತಪ್ಪಿತಸ್ಥರನ್ನು ಬಂಧಿಸಿ, ಕಠಿಣ ಶಿಕ್ಷೆ ನೀಡಬೇಕು.

ಗಲಭೆಕೋರರನ್ನು ರಕ್ಷಿಸುತ್ತಿರುವ ಕಾಂಗ್ರೆಸ್ ಸರ್ಕಾರದ ನಡೆ, ಅವರನ್ನು ಮತ್ತಷ್ಟು ಪ್ರಚೋದಿಸುತ್ತಿದೆ. ಕಾಂಗ್ರೆಸ್ ಸರ್ಕಾರ ಅದರ ಜವಾಬ್ದಾರಿಯನ್ನು ಹೊರಬೇಕು. ಹಿಂದೂಗಳ ಮೇಲಿನ ದೌರ್ಜನ್ಯ ಹಾಗೂ ಮುಸ್ಲಿಮರ ಮೇಲಿನ ಅತಿಯಾದ ಪ್ರೀತಿ ಕಾಂಗ್ರೆಸ್ ಸರ್ಕಾರದ ವಿಭಕ್ತ ನೀತಿಯನ್ನು ತೋರುತ್ತದೆ. ಮೇ 29ರಂದು ಭಟ್ಕಳದಲ್ಲಿ ನಡೆಯಲಿರುವ ಪ್ರತಿಭಟನೆಗೆ ಯಲ್ಲಾಪುರದಿಂದ ನೂರಾರು ಕಾರ್ಯಕರ್ತರು ತೆರಳಿ, ಭಟ್ಕಳದ ಹಿಂದೂಗಳ ಧ್ವನಿಯಾಗಲಿದ್ದೇವೆ. ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ, ಒಗ್ಗಟ್ಟನ್ನು ತೋರಿಸಲಿದ್ದೇವೆ ಎಂದರು.

ಬಿಜೆಪಿ ಪ್ರಮುಖರಾದ ಶ್ಯಾಮಿಲಿ ಪಾಠಣಕರ, ಮಾಧ್ಯಮ ಸಂಚಾಲಕ ಕೆ. ಟಿ. ಹೆಗಡೆ, ಶಿವಲಿಂಗಯ್ಯ ಅಲ್ಲಯ್ಯನವರಮಠ, ರಜತ್ ಬದ್ದಿ, ಸೋಮೇಶ್ವರ ನಾಯ್ಕ, ರಾಮು ನಾಯ್ಕ, ಗಣೇಶ ಪಾಠಣಕರ ಇದ್ದರು.



ತ್ಯಾಗ, ಬಲಿದಾನದ ಬಕ್ರೀದ್ ಆಚರಣೆ

ಸಿದ್ದಾಪುರ: ತ್ಯಾಗ ಬಲಿದಾನದ ಬಕ್ರೀದ್ ಹಬ್ಬವನ್ನು ತಾಲೂಕಿನ ಶ್ರದ್ಧಾ-ಭಕ್ತಿಯಿಂದ ಆಚರಿಸಿದರು. ಪಟ್ಟಣದ ಈದ್ಗಾ ಮೈದಾನದಲ್ಲಿ ಸೇರಿದ ಮುಸ್ಲಿಮರು ಈದ್ ಉಲ್ ಅಧಾ (ಬಕ್ರೀದ್)ನ ಸಾಮೂಹಿಕ ಪ್ರಾರ್ಥನೆಯನ್ನು ಸಲ್ಲಿಸಿದರು.

ಈ ಸಂಧರ್ಭದಲ್ಲಿ ಮಾತನಾಡಿದ ಧರ್ಮಗುರು ಮೌಲಾನಾ ಮಹಮೂದ್ ರಝು ಪ್ರವಾದಿ ಇಬ್ರಾಹಿಂ ತಮ್ಮ ಮಗ ಇಸ್ಮಾಯಿಲ್‌ನನ್ನು ಅಲ್ಲಾಹ್‌ನ ಆದೇಶದಂತೆ ಬಲಿಕೊಡಲು ಮುಂದಾದ ತ್ಯಾಗವನ್ನು ವಿವರಿಸಿ ಶಕ್ತರಾದವರು ಬಲಿದಾನ ಅರ್ಪಣೆ ಮಾಡುವಾಗ ಅಲ್ಲಾಹ್ ಹಾಗೂ ಮಹಾನ್ ಮಾನವತಾವಾದಿ ಪ್ರವಾದಿ ಮುಹಮ್ಮದ್ ಸ. ಅ. ಸಲಹೆ ಸೂಚನೆಯಂತೆ ನೆರವೇರಿಸಬೇಕು. ಇತರರನ್ನು ಮೆಚ್ಚಿಸಲು ತೋರಿಕೆಗಾಗಿ ಬಲಿದಾನ ನೀಡಬೇಡಿ ಎಂದು ಕರೆ ನೀಡಿ ಪ್ರತಿಯೊಬ್ಬರಿಗೂ ಉಮ್ರಾ, ಪವಿತ್ರ ಹಜ್ ಯಾತ್ರೆ ಕೈಗೊಳ್ಳುವ ಸೌಭಾಗ್ಯ ಲಭಿಸಲಿ ಎಂದು ಪ್ರಾರ್ಥಿಸಿದರು.

ಬದ್ರಿಯಾ ಜಾಮಿಯಾ ಮಸ್ಜಿದ್ ಕಮಿಟಿ ಅಧ್ಯಕ್ಷರಾದ ಖಾದರಬಾಷಾ ಎಫ್. ಸಾಬ್ ಈದ್ ಶುಭಾಶಯ ತಿಳಿಸಿದರು. ಉಪಾಧ್ಯಕ್ಷರಾದ ರಿಯಾಜ್ ಹೊಸೂರ ಮಾತನಾಡಿದರು. ಜೋಗ ರಸ್ತೆಯಲ್ಲಿರುವ ದರ್ಗಾಕ್ಕೆ ತೆರಳಿ ವಿಶ್ವಶಾಂತಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ಸಂದರ್ಭದಲ್ಲಿ ಮಸೀದಿ ಕಮಿಟಿಯ ಕಾರ್ಯದರ್ಶಿ ಫಿರೋಜ್ ಸಾಬ್, ಖಜಾಂಚಿ ಇಬ್ರಾಹಿಂ ಸಾಬ್, ಸದಸ್ಯರಾದ ಮುನವ್ವರ್ ಗುರ್ಕಾರ್, ಇಲಿಯಾಸ್ ಇಬ್ರಾಹಿಂ ಸಾಬ್, ಸಿರಾಜ್ ಶೇಕ್, ಮುನಾಫ್ ಎಂ. ಸಾಬ್, ಸೈಯದ್ ಮುಷೀರ್, ಫಯಾಜ್ ಅಹ್ಮದ್, ಹಮೀದ್ ಎಂ. ಖಾನ್, ಅಬ್ದುಲ್ ರಶೀದ್, ಸತ್ತಾರ್ ಸಾಬ್ ಹಾಗೂ ನೌಜವಾನ್ ಕಮಿಟಿ ಸದಸ್ಯರು ಉಪಸ್ಥಿತರಿದ್ದರು.



ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವೆ: ಪಾಟೀಲ



ಜೋಯಿಡಾ: ಶ್ರೀಕ್ಷೇತ್ರ ಉಳವಿಯಲ್ಲಿ ಚನ್ನಬಸವೇಶ್ವರ ಪ್ರೌಢ ಶಾಲೆ ಉಳವಿಯ ಹಳೆಯ ವಿದ್ಯಾರ್ಥಿಗಳು ವಿದ್ಯಾಲಯ ಪ್ರಾರಂಭವಾದ 40 ವರ್ಷಗಳ ನಂತರ ಪ್ರಾರಂಭದಿಂದ ಕಳೆದ ವರ್ಷದವರೆಗಿನ ಎಲ್ಲಾ ವಿದ್ಯಾರ್ಥಿಗಳು ಸೇರಿ ಗುರುವಂದನಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಪ್ರಧಾನ ಸಂಘಟನಾ ಕಾರ್ಯದರ್ಶಿ ಬಸವರಾಜ ಪಾಟೀಲ ಕಾರ್ಯಕ್ರಮ ಉದ್ಘಾಟಿಸಿ ಈಶಾನ್ಯ ಭಾರತದಲ್ಲಿನ ಪರಿಸ್ಥಿತಿಯನ್ನು ಮನಮುಟ್ಟುವಂತೆ ವಿವರಿಸಿ ಉಳವಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಸಹಕಾರ ನೀಡುವ ಭರವಸೆಯನ್ನು ನೀಡಿದರು.

ಅಧ್ಯಕ್ಷತೆಯನ್ನು ಚನ್ನಬಸವೇಶ್ವರ ಟ್ರಸ್ಟ್ ಕಮಿಟಿಯ ಅಧ್ಯಕ್ಷರಾದ ಸಂಜಯ ಕಿತ್ತೂರರವರು ವಹಿಸಿದ್ದರು. ಶಾಲಾ ಕಮಿಟಿ ಅಧ್ಯಕ್ಷರಾದ ಪ್ರಕಾಶ ಕಿತ್ತೂರ, ಕಮಿಟಿಯ ಸದಸ್ಯರಾದ ವೀರೇಶ ಕಂಬಳಿ ಪ್ರಧಾನ ಗುರುಗಳಾದ ಎಸ್ ಆರ್. ನರಸಣ್ಣನವರ್ ಹಾಗೂ ಇತರ ಗಣ್ಯರು ಇದ್ದರು.

1986 ರಿಂದ 2026 ರ ವರೆಗಿನ ಎಲ್ಲಾ ಹಳೆಯ ವಿದ್ಯಾರ್ಥಿಗಳನ್ನು ಸೇರಿಸಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸುವಲ್ಲಿ ಜಗದೀಶ ಹಾರುಗೊಪ್ಪ ಹನುಮಂತ ಪೂಜಾರಿ, ಮಾಧವ ಗಾಂವ್ಕರ, ಅನಿಲಕುಮಾರ ಬಿರಾದಾರ ಉಮೇಶ ಬೊಳಶೆಟ್ಟಿ ಇತರರು ಶ್ರಮಿಸಿದರು. ವಾಸುದೇವ ಭಾಗ್ವತರವರು ಕಾರ್ಯಕ್ರಮ ನಿರೂಪಿಸಿದರು.

ಶಾಲೆಯ ಹಳೆಯ ವಿದ್ಯಾರ್ಥಿ ಶಿವರಾಮ ಗಾಂವ್ಕರರವರು ಪ್ರಾಸ್ತಾವಿಕ ಮಾತನಾಡಿದರು.

ಶಾಲೆಯ ಎಲ್ಲಾ ಗುರುಗಳನ್ನು ಹಾಗೂ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಿ ಇದೇ ತಿಂಗಳು ನಿವೃತ್ತಿ ಹೊಂದುತ್ತಿರುವ ಸುರೇಶ ಹುಬ್ಬಳ್ಳಿ ಅವರನ್ನು ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.

ಶಾಲೆಯ ಗುರುವರ್ಯರಾಗಿದ್ದ ನಿವೃತ್ತ ಜೀವನ ನಡೆಸುತ್ತಿರುವ ಬೂದಿಹಾಳ, ನಾಗಶೆಟ್ಟಿಕೊಪ್ಪ ಆರ್. ಜಿ. ಭಟ್ ಹಾಗೂ ಹಿರೇಮಠ ಮಾತನಾಡಿದರು. ಕರ್ನಾಟಕದ ಉದ್ದಗಲಕ್ಕೂ ವಿಸ್ತರಿಸಿದ್ದ ಶಿಷ್ಯವೃಂದ, ಗುಲ್ಬರ್ಗಾ, ವಿಜಯಪುರ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಬೆಂಗಳೂರು, ಮೈಸೂರು, ಹೈದರಾಬಾದ್ ಸೇರಿದಂತೆ ಇತ್ಯಾದಿ ಸ್ಥಳಗಳಿಂದ ಬಂದು ಕಾರ್ಯಕ್ರಮ ಯಶಸ್ವಿಗೊಳಿಸಿದ್ದು ಶ್ಲಾಘನೀಯ.

ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲರ ಪಾತ್ರ ಪ್ರಮುಖ

ಶಿರಸಿ: ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಶಿರಸಿ ಜಿಲ್ಲಾ ಜನಜಾಗೃತಿ ವೇದಿಕೆಯ ತ್ರೈಮಾಸಿಕ ಸಭೆಯು ಶಿರಸಿ ಯೋಜನಾ ಕಚೇರಿಯ ಸಭಾಭವನದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಕರಾವಳಿ ಪ್ರಾದೇಶಿಕ ವಿಭಾಗದ ಪ್ರಾದೇಶಿಕ ನಿರ್ದೇಶಕ ಆನಂದ ಸುವರ್ಣ ಉದ್ಘಾಟಿಸಿ ಮಾತನಾಡಿ, ಪೂಜ್ಯ ಹೆಗಡೆಯವರ ರಾಮ ರಾಜ್ಯದ ಕನಸನ್ನು ಜನಜಾಗೃತಿ ವೇದಿಕೆಯು ನನಸು ಮಾಡುತ್ತಿದೆ. ದುಶ್ಚಟ ಮುಕ್ತ ಸಮಾಜ ನಿರ್ಮಾಣದಲ್ಲಿ ನಿಮ್ಮೆಲ್ಲರ ಪಾತ್ರ ಬಹಳ ಅದ್ಭುತವಾಗಿದೆ ಎಂದು ಎಲ್ಲಾ ಸದಸ್ಯರನ್ನು ಅಭಿನಂದಿಸಿ ಯೋಜನೆಯ ಕಾರ್ಯಕ್ರಮದ ಬಗ್ಗೆ ಸವಿವರವಾದ ಮಾಹಿತಿ ನೀಡಿದರು.

ಜನಜಾಗೃತಿ ವೇದಿಕೆಯ ಕಾರ್ಯದರ್ಶಿಗಳಾದ ಜಿಲ್ಲಾ ನಿರ್ದೇಶಕ ದಿನೇಶ್ ಎಂ ಅವರು ಜನಜಾಗೃತಿ ವೇದಿಕೆಯ 2026-27 ನೇ ಸಾಲಿನ ಕ್ರಿಯಾಯೋಜನೆಗಳ ಅನುಷ್ಠಾನದ ಕುರಿತು ಮಾಹಿತಿ ನೀಡಿ ವಾರ್ಷಿಕವಾಗಿ ಜಿಲ್ಲೆಯಲ್ಲಿ ಒಟ್ಟು 3 ಮದ್ಯವರ್ಜನ ಶಿಬಿರಗಳ ಆಯೋಜನೆ ಹಾಗೂ 90 ಶಾಲಾ ಕಾಲೇಜುಗಳಲ್ಲಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದಿಂದ ವಿದ್ಯಾರ್ಥಿಗಳಿಗೆ ದುಶ್ಚಟಗಳ ದುಷ್ಪರಿಣಾಮದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ, ಮೇ 31ರಂದು ವಿಶ್ವ ತಂಬಾಕು ವಿರೋಧಿ ದಿನಾಚರಣೆ ಜೂನ್ 26 ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ, ನವ ಜೀವನೋತ್ಸವ ಕಾರ್ಯಕ್ರಮ ಆಯೋಜನೆ ಮಾಡಲಾಗುವುದು ಎಂದರು.

ಜನಜಾಗೃತಿ ವೇದಿಕೆಯ ಶಿರಸಿ ಜಿಲ್ಲಾ ಅಧ್ಯಕ್ಷ ಕಾಳಿಂಗ ರಾಜ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಮುಂದಿನ ಎರಡು ವರ್ಷಕ್ಕೆ ಜನಜಾಗೃತಿ ವೇದಿಕೆಯ ನೂತನ ಜಿಲ್ಲಾ ಸಂಘಟನಾ ಅಧ್ಯಕ್ಷರಾಗಿ ಗೌರಿ ರಾಜು ನಾಯಕ್



ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ಜಿಲ್ಲೆಯ ಪ್ರತಿ ತಾಲೂಕುಗಳಿಂದ ಒಬ್ಬರನ್ನು ಆಯ್ಕೆ ಮಾಡಲಾಯಿತು. ಶಿರಸಿ ತಾಲೂಕಿನ ಸುಧೀರ್ ನಾಯರ್, ಸಿದ್ದಾಪುರದಿಂದ ರಮೇಶ್ ಹಾರ್ಸಿಮನೆ, ಮುಂಡಗೋಡದಿಂದ ಬಸವರಾಜ್ ನಡುವಿನಮನೆ, ಸೊರಬದಿಂದ ಸುಧಾ, ಶಿಕಾರಿಪುರದಿಂದ ಪ್ರೇಮ, ಸಾಗರದಿಂದ ಕಸ್ತೂರಿ ಸಾಗರ ಇವರುಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಈ ಸಂದರ್ಭ ನೂತನ ಜಿಲ್ಲಾ ಸಂಘಟನಾ ಅಧ್ಯಕ್ಷೆ ಗೌರಿ ರಾಜು ನಾಯಕರನ್ನು ಹಾಗೂ ನಿರ್ಗಮನ ಅಧ್ಯಕ್ಷ ಕಾಳಿಂಗ ರಾಜ್ ಅವರನ್ನು ಅಭಿನಂದಿಸಲಾಯಿತು.ಜನಜಾಗೃತಿ ವೇದಿಕೆಯ ಪೂರ್ವ ಜಿಲ್ಲಾ ಅಧ್ಯಕ್ಷರಾದ ವಿವೇಕ್ ರಾಯ್ಕರ್, ಡಿ.ಎನ್ ಗಾವಂಕರ್, ಸುಭಾಷ್ ನಾಯಕ, ಪ್ರೇಮ್ ಕುಮಾರ್, ಹಾಗೂ ಶಿಕಾರಿಪುರ, ಸೊರಬ, ಸಾಗರ, ಸಿದ್ದಾಪುರ,ಯಲ್ಲಾಪುರ ಮುಂಡಗೋಡು ಹಾಗೂ ಶಿರಸಿ ತಾಲೂಕಿನ ಎಲ್ಲಾ ಜನಜಾಗೃತಿ ಸದಸ್ಯರು, ತಾಲೂಕು ಯೋಜನಾಧಿಕಾರಿಗಳು, ಜಿಲ್ಲಾ ಪ್ರಬಂಧಕರು ಉಪಸ್ಥಿತರಿದ್ದರು.ಜನಜಾಗೃತಿ ವಿಭಾಗದ ಪ್ರಾದೇಶಿಕ ಯೋಜನಾಧಿಕಾರಿ ಗಣೇಶ್ ಆಚಾರ್ಯ ಕಾರ್ಯಕ್ರಮ ನಿರೂಪಿಸಿದರು. ಯೋಜನಾಧಿಕಾರಿ ಜಯಂತಿ ಸ್ವಾಗತಿಸಿದರು. ಶಿಕಾರಿಪುರ ಯೋಜನಾಧಿಕಾರಿ ನಂಜುಂಡಿ ವಂದಿಸಿದರು.

ಉನ್ನತ ಸ್ಥಾನಮಾನಕ್ಕೆ ಪ್ರತಿಭಾ ಪುರಸ್ಕಾರ ಪ್ರೇರಣೆ

ಅಂಕೋಲಾ: ರಾಷ್ಟ್ರೀಯ ಈಡಿಗ ಮಹಾಮಂಡಳಿಯವತಿಯಿಂದ ತಾಲೂಕಿನ ನಾಮಧಾರಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ತಾಲೂಕಿನ ಪಿ.ಎಂ.ಹೈಸ್ಕೂಲಿನ ರೈತ ಭವನದಲ್ಲಿ ನಡೆಯಿತು.

ಕಳೆದ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕ ಪಡೆದ ನಾಮಧಾರಿ ಸಮಾಜದ ವಿದ್ಯಾರ್ಥಿಗಳಿಗೆ ಕಾರ್ಯಕ್ರಮದಲ್ಲಿ ಪುರಸ್ಕರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ದಂತ ವೈದ್ಯ ಡಾ.ಕರುಣಾಕರ ನಾಯ್ಕ ಮಾತನಾಡಿ, ವಿದ್ಯಾರ್ಥಿಗಳು ಪರಿಶ್ರಮದಿಂದ ಸಾಧನೆ ಮಾಡಿದ್ದು ಅವರಿಗೆ ದೊರಕುತ್ತಿರುವ ಪುರಸ್ಕಾರ ಹೆಚ್ಚಿನ ಸಾಧನೆಯೊಂದಿಗೆ ಉನ್ನತ ಸ್ಥಾನಮಾನ ಪಡೆಯಲು ಪ್ರೇರಣೆಯಾಗಲಿ ಎಂದರು.

ನಾಮಧಾರಿ ಸಮಾಜದ ಪ್ರಮುಖ ರಾಜೇಂದ್ರ ನಾಯ್ಕ ಮಾತನಾಡಿ, ಸಮಾಜದ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಮುಂದೆ ಬಂದು ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಬೇಕು ಎಂದರು.



ಅಧ್ಯಕ್ಷತೆ ವಹಿಸಿದ್ದ ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಅಧ್ಯಕ್ಷ ದಾಮೋದರ ನಾಯ್ಕ ಮಾತನಾಡಿದರು.

ವಲಯ ಅರಣ್ಯಾಧಿಕಾರಿಯಾಗಿ ಪದೋನ್ನತಿ ಹೊಂದಿದ ಆರ್.ಎಚ್.ನಾಯ್ಕ ಅವರನ್ನು ಸನ್ಮಾನಿಸಲಾಯಿತು.

ಸಮಿತಿಯ ಪದಾಧಿಕಾರಿಗಳಾದ ರಮೇಶ ನಾಯ್ಕ ತೆಂಕಣಕೇರಿ, ಸಂಜಯ ನಾಯ್ಕ, ಮಂಜುನಾಥ ನಾಯ್ಕ, ರಮೇಶ ನಾಯ್ಕ ಬೊಬ್ರವಾಡ,ವಸಂತ ನಾಯ್ಕ, ನಾಗರಾಜ ಮಂಜಗುಣಿ ಉಪಸ್ಥಿತರಿದ್ದರು. ಎಸೆಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದು ಸಾಧನೆ ಮಾಡಿರುವ ನೇಸರ ರಾಜೇಶ ನಾಯ್ಕ, ಸ್ವೀಕಾರ ಅರುಣ ನಾಯ್ಕ, ಭೂಮಿಕಾ ನಿರಂಜನ ನಾಯ್ಕ, ಪ್ರೀತಿ ಮಾರುತಿ ನಾಯ್ಕ, ಸಿಂಚನಾ ಸತೀಶ ನಾಯ್ಕ, ಸ್ವಾತಿ ಈಶ್ವರ ನಾಯ್ಕ, ನಿಹಾರ ರಾಜೇಶ ನಾಯ್ಕ, ತನಯ ರವೀಂದ್ರ ನಾಯ್ಕ, ರಾಘವಿ ನಾಯ್ಕ, ಶ್ರೇಯಾ ನಾಯ್ಕ, ಮಾನ್ವಿ ನಾಯ್ಕ, ಶಿವಾನಿ ನಾಯ್ಕ, ಅಥರ್ವ ನಾಯ್ಕ ಮತ್ತು ಪಿ.ಯು.ಸಿಯಲ್ಲಿ ಸಾಧನೆ ಮಾಡಿರುವ ಅಮೂಲ್ಯ ನಾಯ್ಕ, ಸಿಂಚನಾ ನಾಯ್ಕ, ಸ್ಮಿತಾ ನಾಯ್ಕ, ಐಶ್ವರ್ಯ ನಾಯ್ಕ, ರಜತ ನಾಯ್ಕ, ನಂದನ ನಾಯ್ಕ, ಎ.ಜೆ.ಸ್ಪಂದನಾ, ಸರ್ವೇಶ ನಾಯ್ಕ, ಕವನ ನಾಯ್ಕ, ಆದಿತ್ಯ ನಾಯ್ಕ ಅವರನ್ನು ಕಾರ್ಯಕ್ರಮದಲ್ಲಿ ಪುರಸ್ಕಾರ ನೀಡಿ ಗೌರವಿಸಲಾಯಿತು.



ಹೊನ್ನಾವರ: ಪಟ್ಟಣದ ಎಂ.ಪಿ.ಇ.ಸೊಸೈಟಿಯ ಎಸ್.ಡಿ.ಎಂ.ಪದವಿ ಪೂರ್ವ ಕಾಲೇಜಿನ ಸಭಾಭವನದಲ್ಲಿ ಕಾಲೇಜು ಪ್ರಾರಂಭೋತ್ಸವಕ್ಕೆ ಎಂ.ಪಿ.ಇ.ಸೊಸೈಟಿಯ ಅಧ್ಯಕ್ಷ ಕೃಷ್ಣಮೂರ್ತಿ ಭಟ್ ಶಿವಾನಿ ಚಾಲನೆ ನೀಡಿದರು. ಈ ವೇಳೆ ಪ್ರಾ. ಡಾ.ರಾಜು ಮಾಳಗಿಮನಿ, ವಿದ್ಯಾರ್ಥಿ ಒಕ್ಕೂಟದ ಸಲಹೆಗಾರ ಶ್ರೀರಾಮ್ ಭಟ್ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕಿರುಸುದ್ದಿ

ಮೇ 31ರಂದು ಪ್ರತಿಭಾ ಪುರಸ್ಕಾರ

ಹಾವೇರಿ: ನಗರದ ರಜನಿ ಸಭಾಂಗಣದಲ್ಲಿ ಮೇ 31ರಂದು ಸಂಜೆ 5ಕ್ಕೆ ಹಾವೇರಿ ನಗರದ ಬಣಜಿಗ ಸಮಾಜದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವ ಸಮಾರಂಭ ನಡೆಯಲಿದೆ. ಹಾವೇರಿ ಶಹರ ಬಣಜಿಗ ಕ್ಷೇಮಾಭಿವೃದ್ಧಿ ಸಂಘದಿಂದ 2025- 26ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.90 ಹಾಗೂ ಅದಕ್ಕಿಂತ ಹೆಚ್ಚಿನ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಇತರ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿದ ಸಾಧಕರನ್ನು ಗೌರವಿಸುವ ಕಾರ್ಯಕ್ರಮ ನಡೆಯಲಿದೆ.

ಸಮಾರಂಭದಲ್ಲಿ ಹುಕ್ಕೇರಿಮಠದ ಡಾ. ಸದಾಶಿವ ಶ್ರೀಗಳು ಸಾನಿಧ್ಯ ವಹಿಸಲಿದ್ದಾರೆ. ಸಂಘದ ಗೌರವಾಧ್ಯಕ್ಷ ಅಜಿತ್ ಮಾಗಾವಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಶಹರ ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷರಾದ ಕೆ.ಸಿ. ಪಾವಲಿ, ಶಿವಕುಮಾರ ಮುದಗಲ್ಲ ಗೌರವ ಉಪಸ್ಥಿತರಿರಲಿದ್ದಾರೆ. ರಾಣೆಬೆನ್ನೂರು ಎಸ್.ಜೆ.ಎಂ ಮಹಿಳಾ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಜಿ.ವಿ.ಕೋರಿ ಉಪನ್ಯಾಸ ನೀಡಲಿದ್ದಾರೆ ಎಂದು ಹಾವೇರಿ ಶಹರ ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕಿರಣ ಕೊಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಾನುವಾರು ಕಳ್ಳತನ

ಹಾವೇರಿ: ಜಮೀನಿನಲ್ಲಿ ಕಟ್ಟಲಾಗಿದ್ದ ಸುಮಾರು 1.40 ಲಕ್ಷ ರೂ.ಕಿಮ್ಮತ್ತಿನ ಎರಡು ಆಕಳು ಹಾಗೂ ಒಂದು ಹೋರಿ ಕರುವನ್ನು ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿರುವ ಘಟನೆ ರಟ್ಟಿಹಳ್ಳಿ ತಾಲೂಕು ಗುಡ್ಡದಮಾದಾಪುರ ಗ್ರಾಮದ ಹೊರವಲಯದಲ್ಲಿ ನಡೆದಿದೆ. ಮಹದೇವಪ್ಪ ನಂದೇಪ್ಪ ಹೊಟ್ಟೇರ ಎಂಬುವವರಿಗೆ ಸೇರಿದ ಬೆಲೆಬಾಳುವ ಜಾನುವಾರುಗಳು ಇವಾಗಿವೆ. ತಲಾ 50 ಸಾವಿರ ರೂ.ಮೌಲ್ಯದ ಎರಡು ಆಕಳು ಹಾಗೂ 40 ಸಾವಿರ ರೂ.ಮೌಲ್ಯದ ಒಂದು ಹೋರಿ ಕರುವನ್ನು ಕಳ್ಳತನ ಮಾಡಿದ್ದಾರೆ. ರಟ್ಟಿಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಕಿ ಅವಘಡ: ಅಪಾರ ಹಾನಿ

ಹಾವೇರಿ: ಆಕಸ್ಮಿಕ ಬೆಂಕಿ ಹೊತ್ತಿಕೊಂಡ ಪರಿಣಾಮ ಹಿತ್ತಲಿನಲ್ಲಿ ಒಟ್ಟಿದ್ದ ಸುಮಾರು 2ಲಕ್ಷ ರೂ.ಮೌಲ್ಯದ ಮೇವಿನ ಬಣವೆಗಳು ಸುಟ್ಟು ಭಸ್ಮವಾಗಿರುವ ಘಟನೆ ರಟ್ಟಿಹಳ್ಳಿ ತಾಲೂಕು ಇಂಗಳಗೊಂದಿ ಗ್ರಾಮದಲ್ಲಿ ನಡೆದಿದೆ. ಇಂಗಳಗೊಂದಿಯ ಜಗದೀಶ ಶಿವಪ್ಪ ಗಿಡ್ಡಪ್ಪನವರ ಎಂಬುವವರಿಗೆ ಸೇರಿದ ಮೇವಿನ ಬಣವೆಗಳು ಸುಟ್ಟಿವೆ. 8 ಟ್ರ್ಯಾಕ್ಟರ್ ಮೆಕ್ಕೆಜೋಳ ರೌದಿ, 2 ಟ್ರ್ಯಾಕ್ಟರ್ ಬಿಳಿಜೋಳ ಸೊಪ್ಪು, 2 ಟ್ರ್ಯಾಕ್ಟರ್ ಶೇಂಗಾ ಹೊಟ್ಟು, 1 ಟ್ರ್ಯಾಕ್ಟರ ಭತ್ತದ ಹುಲ್ಲು ಸುಟ್ಟಿದೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದೆ. ಹಿರೇಕೆರೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಟ್ಟಿಂಗ್ : ದೂರು ದಾಖಲು

ಹಾವೇರಿ: ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿಕೊಂಡಿದ್ದ ಇಬ್ಬರು ಯುವಕರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ರಾಣೇಬೆನ್ನೂರು ಕುರುಬಗೇರಿ ಓಣಿಯ ನವೀನ ಕೊಪರೇಡೆ (22) ಹಾಗೂ ಎ.ಕೆ.ಜಿ ಕಾಲೋನಿಯ ಮಂಜುನಾಥ ತರಿಕೇರಿ (34) ಎಂಬುವವರ ದೂರು ದಾಖಲಿಸಿದೆ. ಆರೋಪಿತರು ರಾಣೇಬೆನ್ನೂರಿನ ಗುತ್ತಲ ಸ್ಟ್ಯಾಂಡ್ ಬಳಿ ಸಾರ್ವಜನಿಕರ ರಸ್ತೆಯಲ್ಲಿ ನಿಂತುಕೊಂಡು ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿರುವ ಬಗ್ಗೆ ಪೊಲೀಸರಿಗೆ ಖಚಿತ ಮಾಹಿತಿ ಬಂದ ಮೇರೆಗೆ ದಾಳಿ ನಡೆಸಿದ್ದಾರೆ. ರಾಣೇಬೆನ್ನೂರು ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗುರುವಂದನಾ ಕಾರ್ಯಕ್ರಮ

ಗದಗ: ತಮ್ಮ ಬದುಕಿನ ಭವಿಷ್ಯವನ್ನು ರೂಪಿಸಲು ಕಾರಣರಾದ ಪ್ರಾಥಮಿಕ ಮತ್ತು ಪ್ರೌಢಶಾಲೆಯ 24 ಶಿಕ್ಷಕರನ್ನು ಗೌರವ ಸನ್ಮಾನ ಸಲ್ಲಿಸುವ ಶ್ರದ್ಧಾ ಭಕ್ತಿಯ ಗುರುವಂದನಾ ಕಾರ್ಯಕ್ರಮವು ತಾಲೂಕಿನ ಲಕ್ಕುಂಡಿ ಗ್ರಾಮದ ಶತಮಾನ ಕಂಡ ಇಲ್ಲಿಯ ಸರ್ಕಾರಿ ಮಾದರಿಯ ಪ್ರಾಥಮಿಕ ದ್ವಿ ಭಾಷಾ ಶಾಲೆಯ ಆವರಣದಲ್ಲಿ ಅದ್ದೂರಿಯಾಗಿ ಜರುಗಿತು.

1999 ರಿಂದ 2000 ನೇ ಅವಧಿಯೊಳಗೆ ಸರಕಾರಿ ಗಂಡು ಮಕ್ಕಳ ಪ್ರಾಥಮಿಕ ಮತ್ತು ಸರಕಾರಿ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆ ಹಾಗೂ ಬಿ.ಎಚ್.ಪಾಟೀಲ ಪ್ರೌಢಶಾಲೆಯವರೆಗೆ ಕಲಿತ ಸುಮಾರು 85 ಹಳೆಯ ವಿದ್ಯಾರ್ಥಿಗಳು 24 ಶಿಕ್ಷಕ ಮತ್ತು ಶಿಕ್ಷಕಿಯರಿಗೆ ಶಾಲು, ಹಣ್ಣು, ಲಕ್ಕುಂಡಿಯ ಬ್ರಹ್ಮ ಜಿನಾಲಯ ಸ್ಮಾರಕ, ಶತಮಾನ ಕಂಡ ಶಾಲಾ ಕಟ್ಟಡದ ಭಾವಚಿತ್ರವಿರುವ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಅಲ್ಲಮಪ್ರಭುದೇವರ ಮಠದ ಸಿದ್ಧಲಿಂಗೇಶ್ವರ ಶ್ರೀಗಳು ಕಾರ್ಯಕ್ರಮ ಉದ್ಘಾಟಿಸಿದರು. ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಆಯುಕ್ತ ಶರಣು ಗೋಗೇರಿ, ಮುಖ್ಯೋಪಾಧ್ಯಾಯ ಕೆ.ಬಿ. ಕೊಣ್ಣೂರು, ಎ.ಕೆ. ಪೂಜಾರ, ಎಸ್‌ಡಿಎಂಸಿ ಅಧ್ಯಕ್ಷ ಗವಿಶಿದ್ದಯ್ಯ ಯಲಿಶಿರುಂಜ ಇತರರಿದ್ದರು. ಗುರುರಾಜ ಬೆಂತೂರು ಸ್ವಾಗತಿಸಿದರು. ಮಹೇಶ ವಡ್ಡಿನ ನಿರೂಪಿಸಿದರು. ಹನುಮಂತಪ್ಪ ಹಟ್ಟಿ ವಂದಿಸಿದರು.



ಹಾನಗಲ್ಲ: ಕಾಂಗ್ರೆಸ್ ಪಕ್ಷದ ಹಿಂದುಳಿದ ವರ್ಗದ ಹಾನಗಲ್ಲ ಬ್ಲಾಕ್ ಅಧ್ಯಕ್ಷರಾಗಿ ನೇಮಕಗೊಂಡ ಯುವ ಮುಖಂಡ ಮಹೇಶ ಪವಾಡಿ ಅವರನ್ನು ಹಾನಗಲ್ಲನಲ್ಲಿ ವಿನಾಯಕ ಅಭಿಮಾನಿ ಬಳಗದಿಂದ ಸನ್ಮಾನಿಸಲಾಯಿತು. ಈ ವೇಳೆ ವಿನಾಯಕ ಹುಲಗಿನಹಳ್ಳಿ, ಕಲ್ಮೇಶ ಮನ್ನಂಗಿ, ಶಂಭು ಮಲ್ಲಿಗಾರ, ನಾಗರಾಜ ಕುಣಿಕೇರಿ ಇದ್ದರು.

ಗೊತ್ತಿಲ್ಲದವರೊಂದಿಗೆ ರೈತರ ವ್ಯವಹಾರ ಸಲ್ಲ

ಗದಗ: ತಾಲೂಕಿನ ಲಕ್ಕುಂಡಿಯ ಮಾರುತಿ ದೇವಸ್ಥಾನದ ಆವರಣದಲ್ಲಿ ಗ್ರಾಮೀಣ ಪೊಲೀಸ್ ಠಾಣೆಯ ವತಿಯಿಂದ ಸೈಬರ್ ಅಪರಾಧಗಳನ್ನು ತಡೆಗಟ್ಟುವ ಕುರಿತು ಕಾನೂನು ಅರಿವು ಕಾರ್ಯಕ್ರಮ ನಡೆಯಿತು.

ಲಕ್ಕುಂಡಿ ಬೀಟ್ ಪೊಲೀಸ್ ಪೇದೆ ಪ್ರವೀಣ ಶಾಂತಪ್ಪನವರ ಮಾತನಾಡಿ, ರೈತರು ಪರಿಚಯವಿಲ್ಲದವರ ಜೊತೆ ತಮ್ಮ ಕೃಷಿ ದಾಸ್ತಾನನ್ನು ಮಾರಬೇಡಿ. ಕೇವಲ ನೂರಾರು ರೂಪಾಯಿ ಉಳಿತಾಯ ಮಾಡುವ ಉದ್ದೇಶದಿಂದ ದೂರದ ಊರಿಂದ ಬಂದ ಖರೀದಿದಾರರಿಗೆ ದಾಸ್ತಾನು ಕೊಡಬೇಡಿ ಅವರು ತೂಕ ಮತ್ತು ಇತರೆ ಮೋಸ ಮಾಡುವುದು ತಮಗೆ ಗೊತ್ತಾಗುವುದಿಲ್ಲ, ಸರ್ಕಾರದ ಪರವಾಗಿ ಇರುವ ಕೃಷಿ ಉತ್ಪನ್ನ ಮಾರುಕಟ್ಟೆಗೆ ಹೋಗಿ ಮರಾಟ ಮಾಡಿ ಪ್ರಮಾಣಿಕ ಬೆಲೆಯನ್ನು ಪಡೆದುಕೊಳ್ಳಿ ಎಂದರು.

ಆನ್‌ಲೈನ್ ಸೈಬರ್ ಅಪರಾಧಗಳು ಹೆಚ್ಚಾಗುತ್ತಿದ್ದು ರೈತರು ತಮ್ಮ ಬ್ಯಾಂಕ್ ಖಾತೆಯನ್ನು ಯಾರಿಗೂ ನೀಡಬೇಡಿ ಮತ್ತು ಮೊಬೈಲ್‌ಗೆ ಬರುವ ಒಟಿಪಿ ಸಂದೇಶವನ್ನು ಹಂಚಿಕೊಳ್ಳಬೇಡಿ. ಒಂದು ವೇಳೆ ಮೋಸ ಹೋಗಿದ್ದರೆ ತಕ್ಷಣವೇ ಸಹಾಯವಾಣಿ 1930 ಮತ್ತು 112ಕ್ಕೆ ಕರೆ ಮಾಡಿ ನಿಮ್ಮ ಹಣವನ್ನು ರಕ್ಷಿಸಿಕೊಳ್ಳಿ, ತಮ್ಮ ಕೃಷಿ ಕಾರ್ಯಕ್ಕೆ ಉಪಯೋಗಿಸುವ ಮತ್ತೊಬ್ಬರಿಂದ ಟ್ರ್ಯಾಕ್ಟರ್ ಖರೀದಿ ಮಾಡುವಾಗ ಅಧಿಕೃತ ದಾಖಾಲಾತೆಯನ್ನು ಪರಿಶೀಲಿಸಿ ಖರೀದಿಸಿ ಮತ್ತು ವಾಹನದ ಟ್ರೈಲರ್ ಹಿಂದುಗಡೆ ರೇಡಿಯಂ ಅಂಟಿಸಿ ಹಿಂದಿನಿಂದ ಬರುವ ವಾಹನಗಳಿಗೆ ರಾತ್ರಿ ವೇಳೆ ವಾಹನ ಕಾಣುವಂತೆ ಮಾಡಿ ಅಪಘಾತವನ್ನು ತಡೆಗಟ್ಟಿ ಎಂದರು. ಎ.ಎಸ್.ಐ. ವಿ.ಎಸ್.ಭಿಕ್ಷಾವತಿಮಠ ಇದ್ದರು.



ಗದಗ: ತಾಲೂಕಿನ ಲಕ್ಕುಂಡಿಯ ಮಾರುತಿ ದೇವಸ್ಥಾನದ ಆವರಣದಲ್ಲಿ ಗ್ರಾಮೀಣ ಪೊಲೀಸ್ ಠಾಣೆಯ ವತಿಯಿಂದ ಸೈಬರ್ ಅಪರಾಧಗಳನ್ನು ತಡೆಗಟ್ಟುವ ಕುರಿತು ಕಾನೂನು ಅರಿವು ಕಾರ್ಯಕ್ರಮ ನಡೆಯಿತು.

ಶೇ.72.82ರಷ್ಟು ಪಠ್ಯಪುಸ್ತಕ ಪೂರೈಕೆ | ಶಾಲೆ ತಲುಪಿದ ಬುಕ್

ಮಕ್ಕಳ ಕೈ ಸೇರಲು ಸಿದ್ಧವಾದ ಪುಸ್ತಕ

ಕಿರಣ ಮಾಸಣಗಿ

ದಿಗಂತ ವಿಶೇಷ

ಹಾವೇರಿ: ಶಾಲೆ ಆರಂಭಕ್ಕೆ ಕೆಲವೇ ದಿನಗಳಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷ ಜೂ.1ರಿಂದ ಆರಂಭವಾಗಲಿದೆ. ಇದಕ್ಕೆ ಶಿಕ್ಷಣ ಇಲಾಖೆ ಅಗತ್ಯ ಸಿದ್ಧತೆಗಳನ್ನು ಕೈಗೊಂಡಿದ್ದು, ವಿಶೇಷವಾಗಿ ಈ ಬಾರಿ ಶೈಕ್ಷಣಿಕ ವರ್ಷ ಆರಂಭದಲ್ಲೇ ಮಕ್ಕಳಿಗೆ ಪಠ್ಯ ಪುಸ್ತಕ ತಲುಪಿಸುವ ನಿಟ್ಟಿನಲ್ಲಿ ಎಲ್ಲ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಿದ್ದು, ಪ್ರಸಕ್ತ ವರ್ಷ ಮಕ್ಕಳು ಶಾಲೆಯ ಹೊಸ ತರಗತಿಗೆ ತೆರಳುತ್ತಿದ್ದಂತೆಯೇ ಪಠ್ಯಪುಸ್ತಕಗಳನ್ನು ಪಡೆಯಲಿದ್ದಾರೆ.

ಶೇ.72.82ರಷ್ಟು ಪಠ್ಯಪುಸ್ತಕ ಹಂಚಿಕೆ : ಈಗಾಗಲೇ ಜಿಲ್ಲೆಗೆ ಶೇ.72.82ರಷ್ಟು ಪಠ್ಯ ಪುಸ್ತಕಗಳು ಪೂರೈಕೆಯಾಗಿದ್ದು, ಅವುಗಳನ್ನು ಶಿಕ್ಷಣ ಇಲಾಖೆ ಈಗಾಗಲೇ ಅಗತ್ಯ ಸಿಬ್ಬಂದಿಗಳ ಮೂಲಕ ಆಯಾ ಶಾಲೆಗಳಿಗೆ ತಲುಪಿಸಿದೆ. ಜಿಲ್ಲೆಯ ಬೇಡಿಕೆಯಂತೆ 1ರಿಂದ 10ನೇ ತರಗತಿಯ ಬಹುತೇಕ ಪಠ್ಯಪುಸ್ತಕಗಳನ್ನು ಶಿಕ್ಷಣ ಇಲಾಖೆ ಪೂರೈಸುತ್ತಿದ್ದು, ಶಾಲೆ ಆರಂಭದ ದಿನವೇ ವಿದ್ಯಾರ್ಥಿಗಳ ಕೈಗೆ ಸೇರಲಿವೆ. ಜಿಲ್ಲೆಯ 8 ತಾಲೂಕುಗಳಲ್ಲಿ 1118 ಪ್ರಾಥಮಿಕ ಹಾಗೂ 165 ಪ್ರೌಢಶಾಲೆ ಸೇರಿ ಒಟ್ಟು 1283 ಶಾಲೆಗಳಿದ್ದು, ಎಲ್ಲ ಶಾಲೆಗಳಿಗೆ ಪಠ್ಯಪುಸ್ತಕ ಪೂರೈಸುವ ಅಂತಿಮ ಹಂತದ ಕೆಲಸ ನಡೆದಿದೆ.

21,49,267 ಪುಸ್ತಕಗಳ ಬೇಡಿಕೆ : ಜಿಲ್ಲೆಯಾದ್ಯಂತ ಇರುವ 1283 ಶಾಲೆಗಳ 1-10ನೇ ತರಗತಿಯ ವಿಷಯವಾರು, ಮಾಧ್ಯಮವಾರು ಸೇರಿ ಒಟ್ಟು 21,49,267 ಪುಸ್ತಕಗಳ ಬೇಡಿಕೆ ಸಲ್ಲಿಸಲಾಗಿತ್ತು. ಈ ಪೈಕಿ ಈಗಾಗಲೇ 15,65,099 ಪಠ್ಯ ಪುಸ್ತಕಗಳು ಪೂರೈಕೆಯಾಗಿವೆ. 13,53,757 ಪುಸ್ತಕಗಳನ್ನು ಆಯಾ ತಾಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ಕಳುಹಿಸಲಾಗಿದ್ದು, ಈವರೆಗೆ ಶೇ.80ರಷ್ಟು ಪುಸ್ತಕಗಳನ್ನು ಶಾಲೆಗಳಿಗೆ ತಲುಪಿಸುವ ಕೆಲಸ ನಡೆಯುತ್ತಿದೆ ಶಿಕ್ಷಣ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮೊದಲ ದಿನವೇ ಮಕ್ಕಳ ಕೈಗೆ ಪುಸ್ತಕ : ಜಿಲ್ಲೆಯ ಬಿಇಒ ಕಚೇರಿಗಳ ಮೂಲಕ ಶಾಲಾವಾರು ಬೇಡಿಕೆ ಸಂಗ್ರಹಿಸಿ, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪುಸ್ತಕ ಹಂಚಿಕೆ ಮಾಡಲಾಗಿದೆ. ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯ ಶಿಕ್ಷಕರು ಈಗಾಗಲೇ ಪುಸ್ತಕ ಪಡೆದುಕೊಂಡಿದ್ದು, ಹಲವು ಶಾಲೆಗಳಲ್ಲಿ ಪುಸ್ತಕಗಳನ್ನು ತರಗತಿ ಪ್ರಕಾರ ವಿಂಗಡಿಸಿ ಹಂಚಿಕೆಗೆ ಸಿದ್ಧವಾಗಿ ಇರಿಸಲಾಗಿದೆ. ಬಹುತೇಕ ಉಚಿತ ಹಾಗೂ ಮಾರಾಟ ಪುಸ್ತಕಗಳು ಬಂದಿದ್ದು, ವಿದ್ಯಾರ್ಥಿಗಳ ಕಲಿಕೆಗೆ ಸಮಸ್ಯೆಯಾಗದಂತೆ ಹಂಚಿಕೆಗೆ ಕ್ರಮ ವಹಿಸಲಾಗಿದೆ. ಶಾಲೆ ಆರಂಭದ ಮೊದಲ ದಿನವೇ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಿಸುವ ಗುರಿ ಇದ್ದು, ಶಾಲೆ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಶಾಲಾ ಆರಂಭಕ್ಕೂ ಮುನ್ನ ಮಕ್ಕಳ ಕೈಗೆ ಪಠ್ಯ ಪುಸ್ತಕಗಳನ್ನು ಒದಗಿಸಲು ಇಲಾಖೆ ಕೈಗೊಂಡ ಕ್ರಮ ಶ್ಲಾಘನೀಯ.



ತಾಲೂಕುವಾರು ಪಠ್ಯಪುಸ್ತಕ ಪೂರೈಕೆ

ತಾಲೂಕು	ಬೇಡಿಕೆ	ಪೂರೈಕೆ
ಹಾವೇರಿ	374587	275930
ಹಿರೇಕೆರೂರು	280503	204709
ರಾಣೆಬೆನ್ನೂರ	384635	287163
ಹಾನಗಲ್ಲ	373898	264260
ಸವಣೂರು	248119	178419
ಶಿಗ್ಗಾವಿ	287823	206936
ಬ್ಯಾಡಗಿ	199702	147682
ಒಟ್ಟು	21,49,267	15,65,099

> ಪ್ರಸಕ್ತ ಶೈಕ್ಷಣಿಕ ವರ್ಷ ಆರಂಭಕ್ಕೂ ಮುನ್ನವೇ ಪಠ್ಯಪುಸ್ತಕ ಪೂರೈಕೆಗೆ ಕ್ರಮವಹಿಸಲಾಗಿದೆ. ಈಗಾಗಲೇ ಶೇ.80ರಷ್ಟು ಪಠ್ಯಪುಸ್ತಕ ಬಂದಿದ್ದು, ಉಳಿದ ಪಠ್ಯಪುಸಕ್ತಗಳು 2-3ದಿನಗಳಲ್ಲಿ ಪೂರೈಕೆಯಾಗಲಿದೆ. ಇನ್ನು ಹಾವೇರಿ ಮತ್ತು ಹಿರೇಕೆರೂರ ತಾಲೂಕಿಗೆ ಮಾತ್ರ ಸಮವಸ್ತ್ರ ಹಂಚಿಕೆಯಾಗಿದ್ದು, ಅವೂ ಸಹ ಎರಡು ದಿನದಲ್ಲಿ ಬರಲಿವೆ. ಬೂಟ್ ಮತ್ತು ಸಾಕ್ಸ್‌ಗಳ ರಾಜ್ಯಮಟ್ಟದ ಟೆಂಡರ್ ಆಗಿದ್ದು, ಎರಡು ದಿನಗಳಲ್ಲಿ ಅವೂ ಸಹ ಹಂಚಿಕೆ ಆಗಲಿವೆ.
>
> ■ ಮೋಹನ್ ದಂಡಿನ್, ಡಿಡಿಪಿಐ ಹಾವೇರಿ.

ರಸ್ತೆ ಹಂಪ್ಸ್ ಅಳವಡಿಕೆಗೆ ಕ್ರಮ



ಗುತ್ತಲ: ಗುತ್ತಲ ಪೊಲೀಸ್ ಠಾಣಾ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೆಚ್ಚುತ್ತಿರುವ ರಸ್ತೆ ಅಪಘಾತಗಳನ್ನು ತಡೆಯಲು ಗುತ್ತಲ ಪೊಲೀಸರು ಮಹತ್ವದ ಹೆಜ್ಜೆ ಇಟ್ಟಿದ್ದಾರೆ. ವಾಹನಗಳ ಅತಿವೇಗ ನಿಯಂತ್ರಣ ಹಾಗೂ ಸಾರ್ವಜನಿಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಅಪಘಾತ ಸಂಭವಿಸುವ ಪ್ರಮುಖ ಸ್ಥಳಗಳಲ್ಲಿ ರಸ್ತೆ ಹಂಪ್ಸ್ ಅಳವಡಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ.

ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಅತಿ ವೇಗದಿಂದ ಸಂಚರಿಸುವ ವಾಹನಗಳಿಂದ ಸಣ್ಣ-ದೊಡ್ಡ ಅಪಘಾತಗಳು ಹೆಚ್ಚಾಗುತ್ತಿದ್ದ ಹಿನ್ನೆಲೆಯಲ್ಲಿ ಸಾರ್ವಜನಿಕರಿಂದ ಸುರಕ್ಷತಾ ಕ್ರಮಗಳಿಗಾಗಿ ಆಗ್ರಹ ಕೇಳಿ ಬಂದಿತ್ತು. ಈ ಹಿನ್ನೆಲೆಯಲ್ಲಿ ಗುತ್ತಲ ಪೊಲೀಸರು ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿತ ಇಲಾಖೆಯೊಂದಿಗೆ ಸಮಾಲೋಚನೆ ನಡೆಸಿ ಅಪಾಯಕಾರಿ ಪ್ರದೇಶಗಳನ್ನು ಗುರುತಿಸಿ ರಸ್ತೆ ಹಂಪ್ಸ್ ನಿರ್ಮಾಣಕ್ಕೆ ಕ್ರಮ ಕೈಗೊಂಡಿದ್ದಾರೆ. ವಾಹನಗಳ ವೇಗ ಕಡಿಮೆ ಮಾಡಲು ರಸ್ತೆ ಹಂಪ್ಸ್ ಅಳವಡಿಸಲಾಗುತ್ತಿದೆ. ಇದರಿಂದ ವಾಹನ ಸವಾರರು ಎಚ್ಚರಿಕೆಯಿಂದ ಸಂಚರಿಸಲು ಸಾಧ್ಯವಾಗಲಿದ್ದು, ಅಪಘಾತಗಳ ಪ್ರಮಾಣ ಕಡಿಮೆಯಾಗುವ ನಿರೀಕ್ಷೆ ವ್ಯಕ್ತವಾಗಿದೆ. ಸಾರ್ವಜನಿಕರ ಸುರಕ್ಷತೆ ನಮ್ಮ ಮೊದಲ ಆದ್ಯತೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ವೇಗ ನಿಯಂತ್ರಣ ಅತ್ಯಗತ್ಯವಾಗಿದ್ದು, ಅಪಘಾತ ತಡೆಯಲು ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುವುದು ಉತ್ತಮ ಕಾರ್ಯವಾಗಿದೆ. ಗುತ್ತಲ ಪೊಲೀಸರ ಈ ಕ್ರಮಕ್ಕೆ ಸ್ಥಳೀಯ ನಿವಾಸಿಗಳು ಹಾಗೂ ವಾಹನ ಸವಾರರು ಮೆಚ್ಚುಗೆ ವ್ಯಕ್ತಪಡಿಸಿದ್ದು, ಇನ್ನಷ್ಟು ಸುರಕ್ಷತಾ ಸೂಚನಾ ಫಲಕಗಳು ಹಾಗೂ ರಾತ್ರಿ ವೇಳೆ ಬೆಳಕು ವ್ಯವಸ್ಥೆ ಕಲ್ಪಿಸಬೇಕೆಂದು ಸವಾರರು ಒತ್ತಾಯಿಸಿದ್ದಾರೆ.

ತ್ಯಾಗ, ಪರಿಶ್ರಮದ ಬಕ್ರೀದ್ ಆಚರಣೆ

ಹಾವೇರಿ: ಕಾಲಕಾಲಕ್ಕೆ ಉತ್ತಮ ಮಳೆಯಾಗಿ, ರೈತರು ಸಮೃದ್ದರಾಗಬೇಕು ಹಾಗೂ ಬಡಜನರು ಎದುರಿಸುತ್ತಿರುವ ಸಂಕಷ್ಟಗಳನ್ನು ನಿವಾರಿಸಲೆಂದು ಮುಸಲ್ಮಾನ ಬಾಂಧವರು ಗುರುವಾರ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ತ್ಯಾಗ, ಬಲಿದಾನದ ಸಂಕೇತವಾಗಿರುವ ಬಕ್ರೀದ್ ಹಬ್ಬವನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಿದರು.

ನಗರದ ಅಂಜುಮನ್ ಏ ಇಸ್ಲಾಂ ಕಮೀಟಿಯ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಹಾವೇರಿಯ ನಾಗೇಂದ್ರನಮಟ್ಟಿ, ಮೆಹಬೂಬ್ ಸುಬಾನಿ ದರ್ಗಾ, ಶಿವಾಜಿನಗರ, ವಿದ್ಯಾನಗರ, ಲಕಮಾಪೂರ, ಸುಭಾಷ್ ಸರ್ಕಲ್, ಶಿವಯೋಗಿಶ್ವರ ನಗರ, ಹೊಸನಗರ, ತಾಜ್ ನಗರ, ಮಕಾನಗಲ್ಲಿ, ಸೂಲಮಟ್ಟಿ ಸೇರಿದಂತೆ ವಿವಿಧೆಡೆಯಿಂದ ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಬಾಂಧವರು ಹೊಸಬಟ್ಟೆ ತೊಟ್ಟು, ಸುಗಂಧ ದ್ರವ್ಯಗಳನ್ನು ಲೇಪಿಸಿಕೊಂಡು ಆಗಮಿಸಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಜೊತೆಗೆ ಬಂಧು-ಬಾಂಧವರನ್ನು ಪರಸ್ಪರ ಭೇಟಿಯಾಗಿ ಆಲಿಂಗನ ಮಾಡಿಕೊಳ್ಳುವ ಮೂಲಕ ಹಬ್ಬದ ಶುಭಾಶಯವನ್ನು ವಿನಿಮಯ ಮಾಡಿಕೊಂಡರು.

ಸಮಾಜದ ಧರ್ಮಗುರುಗಳಾದ ಹಜರತ್ ಮೌಲಾಲಿ ಮುಲ್ಲಾ, ದಾದಾಪೀರ ಮುಲ್ಲಾ ಹಾಗೂ ಮಣ್ಣಮಸೂತಿ ಮೌಲಾನಾ ಅವರು ಪ್ರಾರ್ಥನೆ ಸಲ್ಲಿಸಿ ಮಾತನಾಡಿ, ಬಕ್ರೀದ್ ಹಬ್ಬ ತ್ಯಾಗ ಬಲಿದಾನದ ಸಂಕೇತವಾಗಿದ್ದು, ವಿಶ್ವದಾದ್ಯಂತ ಭಕ್ತಿಯಿಂದ ಆಚರಿಸಲಾಗುತ್ತದೆ. ಇಂತಹ ಹಬ್ಬಗಳಲ್ಲಿ ಜಾತಿ-ಧರ್ಮ ಬಿಟ್ಟು ಎಲ್ಲ ವರ್ಗದ ಜನರು ಒಗ್ಗೂಡಿಕೊಂಡು ಸೌಹಾರ್ದಯುತವಾಗಿ ಆಚರಣೆ ಮಾಡಿದಾಗ ಒಂದೊಳ್ಳೆ ಅರ್ಥಬರುತ್ತದೆ ಎಂದರು.

ಈ ಸಂದರ್ಭದಲ್ಲಿ ಅಂಜುಮನ್ ಏ ಇಸ್ಲಾಂ ಕಮೀಟಿಯ ಅಧ್ಯಕ್ಷ ಇರ್ಫಾನಖಾನ್ ಪಠಾಣ್, ಉಪಾಧ್ಯಕ್ಷ ಇಮಾಮ್‌ಹುಸೇನ್ ಬಾಲೇಬಾಯಿ, ಕಾರ್ಯದರ್ಶಿ ಮುಜಾಫರ್ ಕೊಟ್ಟಿಗೇರಿ, ಖಜಾಂಚಿ ಚಮನ್‌ಶರೀಫ ಮುಲ್ಲಾ, ಹುಡಾ ನಾಮನಿರ್ದೇಶಿತ ಸದಸ್ಯ ಜಮೀರ್‌ಅಹ್ಮದ ಜಿಗರಿ, ಅನ್ವರ್ ಕಡೇಮನಿ, ಇಸ್ಮಾಯಿಲ್‌ಸಾಬ್ ಲಬ್ಬೇರ ಸೇರಿದಂತೆ ನಗರದ ಎಲ್ಲಾ ಮಸೀದಿಗಳ ಮೌಲಾನಾಗಳು, ಸಮಾಜದ ಮುಖಂಡರು ಸೇರಿದಂತೆ ಸಾವಿರಾರು ಮುಸ್ಲಿಂ ಬಾಂಧವರು ಪಾಲ್ಗೊಂಡಿದ್ದರು.



ವೋಲ್ಟೇಜ್ ಸಮಸ್ಯೆ ನಿವಾರಣೆಗೆ ಶ್ರಮ

ಸಿದ್ದಾಪುರ: ಪ್ರತಿಯೊಬ್ಬರಿಗೂ ಗುಣಮಟ್ಟದ ವಿದ್ಯುತ್ ಒದಗಿಸುವುದು ನಮ್ಮ ಸರ್ಕಾರದ ಮುಖ್ಯ ಚಿಂತನೆಯಾಗಿದೆ. ಗ್ರಾಮೀಣ ಭಾಗದ ವೋಲ್ಟೇಜ್ ಸಮಸ್ಯೆ ನಿವಾರಿಸಲು ಇಲಾಖೆ ಶ್ರಮಿಸುತ್ತಿದೆ ಎಂದು ಶಿರಸಿ-ಸಿದ್ದಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಭೀಮಣ್ಣ ಟಿ. ನಾಯ್ಕ ಹೇಳಿದರು.

ತಾಲೂಕಿನ ಕಾನಸೂರು ಗ್ರಾಮದ ಅಡ್ಕಳ್ಳಿ ಕ್ರಾಸ್ ಬಳಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ರೂ 25.40 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ (2/20 ಎಂವಿಎ, 110/11 ಕೆವಿ) ವಿದ್ಯುತ್ ಉಪಕೇಂದ್ರದ ಶಂಕುಸ್ಥಾಪನೆಯನ್ನು ಸೋಮವಾರ ನೆರವೇರಿಸಿ ಅವರು ಮಾತನಾಡಿದರು.

ಹಿಂದೆ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರೈತರಿಗೆ 10 ಎಚ್‌ಪಿ ಪಂಪ್‌ವರೆಗೆ ಉಚಿತ ವಿದ್ಯುತ್ ನೀಡಿ ಕ್ರಾಂತಿ ಮಾಡಿದ್ದರು. ರೈತರಿಗೆ ನೀರು ಮತ್ತು ವಿದ್ಯುತ್ ಸಿಕ್ಕರೆ ಹಸಿರು ಕ್ರಾಂತಿ ಮಾಡಲು ಸಾಧ್ಯ. ರಾಜ್ಯದ ಬೇರೆಡೆ ರೈತರಿಗೆ 7-8 ಗಂಟೆ ವಿದ್ಯುತ್ ಸಿಕ್ಕರೆ, ನಮ್ಮ ಜಿಲ್ಲೆಗೆ ಅಧಿಕಾರಿಗಳು 24 ಗಂಟೆಯೂ ನಿರಂತರ ವಿದ್ಯುತ್ ನೀಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇಡೀ ರಾಜ್ಯದ ರೈತರಿಗೂ ದಿನದ 24 ಗಂಟೆಯೂ ವಿದ್ಯುತ್ ನೀಡುವ ನಿಟ್ಟಿನಲ್ಲಿ ಸರ್ಕಾರ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುತ್ತಿದೆ ಎಂದರು.



ಕಳೆದ ಮೂರು ವರ್ಷಗಳಲ್ಲಿ ಕ್ಷೇತ್ರಕ್ಕೆ ಗ್ರಾಮೀಣ ರಸ್ತೆ, ಸೇತುವೆ ಹಾಗೂ ಸರ್ಕಾರಿ ಕಟ್ಟಡಗಳ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ರೂ. 500 ಕೋಟಿಗೂ ಅಧಿಕ ಹಣವನ್ನು ಸರ್ಕಾರ ನೀಡಿದೆ. ಇದೇ ವೇಳೆ, ಆಡುಕಟ್ಟಾ, ಹುಲೇಕಲ್‌ನಲ್ಲೂ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಇಂಧನ ಸಚಿವರಿಂದ ಭರವಸೆ ಸಿಕ್ಕಿದೆ ಎಂದು ಅವರು ಹೇಳಿದರು.

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಜಿ.ನಾಗರಾಜ ಬಗರ್ ಹುಕುಂ ಸಮಿತಿ ಸದಸ್ಯ ಎಸ್.ಕೆ. ಭಾಗವತ್ ಮಾತನಾಡಿದರು. ಪ್ರಮುಖರಾದ ಸುಮಾ ಉಗ್ರಾಣಕರ್, ಶಿರಸಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಜಗದೀಶ ಗೌಡರ್, ತಾಪಂ ಕಾರ್ಯನಿರ್ವಹಣಾಧಿಕಾರಿ ದೇವರಾಜ ಹಿತ್ತಲಕೊಪ್ಪ, ವಿದ್ಯುತ್ ನಿಗಮದ ಶಿಲ್ಪಾ ಎಂ., ಕೆ.ವಿ.ಪಾಗಿ, ಸುನೀಲಕುಮಾರ, ವಿನಯ ರಾಚೋಟಿ ಉಪಸ್ಥಿತರಿದ್ದರು. ಕೌಶಲ್ಯಾ ಪ್ರಾರ್ಥಿಸಿದರೆ ನಾಗರಾಜ ಪಾಟೀಲ ಸ್ವಾಗತಿಸಿದರು. ಕುಮಾರ ನಾಯ್ಕ ನಿರ್ವಹಿಸಿದರು.

ವಿವಿಧ ಕಾಮಗಾರಿಗೆ ಭೂಮಿಪೂಜೆ

ಹಾನಗಲ್ಲ: ತಾಲೂಕಿನಲ್ಲಿ ಇದೇ ಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ಮೂಲಭೂತ ಸೌಕರ್ಯ ಹೆಚ್ಚಿಸಲು ಅನುದಾನ ದೊರಕಿಸಲಾಗಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಆರಳೇಶ್ವರ ಗ್ರಾಮದಲ್ಲಿ 50 ಲಕ್ಷ ರೂ.ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದ ಅವರು ಗ್ರಾಮೀಣ ಪ್ರದೇಶಗಳಲ್ಲಿ ಸಂಪರ್ಕ ರಸ್ತೆಗಳು ಹದಗೆಟ್ಟು ಸುಗಮ ಸಂಚಾರಕ್ಕೆ ಪರದಾಡುವ ಸ್ಥಿತಿ ಇತ್ತು. ಆದ್ಯತೆಯ ಮೇಲೆ ಅಂಥ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. 2023ರ ಸಾರ್ವತ್ರಿಕ ಚುನಾವಣೆಗೆ ಮುನ್ನ ತಾಲೂಕಿನಲ್ಲಿ 52 ದಿನಗಳ ಕಾಲ ದೃಢಸಂಕಲ್ಪ ಯಾತ್ರೆ ಮೂಲಕ ಪಾದಯಾತ್ರೆಯಲ್ಲಿ ಸಂಚರಿಸಿ ಸಮಸ್ಯೆಗಳನ್ನು ಕಣ್ಣಾರೆ ಕಾಣಲಾಗಿತ್ತು.

ಆ ಸಮಸ್ಯೆಗಳನ್ನು ಹಂತ, ಹಂತವಾಗಿ ಪರಿಹರಿಸಲಾಗುತ್ತಿದೆ ಎಂದು ತಿಳಿಸಿದರು.



ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ದಯಾನಂದ ನಾಗನೂರ, ಕೊಟ್ರಪ್ಪ ಅಂಗಡಿ, ಬಸವರಾಜ ಲೇಖಿ, ಮಲ್ಲೇಶ ಜಾವೋಜಿ, ಫಕ್ಕೀರಪ್ಪ ತೋಟದ, ಮಕ್ಬೂಲ್ ಹಿತ್ತಲಮನಿ, ಚನ್ನಬಸನಗೌಡ ಕಲಗೌಡ್ರ, ಲಿಂಗರಾಜ ಮಡಿವಾಳರ, ಅರುಣ ಮಣ್ಣಮ್ಮನವರ ಸೇರಿದಂತೆ ಮತ್ತಿತರರಿದ್ದರು.

ಮಳೆಯಿಂದ 1,375.77 ಹೆಕ್ಟೇರ್ ಬೆಳೆ ಹಾನಿ

ಹಾವೇರಿ: 2026-27ನೇ ಸಾಲಿನ ಪ್ರಸ್ತುತ ಪೂರ್ವ ಮುಂಗಾರಿನಲ್ಲಿ ಮಳೆ ಗಾಳಿಯಿಂದ ಜಿಲ್ಲೆಯಲ್ಲಿ 1,181 ಹೆಕ್ಟೇರ್ ಕೃಷಿ ಬೆಳೆ ಹಾಗೂ 194.77 ಹೆಕ್ಟೇರ್ ತೋಟಗಾರಿಕೆ ಬೆಳೆ ಸೇರಿದಂತೆ ಒಟ್ಟು 1,375.77 ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

ಪ್ರಸ್ತುತ ಪೂರ್ವ ಮುಂಗಾರಿನ ಮೇ.1ರಿಂದ ಇಲ್ಲಿಯವರೆಗೆ ಕೃಷಿ ಹಾಗೂ ತೋಟಗಾರಿಕೆ ಬೆಳೆ ಹಾನಿ ಸೇರಿದಂತೆ ಜಿಲ್ಲೆಯ ಹಾನಗಲ್ ತಾಲೂಕಿನಲ್ಲಿ 9.34 ಹೆಕ್ಟೇರ್, ಹಾವೇರಿ 2ಹೆ., ರಾಣೇಬೆನ್ನೂರ 1,056ಹೆ., ಬ್ಯಾಡಗಿ 6.65 ಹೆ., ಹಿರೇಕೆರೂರ 9.3ಹೆ., ರಟ್ಟಿಹಳ್ಳಿ 277.47ಹೆ., ಶಿಗ್ಗಾವಿ 1.21ಹೆ., ಸವಣೂರ 13.6ಹೆ. ಸೇರಿದಂತೆ ಒಟ್ಟು 1,375.77 ಹೆಕ್ಟೇರ್ ಹಾನಿ ಸಂಭವಿಸಿದೆ.

ಪ್ರಮುಖವಾಗಿ ಭತ್ತ 1,181ಹೆ., ಬಾಳೆ 55.25ಹೆ., ವೀಳ್ಯದೆಲೆ 36.20ಹೆ., ಅಡಕೆ 30.82ಹೆ., ಪಪ್ಪಾಯ 6.3ಹೆ., ಟೊಮೆಟೋ 6.10ಹೆ., ಎಲೆಕೋಸು 6ಹೆ., ತೆಂಗು 4.5ಹೆ., ಮೆಣಸಿನಕಾಯಿ 3.2ಹೆ., ಬಿನ್ಸ್ 1.2ಹೆ., ಹಾಗಲಕಾಯಿ, ಹಿರೇಕಾಯಿ ತಲಾ 0.6ಹೆ. ಹಾಗೂ ಇತರೆ 5.0ಹೆಕ್ಟೇರ್ ಬೆಳೆ ಹಾನಿ ಸಂಭವಿಸಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

ಮೂಲಸೌಕರ್ಯ ಹಾನಿ: ಪ್ರಸ್ತುತ ಪೂರ್ವ ಮುಂಗಾರಿನಲ್ಲಿ ಮಳೆ ಗಾಳಿಯಿಂದಾಗಿ ಜಿಲ್ಲೆಯಲ್ಲಿ ನಾಲ್ಕು ಶಾಲೆ, ಅಂಗನವಾಡಿ ಕಟ್ಟಡಗಳು, 1,652 ವಿದ್ಯುತ್ ಕಂಬಗಳು, 4 ವಿದ್ಯುತ್ ಟ್ರಾನ್ಸ್‌ಫಾರ್ಮರ್, 0.85 ಕಿಮೀ ವಿದ್ಯುತ್ ತಂತಿ, ವಿದ್ಯುತ್ ಹೈಟೆನ್ಷನ್ ಟವರ್ 8 ಹೀಗೆ 1,177 ಲಕ್ಷ ರೂ.ಗಳಷ್ಟು ಹಾನಿ ಸಂಭವಿಸಿದೆ. ಪ್ರಸಕ್ತ ಪೂರ್ವ ಮುಂಗಾರಿನ ಮಳೆಯಿಂದಾಗಿ ಜಿಲ್ಲೆಯಲ್ಲಿ ಈವರೆಗೆ 167 ಮನೆಗಳು ಹಾನಿಯಾದ ಬಗ್ಗೆ ವರದಿಯಾಗಿದ್ದು, ಈ ಪೈಕಿ 39 ಮನೆಗಳು ಮಾತ್ರ ಅಂಗೀಕೃತವಾಗಿವೆ. 97 ಮನೆಗಳು ತಿರಸ್ಕೃತವಾಗಿದ್ದು, 31 ಮನೆಗಳು ಪರಿಶೀಲನೆ ಹಂತದಲ್ಲಿವೆ ಎಂದು ಮಾಹಿತಿ ತಿಳಿಸಿದೆ.

> **ವಾಡಿಕೆಗಿಂತ ಹೆಚ್ಚಿನ ಮಳೆ**
>
> **ಮೇ 21 ರಿಂದ ಮೇ.27ರ ವರೆಗಿನ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯ ಬ್ಯಾಡಗಿ ತಾಲೂಕಿನಲ್ಲಿ 20.30 ಮಿಮೀ ವಾಡಿಕೆ ಮಳೆಗೆ, 31.76 ಮಿ.ಮೀ ಮಳೆಯಾಗಿದೆ. ಹಾನಗಲ್‌ನಲ್ಲಿ (18ಮಿ.ಮೀ ವಾಡಿಕೆ ಮಳೆ) 27.76 ಮಿ.ಮೀ, ಹಾವೇರಿ (24.30 ಮಿ.ಮೀ) 27.95 ಮಿ.ಮೀ ಮಳೆ ಸುರಿದಿದೆ. ಹಿರೇಕೆರೂರು (17.10 ಮಿ.ಮೀ) 13.82 ಮಿ.ಮೀ, ರಾಣೇಬೆನ್ನೂರ (20 ಮಿ.ಮೀ) ಮಳೆಗೆ, 48.70 ಮಿ.ಮೀ, ಸವಣೂರನಲ್ಲಿ (20.10 ಮಿ.ಮೀ) 9.29 ಮಿ.ಮೀ ಶಿಗ್ಗಾವಿ (15.90 ಮಿ.ಮೀ) 15.70 ಮಿ.ಮೀ ಹಾಗೂ ರಟ್ಟೀಹಳ್ಳಿ (31.50 ಮಿಮೀ) 25.25 ಮಿ.ಮೀ ಮಳೆಯಾಗಿದೆ. ಕಳೆದ ಏಳು ದಿನಗಳಲ್ಲಿ 19.80 ಮಿ.ಮೀ ವಾಡಿಕೆ ಮಳೆಗೆ 26.80 ಮಿಮೀ ಮಳೆಯಾಗಿದೆ**

ಜಿಎಸ್‌ಪಾಗೆ ಸಚಿವ ಸ್ಥಾನ ನೀಡಿ: ರಾಠೋಡ

ಗಜೇಂದ್ರಗಡ: ಅಭಿವೃದ್ಧಿ ಹರಿಕಾರ, ಮತಕ್ಷೇತ್ರದ ಅಭಿವೃದ್ಧಿಗೆ ಪಣ ತೊಟ್ಟಿರುವ, ಎಲ್ಲ ಸಮುದಾಯದವರ ಪ್ರೀತಿಗೆ ಪಾತ್ರರಾಗಿರುವ ರೋಣ ಶಾಸಕ ಜಿ.ಎಸ್. ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಬಂಜಾರ ಸಮಾಜದ ಹಿರಿಯ ಮುಖಂಡ ತಾರಾಸಿಂಗ್ ರಾಠೋಡ ಆಗ್ರಹಿಸಿದರು.



1983ರಿಂದ ಸಕ್ರಿಯ ರಾಜಕಾರಣದಲ್ಲಿರುವ ಶಾಸಕ ಜಿ.ಎಸ್. ಪಾಟೀಲರು ಹಲವು ಬಾರಿ ಸಚಿವ ಸ್ಥಾನಕ್ಕಾಗಿ ಬೇಡಿಕೆ ಇಟ್ಟಿದ್ದರು. ಅವರು ಪ್ರಬುದ್ಧ ಮತ್ತು ಪಕ್ಷ ನಿಷ್ಠೆಯ ನಾಯಕರು. ನಾಲ್ಕು ಬಾರಿ ಶಾಸಕರಾಗಿದ್ದಾರೆ. ಹೀಗಾಗಿ ಸಿಎಂ ಬದಲಾವಣೆಯಾದರೆ ಜಿ.ಎಸ್. ಪಾಟೀಲರಿಗೆ ಸಚಿವ ಸ್ಥಾನ ಒಲಿದು ಬರುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಹಿಂದೆ ಸಿಎಂ ಸಿದ್ದರಾಮಯ್ಯ ಅವರು ರೋಣ ಮತಕ್ಷೇತ್ರಕ್ಕೆ ಭೇಟಿ ನೀಡಿದಾಗ ಜಿ.ಎಸ್. ಪಾಟೀಲರು ಸಚಿವ ಸ್ಥಾನಕ್ಕೆ ಅರ್ಹರು ಎಂದು ಉಲ್ಲೇಖಿಸಿದ್ದನ್ನು ಮರೆಯಬಾರದು. ಉತ್ತರ ಕರ್ನಾಟಕ ಭಾಗದಲ್ಲಿ ಲಿಂಗಾಯತ ಸಮುದಾಯದ ಪ್ರಮುಖ ನಾಯಕರಾಗಿರುವ ಇವರಿಗೆ ಸಚಿವ ಸ್ಥಾನ ನೀಡಬೇಕೆಂದು ದಲಿತ ಸಂಘರ್ಷ ಸಮಿತಿ ಸೇರಿದಂತೆ ಹಲವು ಸಂಘಟನೆಗಳು ಮತ್ತು ಬೆಂಬಲಿಗರು ಸತತವಾಗಿ ಒತ್ತಾಯಿಸುತ್ತಿದ್ದಾರೆ. ಮುಂದಿನ ಮುಖ್ಯಮಂತ್ರಿ ಎಂದು ಹೇಳಲಾಗುತ್ತಿರುವ ಡಿ.ಕೆ. ಶಿವಕುಮಾರ ಬಣದಲ್ಲಿಯೂ ಕೂಡಾ ಜಿ.ಎಸ್.ಪಾಟೀಲರು ಕಾಣಿಸಿಕೊಂಡಿದ್ದು, ಕಳೆದ ತಿಂಗಳು ಹಲವು ಶಾಸಕರೊಂದಿಗೆ ದೆಹಲಿಗೆ ತೆರಳಿ ಹಿರಿಯ ಶಾಸಕರಿಗೆ ಸಚಿವ ಸಂಪುಟ ಪುನರ್ ರಚನೆಯಲ್ಲಿ ಸ್ಥಾನ ನೀಡಬೇಕು ಎಂದು ರೋಣ ಶಾಸಕ ಜಿ.ಎಸ್.ಪಾಟೀಲರು ಹೈಕಮಾಂಡ್‌ಗೆ ಸಚಿವ ಸ್ಥಾನದ ಆಸೆಯನ್ನು ಬಿಚ್ಚಿಟ್ಟಿದ್ದರು. ಈಗಲಾದರೂ ಪಕ್ಷದ ವರಿಷ್ಠರು ಈ ಎಲ್ಲಾ ಅಂಶಗಳನ್ನು ಗಮನಿಸಿ ರೋಣ ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಮಕ್ಕಳಿಗೆ ಪಾಲಕರು ಉತ್ತಮ ಸಂಸ್ಕಾರ ನೀಡಲಿ

ಲಕ್ಷ್ಮೇಶ್ವರ: ಇಂದಿನ ಮಕ್ಕಳಲ್ಲಿ ಧಾರ್ಮಿಕ ಶ್ರದ್ಧೆ, ಸಂಸ್ಕಾರಗಳು ಕಡಿಮೆಯಾಗುತ್ತಿದೆ, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಜೊತೆ ಉತ್ತಮ ನಡೆ, ನುಡಿ, ಸಂಸ್ಕಾರಗಳು, ಆಚಾರ ವಿಚಾರಗಳನ್ನು ಕಲಿಸುವ ಗುರುತರವಾದ ಜವಾಬ್ದಾರಿ ಪಾಲಕರ ಮೇಲಿದೆ ಎಂದು ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಹಳ್ಳದಕೇರಿಯ ಕರೆವಾಡಿಮಠದಲ್ಲಿ ತಾಲೂಕು ಜಂಗಮ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಗುರುವಾರ ಸಾಧಕರಿಗೆ ಸನ್ಮಾನ ಹಾಗೂ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಯಲ್ಲಿ ಶೇ.90ಕ್ಕೂ ಅಧಿಕ ಅಂಕಗಳಿಸಿದ ಜಂಗಮ ಸಮಾಜದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು. ನರಸಾಪುರ ಹಾಗೂ ಕದಂಪುರ ಮಠದ ವೀರಭದ್ರ ಶಿವಾಚಾರ್ಯರು ಮಾತನಾಡಿ, ಸಾಧನೆ ಮಾಡುವ ವಿಚಾರ ಮಕ್ಕಳಲ್ಲಿ ಬರಬೇಕು. ಅದಕ್ಕೆ ಗುರಿ ಇಟ್ಟು ಶ್ರಮ ಪಡಬೇಕು. ಅದರಂತೆ ಪಾಲಕರು ಸಹಿತ ಮಕ್ಕಳಿಗೆ ವಿದ್ಯಾಭ್ಯಾಸ ಜೊತೆಗೆ ಒಳ್ಳೆಯ ಸಂಸ್ಕಾರ ಕಲಿಸಬೇಕು ಎಂದರು. ಕರೆವಾಡಿಮಠದ ಮಳೆಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಹಾಗೂ ಕರೆವಾಡಿಮಠದ ನಿಯೋಜಿತ ಉತ್ತರಾಧಿಕಾರಿಗಳು ಮಂಜುನಾಥ ದೇವರು ಆಶೀರ್ವಚನ ನೀಡಿದರು. ಮಾಜಿ ಶಾಸಕ ಜಿ.ಎಸ್ ಗಡ್ಡದೇವರಮಠ ಕಾರ್ಯಕ್ರಮ ಉದ್ಘಾಟಿಸಿದರು. ಅಖಿಲ ಭಾರತಿಯ ಜಂಗಮ ಸೇವಾ ಸಮಿತಿ ಜಿಲ್ಲಾ ಉಪಾಧ್ಯಕ್ಷ ಕೆ.ವಿ.ಹಿರೇಮಠ ಉಪಸ್ಥಿತರಿದ್ದರು. ವೀರಭದ್ರಯ್ಯ ಹಿರೇಮಠ ಪ್ರಾಸ್ತಾವಿಸಿದರು. ಶಿರಹಟ್ಟಿ ತಾಲೂಕು ಪ್ರಾ.ಶಾ.ಶಿ.ಸಂ ಅಧ್ಯಕ್ಷ ಶರಣಬಸಪ್ಪ ಪಾಟೀಲ್, ಲಕ್ಷ್ಮೇಶ್ವರ ತಾಲೂಕು ಪ್ರಾ.ಶಾ.ಶಿ.ಸಂ ನಿರ್ದೇಶಕಿ ಸುನಂದಾ ಹಿರೇಮಠ ಅವರನ್ನು ಸನ್ಮಾನಿಸಲಾಯಿತು. ಶಂಕ್ರಯ್ಯ ಪೂಜಾರ ಹಾಗೂ ಮುರುಗೇಂದ್ರಯ್ಯ ಹಿರೇಮಠವೇಧಘೋಷಣೆಮಾಡಿದರು. ಮಹೇಶ. ಲಿಂಬಯ್ಯಸ್ವಾಮಿಮಠ, ಸಿ.ಆರ್.ಲಕ್ಕುಂಡಿಮಠ, ಶಿವಯೋಗಿ ಗಡ್ಡದೇವರಮಠ, ಪಂಚಯ್ಯ ಸಾಲಿಮಠ, ರುದ್ರಮುನಿಸ್ವಾಮಿ ಘಂಟಾಮಠ, ಎಸ್.ಪಿ.ಸಭಾವಡಿಮಠ, ನೀಲಕಂಠಯ್ಯ ಹಿರೇಮಠ, ಶಿವರಾಜ ಕರೆವಾಡಿಮಠ, ಜಿಲ್ಲಾ ಅಖಿಲ ಭಾರತಿಯ ಜಂಗಮ ಸೇವಾ ಸಮಿತಿಯ ವೀರಯ್ಯ ಹೊಸಮಠ, ತೋಟಪಯ್ಯ ಗುಡ್ಡಿಮಠ, ಕುಮಾರಸ್ವಾಮಿ ಹಿರೇಮಠ, ಸಂತೋಷ ಹಿರೇಮಠ ಮುಂತಾದವರಿದ್ದರು.



ಕಿರುಸುದ್ದಿ

ನೂತನ ಪದಾಧಿಕಾರಿಗಳ ಪದಗ್ರಹಣ ಮೇ 31ರಂದು





ಬೆಳಗಾವಿ: ಕರ್ನಾಟಕ ಹೋಮಿಯೋಪಥಿಕ್ ಮೆಡಿಕಲ್ ಅಸೋಸಿಯೇಷನ್ , ಬೆಳಗಾವಿ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಮೇ 31ಬೆಳಗ್ಗೆ 10ಕ್ಕೆ ಬೆಳಗಾವಿ ಹೋಟೆಲ್ ಸನ್ಮಾನ್ ಸಮೀಪದ ಗಾಂಧಿ ಭವನದಲ್ಲಿ ನಡೆಯಲಿದೆ. ನೂತನ ಅಧ್ಯಕ್ಷರಾಗಿ ಡಾ.ವಿ.ವಿ.ವರ್ನೇಕರ್, ಕಾರ್ಯಾಧ್ಯಕ್ಷರಾಗಿ ಡಾ.ಸೋನಾಲಿ ಸರ್ನೋಬತ್, ಕಾರ್ಯದರ್ಶಿಯಾಗಿ ಡಾ. ಶ್ರೇಯಸ್ ಜಿನ್ರಾಳ್ಕರ್, ಸಂಘಟನಾ ಕಾರ್ಯದರ್ಶಿಯಾಗಿ ಡಾ.ಸಂತೋಷ ಮಗದುಮ್ ಆಯ್ಕೆಯಾಗಿದ್ದು, ಈ ಸಮಾರಂಭದಲ್ಲಿ ಸಂಘಟನೆ ನೂತನ ಪದಾಧಿಕಾರಿಗಳು ಅಧಿಕೃತವಾಗಿ ಪದಗ್ರಹಣ ಮಾಡಲಿದ್ದಾರೆ. ಹೋಮಿಯೋಪಥಿ ಕ್ಷೇತ್ರದ ಹಿರಿಯ ವೈದ್ಯರು, ವೈದ್ಯಕೀಯ ಶಿಕ್ಷಣ ತಜ್ಞರು, ವಿವಿಧ ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯಗಳ ಪ್ರಾಂಶುಪಾಲರು, ಉಪನ್ಯಾಸಕರು, ವೈದ್ಯರು, ಪಿಜಿ ವಿದ್ಯಾರ್ಥಿಗಳು ಹಾಗೂ ಇಂಟರ್ನ್‌ಗಳು ಭಾಗವಹಿಸಲಿದ್ದಾರೆ ಎಂದು ಕಾರ್ಯಾಧ್ಯಕ್ಷೆ ಡಾ.ಸೋನಾಲಿ ಸರ್ನೋಬತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಕ್ರೀದ್ ಆಚರಣೆ



ನೇಸರಗಿ: ಬಕ್ರೀದ್ ಹಬ್ಬ ಹಿನ್ನೆಲೆಯಲ್ಲಿ ಗ್ರಾಮದ ಮೇಕಲಮರಡಿ ರಸ್ತೆಯಲ್ಲಿನ ಮಸೀದಿ ಮತ್ತು ಪೇಟೆಯಲ್ಲಿನ ಮಸೀದಿಯಲ್ಲಿ ಮುಸ್ಲಿಂ ಸಮಾಜದ ಜನತೆ ಪ್ರಾರ್ಥನೆ ಮಾಡಿ, ಸಡಗರ ಸಂಭ್ರಮದ ಹಬ್ಬವನ್ನು ಆಚರಿಸಿದರು. ನೇಸರಗಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಮಸ್ತ ಮುಸ್ಲಿಂ ಭಾಂದವರು ಪರಸ್ಪರ ಅಪ್ಪಿಕೊಂಡು, ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ ಮುಸ್ಲಿಂ ಧರ್ಮಗುರುಗಳು, ಮುಸ್ಲಿಂ ಜಮಾತ್, ಮುಸ್ಲಿಂ ಸಮಾಜದ ಮುಖಂಡರು, ಹಿರಿಯರು, ಸಮಾಜದ ಜನತೆ ಭಾಗವಹಿಸಿದ್ದರು.

ಮಾದಕ ವಸ್ತುಗಳ ಜಾಲ ಪತ್ತೆ; ಆರೋಪಿಗಳ ಬಂಧನ

ಬೆಳಗಾವಿ: ತಾಲೂಕು ಹಾಗೂ ನಗರದಲ್ಲಿ, ಮಾದಕ ವಸ್ತುಗಳ ಜಾಲದ ವಿರುದ್ಧ ಸಿಸಿಬಿ ಪೊಲೀಸರು ಮಹತ್ವದ ಕಾರ್ಯಾಚರಣೆ ನಡೆಸಿದ್ದಾರೆ. ಮುತಗಾ-ಶಿಂದೊಳ್ಳಿ ರಸ್ತೆಯ ನಿರ್ಜನ ಪ್ರದೇಶದಲ್ಲಿ ಹೆರಾಯಿನ್ ಮಾರಾಟ ಮಾಡುತ್ತಿದ್ದ ಯುವಕನನ್ನು ಹೆಡೆಮುರಿ ಕಟ್ಟಿದ ಪೊಲೀಸರು, ಲಕ್ಷಾಂತರ ರೂ. ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ಈ ಜಾಲದ ಹಿಂದೆ ಮುಂಬೈ ಮೂಲದ ಮಹಿಳೆ ಇರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಬೆಳಗಾವಿ ತಾಲೂಕಿನ ಮುತಗಾ-ಶಿಂದೊಳ್ಳಿ ರಸ್ತೆಯ ಪಕ್ಕದ ಗಿಡಗಂಟಿಗಳಿರುವ ಸಾರ್ವಜನಿಕ ಸ್ಥಳದಲ್ಲಿ ಹೆರಾಯಿನ್ ಮಾರಾಟ ಮಾಡುತ್ತಿದ್ದ ಆರೋಪಿ ಸಮೀರ ಮಹಮ್ಮದಶರೀಫ ಮುಲ್ಲಾ (21) ಎಂಬಾತನನ್ನು ಸಿಸಿಬಿ ಪಿಐ ಮಂಜುನಾಥ ನಾಯಿಕ ಮಾರ್ಗದರ್ಶನದಲ್ಲಿ ಪಿಎಸ್ಐ ಮಂಜುನಾಥ ಭಜಂತ್ರಿ ಮತ್ತು ಸಿಬ್ಬಂದಿ ದಾಳಿ ನಡೆಸಿ ಬಂಧಿಸಿದ್ದಾರೆ. ಬಂಧಿತನಿಂದ 3,28,000 ರೂ. ಮೌಲ್ಯದ 16.40 ಗ್ರಾಂ ಹೆರಾಯಿನ್, 5,000 ರೂ. ಮೌಲ್ಯದ ಇನ್ಫಿನಿಕ್ಸ್ ಮೊಬೈಲ್ ಹಾಗೂ 220 ರೂ. ನಗದು ಸೇರಿದಂತೆ ಒಟ್ಟು 3,33,220 ರೂ. ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ಆರೋಪಿಯನ್ನು ವಿಚಾರಣೆ ಮಾಡಿದಾಗ ಈ ಮಾದಕ ವಸ್ತುವನ್ನು ಮುಂಬೈ ಸಾಯಿನ್ ಕೋಳವಾಡ ನಿವಾಸಿ ಸಾವಂತಿ ಅಮ್ಮ ಎಂಬಾಕೆಯಿಂದ ತಂದಿರುವುದಾಗಿ ಒಪ್ಪಿಕೊಂಡಿದ್ದಾನೆ. ಈ ಹಿನ್ನೆಲೆಯಲ್ಲಿ ಇಬ್ಬರೂ ಆರೋಪಿಗಳ ವಿರುದ್ಧ ಮಾರಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ದಂಧೆ ಕಿಂಗ್ಪಿನ್ ಪತ್ತೆಗೆ ತನಿಖೆ ಮುಂದುವರಿದಿದೆ. ಸಿಸಿಬಿ ಪೊಲೀಸರ ಈ ಕಾರ್ಯಾಚರಣೆಯನ್ನು ನಗರ ಪೊಲೀಸ್ ಆಯುಕ್ತರು ಹಾಗೂ ಡಿಸಿಪಿ ಶ್ಲಾಘಿಸಿದ್ದಾರೆ.

ನಿಧನ ಸುದ್ದಿ

ಸುಭಾಷ ದಲಾಲ



ಚಿಕ್ಕೋಡಿ: ತಾಲೂಕಿನ ಬೆಳಕೂಡ ಗ್ರಾಮದ ನಿವಾಸಿ, ಪತ್ರಕರ್ತ ಸುಭಾಷ ರಾಮಪ್ಪ ದಲಾಲ(58) ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಅಪಾರ ಬಂಧು ಬಳಗವನ್ನು ಆಗಲಿದ್ದಾರೆ.



ಬೆಳಗಾವಿ: ಉತ್ತರ ವಲಯದ ನೂತನ ಐಜಿಪಿ ಆಗಿ ಅಧಿಕಾರ ಸ್ವೀಕರಿಸಿದ ಸಂದೀಪ ಪಾಟೀಲ, ಐಪಿಎಸ್ ಅವರಿಗೆ ಬೆಳಗಾವಿ ಜಿಲ್ಲಾ ಪೊಲೀಸ್ ಪರವಾಗಿ ಹಾರ್ದಿಕ ಸ್ವಾಗತವನ್ನು ಹಾಗೂ ಶುಭಾಶಯಗಳನ್ನು ಬೆಳಗಾವಿ ಜಿಲ್ಲಾ ಪೊಲೀಸ್ ಇಲಾಖೆಯು ಕೋರಲಾಯಿತು.

ಡಿಕೆಶಿಗೆ ಸಿಎಂ ಹುದ್ದೆ ಬಿಟ್ಟುಕೊಟ್ಟಿದ್ದು ಸ್ವಾಗತಾರ್ಹ

ಬೆಳಗಾವಿ: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೈಕಮಾಂಡ್ ಸೂಚನೆಯನ್ನು ಗೌರವಿಸಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಒಪ್ಪಿ ಡಿ.ಕೆ.ಶಿವಕುಮಾರ ಅವರಿಗೆ ಮುಖ್ಯಮಂತ್ರಿ ಹುದ್ದೆ ಬಿಟ್ಟುಕೊಡಲು ಒಪ್ಪಿರುವದು ಸ್ವಾಗತಾರ್ಹ ಎಂದು ಅಂಬಡಗಟ್ಟಿಯ ಮಡಿವಾಳೇಶ್ವರ ಮಠದ ವೀರೇಶ್ವರ ಸ್ವಾಮೀಜಿ ಹೇಳಿದರು.



ಪಟ್ಟಣದಲ್ಲಿ ಗುರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾನು ಕೆಲವು ದಿವಸಗಳ ಹಿಂದೆ ಡಿ.ಕೆ.ಶಿವಕುಮಾರ ಇವರಿಗೆ ಅಧಿಕಾರ ಹಂಚಿಕೆಯ ಬಗ್ಗೆ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ್ದೇನು. ಈಗ ಅದಕ್ಕೆ ಕಾಲ ಕೂಡಿ ಬಂದಂತಾಗಿದೆ ಎಂದರು.

ಪಕ್ಷಕ್ಕಾಗಿ ಹಾಗೂ ಸಂಘಟನೆಗಾಗಿ ನಿರಂತರವಾಗಿ ಶ್ರಮಿಸಿದ ಡಿ.ಕೆ. ಶಿವಕುಮಾರ ಅವರಿಗೆ ಈಗ ಸಿಕ್ಕಿರುವ ಜವಾಬ್ದಾರಿಗೆ ಶ್ರೀಗಳು ಸಂತಸ ವ್ಯಕ್ತಪಡಿಸಿದ್ದಾರೆ. ನಾವೆಲ್ಲರೂ ನಿಮ್ಮ ಬೆನ್ನಿಗಿದ್ದೇವೆ ಎಂದು ಶ್ರೀಗಳು ಡಿ.ಕೆ. ಶಿವಕುಮಾರ ಅವರಿಗೆ ತಮ್ಮ ಪೂರ್ಣ ಆಶೀರ್ವಾದ ಹರಸಿ, ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ ಇಬ್ಬರೂ ಜೋಡೆತ್ತುಗಳಂತೆ ಒಗ್ಗಟ್ಟಿನಿಂದ ಮುಂದೆ ಸಾಗಿ ರಾಜ್ಯದ ಆಡಳಿತವನ್ನು ಯಶಸ್ವಿಯಾಗಿ ನಡೆಸಬೇಕು ಎಂದರು. ರಾಜ್ಯ ರಾಜಕಾರಣದ ಮುಂದಿನ ಹೆಜ್ಜೆಗಳು ಒಗ್ಗಟ್ಟಿನಿಂದ ಕೂಡಿರಲಿ ಎಂದು ಶ್ರೀಗಳು ಈ ಸಂದರ್ಭದಲ್ಲಿ ಹಾರೈಸಿದರು.



ಗೋಕಾಕ: ನಗರದ ಮಹರ್ಷಿ ಶ್ರೀ ವಾಲ್ಮೀಕಿ ಕ್ರೀಡಾಂಗಣದಲ್ಲಿ ಎಸ್.ಎಸ್.ಜೆಡ್ಡಿಮನಿ ಅವರ ಸ್ಮರಣಾರ್ಥವಾಗಿ ಗೋಕಾಕ ಅಡ್ವೋಕೇಟ್ ಕ್ರಿಕೆಟ್ ಟೀಮ್ ಫ್ರೆಂಡ್ಸ್ ಹಮ್ಮಿಕೊಂಡ ಗೋಕಾಕ ಅಡ್ವೋಕೇಟ್ ಕ್ರಿಕೆಟ್ ಟ್ರೋಫಿ-2026ನ್ನು ಸ್ಥಳೀಯ ಪ್ರತಿಷ್ಠಿತ ಲಕ್ಷ್ಮೀ ಎಜುಕೇಶನ್ ಟ್ರಸ್ಟ್‌ನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಕಾರಿಣಿ ಸದಸ್ಯ ಸನತ್ ಭೀಮಶಿ ಜಾರಕಿಹೊಳಿ ಪಂದ್ಯಕ್ಕೆ ಚಾಲನೆ ನೀಡಿದರು. ಈ ವೇಳೆ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಉಮೇಶ ಅತ್ನೂರೆ, ಪ್ರಧಾನ ಸಿವಿಲ್ ದಿವಾಣಿ ನ್ಯಾಯಾಧೀಶರಾದ ಚೈತ್ರಾ ಕುಲಕರ್ಣಿ, ವಕೀಲರ ಸಂಘದ ಅಧ್ಯಕ್ಷ ಎಸ್.ಜಿ.ಬಿ.ಪಾಟೀಲ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರ, ಅಭಿನಂದನಾ ಸಮಾರಂಭ | ಪ್ರೀತಿ ಅಭಿಮತ

ಜ್ಞಾನದೀಪ ಸಂಸ್ಥೆ ಕಾರ್ಯ ಶ್ಲಾಘನೀಯ

ಬೆಳಗಾವಿ: ಕಳೆದ ಎರಡು ದಶಕಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಮಾದರಿ ಸೇವೆ ಸಲ್ಲಿಸುವದರ ಜೊತೆಗೆ ವಿದ್ಯಾರ್ಥಿಗಳನ್ನು ವಿವಿಧ ಆಯಾಮಗಳಲ್ಲಿ ಪ್ರೇರಣೆ ನೀಡುತ್ತಾ ಸ್ಪರ್ಧಾತ್ಮಕ ಮನೋಭಾವ ಕಲ್ಪಿಸಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅದೇ ಪ್ರಗತಿಯಲ್ಲಿ ಸಾಗಲು ಪ್ರೇರಣೆ ನೀಡುತ್ತಿರುವ ಜ್ಞಾನದೀಪ ಸಂಸ್ಥೆಯ ಕಾರ್ಯ ನಿಜಕ್ಕೂ ಮಾದರಿಯಾದದ್ದು ಎಂದು ಬೆಳಗಾವಿ ಮಹಾನಗರ ಪಾಲಿಕೆ ಮಹಾಪೌರ ಪ್ರೀತಿ ಕಾಮಕರ ಹೇಳಿದರು.



ನಗರದ ಕುಮಾರ ಗಂಧರ್ವ ರಂಗಮಂದಿರದಲ್ಲಿ ಜ್ಞಾನದೀಪ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆ ವತಿಯಿಂದ ಹಮ್ಮಿಕೊಳ್ಳಲಾದ 'ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ, ಪಾಲಕರ ದಿನಾಚರಣೆ ಮತ್ತು ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಉಪ ಮಹಾಪೌರ ಹಣಮಂತ ಕೊಂಗಾಲಿ ಮಾತನಾಡಿ, ಜ್ಞಾನದೀಪ ಸಂಸ್ಥೆ ಶಿಕ್ಷಣದ ಜೊತೆಗೆ ಸಾಮಾಜಿಕ ಕಳಕಳಿ, ಮಕ್ಕಳಲ್ಲಿ ಸ್ಪರ್ಧಾಮನೋಭಾವ ಬೆಳೆಸುವುದು, ಕನ್ನಡಪರ ಜಾಗೃತಿ ಹೀಗೆ ನಾನಾ ಆಯಾಮಗಳಲ್ಲಿ ಅನೇಕ ವರ್ಷಗಳಿಂದ ಸೇವೆ ಸಲ್ಲಿಸುತ್ತಿದೆ.ಸಂಸ್ಥೆಯ ಮಾದರಿ ಕೆಲಸ ಮುಂದುವರೆಯಲಿ ಶಿಕ್ಷಣ ರಂಗ ಪ್ರಜ್ವಲಿಸಲಿ ಎಂದರು.

ಈ ವೇಳೆ 2026ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಬೆಳಗಾವಿ ಸೇರಿದಂತೆ ಜಿಲ್ಲೆಯ ನಾನಾ ಸಂಸ್ಥೆಗಳಲ್ಲಿ ಕಲಿತು ಸಾಧನೆ ಮಾಡಿದ 625 ಕ್ಕೆ 615 ಅಂಕ ಗಳಿಸಿದ ಸಮನ್ವಿತಾ ಮರಬಾ ಶೆಟ್ಟಿ ಮತ್ತು 613 ಅಂಕಗಳಿಸಿದ ಶಿವಪ್ರಸಾದ ಮಳಗಲಿ ರವರಿಗೆ ಜ್ಞಾನದೀಪ ರತ್ನ ಶ್ರೀ ಪ್ರಶಸ್ತಿ ಸೇರಿದಂತೆ 90%ಕ್ಕಿಂತ ಹೆಚ್ಚು ಅಂಕಗಳಿಸಿದ 80ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಜ್ಞಾನದೀಪ ರತ್ನ ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸಲಾಯಿತು.

ಬಳಿಕ ಬೇಸಿಗೆ ಶಿಬಿರದಲ್ಲಿ ವಿಶೇಷ ಸಾಧನೆ ಮಾಡಿದ ರೂಫಿಯಾ ತೆಗ್ಗಿನಮನಿ ಅತ್ಯುತ್ತಮ ವಿದ್ಯಾರ್ಥಿ, ಸಿಂಚನಾ ಹುಬ್ಬಳ್ಳಿ ಮತ್ತು ಅಫ್ರಾ ಅಮ್ಮಣಗಿ ಉತ್ತಮ ವಿದ್ಯಾರ್ಥಿನಿ, ಪ್ರಜ್ವಲ ಹೊಳೆನ್ನವರ ಉತ್ತಮ ವಿದ್ಯಾರ್ಥಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬೆಳಗಾವಿ ಶಿವೋಹಂ ಫೌಂಡೇಶನ್ ಡಾ.ಸ್ಫೂರ್ತಿ ಮಾಸ್ತಮರಡಿ ಮಾತನಾಡಿ, ಮಕ್ಕಳಲ್ಲಿ ಯಾವ ರೀತಿ ಏಕಾಗ್ರತೆ ಬೆಳೆಸಿಕೊಳ್ಳಬೇಕು. ಮನಸ್ಸಿನ ಹತೋಟಿ ಮತ್ತು ಮುನ್ನುಗುವ ರೀತಿ, ಗುರಿಯ ಕುರಿತಾದ ಆಯ್ಕೆ ನಮ್ಮ ಮನಸ್ಸಿನ ನಿಯಂತ್ರಣ ಕುರಿತಾಗಿ ಮಕ್ಕಳಿಗೆ ಚಟುವಟಿಕೆ ಮೂಲಕ ಉಪನ್ಯಾಸ ನೀಡಿದರು.

ಈ ವೇಳೆ ಸಂಸ್ಥೆ ಆಡಳಿತ ಮಂಡಳಿ ಕಾರ್ಯದರ್ಶಿ ಲೋಕೇಶ ತಲ್ಲೂರ, ಬಾಬು ತಲ್ಲೂರ, ಸುರೇಶ ಹುಬ್ಬಳ್ಳಿ ಮತ್ತು ಸದಸ್ಯರು, ಜಬ್ಬಾರ ಸನದಿ, ರಾಧಾ ಮುಚ್ಚಂಡಿ , ವಿಜಯಲಕ್ಷ್ಮಿ ಬಾಗೇವಾಡಿ, ಕೆ.ಆರ್.ಪಾಟೀಲ, ಸೋನಾಲಿ ಲೋಹಾರ, ವಿಶ್ವನಾಥ ಬೀಳಗಿ, ಮಲ್ಲಿಕಾರ್ಜುನ ಕುಂಬಾರ, ಆರ್.ಜಿ.ಮುಧೋಳ, ಪ್ರವೀಣ ಕುರುಬಗಟ್ಟಿ, ಸದಾನಂದ ಹಲ್ಕಿ, ಶಿಕ್ಷಕರು, ಪಾಲಕರು ಸೇರಿದಂತೆ ಇತರರು ಇದ್ದರು.

ಸಿ.ಪುಟ್ಟರಂಗಶೆಟ್ಟಿಗೆ ಕ್ಯಾಬಿನೆಟ್ ದರ್ಜೆ ಸಚಿವ ಸ್ಥಾನ ಒದಗಿಸಿ: ಭರಮಣ್ಣ

ಗೋಕಾಕ: ಕಾಂಗ್ರೆಸ್ ಪಕ್ಷದಲ್ಲಿನ ಕ್ಷಿಪ್ರ ರಾಜಕೀಯ ಬೆಳವಣಿಗೆಗಳಿಂದಾಗಿ ನೂತನ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಂಘಟಿತಗೊಳ್ಳಲಿರುವ ನೂತನ ಸಚಿವ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆ ಸಚಿವ ಸ್ಥಾನವನ್ನು ಭಗೀರಥ ಉಪ್ಪಾರ ಸಮಾಜದ ರಾಜ್ಯಾಧ್ಯಕ್ಷ, ಎಂಎಸ್ಐಎಲ್. ಅಧ್ಯಕ್ಷರೂ ಆಗಿರುವ ಚಾಮರಾಜನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ನೀಡುವಂತೆ ಕರ್ನಾಟಕ ರಾಜ್ಯ ಉಪ್ಪಾರ ನಿಗಮದ ಅಧ್ಯಕ್ಷ ಭರಮಣ್ಣ ಉಪ್ಪಾರ ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷವನ್ನು ಮನವಿ ಮಾಡಿದ್ದಾರೆ.

ಗುರುವಾರ ಇಲ್ಲಿನ ಪ್ರವಾಸಿ ಮಂದಿರದಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಉಪ್ಪಾರ ಸಮಾಜಕ್ಕೆ ಸೂಕ್ತ ಮೀಸಲಾತಿ ಒದಗಿಸುವುದು, ಆರ್ಥಿಕ ಮತ್ತು ಶೈಕ್ಷಣಿಕ ರಂಗಗಳಲ್ಲಿ ಹಿಂದುಳಿದಿರುವ ಉಪ್ಪಾರ ಸಮಾಜದ ಶ್ರೇಯಸ್ಸಿಗಾಗಿ ಸರ್ಕಾರದ ಮಟ್ಟದಲ್ಲಿ ಜವಾಬ್ದಾರಿಯುತ ಕಾರ್ಯ ನಿರ್ವಹಿಸಲು ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಕಾಂಗ್ರೆಸ್ ಸರ್ಕಾರದ ನೂತನ ಸಚಿವ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆ ಸಚಿವ ಸ್ಥಾನ ಒದಗಿಸಬೇಕಾದ ಅವಶ್ಯಕತೆ ಇದೆ ಎಂದರು.

ಉಪ್ಪಾರ ಸಮಾಜದ ಜಿಲ್ಲಾಧ್ಯಕ್ಷ ಜಿ.ಎಸ್.ಉಪ್ಪಾರ ಮತ್ತು ತಾಲ್ಲೂಕು ಘಟಕ ಅಧ್ಯಕ್ಷ ಶಿವಪುತ್ರಪ್ಪ ಜಕಬಾಳ ಹಾಗೂ ಮುಖಂಡ ಬಸವರಾಜ ಖಾನಪ್ಪನವರ ಮಾತನಾಡಿ, ರಾಜ್ಯಾದ್ಯಂತ ಸುಮಾರು 30-35 ವಿಧಾನಸಭಾ ಕ್ಷೇತ್ರಗಳಲ್ಲಿ ಅತ್ಯಂತ ಪ್ರಾಭಲ್ಯ ಮತದಾರರ ಸಂಖ್ಯೆ ಹೊಂದಿರುವ ಉಪ್ಪಾರ ಸಮಾಜಕ್ಕೆ ಜನಸಂಖ್ಯೆ ಅನುಪಾತಕ್ಕೆ ಅನುಗುಣವಾಗಿ ಪ್ರಾತಿನಿಧ್ಯ ಒದಗಿಸಲು ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಮೊದಲಾದ ರಾಜಕೀಯ ಪಕ್ಷಗಳು ಆದ್ಯತೆ ನೀಡುವಂತೆ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಉಪ್ಪಾರ ಸಮಾಜದ ಗೋಕಾಕ ತಾಲೂಕು ಘಟಕದ ಉಪಾಧ್ಯಕ್ಷ ವಕೀಲ ಕುಶಾಲ ಗುಡೆನ್ನವರ, ಮುಖಂಡರಾದ ಮಾಯಪ್ಪ ತಹಶೀಲ್ದಾರ, ರೇವಪ್ಪ ದುರದುಂಡಿ, ಲಕ್ಕಪ್ಪ ನಂದಿ, ಸಿದ್ಧಾರೂಢ ದಾಸಪ್ಪನವರ, ಸೋಮು ತೋಳಿನವರ, ಡಿ.ಪಿ.ಮೇಲ್ಮಟ್ಟಿ, ನಿಂಗಪ್ಪ ಬ್ಯಾಗಿ, ಸಂಜೀವ ಸನದಿ, ಪ್ರಶಾಂತ ಬಿಲಕಾರ ಸೇರಿದಂತೆ ಅನೇಕ ಪ್ರಮುಖರು ಉಪಸ್ಥಿತರಿದ್ದರು.





ಕೊಕಟನೂರ: ಗ್ರಾಮದ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಂದವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸುವದರ ಮೂಲಕ ವಿಜೃಂಭಣೆಯಿಂದ ಆಚರಿಸಿದರು. ಈ ವೇಳೆ, ಜಾಪರಸಾಬ ಕರಿಹಾಜಿ, ಜಾವಿದ ನದಾಫ್, ಬುರಾನ್ ಮುಜಾವರ, ಜಾಫರ್ ಮುಲ್ಲಾ, ವಕೀಲ ಎನ್.ಎ.ಕಾವರೆ, ಶಮಶೋರ ಮುಜಾವರ, ಜಂಬು ಮುಲ್ಲಾ, ಬಸೀರ್ ಮುಲ್ಲಾ, ಇಲಾಯಿ ಬಾಗೊಡಿ, ಮೌಲಾ ಪಾತ್ಯಾಪುರ, ತೋಕೋತ ಮುಲ್ಲಾ, ಇಬ್ರಾಹಿಂ ಮುಜಾವರ್ ಸೇರಿದಂತೆ ಹಲವರು ಇದ್ದರು.

ಹಕ್ಕುಗಳ ರಕ್ಷಣೆಗಾಗಿ ನಾವೆಲ್ಲರೂ ಶ್ರಮಿಸೋಣ: ಅರುಣ ಐಹೊಳೆ

ಬೆಳಗಾವಿ: ಸಮುದಾಯದ ಸರ್ವಾಂಗೀಣ ಅಭಿವೃದ್ಧಿ ಹಾಗೂ ಹಕ್ಕುಗಳ ರಕ್ಷಣೆಗಾಗಿ ನಾವೆಲ್ಲರೂ ಒಗ್ಗಟ್ಟಾಗಿ ಶ್ರಮಿಸಬೇಕಾಗಿದೆ ಎಂದು ಶಿವಶರಣ ಮಾದಾರ ಚೆನ್ನಯ್ಯ ಸೇವಾ ಸಮಿತಿ ರಾಜ್ಯ ಉಪಾಧ್ಯಕ್ಷ ಅರುಣ ಐಹೊಳೆ ಹೇಳಿದರು.

ನಗರದ ಮಯೂರ ಪ್ರೆಸಿಡೆನ್ಸಿ ಹೋಟೆಲದ ಸಭಾಂಗಣದಲ್ಲಿ ಆಯೋಜಿಸಿದ್ದ ಮಾದಾರ ಚೆನ್ನಯ್ಯ ಸೇವಾ ಸಮಿತಿ ಬೆಳಗಾವಿ ಜಿಲ್ಲಾ ಕಾರ್ಯಕಾರಿಣಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಘಟನೆ ಯಾವುದೇ ವೈಯಕ್ತಿಕ ಅಥವಾ ರಾಜಕೀಯ ಲಾಭಕ್ಕಾಗಿ ಕಾರ್ಯನಿರ್ವಹಿಸುವುದಿಲ್ಲ, ಇದು ಸಂಪೂರ್ಣ ಪಕ್ಷಾತೀತ ವೇದಿಕೆ. ಇಲ್ಲಿ ಜಾತಿ, ಪಕ್ಷ ಹಾಗೂ ವೈಯಕ್ತಿಕ ಭೇದಭಾವಕ್ಕೆ ಅವಕಾಶವಿಲ್ಲ, ಎಲ್ಲರೂ ಒಂದಾಗಿ ಸಮುದಾಯದಏಳಿಗೆಗಾಗಿಶ್ರಮಿಸುತ್ತಿದ್ದೇವೆ. ಸಮುದಾಯದ ಅಭಿವೃದ್ಧಿಯೇ ನಮ್ಮ ಮುಖ್ಯ ಉದ್ದೇಶ, ಡಾ. ಮಾದಾರ ಚೆನ್ನಯ್ಯ ಸ್ವಾಮೀಜಿಗಳವರ ಮಾರ್ಗದರ್ಶನದಲ್ಲಿ ಸಮಿತಿಯು ರಾಜ್ಯಾದ್ಯಂತ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು.

ಈ ವೇಳೆ ರಾಜ್ಯ ಮಹಿಳಾ ಅಧ್ಯಕ್ಷೆ ಡಾ.ಹಂಸವೇಣಿ, ನೂತನ ಬೆಳಗಾವಿ ಜಿಲ್ಲಾ ಅಧ್ಯಕ್ಷ ಮೇತ್ರಿ, ಚಿಕ್ಕೋಡಿ ಜಿಲ್ಲಾ ಅಧ್ಯಕ್ಷ ಮಹೇಶ ಕರಮುಡಿ, ರಾಜ್ಯ ಕಾರ್ಯಕಾರಿಣಿ ಸದಸ್ಯ ರಮೇಶ ಮಾದರ, ಶಿವಾನಂದ ಐಹೊಳೆ ಭಾಗವಹಿಸಿದ್ದರು.

ಬೆಳಗಾವಿ ಮಹಿಳಾ ಜಿಲ್ಲಾ ಅಧ್ಯಕ್ಷೆಯನ್ನಾಗಿ ಲಕ್ಷ್ಮೀ ನಾಗನ್ನವರ, ಚಿಕ್ಕೋಡಿ ಜಿಲ್ಲೆಯ ಮಹಿಳಾ ಅಧ್ಯಕ್ಷೆಯಾಗಿ ಲಕ್ಕವ್ವ ಮಂಟೂರ, ಬೆಳಗಾವಿ ಜಿಲ್ಲಾ ಉಪಾಧ್ಯಕ್ಷೆಯನ್ನಾಗಿ ಗೀತಾ ಸನ್ನಕ್ಕಿ, ರಾಯಬಾಗ ಮಂಡಲ ಮಹಿಳಾ ಅಧ್ಯಕ್ಷೆಯಾಗಿ ಭಾರತಿ ಮ್ಯಶಾಳೆ, ಕುಡಚಿ ಮಂಡಲದ ಅಧ್ಯಕ್ಷೆಯಾಗಿ ರೇಖಾ ಬಂಡಾರಿ, ಗೋಕಾಕ ಮಂಡಲ ಅಧ್ಯಕ್ಷೆಯಾಗಿ ರೇವಕ್ಕ ಅಡಿವೆಪ್ಪ ಮೇತ್ರಿ ಇವರನ್ನು ಕಾರ್ಯಕ್ರಮದಲ್ಲಿ ನೂತನ ಪದಾಧಿಕಾರಿಗಳನ್ನಾಗಿ ಆಯ್ಕೆ ಮಾಡಲಾಯಿತು.



ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ಬೆಳೆಸಿ: ಸದಾನಂದ

ಚನ್ನಮ್ಮನ ಕಿತ್ತೂರು: ಮಾನಸಿಕ ಶಾಂತಿ ಮತ್ತು ಆಧ್ಯಾತ್ಮ ಸಾಧನೆಗೆ ದೇವಸ್ಥಾನಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಖಾನಾಪೂರ ಲೈಲಾ ಶುಗರ್ಸ್ ಎಂ.ಡಿ.ಸದಾನಂದ ಪಾಟೀಲ ಹೇಳಿದರು.

ಸಮೀಪದ ಕಡತನಬಾಗೇವಾಡಿ ಗ್ರಾಮದಲ್ಲಿ ಶ್ರೀಮರೆಮ್ಮದೇವಿ ದೇವಸ್ಥಾನದ ನೂತನ ಕಟ್ಟಡದ ಲೋಕಾರ್ಪಣೆ ಸಮಾರಂಭಲ್ಲಿ ಮಾತನಾಡಿ, ವಿಶ್ವದಲ್ಲಿಯೇ ಭಾರತೀಯ ಸಂಸ್ಕೃತಿ ಶ್ರೇಷ್ಠವಾಗಿದ್ದು, ನಿರಂತರ ಧಾರ್ಮಿಕ ಕಾರ್ಯಕ್ರಮಗಳು ನಡೆಯಲು ನೂತನ ದೇವಸ್ಥಾನ ಪ್ರಮುಖ ಕೇಂದ್ರವಾಗಲಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬಾಲ ಭವನದ ಅಧ್ಯಕ್ಷ ಅಡಿವೇಶ ಇಟಗಿ ಮಾತನಾಡಿ, ಮಕ್ಕಳಿಗೆ ಬಾಲ್ಯದಲ್ಲಿಯೆ ಉತ್ತಮ ಸಂಸ್ಕಾರ ನೀಡುವ ಮೂಲಕ ಸಮಾಜದಲ್ಲಿ ಅವರನ್ನು ಉತ್ತಮ ನಾಗರೀಕರನ್ನಾಗಿ ಬೆಳೆಸುವ ಜವಾಬ್ದಾರಿ ನಮ್ಮೆಲರ ಮೇಲಿದ್ದು, ದೇವಸ್ಥಾನಗಳಲ್ಲಿ ನಡೆಯುವ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಮಕ್ಕಳ ವ್ಯಕ್ತಿತ್ವ ವಿಕಾಸಕ್ಕೆ ಸಹಕಾರಿಯಾಗಿ, ಅವರ ಮೇಲೆ ಉತ್ತಮ ಪ್ರಭಾವ ಬೀರಲಿವೆ ಎಂದರು.

ಈ ವೇಳೆ ಚನ್ನಬಸವ ದೇವರು, ಮಾಜಿ ಶಾಸಕ ಅರವಿಂದ ಪಾಟೀಲ, ರಾಣಿಶುಗರ್ಸ ಮಾಜಿ ಅಧ್ಯಕ್ಷ ನಾಸೀರ ಬಾಗವಾನ , ಜಿಪಂ ಮಾಜಿ ಸದಸ್ಯ ಸುರೇಶ ಮ್ಯಾಗೇರಿ, ಬಿಜೆಪಿ ಮುಖಂಡರಾದ ಬಸವರಾಜ ಸಾಣಿಕೊಪ್ಪ, ಸುನೀಲ ಮಡ್ಡಿಮನಿ, ಶ್ರೀಕಾಂತ ಇಟಗಿ ಹಾಗೂ ಶ್ರೀಕಾಂತ ಪಾಟೀಲ, ಮಹೇಶ ಬಂಡಿವಡ್ಡರ, ಪರಶುರಾಮ ಗೋಳಿಕರ, ಬಸಪ್ಪ ಹಂಚಿನಮನಿ, ಬಸವಪ್ರಭು ವಾಲಿ, ಬಸಪ್ಪ ಹಂಚಿನಮನಿ, ರುದ್ರಪ್ಪ ಕೋಳಿಕರ, ಪರಶುರಾಮ ಗೌಡನ್ನವರ, ರಾಜು ಬಂಬಾರಡಿ, ಈರಪ್ಪ ಬಡಸದ ಹಾಗೂ ಇತರರು ಇದ್ದರು.



ಜಿಲ್ಲಾ ಸಲಹಾ ಸಮಿತಿ ಸಭೆ

ಬೆಳಗಾವಿ: ಗರ್ಭ ಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣ ಲಿಂಗ ಪತ್ತೆ ನಿಷೇಧ ಶಾಸನ 1994 (ಪಿ.ಸಿ.ಪಿ.ಎನ್.ಡಿ.ಟಿ 1994 ಕಾಯ್ದೆ) ನೂತನ ಜಿಲ್ಲಾ ಸಲಹಾ ಸಮಿತಿ ಸಭೆ ಆಯೋಜಿಸಲಾಯಿತು.

ಸರ್ಕಾರದ ಉಪ ಕಾರ್ಯದರ್ಶಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಸೂಚನೆ ಪ್ರಕಾರ ಮುಂದಿನ 3 ವರ್ಷಗಳ ಅವಧಿಗೆ ಬೆಳಗಾವಿ ಜಿಲ್ಲಾ ಮಟ್ಟದ ನೂತನ ಸಲಹಾ ಸಮಿತಿ ಸಭೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು.

ಸಭೆಯಲ್ಲಿ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಪಿಸಿಪಿಎನ್ ಡಿಟಿ ನೊಡಲ್ ಅಧಿಕಾರಿಗ ಡಾ.ವಿಶ್ವನಾಥ ಎಂ ಭೋವಿರವರು ನೂತನ ಸಭೆಯ ಅಧ್ಯಕ್ಷರನ್ನು ಮತ್ತು ಎಲ್ಲ ಸರ್ವ ಸದಸ್ಯರನ್ನು ಹೂ ಗುಚ್ಚ ನೀಡುವುದರ ಮೂಲಕ ಬರಮಾಡಿಕೊಂಡರು.

ಪಿಸಿಪಿಎನ್‌ಡಿಟಿ 1994 ರ ಕುರಿತು ಸರ್ವ ಸದಸ್ಯರ ಜವಾಬ್ದಾರಿಗಳು ಮತ್ತು ತಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಸಭೆಗೆ ಮಾಹಿತಿ ನೀಡಿದರು. ಅದೇ ರೀತಿ ಎಲ್ಲ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.



ನೂತನ ಜಿಲ್ಲಾ ಸಮಿತಿ ಅಧ್ಯಕ್ಷರಾಗಿ ಡಾ.ಮಂಜುನಾಥ ಹುಕ್ಕೇರಿ ಹಾಗೂ ಸದಸ್ಯರಾಗಿ ಡಾ.ರಮೇಶ ಚಂ ಪಟ್ಟಣಶೆಟ್ಟಿ, ಡಾ.ಸ್ವಪ್ನಿಲ್ ಪಟ್ಟಣಶೆಟ್ಟಿ, ಕುಮಾರ ಜ್ಯೋತೆಪ್ಪಾ ಸರವದೆ, ಸಂಜಯ ಪಂಚಾಕ್ಷರಿ ಹೊಸಮಠ, ಸವಿತಾ ಸುಬಾಷ ಹೆಬ್ಬಾರ ಮತ್ತು ಮಹಾದೇವ ಕೇ ರಾಠೋಡ ಸಭೆಯಲ್ಲಿ ಪಾಲ್ಗೊಂಡು ಸಲಹೆ ಸಮಿತಿ ಸೂಚನೆಗಳನ್ನು ನೀಡಿದರು.

ಅಭಿವೃದ್ಧಿ ಕಾಮಗಾರಿಗೆ ಶಾಸಕ ಆಸೀಫ್ ಚಾಲನೆ

ಬೆಳಗಾವಿ : ಇಲ್ಲಿನ ರಾಮತೀರ್ಥ ನಗರದ ನಿವಾಸಿಗಳ ದಶಕಗಳ ಮೂಲಸೌಕರ್ಯ ಸಮಸ್ಯೆಗೆ ಕೊನೆಗೂ ಮುಕ್ತಿ ಸಿಗುವ ಕಾಲ ಸನ್ನಿಹಿತವಾಗಿದೆ. ಸ್ಥಳೀಯ ಶಾಸಕ ಆಸೀಫ್ ಸೇಠ್ ಅವರು ಗುರುವಾರ ಕ್ಷೇತ್ರದ ಪ್ರಮುಖ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.



ಬೆಳಗಾವಿ ರಾಮತೀರ್ಥ ನಗರದ ನಾಗರಿಕರ ಬಹುದಿನಗಳ ಬೇಡಿಕೆಯಾಗಿದ್ದ ರಸ್ತೆ ನಿರ್ಮಾಣ ಹಾಗೂ ಸುಸಜ್ಜಿತ ಚರಂಡಿ ವ್ಯವಸ್ಥೆ ಅಭಿವೃದ್ಧಿ ಕಾಮಗಾರಿಗಳಿಗೆ ಅಧಿಕೃತವಾಗಿ ಚಾಲನೆ ನೀಡಿದರು. ಒಟ್ಟು 2.5 ಕೋಟಿ ರೂ. ವೆಚ್ಚದ ಈ ಯೋಜನೆ ಈ ಭಾಗದ ನಾಗರಿಕರ ಸಂಪರ್ಕ ಮತ್ತು ನೈರ್ಮಲ್ಯ ವ್ಯವಸ್ಥೆಯನ್ನು ಸುಧಾರಿಸುವ ಗುರಿ ಹೊಂದಿದೆ. ವಿಶೇಷವಾಗಿ ಪ್ರತಿ ವರ್ಷ ಮುಂಗಾರು ಮಳೆಯಲ್ಲಿ ಜಲಾವೃತಗೊಂಡು ತೀವ್ರ ತೊಂದರೆ ಅನುಭವಿಸುತ್ತಿದ್ದ ಇಲ್ಲಿನ ನಿವಾಸಿಗಳಿಗೆ, ಈ ನೂತನ ಚರಂಡಿ ಮತ್ತು ರಸ್ತೆ ಕಾಮಗಾರಿಗಳು ಶಾಶ್ವತ ಪರಿಹಾರ ಒದಗಿಸಿದ್ದಾರೆ.

ಈ ವೇಳೆ ತಮ್ಮ ವಠಾರದಲ್ಲಿ ಸತತವಾಗಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳಿಗೆ ಶ್ಲಾಘಿಸಿ, ಸ್ಥಳೀಯ ನಿವಾಸಿಗಳು ಶಾಸಕ ಆಸೀಫ್ ಸೇಠ್ ಅವರಿಗೆ ಸನ್ಮಾನವನ್ನು ರಾಮತೀರ್ಥ ನಗರದ ನಿವಾಸಿಗಳು ನೇರವೇರಿಸಿದರು. ಈ ಭಾಗದಲ್ಲಿ ಈಗಾಗಲೇ ಸುಮಾರು 25 ಕೋಟಿ ರೂ. ವೆಚ್ಚದ ವಿವಿಧ ಪ್ರಗತಿ ಪರಿಶೀಲನಾ ಕೆಲಸಗಳು ನಡೆದಿರುವುದನ್ನು ಸ್ಮರಿಸಿದ ಶಾಸಕರು, ಗುಣಮಟ್ಟದ ಹಾಗೂ ಕಾಲಮಿತಿಯ ಕೆಲಸಕ್ಕೆ ತಾವು ಬದ್ಧರಾಗಿದ್ದೇವೆ ಎಂದು ಭರವಸೆ ನೀಡಿದರು.

ಈ ವೇಳೆ ಯುವ ನಾಯಕ ಅಮಾನ್ ಸೇಠ್, ಸ್ಥಳೀಯ ಮುಖಂಡರು, ಅಧಿಕಾರಿಗಳು ಸ್ಥಳೀಯ ನಿವಾಸಿಗಳು, ಕಾಂಗ್ರೆಸ್ ಕಾರ್ಯಕರ್ತರು ಸೇರಿದಂತೆ ಇತರರು ಇದ್ದರು.

ಸೌಹಾರ್ದಯುತ ಬಕ್ರೀದ್ ಆಚರಣೆ

ತೆಲಸಂಗ: ಗ್ರಾಮದಲ್ಲಿ ಮುಸ್ಲಿಂ ಬಾಂಧವರು ಗುರುವಾರ ಬಕ್ರೀದ್ (ಈದ್-ಉಲ್-ಅಝ್ಹಾ) ಹಬ್ಬವನ್ನು ಅತ್ಯಂತ ಸಡಗರ, ಸಂಭ್ರಮ ಹಾಗೂ ಸೌಹಾರ್ದತೆಯಿಂದ ಆಚರಿಸಿದರು.



ಗ್ರಾಮದ ಈದ್ಗಾ ಮೈದಾನದಲ್ಲಿ ಜಮಾಯಿಸಿ, ಸಾಮೂಹಿಕ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಜಗತ್ತಿನಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಮೃದ್ಧಿ ನೆಲೆಸಲಿ ಎಂದು ಈ ಸಂದರ್ಭದಲ್ಲಿ ಸಾಮೂಹಿಕವಾಗಿ ಪ್ರಾರ್ಥನೆ ಮಾಡಿದರು.

ಪ್ರಾರ್ಥನೆಯ ನಂತರ ಪರಸ್ಪರ ಆಲಿಂಗನ ಮಾಡಿಕೊಳ್ಳುವ ಮೂಲಕ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಹಬ್ಬದ ಪ್ರಯುಕ್ತ ಗ್ರಾಮದ ಹಿರಿಯರು, ಯುವಕರು ಮತ್ತು ಮಕ್ಕಳು ಹೊಸ ವಸ್ತ್ರ ಧರಿಸಿ ಸಂಭ್ರಮದಲ್ಲಿ ಪಾಲ್ಗೊಂಡಿದ್ದರು. ಹಿಂದೂ ಬಾಂಧವರು ಸಹ ಮುಸ್ಲಿಂ ಸಹೋದರರಿಗೆ ಹಬ್ಬದ ಶುಭ ಕೋರುವ ಮೂಲಕ ಗ್ರಾಮದ ಕೋಮು ಸೌಹಾರ್ದತೆ ಎತ್ತಿಹಿಡಿದರು.

ಪಡಿತರ ವಿತರಣೆಗೆ ಸರ್ವರ್ ಸಮಸ್ಯೆ: ಸಾರ್ವಜನಿಕರ ಆಕ್ರೋಶ

ಕಾಗವಾಡ: ತಾಲೂಕಿನಲ್ಲಿ ಕಳೆದ ಕೆಲವು ತಿಂಗಳಿಂದ ಪಡಿತರ ಧಾನ್ಯ (ರೇಷನ್) ವಿತರಣೆಯಲ್ಲಿ ತಾಂತ್ರಿಕ ದೋಷ ಹಾಗೂ ಸರ್ವರ್ ಸಮಸ್ಯೆ ಮಿತಿಮೀರಿದ್ದು, ತಾಲೂಕಿನ ಅನೇಕ ಪಡಿತರ ಚೀಟಿದಾರರು ರೇಷನ್ ಪಡೆಯಲು ಪರದಾಡುವಂತಾಗಿದೆ. ಬೆಳಗ್ಗೆಯಿಂದಲೇ ಉರಿ ಬಿಸಿಲಿನಲ್ಲಿ ಪಡಿತರ ಅಂಗಡಿಗಳ ಮುಂದೆ ಗಂಟೆಗಳ ಕಾಲ ನಿಂತರೂ ಧಾನ್ಯ ಪಡೆಯದೇ ಹಿಂದಿರುಗುವ ಪರಿಸ್ಥಿತಿ ನಿರ್ಮಾಣವಾಗಿದೆಎಂದು ಸಾರ್ವಜನಿಕರು ಅಳಲು ತೋಡಿಕೊಂಡಿದ್ದಾರೆ.



ಇದರ ನಡುವೆ, ಫಲಾನುಭವಿಗಳಿಗೆ ಒಂದೇ ಬಾರಿ ಧಾನ್ಯ ನೀಡಲು ಎರಡು ಬಾರಿ ಬಯೋಮೆಟ್ರಿಕ್ (ಹೆಬ್ಬೆಟ್ಟಿನ ಗುರುತು) ಪಡೆದುಕೊಳ್ಳಲಾಗುತ್ತಿದ್ದು, ಸಾರ್ವಜನಿಕರು ಗಂಟೆಗಟ್ಟಲೆ ಕ್ಯೂ ನಿಲ್ಲುವಂತಾಗಿದೆ. ಪರಿಸ್ಥಿತಿ ನಿರ್ಮಾಣವಾಗಿದೆ ತಮ್ಮ ಅಳಲು ತೊಡಿಕೊಂಡಿದ್ದಾರೆ.

ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಈ ಸರ್ವರ್ ಸಮಸ್ಯೆ ಬಗೆಹರಿಸಬೇಕು. ಪಡಿತರ ವಿತರಣೆಗೆ ಸೂಕ್ತ ಪರ್ಯಾಯ ವ್ಯವಸ್ಥೆ ಮಾಡಿಕೊಡಬೇಕು. ಒಂದು ವೇಳೆ ಈ ತಾಂತ್ರಿಕ ಲೋಪದೋಷ ಸರಿಪಡಿಸದಿದ್ದರೆ, ಮುಂದಿನ ದಿನಗಳಲ್ಲಿ ಉಗ್ರ ರೀತಿಯ ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ ಎಂದು ಕರ್ನಾಟಕ ರಕ್ಷಣೆ ವೇದಿಕೆ ಅಧ್ಯಕ್ಷ ಸಿದ್ದು ಒಡೆಯರ ಎಚ್ಚರಿಕೆ ನೀಡಿದ್ದಾರೆ.

ಈ ವೇಳೆ ಕರವೇ ಅಧ್ಯಕ್ಷ ಸಿದ್ದು ಒಡೆಯರ, ಉಪಾಧ್ಯಕ್ಷ ಗಣೇಶ ಕೊಳೆಕರ, ಅಪ್ಪಲಾಲ ಮುಲ್ಲಾ, ಫಾರುಕ್ ಅಲಾಸ್ಕರ, ರಾಮು ವಡ್ಡರ, ಬಾಬಾಸಾಬ ಕೊಟ್ಟಲಗೆ, ಅಪ್ಪಸಭಾ ಗುಮೇಟ್ ಹಾಗೂ ಇತರರು ಇದ್ದರು.

ಈ ಕುರಿತು ಸರ್ವರ್ ಸಮಸ್ಯೆ ಇರುವುದೇ ಸತ್ಯ. ಮೇಲಾಧಿಕಾರಿಗಳು ತಾಂತ್ರಿಕ ದೋಷ ಸರಿಪಡಿಸಲು ಕ್ರಮಕೈಗೊಂಡಿದ್ದು, ಶೀಘ್ರದಲ್ಲೇ ಸಮಸ್ಯೆ ನಿವಾರಣೆಯಾಗಲಿದೆ. ಆದ್ದರಿಂದ ತಾವುಗಳು ಇದಕ್ಕೆ ಸಹಕರಿಸಬೇಕು.

■ **ಸಂತೋಷ ಬುರುಡ, ಆಹಾರ ನಿರೀಕ್ಷಕ ಕಾಗವಾಡ**

ಕಿರುಸುದ್ದಿ

ಸೇನೆಗೆ ಆರತಿ ಆಯ್ಕೆ

◆**ಯಮಕನಮರಡಿ:** ಹುಕ್ಕೇರಿ ತಾಲೂಕಿನ ಕುರಣಿ ಗ್ರಾಮದ ಆರತಿ ಬೀರಪ್ಪ ಹಿಟ್ಟನಗಿ ಮೊದಲ ಬಾರಿಗೆ ಭಾರತೀಯ ಸೇನೆಯಲ್ಲಿ ಆಯ್ಕೆಯಾಗಿರುತ್ತಾಳೆ. ಆರತಿಯ ತಂದೆ ತಾಯಿ ಕೃಷಿಕರಾಗಿದ್ದು, ಕಡು ಬಡತನದಲ್ಲಿ 1ರಿಂದ 10ನೇ ತರಗತಿ ತಮ್ಮ ವಿದ್ಯಾಭ್ಯಾಸವನ್ನು ಕುರಣಿ ಗ್ರಾಮದಲ್ಲಿ ಮುಗಿಸಿ ಪಿಯುಸಿ ಸಂಕೇಶ್ವರ ಎಸ್ ಡಿವಿಎಸ್‌ನಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಮುಗಿಸಿರುತ್ತಾರೆ. ಭಾರತೀಯ ಸೇನೆಯಲ್ಲಿ ಆಯ್ಕೆ ಆಗಿರುವುದರಿಂದ ಗ್ರಾಮದಲ್ಲಿ ಗ್ರಾಮಸ್ಥರಿಗೆ ಹರ್ಷೋದ್ಗಾರವಾಗಿದೆ.



ವಿದ್ಯುತ್ ವ್ಯತ್ಯಯ ಇಂದು

◆**ಸವದತ್ತಿ:** 220 ಕೆವಿ ವಿದ್ಯುತ್ ಸ್ವೀಕಾರಣಾ ಕೇಂದ್ರ ಸವದತ್ತಿಯಲ್ಲಿ ಮೊದಲನೇ ತ್ರೈಮಾಸಿಕ ಹಾಗೂ ಸವದತ್ತಿಯಿಂದ 110 ಕೆವಿ ಉಡಕೇರಿ 110 ಕೆ ವಿ ಹೊಸೂರು ಮತ್ತು 110 ಕೆ ವಿ ಮಲ್ಲೂರು ವಿದ್ಯುತ್ ವಿತರಣಾ ಕೇಂದ್ರಕ್ಕೆ ಪೂರೈಕೆಯಾಗುತ್ತಿರುವ ವಿದ್ಯುತ್ ಸರಬರಾಜಿನಲ್ಲಿ ಮೇ 29ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ವಿದ್ಯುತ್ ಸಂಪೂರ್ಣವಾಗಿ ನಿಲುಗಡೆಯಾಗಲಿದೆ. ಸವದತ್ತಿ ತಾಲೂಕಿನ ಹೊಸೂರು, ಮಾಟೊಳ್ಳಿ, ಇಂಗಳಗಿ, ಕಾತ್ರಾಳ, ಬಡ್ಲಿ, ಆಲದಕಟ್ಟಿ, ಕೆವ್ವೆ, ಕಾರ್ಲಕಟ್ಟಿ ತಾಂಡೆ, ಯಕ್ಕುಂಡಿ, ದುಪದಾಳ, ಕಾಗಿಹಾಳ , ಮಲ್ಲೂರು, ಸೊಗಲ ಕ್ಷೇತ್ರ, ಸೋಗಲ ಸುಕ್ಷೇತ್ರ, ಕಾರಿಮನಿ ಸೇರಿದಂತೆ ಇನ್ನು ಕೆಲವು ಗ್ರಾಮಗಳಿಗೆ ವಿದ್ಯುತ್ ಸಂಪೂರ್ಣವಾಗಿ ನಿಲುಗಡೆಯಾಗಲಿದೆ. ಆದ್ದರಿಂದ ಗ್ರಾಮಸ್ಥರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಉಪವಿಭಾಗ ಹು ವಿ ಸಕಂ ನಿ ಸವದತ್ತಿ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆಸಿಲಿಟೇಟರ್ ಹುದ್ದೆಗೆ ನೇಮಕಾತಿ

◆**ಬೆಳಗಾವಿ:** ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಸಂಕೇಶ್ವರ ನಿರ್ವಹಣೆಯಲ್ಲಿರುವ ದೇಶಿ (DAESI Programme-TP No.3148) ಯೋಜನೆಯಡಿಯಲ್ಲಿ ಒಂದು ಫೆಸಿಲಿಟೇಟರ್ (Facilitator) (ತಾತ್ಕಾಲಿಕ) ಹುದ್ದೆಗೆ ಜೂನ್ 11 ರಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶನಾಲಯದಲ್ಲಿ ನೇಮಕಾತಿ ಮಾಡಿಕೊಳ್ಳಲು ಸಂದರ್ಶನವನ್ನು ಆಯೋಜಿಸಲಾಗಿದೆ. ಅಧಿಸೂಚನೆಯನ್ನು ಧಾರವಾಡ ಕೃಷಿ ವಿಶ್ವವಿದ್ಯಾಲಯ ವೆಬ್‌ಸೈಟ್ www.uasd.edu ನಲ್ಲಿ ಪ್ರಕಟಿಸಲಾಗಿದೆ ಎಂದು ಸಂಕೇಶ್ವರ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ವಿಜ್ಞಾನಿಗಳು ಹಾಗೂ ಮುಖ್ಯಸ್ಥರು ಹಾಗೂ ಪ್ರಧಾನ ಕರಷಿ ವಿಸ್ತರಣಾ ಮುಂದಾಳು (ದೇಸಿ) ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪಘಾತ: ವೈದ್ಯ ಸಾವು

◆ **ಯಮಕನಮರಡಿ:** ಸ್ಥಳೀಯ ವೈದ್ಯರಾದ ಡಾ॥ ಸರ್ವೇಶ ನಿಜಪ್ಪ ಗುರವ ಗೆಳೆಯರೊಂದಿಗೆ ಲಡಾಕ್ ಪ್ರವಾಸಕ್ಕೆ ತೆರಳುವಾಗ ರಸ್ತೆ ಅಪಘಾತದಲ್ಲಿ ಸಾವನಪ್ಪಿದ ಘಟನೆ ವರದಿಯಾಗಿದೆ.



ಬಕ್ರೀದ್: ಸಾಮೂಹಿಕ ಪ್ರಾರ್ಥನೆ



◆**ಗೋಕಾಕ:** ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಮುಸ್ಲಿಂ ಬಾಂಧವರು ನಗರದಲ್ಲಿ ಶ್ರದ್ಧಾ, ಭಕ್ತಿಯಿಂದ ನಗರದ ಈದ್ಗಾ ಮೈದಾನದಲ್ಲಿ ಗುರುವಾರದಂದು ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ, ಸಕಲ ಜೀವರಾಶಿಗೆ ಒಳಿತಾಗುವಂತೆ ದೇವರಲ್ಲಿ ಪ್ರಾರ್ಥಿಸಿದರು. ಹಬ್ಬದ ಅಂಗವಾಗಿ ಶ್ವೇತವಸ್ತ್ರ ಧರಿಸಿ, ರಂಗು ರಂಗಿನ ಟೋಪಿಗಳನ್ನು ತೊಟ್ಟು ಪ್ರಾರ್ಥನೆಗೆ ಈದ್ಗಾ ಮೈದಾನಕ್ಕೆ ಆಗಮಿಸಿದರು. ಸಾವಿರಾರು ಜನರು ಏಕಕಾಲಕ್ಕೆ ಪ್ರಾರ್ಥನೆ ಸಲ್ಲಿಸುವುದು ಹಬ್ಬದ ವಾಡಿಕೆ. ಧರ್ಮ ಗುರುಗಳ ಉಪದೇಶ ಆಲಿಸಿ ಹಬ್ಬ ಆಚರಿಸಿದರು. ಪ್ರಾರ್ಥನೆ ಬಳಿಕ ಒಬ್ಬರನೊಬ್ಬರು ಅಲಂಗಿಸಿ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಈ ವೇಳೆ ತಾಲೂಕಿನ ಅಮಿರಸಾಬ ಹಾಜಿ ಕುತಬುದ್ದೀನ್ ಬಸ್ಸಾಪೂರಿ, ಹಾಫೀಜ್ ಜಮಾದ್ ಶೇಖ ಸೇರಿದಂತೆ ಸಾವಿರಾರು ಮುಸ್ಲಿಂ ಬಾಂಧವರು ಉಪಸ್ಥಿತರಿದ್ದರು.



ಹುಬ್ಬಳ್ಳಿ: ಗುರುಸಾರ್ವಭೌಮ ದಾಸ ಸಾಹಿತ್ಯ ಪ್ರಾಜೆಕ್ಟ್ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ ಮಂತ್ರಾಲಯ ವತಿಯಿಂದ ಅಧಿಕ ಮಾಸದ ಅಂಗವಾಗಿ 33 ದೇವರ ನಾಮಗಳ ಭಜನಾ ಕಾರ್ಯಕ್ರಮ ಜರುಗಿತು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಚಾಲನೆ

◆**ರಾಯಬಾಗ:** ಮತಕ್ಷೇತ್ರದ ಎಲ್ಲ ಗ್ರಾಮಗಳ ಎಸ್ಸಿ ಕಾಲೊನಿಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲಾಗುತ್ತಿದೆ ಎಂದು ಶಾಸಕ ಡಿ.ಎಂ.ಐಹೊಳೆ ಹೇಳಿದರು.

ಇತ್ತೀಚೆಗೆ ಲೋಕೋಪಯೋಗಿ ಇಲಾಖೆಯಿಂದ ಮಂಜೂರಾದ 30 ಲಕ್ಷ ರೂ. ಅನುದಾನದಲ್ಲಿ ತಾಲೂಕಿನ ಕಂಕಣವಾಡಿ ಪಟ್ಟಣದ ಬಸ್ ನಿಲ್ದಾಣದಿಂದ ಎಸ್ಸಿ ಕಾಲೊನಿವರೆಗೆ ರಸ್ತೆ ಸುಧಾರಣೆ ಹಾಗೂ ನಿಪನಾಳ ಗ್ರಾಮದಲ್ಲಿ ಮುಧೋಳ-ನಿಪ್ಪಾಣಿ ರಾಜ್ಯ ಹೆದ್ದಾರಿಯಿಂದ ಎಸ್ಸಿ ಕಾಲೊನಿ ಮತ್ತು ನಿಪನಾಳಕರ ತೋಟದ ವರೆಗೆ 20 ಲಕ್ಷ ರೂ.ಅನುದಾನದಲ್ಲಿ ರಸ್ತೆ ಸುಧಾರಣೆ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಗುತ್ತಿಗೆದಾರರು ಗುಣಮಟ್ಟದ ರಸ್ತೆಯನ್ನು ನಿರ್ಮಿಸಬೇಕೆಂದು ಸೂಚಿಸಿದರು.

ಮುಖಂಡರಾದ ಸದಾಶಿವ ಘೋರ್ಪಡೆ, ರಾಜಶೇಖರ ಖನದಾಳೆ, ಅಣ್ಣಾಸಾಹೇಬ ಖೆಮಲಾಪೂರೆ, ಅಪ್ಪಾಸಾಹೇಬ ಬ್ಯಾಕುಡೆ, ಶಂಕರ ಕುರಬೆಟ್ಟಿ, ರಾಜು ಹಟ್ಟಿಕರ, ಮಲ್ಲಪ್ಪ ಸನದಿ, ಶಿವಪ್ಪ ಹಳ್ಳುರೆ, ಮಲ್ಲಪ್ಪ ಪವಾರ, ಸತ್ಯಪ್ಪಾ ನಂದಿ, ಸದಾಶಿವ ಖೆಮಲಾಪೂರೆ, ಮಹಾಲಿಂಗ ಮುದ್ದಾಪುರೆ, ವೀರೇಂದ್ರ ಬ್ಯಾಕುಡೆ, ರಮೇಶ ಪೂಜಾರಿ, ಬಸವರಾಜ ಐನಾಪೂರೆ, ಹಾಲಪ್ಪ ಪಿರಗಿಪಾಟೀಲ, ಅಪ್ಪಣ್ಣ ಗಡಕರಿ, ಶ್ರೀಶೈಲ ಮೂಡಲಗಿ, ನಟರಾಜ ಮಾರ್ಡಿಕರ, ನಾಗಪ್ಪ ಪಡತರಿ, ಅರುಣ ಪವಾರ, ಹಾಲಪ್ಪ ಗಡಕರಿ, ಮಹಾಂತೇಶ ಹತ್ತರಗಿ, ಸವಿನ ವಾಘ, ಶ್ರೀಕಾಂತ ಮೂಡಲಗಿ, ಮುಂಡಲಿಕ ಗಿಡ್ಡಗೋಳ, ಅಭಿಯಂತರ ಶ್ರೀಧರ ಮಗಲವಾಡಿ ಇದ್ದರು.



ರಾಯಬಾಗ: ಲೋಕೋಪಯೋಗಿ ಇಲಾಖೆಯಿಂದ ಮಂಜೂರಾದ 30 ಲಕ್ಷ ರೂ.ಅನುದಾನದಲ್ಲಿ ತಾಲೂಕಿನ ಕಂಕಣವಾಡಿ ಪಟ್ಟಣದ ಬಸ್ ನಿಲ್ದಾಣದಿಂದ ಎಸ್ಸಿ ಕಾಲೊನಿವರೆಗೆ ರಸ್ತೆ ಸುಧಾರಣೆ ಹಾಗೂ ನಿಪನಾಳ ಗ್ರಾಮದಲ್ಲಿ ಮುಧೋಳ-ನಿಪ್ಪಾಣಿ ರಾಜ್ಯ ಹೆದ್ದಾರಿಯಿಂದ ಎಸ್ಸಿ ಕಾಲೊನಿ ಮತ್ತು ನಿಪನಾಳಕರ ತೋಟದ ವರೆಗೆ 20 ಲಕ್ಷ ರೂ.ಅನುದಾನದಲ್ಲಿ ರಸ್ತೆ ಸುಧಾರಣೆ ಕಾಮಗಾರಿಗೆ ಶಾಸಕ ಡಿ.ಎಂ.ಐಹೊಳೆ ಚಾಲನೆ ನೀಡಿದರು.

ಜಿಲ್ಲಾ ಮಟ್ಟದ ಕಾರ್ಯಕಾರಿಣಿ ಸಭೆ | ಪಾಟೀಲಗೆ ಸನ್ಮಾನ

ಗ್ರಾಮ ಆಡಳಿತ ಅಧಿಕಾರಿಗಳ ಕಾರ್ಯ ಶ್ಲಾಘನೀಯ: ಜಾನಕಿ

◆**ಸಂಕೇಶ್ವರ:** ಜನರ ಹಾಗೂ ಆಡಳಿತದ ನಡುವೆ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಆಡಳಿತ ಅಧಿಕಾರಿಗಳು ಸಾರ್ವಜನಿಕ ಸೇವೆಯಲ್ಲಿ ಪ್ರಮುಖ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ ಎಂದು ಬೆಳಗಾವಿ ಪ್ರಾದೇಶಿಕ ಆಯುಕ್ತ ಜಾನಕಿ ಕೆ. ಎಂ. ಹೇಳಿದರು.

ಪಟ್ಟಣದಲ್ಲಿ ಕರ್ನಾಟಕ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಕೇಂದ್ರ ಸಂಘದ ಬೆಳಗಾವಿ ಜಿಲ್ಲಾ ಘಟಕ ಹಾಗೂ ಹುಕ್ಕೇರಿ ತಾಲೂಕು ಘಟಕದ ಸಂಯುಕ್ತ ಆಶ್ರಯದಲ್ಲಿ ನಡೆದ ಜಿಲ್ಲಾಮಟ್ಟದ ಕಾರ್ಯಕಾರಿಣಿ ಸಭೆ ಉದ್ಘಾಟಿಸಿ ಮಾತನಾಡಿ, ಗ್ರಾಮ ಆಡಳಿತ ಅಧಿಕಾರಿಗಳ ಸಮಸ್ಯೆಗಳನ್ನು ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಪರಿಹಾರ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು, ಅವರ ನ್ಯಾಯಸಮ್ಮತ ಬೇಡಿಕೆಗಳ ಕುರಿತು ಸರ್ಕಾರದ ಗಮನ ಸೆಳೆದು ಸೂಕ್ತ ಕ್ರಮ ಕೈಗೊಳ್ಳಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

ಬೆಳಗಾವಿ ಉಪವಿಭಾಗಾಧಿಕಾರಿ ಶ್ರವಣ ನಾಯ್ಕ ಮಾತನಾಡಿ, ಸರ್ಕಾರಿ ನೌಕರರು ತಮ್ಮ ಹಕ್ಕು ಗಳು ಹಾಗೂ ಸೇವಾ ಸೌಲಭ್ಯಗಳಿಗಾಗಿ ಸಂಘಟಿತ ಹೋರಾಟ ನಡೆಸುವುದು ಅಗತ್ಯವಾಗಿದ್ದು, ಸಂಘಟನೆಯ ಬಲದಿಂದಲೇ ನೌಕರರ ಬೇಡಿಕೆಗಳಿಗೆ ಸಮರ್ಪಕ ನ್ಯಾಯ ದೊರೆಯಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.



ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಘದ ಜಿಲ್ಲಾ ಅಧ್ಯಕ್ಷ ಎಸ್.ಆರ್.ಪಾಟೀಲ ಮಾತನಾಡಿ, ಗ್ರಾಮ ಆಡಳಿತ ಅಧಿಕಾರಿಗಳಿಗೆ ಸಕಾಲಿಕ ಪದೋನ್ನತಿ, ಹೆಚ್ಚುವರಿ ಭತ್ಯೆ, ಚುನಾವಣೆ ಸಂದರ್ಭಗಳಲ್ಲಿ ವಿಶೇಷ ವೇತನ, ಮೂಲಸೌಕರ್ಯಯುಕ್ತ ಕಚೇರಿ ವ್ಯವಸ್ಥೆ ಹಾಗೂ ಭೂಮಿ ಕೇಂದ್ರಗಳಿಗೆ ಅಗತ್ಯ ಸಿಬ್ಬಂದಿ ನೇಮಕ ಸೇರಿದಂತೆ ವಿವಿಧ ಬೇಡಿಕೆಗಳನ್ನು ಸರ್ಕಾರ ಶೀಘ್ರ ಈಡೇರಿಸಬೇಕು ಎಂದು ಒತ್ತಾಯಿಸಿದರು.

ಹುಕ್ಕೇರಿ ವಿರಕ್ತಮಠದ ಶಿವಬಸವ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿ,ಆಶೀರ್ವಚನ ನೀಡಿದರು.

ಸಂಘದ ಜಿಲ್ಲಾ ಅಧ್ಯಕ್ಷ ಎಸ್. ಆರ್. ಪಾಟೀಲ ಅವರಿಗೆ ಬೆಳಗಾವಿ ಜಿಲ್ಲಾ ಘಟಕ ಹಾಗೂ ಹುಕ್ಕೇರಿ ತಾಲೂಕಿನ ವತಿಯಿಂದ ವಿಶೇಷವಾಗಿ ಸನ್ಮಾನಿಸಲಾಯಿತು.

ಈ ವೇಳೆ ಸಂಘದ ವತಿಯಿಂದ ವಿವಿಧ ಬೇಡಿಕೆಗಳಿಗೆ ಸಂಬಂಧಿಸಿದ ಮನವಿಪತ್ರವನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲಾಯಿತು. ಇದೇ ವೇಳೆ ಸಂಘದ ಆಶ್ರಯದಲ್ಲಿ ನಡೆದ ರಾಜ್ಯಮಟ್ಟದ ಕ್ರೀಡಾಕೂಟ-2026ರಲ್ಲಿ ವಿಜೇತರಾದ ಕ್ರೀಡಾಪಟುಗಳನ್ನು ಸನ್ಮಾನಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ತಹಶೀಲ್ದಾರ್ ಬಲರಾಮ ಕಟ್ಟಿಮನಿ, ಸಂಘದ ಗೌರವಾಧ್ಯಕ್ಷ ಕರಣ ತೊರಗಲ್ಲ, ಉಪಾಧ್ಯಕ್ಷ ಸಂತೋಷ ಪಾತ್ರಾಪೂರಿ, ಪ್ರಧಾನ ಕಾರ್ಯದರ್ಶಿ ಮಹೇಶ ಚೆಂಗಿನಕಾಯಿ, ಖಜಾಂಚಿ ಮಲ್ಲಿಕಾರ್ಜುನ ಕರಡಿಗುದ್ದ, ತಾಲೂಕು ಅಧ್ಯಕ್ಷ ಉಮೇಶ ನಾಗರಾಳ ಸೇರಿದಂತೆ ಕಂದಾಯ ಇಲಾಖೆಯ ಅಧಿಕಾರಿಗಳು ಹಾಗೂ ಸದಸ್ಯರು ಹಾಜರಿದ್ದರು. ಗ್ರಾಮ ಆಡಳಿತಾಧಿಕಾರಿ ಫಕೀರೇಶ ಎಸ್. ಸ್ವಾಗತಿಸಿದರು. ವಿಠ್ಠಲ ಬಬಲಾದಿ ನಿರೂಪಿಸಿದರು. ಮುತ್ತಾ ಕಾಂಬೋಜ ವಂದಿಸಿದರು.

ಪದಾಧಿಕಾರಿಗಳ ಪದಗ್ರಹಣ ಸಮಾರಂಭ

◆**ಚಿಕ್ಕೋಡಿ:** ಡಿಡಿಪಿಐ ಕಚೇರಿಯತ್ತ ಸುಳಿಯದ ಸಾಕಷ್ಟು ಶಿಕ್ಷಕರಿದ್ದಾರೆ. ಅಂತವರನ್ನು ಶಿಕ್ಷಕರ ಸಂಘಟನೆ ಸನ್ಮಾನಿಸಿ ಗೌರವಿಸಬೇಕು. ಈ ಮೂಲಕ ಸರ್ಕಾರಿ ಶಾಲೆಗಳನ್ನು ಬಲಪಡಿಸುವ ಕೆಲಸವಾಗಬೇಕು ಎಂದು ಚಿಕ್ಕೋಡಿ ಡಿಡಿಪಿಐ ಆರ್.ಎಸ್.ಸೀತಾರಾಮು ಹೇಳಿದರು.

ಪಟ್ಟಣದ ಇಂದಿರಾನಗರ ಬಡಾವಣೆ ಅಂಬೇಡ್ಕರ್ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚಿಕ್ಕೋಡಿ ಶೈಕ್ಷಣಿಕ ಜಿಲ್ಲಾ ಹಾಗೂ ತಾಲೂಕು ಸಂಘಟನೆಯ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಕರ ಒಗ್ಗಟ್ಟು ಸಂಘಟನೆಗೆ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಮಾದರಿಯಾಗಿದೆ. ಅಧಿಕಾರ ಇದ್ದಾಗ ಸರ್ವರ್ಕವಾಗಿ ಕಾರ್ಯ ನಿರ್ವಹಿಸಬೇಕು. ಸಮಸ್ಯೆ ಉತ್ತಮವಾದ ಕೊಡುಗೆ ನೀಡಬೇಕೆಂದುವುದು ಅವಶ್ಯಕವಾಗಿದೆ'' ಎಂದರು.

ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಜಿ.ಎಂ.ಹಿರೇಮಠ ಮಾತನಾಡಿ, ಅಧಿಕಾರ ಶಾಶ್ವತವಲ್ಲ, ಶಿಕ್ಷಕರ ಸಮಸ್ಯೆಗಳ ನಿವಾರಣೆಗೆ ಸಂಘಟನೆ ಪ್ರಯತ್ನಿಸಬೇಕು. ಶಿಕ್ಷಕರ ಸಂಘಟನೆ ಬಹಳಷ್ಟು ಗಟ್ಟಿ ಸಂಘಟನೆಯಾಗಿದೆ ಎಂದು ಹೇಳಿದರು.

ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ ಹಾಗೂ ವಿವಿಧ ತಾಲ್ಲೂಕು ಸಂಘಟನೆಗಳ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಚಿಕ್ಕೋಡಿ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಸಿದ್ರಾಮ ಲೋಕನ್ನವರ, ಜಿಲ್ಲಾ ಸಂಘಟನೆಯ ಕಾರ್ಯದರ್ಶಿ ಎನ್.ಜಿ.ಪಾಟೀಲ, ಜಿ.ಆರ್.ಸನದಿ, ಚಂದ್ರಶೇಖರ ಪೂಜಾರಿ, ತಾಲೂಕು ಸಂಘಟನೆ ಅಧ್ಯಕ್ಷ ಪ್ರಭಾಕರ ಮಜಲಟ್ಟಿ, ವ್ಹಿ.ಎಸ್.ಬುಡ್ಡಗೋಳ, ವಿ.ಎಂ.ನಾಯಕ, ಮಾಲತೇಶ ಸಣ್ಣಕ್ಕಿ, ಆರ್.ಕೆ.ಕಾಂಬಳೆ, ಸುನೀತಾ ಎಸ್., ಎಸ್.ಎಸ್.ಕಾಂಬಳೆ, ಎ.ಎಂ.ನದಾಫ್, ಎಸ್.ಎ.ಖಿದ್ದ, ಮಹಾವೀರ ಕಾಂಬಳೆ, ರಾಜು ಮಾನೆ, ಶೈಲಶ್ರೀ ಜೋಶಿ, ವಿಶ್ವನಾಥ ಧುಮಾಳ ಇತರರು ಇದ್ದರು.



ತ್ಯಾಗ, ಪರಿಶ್ರಮದ ಬಕ್ರೀದ್ ಆಚರಣೆ

◆**ಹಾವೇರಿ:** ಕಾಲಕಾಲಕ್ಕೆ ಉತ್ತಮ ಮಳೆಯಾಗಿ, ರೈತರು ಸಮೃದ್ಧರಾಗಬೇಕು ಹಾಗೂ ಬಡವರು ಎದುರಿಸುತ್ತಿರುವ ಸಂಕಷ್ಟಗಳನ್ನು ನಿವಾರಿಸಲೆಂದು ಮುಸಲ್ಮಾನ ಬಾಂಧವರು ಗುರುವಾರ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ತ್ಯಾಗ, ಬಲಿದಾನದ ಸಂಕೇತವಾಗಿರುವ ಬಕ್ರೀದ್ ಹಬ್ಬವನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಿದರು.

ನಗರದ ಅಂಜುಮನ್ ಎ ಇಸ್ಲಾಂ ಕಮೀಟಿಯ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಹಾವೇರಿಯ ನಾಗೇಂದ್ರನಮಟ್ಟಿ, ಮೆಹಬೂಬ್ ಸುಬಾನಿ ದರ್ಗಾ, ಶಿವಾಜಿನಗರ, ವಿದ್ಯಾನಗರ, ಲಕಮಾಪೂರ, ಸುಭಾಷ್ ಸರ್ಕಲ್, ಶಿವಯೋಗೀಶ್ವರ ನಗರ, ಹೊಸನಗರ, ತಾಜ್ ನಗರ, ಮಹಾನಗಲ್ಲಿ, ಸೂಲಮಟ್ಟಿ ಸೇರಿದಂತೆ ವಿವಿಧೆಡೆಯಿಂದ ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಬಾಂಧವರು ಹೊಸಬಟ್ಟೆ ತೊಟ್ಟು ಸುಗಂಧ ದ್ರವ್ಯಗಳನ್ನು ಲೇಪಿಸಿಕೊಂಡು ಆಗಮಿಸಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಜೊತೆಗೆ ಬಂಧು-ಬಾಂಧವರನ್ನು ಪರಸ್ಪರ ಭೇಟಿಯಾಗಿ ಆಲಿಂಗನ ಮಾಡಿಕೊಳ್ಳುವ ಮೂಲಕ ಹಬ್ಬದ ಶುಭಾಶಯವನ್ನು ವಿನಿಮಯ ಮಾಡಿಕೊಂಡರು.

ಸಮಾಜದ ಧರ್ಮಗುರುಗಳಾದ ಹಜರತ್ ಮೌಲಾನಿ ಮುಲ್ಲಾ, ದಾದಾಪೀರ ಮುಲ್ಲಾ ಹಾಗೂ ಮಣ್ಣುಮಸುತಿ ಮೌಲಾನಾ ಅವರು ಪ್ರಾರ್ಥನೆ ಸಲ್ಲಿಸಿ ಮಾತನಾಡಿ, ಬಕ್ರೀದ್ ಹಬ್ಬ ತ್ಯಾಗ ಬಲಿದಾನದ ಸಂಕೇತವಾಗಿದ್ದು ವಿಶ್ವದಾದ್ಯಂತ ಭಕ್ತಿಯಿಂದ ಆಚರಿಸಲಾಗುತ್ತದೆ. ಇಂತಹ ಹಬ್ಬಗಳಲ್ಲಿ ಜಾತಿ-ಧರ್ಮ ಬಿಟ್ಟು ಎಲ್ಲ ವರ್ಗದ ಜನರು ಒಗ್ಗೂಡಿಕೊಂಡು ಸೌಹಾರ್ದಯುತವಾಗಿ ಆಚರಣೆ ಮಾಡಿದಾಗ ಒಂದೊಳ್ಳೆ ಅರ್ಥಬರುತ್ತದೆ ಎಂದರು.

ಈ ಸಂದರ್ಭದಲ್ಲಿ ಅಂಜುಮನ್ ಎ ಇಸ್ಲಾಂ ಕಮೀಟಿಯ ಅಧ್ಯಕ್ಷ ಇರ್ಫಾನಖಾನ್ ಪಠಾಣ್, ಉಪಾಧ್ಯಕ್ಷ ಇಮಾಮ್‌ಹುಸೇನ್ ಬಾಲೇಬಾಯಿ, ಕಾರ್ಯದರ್ಶಿ ಮುಜಾಹರ್ ಕೊಟ್ಟಿಗೇರಿ, ಖಜಾಂಚಿ ಚಮನ್‌ಶರೀಫ್ ಮುಲ್ಲಾ, ಹುಡಾ ನಾಮನಿರ್ದೇಶಿತ ಸದಸ್ಯ ಜಮೀರ್‌ಅಹ್ಮದ ಜಿಗರಿ, ಅನ್ವರ ಕಡೇಮನಿ, ಇಸ್ಮಾಯಿಲ್‌ಸಾಬ್ ಲಕ್ಕೇರ ಸೇರಿದಂತೆ ನಗರದ ಎಲ್ಲಾ ಮಸೀದಿಗಳ ಮೌಲಾನಾಗಳು, ಸಮಾಜದ ಮುಖಂಡರು ಸೇರಿದಂತೆ ಸಾವಿರಾರು ಮುಸ್ಲಿಂ ಬಾಂಧವರು ಪಾಲ್ಗೊಂಡಿದ್ದರು.



ಶಿವಶರಣ ಹಡಪದ ಅಪ್ಪಣ್ಣನವರ ಜಯಂತಿ ನಾಳೆ

◆**ಸವದತ್ತಿ:** ಸ್ಥಳೀಯ ಮಾಮನಿ ಕಲ್ಯಾಣ ಮಂಟಪದಲ್ಲಿ ಮೇ 30ರಂದು 12ನೇ ಸವದತ್ತಿ ತಾಲೂಕ ಶಿವಶರಣ ಹಡಪದ ಅಪ್ಪಣ್ಣ ಸೇವಾ ಸಂಘ ಉದ್ಘಾಟನೆ ಹಾಗೂ ಶಿವಶರಣ ಹಡಪದ ಅಪ್ಪಣ್ಣನವರ 891ನೇ ಜಯಂತೋತ್ಸವ ನಡೆಯಲಿದೆ.

ಬೆಳಗ್ಗೆ 9ಕ್ಕೆ ಕುಂಭಮೇಳ ನಡೆಯಲಿದೆ. ತಂಗಡಗಿ ಜಗದ್ಗುರು ಅನ್ನದಾನಿ ಭಾರತಿ ಅಪ್ಪಣ್ಣ ಶ್ರೀಗಳು ಸಾನ್ನಿಧ್ಯ ವಹಿಸಲಿದ್ದಾರೆ. ಹುಲಿ ಸಾಂಬಯ್ಯ ಮಠದ ಉಮೇಶ್ವರ ಶಿವಾಚಾರ್ಯ ಶ್ರೀಗಳು ಪಾವನ ಸಾನ್ನಿಧ್ಯ ವಹಿಸಲಿದ್ದಾರೆ. ಚಿಕ್ಕುಂಬಿ ಆಚಾರ ನಾಗಲಿಂಗೇಶ್ವರ ಮಠದ ನಾಗಲಿಂಗ ಶ್ರೀಗಳು, ಉಗರಗೋಳ ನಿರ್ವಾಣೇಶ್ವರ ಮಠದ ಗುರು ಮಹಾಂತ ಶ್ರೀಗಳು ಸಮ್ಮುಖ ವಹಿಸಲಿದ್ದಾರೆ. ಶಾಸಕ ವಿಶ್ವಾಸ ವೈದ್ಯ ಭವ್ಯ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಸದಸ್ಯ ಜಗದೀಶ ಶೆಟ್ಟರ, ಸಚಿವ ಬಸನಗೌಡ ಪಾಟೀಲ ಯತ್ನಾಳ್, ಗಣ್ಯ ರತ್ನಕ್ಕ ಆನಂದ ಮಾಮನಿ ಉದ್ಘಾಟಿಸಲಿದ್ದಾರೆ. ಗಣ್ಯ ವಿರೂಪಾಕ್ಷಪ್ಪ ಕೆ.ಮಾಮನಿ, ಪಂಚನಗೌಡ , ದ್ಯಾಮನಗೌಡರ, ಶಿವಶರಣ ಅಪ್ಪಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವರು. ಸಮಾಜದ ತಾ.ಅಧ್ಯಕ್ಷ ಅಶೋಕ ಗಂಗಪ್ಪ ಕೊಪ್ಪದ ಅಧ್ಯಕ್ಷತೆ ವಹಿಸುವರು.



ರಾಜ್ಯಾಧ್ಯಕ್ಷ ದೇವೃಕ್ಷಪ್ಪಾ ಹಡಪದ, ಉಪಾಧ್ಯಕ್ಷ ಸುರೇಶ ಹಡಪದ, ಸಂತೋಷ ಹಡಪದ, ಶಿವಾನಂದ ಹುನ್ನೂರ, ಸದಸ್ಯ ಶಶೀಲ ಕುಮಾರ ಭಂಡಾರಿ, ಮಾಜಿ ಶಾಸಕ ವೀರಪ್ಪ ಹಾಲ ಹರವಿ, ಡಾ.ಎಚ್.ಡಿ.ವೈದ್ಯ, ಸದಾಶಿವ ಎಸ್. ಕೌಜಲಗಿ, ರಾಹುಲ್ ಸಂಗ್ರೇಸಿ, ಕೆ.ಎಚ್.ಮುನವಳ್ಳಿ, ಮಲ್ಲಪ್ಪಾ ಪ್ರಭುನವರ, ರಾಜಶೇಖರ ಕಾರದಗಿ, ಕೆ.ಕೆ ಪುಣೇದ, ಈಶ್ವರ ಮೇಲಗೇರಿ, ಮಲ್ಲಿಕಾರ್ಜುನ ಪುರದಗುಡಿ, ಸಮಾಜದ ಮುಖಂಡರು, ಸರ್ಕಾರಿ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಶಿವಶರಣ ಹಡಪದ ಅಪ್ಪಣ್ಣ ಸೇವಾ ಸಂಘದ ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೋಲ್ಟೇಜ್ ಸಮಸ್ಯೆ ನಿವಾರಣೆಗೆ ಶ್ರಮ

◆**ಸಿದ್ದಾಪುರ:** ಪ್ರತಿಯೊಬ್ಬರಿಗೂ ಗುಣಮಟ್ಟದ ವಿದ್ಯುತ್ ಒದಗಿಸುವುದು ನಮ್ಮ ಸರ್ಕಾರದ ಮುಖ್ಯ ಚಿಂತನೆಯಾಗಿದೆ. ಗ್ರಾಮೀಣ ಭಾಗದ ವೋಲ್ಟೇಜ್ ಸಮಸ್ಯೆ ನಿವಾರಿಸಲು ಇಲಾಖೆ ಶ್ರಮಿಸುತ್ತಿದೆ ಎಂದು ಶಿರಸಿ-ಸಿದ್ದಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಭೀಮಣ್ಣ ಟಿ. ನಾಯ್ಕ ಹೇಳಿದರು.

ತಾಲೂಕಿನ ಕಾನಸೂರು ಗ್ರಾಮದ ಆವಕ್ಕಳ ಕ್ರಾಸ್ ಬಳಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ರೂ 25.40 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ (2/20 ಎಂವಿಎ, 110/11 ಕೆವಿ) ವಿದ್ಯುತ್ ಉಪಕೇಂದ್ರದ ಶಂಕುಸ್ಥಾಪನೆಯನ್ನು ಸೋಮವಾರ ನೆರವೇರಿಸಿ ಅವರು ಮಾತನಾಡಿದರು.

ಹಿಂದೆ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರೈತರಿಗೆ 10 ಎಚ್‌ಪಿ ಪಂಪಸೆಟ್‌ಗೆ ಉಚಿತ ವಿದ್ಯುತ್ ನೀಡಿ ಕ್ರಾಂತಿ ಮಾಡಲಾಗಿತ್ತು. ರೈತರಿಗೆ ನೀರು ಮತ್ತು ವಿದ್ಯುತ್ ಸಿಕ್ಕರೆ ಹಸಿರು ಕ್ರಾಂತಿ ಮಾಡಲು ಸಾಧ್ಯ. ರಾಜ್ಯದ ಬೇರೆಡೆ ರೈತರಿಗೆ 7-8 ಗಂಟೆ ವಿದ್ಯುತ್ ಸಿಕ್ಕರೆ, ನಮ್ಮ ಜಿಲ್ಲೆಗೆ ಅಂತರಾಗಿಸು 24 ಗಂಟೆಯೂ ನಿರಂತರ ವಿದ್ಯುತ್ ನೀಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಇಡೀ ರಾಜ್ಯದ ರೈತರಿಗೂ ದಿನದ 24 ಗಂಟೆಯೂ ವಿದ್ಯುತ್ ನೀಡುವ ನಿಟ್ಟಿನಲ್ಲಿ ಸರ್ಕಾರ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುತ್ತಿದೆ ಎಂದರು.



ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಜಿ.ನಾಗರಾಜ ಬಗರ್ ಹುಕುಂ ಸಮಿತಿ ಸದಸ್ಯ ಎಸ್.ಕೆ. ಭಾಗವತ್ ಮಾತನಾಡಿದರು.ಪ್ರಮುಖರಾದ ಸುಮಾ ಉಗ್ರಾಣಕರ್, ಶಿರಸಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಜಗದೀಶ ಗೌಡರ್, ತಾಪಂ ಕಾರ್ಯನಿರ್ವಹಣಾಧಿಕಾರಿ ದೇವರಾಜ ಹಿತ್ತಲಕೊಪ್ಪ, ವಿದ್ಯುತ್ ನಿಗಮದ ಶಿಲ್ಪಾ ಎಂ., ಕೆ.ವಿ.ನಾಗ್, ಸುನೀಲಕುಮಾರ, ವಿನಯ ರಾಟೋಡ ಉಪಸ್ಥಿತರಿದ್ದರು. ಕೌಶಲ್ಯಾ ಪ್ರಾರ್ಥಿಸಿದರೆ ನಾಗರಾಜ ಪಾಟೀಲ ಸ್ವಾಗತಿಸಿದರು. ಕುಮಾರ ನಾಯ್ಕ ನಿರ್ವಹಿಸಿದರು.

ಮಳೆಯಿಂದ 1,375.77 ಹೆಕ್ಟೇರ್ ಬೆಳೆ ಹಾನಿ

◆**ಹಾವೇರಿ:** 2026-27ನೇ ಸಾಲಿನ ಪ್ರಸ್ತುತ ಪೂರ್ವ ಮುಂಗಾರಿನಲ್ಲಿ ಮಳೆ ಗಾಳಿಯಿಂದ ಜಿಲ್ಲೆಯಲ್ಲಿ 1,181 ಹೆಕ್ಟೇರ್ ಕೃಷಿ ಬೆಳೆ ಹಾಗೂ 194.77 ಹೆಕ್ಟೇರ್ ತೋಟಗಾರಿಕೆ ಬೆಳೆ ಸೇರಿದಂತೆ ಒಟ್ಟು 1,375.77 ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

ಪ್ರಸ್ತುತ ಪೂರ್ವ ಮುಂಗಾರಿನ ಮೇ.1ರಿಂದ ಇಲ್ಲಿಯವರೆಗೆ ಕೃಷಿ ಹಾಗೂ ತೋಟಗಾರಿಕೆ ಬೆಳೆ ಹಾನಿ ಸೇರಿದಂತೆ ಜಿಲ್ಲೆಯ ಹಾನಗಲ್ ತಾಲೂಕಿನಲ್ಲಿ 9.34 ಹೆಕ್ಟೇರ್, ಹಾವೇರಿ 2ಹೆ., ರಾಣೇಬೆನ್ನೂರು 1,056ಹೆ., ಬ್ಯಾಡಗಿ 6.65 ಹೆ., ಹಿರೇಕೆರೂರ 9.3ಹೆ., ರಟ್ಟಿಹಳ್ಳಿ 277.47ಹೆ., ಶಿಗ್ಗಾವಿ 1.21ಹೆ., ಸವಣೂರ 13.6ಹೆ. ಸೇರಿದಂತೆ ಒಟ್ಟು 1,375.77 ಹೆಕ್ಟೇರ್ ಹಾನಿ ಸಂಭವಿಸಿದೆ.

ಪ್ರಮುಖವಾಗಿ ಭತ್ತ 1,181ಹೆ., ಬಾಳೆ 55.25ಹೆ., ವೀಳ್ಯದೆಲೆ36.20ಹೆ., ಅಡಕೆ 30.82ಹೆ., ಪಪ್ಪಾಯ 6.3ಹೆ., ಟೊಮೆಟೋ 6.10ಹೆ., ಎಲೆಕೋಸು 6ಹೆ., ತೆಂಗು 4.5ಹೆ., ಮೆಣಸಿನಕಾಯಿ 3.2ಹೆ., ಬೀನ್ಸ್ 1.2ಹೆ., ಹಾಗಲಕಾಯಿ, ಹೀರೇಕಾಯಿ ತಲಾ 0.6ಹೆ. ಹಾಗೂ ಇತರೆ 5.0ಹೆಕ್ಟೇರ್ ಬೆಳೆ ಹಾನಿ ಸಂಭವಿಸಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.


ಮೂಲಸೌಕರ್ಯ ಹಾನಿ: ಪ್ರಸ್ತುತ ಪೂರ್ವ ಮುಂಗಾರಿನಲ್ಲಿ ಮಳೆ ಗಾಳಿಯಿಂದ ಜಿಲ್ಲೆಯಲ್ಲಿ ಸರ್ಕಾರಿ ಶಾಲೆ, ಅಂಗನವಾಡಿ ಕಟ್ಟಡಗಳು, 1,652 ವಿದ್ಯುತ್ ಕಂಬಗಳು, 4 ವಿದ್ಯುತ್ ಟ್ರಾನ್ಸ್‌ಫಾರ್ಮರ್, 0.85 ಕಿಮೀ ವಿದ್ಯುತ್ ತಂತಿ, ವಿದ್ಯುತ್ ಹೈಟೆನ್ಷನ್ ಟವರ್ 8 ಹೀಗೆ 1,177 ಲಕ್ಷ ರೂ.ಗಳಷ್ಟು ಹಾನಿ ಸಂಭವಿಸಿದೆ. ಪ್ರಸಕ್ತ ಪೂರ್ವ ಮುಂಗಾರಿನ ಮಳೆಯಿಂದಾಗಿ ಜಿಲ್ಲೆಯಲ್ಲಿ ಈವರೆಗೆ 167 ಮನೆಗಳು ಹಾನಿಯಾದ ಬಗ್ಗೆ ವರದಿಯಾಗಿದ್ದು, ಈ ಪೈಕಿ 39 ಮನೆಗಳು ಮಾತ್ರ ಅಂಗೀಕೃತವಾಗಿವೆ. 97 ಮನೆಗಳು ತಿರಸ್ಕೃತವಾಗಿದ್ದು, 31 ಮನೆಗಳು ಪರಿಶೀಲನೆ ಹಂತದಲ್ಲಿವೆ ಎಂದು ಮಾಹಿತಿ ತಿಳಿಸಿದೆ.

ವಾಡಿಕೆಗಿಂತ ಹೆಚ್ಚಿನ ಮಳೆ

ಮೇ 21 ರಿಂದ ಮೇ.27ರ ವರೆಗಿನ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯ ಬ್ಯಾಡಗಿ ತಾಲೂಕಿನಲ್ಲಿ 20.30 ಮಿಮೀ ವಾಡಿಕೆ ಮಳೆಗೆ, 31.76 ಮಿ.ಮೀ ಮಳೆಯಾಗಿದೆ. ಹಾನಗಲ್‌ನಲ್ಲಿ (18ಮಿ.ಮೀ ವಾಡಿಕೆ ಮಳೆ) 27.76 ಮಿ.ಮೀ, ಹಾವೇರಿ (24.30 ಮಿ.ಮೀ) 27.95 ಮಿ.ಮೀ ಮಳೆ ಸುರಿದಿದೆ. ಹಿರೇಕೆರೂರು (17.10 ಮಿ.ಮೀ) 13.82 ಮಿ.ಮೀ, ರಾಣೇಬೆನ್ನೂರ (20 ಮಿ.ಮೀ) ಮಳೆಗೆ, 48.70 ಮಿ.ಮೀ, ಸವಣೂರನಲ್ಲಿ (20.10 ಮಿ.ಮೀ) 9.29 ಮಿ.ಮೀ ಶಿಗ್ಗಾವಿ (15.90 ಮಿ.ಮೀ) 15.70 ಮಿ.ಮೀ ಹಾಗೂ ರಟ್ಟೀಹಳ್ಳಿ (31.50 ಮಿಮೀ) 25.25 ಮಿ.ಮೀ ಮಳೆಯಾಗಿದೆ. ಕಳೆದ ಏಳು ದಿನಗಳಲ್ಲಿ 19.80 ಮಿ.ಮೀ ವಾಡಿಕೆ ಮಳೆಗೆ 26.80 ಮಿಮೀ ಮಳೆಯಾಗಿದೆ

ಜಿಎಸ್‌ಪಾಗೆ ಸಚಿವ ಸ್ಥಾನ ನೀಡಿ: ರಾಠೋಡ

◆**ಗಜೇಂದ್ರಗಡ:** ಅಭಿವೃದ್ಧಿ ಹರಿಕಾರ, ಮತಕ್ಷೇತ್ರದ ಅಭಿವೃದ್ಧಿಗೆ ಪಣ ತೊಟ್ಟವರು, ಎಲ್ಲ ಸಮುದಾಯದವರ ಪ್ರೀತಿಗೆ ಪಾತ್ರರಾಗಿರುವ ರೋಣ ಶಾಸಕ ಜಿ.ಎಸ್. ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಬಂಜಾರ ಸಮಾಜದ ಹಿರಿಯ ಮುಖಂಡ ತಾರಾಸಿಂಗ್ ರಾಠೋಡ ಆಗ್ರಹಿಸಿದರು.




1983ರಿಂದ ಸಕ್ರಿಯ ರಾಜಕಾರಣದಲ್ಲಿರುವ ಶಾಸಕ ಜಿ.ಎಸ್. ಪಾಟೀಲರು ಹಲವು ಬಾರಿ ಸಚಿವ ಸ್ಥಾನಕ್ಕಾಗಿ ಬೇಡಿಕೆ ಇಟ್ಟಿದ್ದರು. ಅವರು ಪ್ರಬುದ್ಧ ಮತ್ತು ಪಕ್ಷನಿಷ್ಠೆಯ ನಾಯಕರು. ನಾಲ್ಕು ಬಾರಿ ಶಾಸಕರಾಗಿದ್ದಾರೆ. ಹೀಗಾಗಿ ಸಿಎಂ ಬದಲಾವಣೆಯಾದರೆ ಜಿ.ಎಸ್. ಪಾಟೀಲರಿಗೆ ಸಚಿವ ಸ್ಥಾನ ಒಲಿದು ಬರುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಹಿಂದೆ ಸಿಎಂ ಸಿದ್ದರಾಮಯ್ಯ ಅವರು ರೋಣ ಮತಕ್ಷೇತ್ರಕ್ಕೆ ಭೇಟಿ ನೀಡಿದಾಗ ಜಿ.ಎಸ್. ಪಾಟೀಲರು ಸಚಿವ ಸ್ಥಾನಕ್ಕೆ ಅರ್ಹರು ಎಂದು ಉಲ್ಲೇಖಿಸಿದ್ದನ್ನು ಮರೆಯಬಾರದು. ಉತ್ತರ ಕರ್ನಾಟಕ ಭಾಗದಲ್ಲಿ ಲಿಂಗಾಯತ ಸಮುದಾಯದ ಪ್ರಮುಖ ನಾಯಕರಾಗಿರುವ ಇವರಿಗೆ ಸಚಿವ ಸ್ಥಾನ ನೀಡಬೇಕೆಂಬುದು ದಲಿತ ಸಂಘಟನೆ, ಸಮಿತಿ ಸೇರಿದಂತೆ ಹಲವು ಸಂಘಟನೆಗಳು ಮತ್ತು ಬೆಂಬಲಿಗರು ಸರ್ಕಾರಕ್ಕೆ ಒತ್ತಾಯಿಸುತ್ತಿದ್ದಾರೆ. ಮುಂದಿನ ಮುಖ್ಯಮಂತ್ರಿ ಎಂದು ಹೇಳಲಾಗುತ್ತಿರುವ ಡಿ.ಕೆ. ಶಿವಕುಮಾರ ಬಣದಲ್ಲಿಯೂ ಕೂಡಾ ಜಿ.ಎಸ್.ಪಾಟೀಲರು ಕಾಣಿಸಿಕೊಂಡಿದ್ದು, ಕಳೆದ ತಿಂಗಳು ಹಲವು ಶಾಸಕರೊಂದಿಗೆ ದೆಹಲಿಗೆ ತೆರಳಿ ಹೈಕಮಾಂಡ್‌ಗೆ ಸಚಿವ ಸಂಪುಟ ಪುನರ್ ರಚನೆಯಲ್ಲಿ ಸ್ಥಾನ ನೀಡಬೇಕು ಎಂದು ರೋಣ ಶಾಸಕ ಜಿ.ಎಸ್.ಪಾಟೀಲರು ಹೈಕಮಾಂಡ್‌ಗೆ ಸಚಿವ ಸ್ಥಾನದ ಆಸೆಯನ್ನು ಬಿಚ್ಚಿಟ್ಟಿದ್ದರು. ಈಗಲಾದರೂ ಪಕ್ಷದ ವರಿಷ್ಠರು ಈ ಎಲ್ಲಾ ಅಂಶಗಳನ್ನು ಗಮನಿಸಿ ರೋಣ ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು.

ಮಕ್ಕಳಿಗೆ ಪಾಲಕರು ಉತ್ತಮ ಸಂಸ್ಕಾರ ನೀಡಲಿ

◆**ಲಕ್ಷ್ಮೇಶ್ವರ:** ಇಂದಿನ ಮಕ್ಕಳಲ್ಲಿ ಧಾರ್ಮಿಕ ಶ್ರದ್ಧೆ, ಸಂಸ್ಕಾರಗಳು ಕಡಿಮೆಯಾಗುತ್ತಿದ್ದು, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ಉತ್ತಮ ನಡೆ, ನುಡಿ, ಸಂಸ್ಕಾರಗಳು, ಆಚಾರ ವಿಚಾರಗಳನ್ನು ಕಲಿಸುವ ಗುರುತರವಾದ ಜವಾಬ್ದಾರಿ ಪಾಲಕರ ಮೇಲಿದೆ ಎಂದು ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಹಳ್ಳದಕೇರಿಯ ಕರೆವಾಡಿಮಠದಲ್ಲಿ ತಾಲೂಕು ಜಂಗಮ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಗುರುವಾರ ಸಾಧಕರಿಗೆ ಸನ್ಮಾನ ಹಾಗೂ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಯಲ್ಲಿ ಶೇ.90ಕ್ಕೂ ಅಧಿಕ ಅಂಕಗಳಿಸಿದ ಜಂಗಮ ಸಮಾಜದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು. ನರಸಾಪುರ ಹಾಗೂ ಕರಡಿಪುರ ಮಠದ ವೀರಭದ್ರ ಶಿವಾಚಾರ್ಯರು ಮಾತನಾಡಿ, ಸಾಧನೆ ಮಾಡುವ ವಿಚಾರ ಮಕ್ಕಳಲ್ಲಿ ಬರಬೇಕು.



ಅದಕ್ಕೆ ಗುರಿ ಇಟ್ಟು ಶ್ರಮ ಪಡಬೇಕು. ಅದರಂತೆ ಪಾಲಕರು ಸಹಿತ ಮಕ್ಕಳಿಗೆ ವಿದ್ಯಾಭ್ಯಾಸ ಜೊತೆ ಒಳ್ಳೆಯ ಸಂಸ್ಕಾರ ಕಲಿಸಬೇಕು ಎಂದರು. ಕರೆವಾಡಿಮಠದ ಮಳೆಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಹಾಗೂ ಕರೆವಾಡಿಮಠದ ನಿಯೋಜಿತ ಉತ್ತರಾಧಿಕಾರಿಗಳು ಆಶೀರ್ವಚನ ನೀಡಿದರು. ಮಾಜಿ ಶಾಸಕ ಜಿ.ಎಸ್ ಗಡ್ಡದೇವರಮಠ ಕಾರ್ಯಕ್ರಮ ಉದ್ಘಾಟಿಸಿದರು. ಅಖಿಲ ಭಾರತೀಯ ಜಂಗಮ ಸೇವಾ ಸಮಿತಿ ಜಿಲ್ಲಾ ಉಪಾಧ್ಯಕ್ಷ ಕೆ.ಪಿ.ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ವೀರಭದ್ರಯ್ಯ ಹಿರೇಮಠ ಪ್ರಾಸ್ತಾವಿಸಿದರು. ಶಿರಹಟ್ಟಿ ತಾಲೂಕು ಪ್ರಾ.ಶಾ.ಶಿ.ಸಂ ಅಧ್ಯಕ್ಷ ಶರಣಬಸಪ್ಪ ಪಾಟೀಲ, ಲಕ್ಷ್ಮೇಶ್ವರ ತಾಲೂಕು ಪ್ರಾ.ಶಾ.ಶಿ.ಸಂ ನಿರ್ದೇಶಕ ಸುನಂದಾ ಹಿರೇಮಠ ಅವರನ್ನು ಸನ್ಮಾನಿಸಲಾಯಿತು. ಶಂಕ್ರಯ್ಯ ಪೂಜಾರ ಹಾಗೂ ಮುರುಗೇಂದ್ರಯ್ಯ ಹಿರೇಮಠವೇಧೋಷ ಮಾಡಿದರು. ಮಹೇಶ ಲಿಂಬಯ್ಯಸ್ವಾಮಿಮಠ, ಶಿವಯೋಗಿ ಗಡ್ಡದೇವರಮಠ, ಪಂಚಯ್ಯ ಸಾಲಿಮಠ, ರುದ್ರಮುನಿಸ್ವಾಮಿ ಘಂಟಾಮಠ, ಎಸ್.ಡಿ.ಷಡಾಕ್ಷರಿಮಠ, ನೀಲಕಂಠಯ್ಯ ಹಿರೇಮಠ, ಶಿವರಾಜ ಕರೆವಾಡಿಮಠ, ಜಿಲ್ಲಾ ಅಖಿಲ ಭಾರತೀಯ ಜಂಗಮ ಸೇವಾ ಸಮಿತಿಯ ವೀರಯ್ಯ ಹೊಸಮಠ, ಕೊಟ್ರಯ್ಯ ಗುಡ್ಡಿಮಠ, ಕುಮಾರಸ್ವಾಮಿ ಹಿರೇಮಠ, ಸಂತೋಷ ಹಿರೇಮಠ ಮುಂತಾದವರಿದ್ದರು.

ಕಿರುಸುದ್ದಿ

ಕರುನಾಡ ರತ್ನ ಪ್ರಶಸ್ತಿ ಪ್ರದಾನೆ



ಬಾದಾಮಿ: ಕರುನಾಡ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಬಳಗ ಬೆಂಗಳೂರು ವತಿಯಿಂದ ಹಾವೇರಿಯಲ್ಲಿ ನಡೆದ ಎರಡನೇ ರಾಜ್ಯಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಟ್ಟಣದ ಕೆ.ಎಂ.ಪಟ್ಟಣಶೆಟ್ಟಿ ಪ.ಪೂ.ಕಾಲೇಜಿನ ಉಪನ್ಯಾಸಕ ಆರ್.ವಾಯ್.ಸಜ್ಜಿರೊಟ್ಟಿ ಇವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಗುರುತಿಸಿ ಕರುನಾಡ ರತ್ನ ಪ್ರಶಸ್ತಿಯನ್ನು ವಿಪ ಸಭಾಪತಿ ಬಸವರಾಜ ಹೊರಟ್ಟಿ ಪ್ರದಾನ ಮಾಡಿದರು.

ಸಿದ್ದರಾಮಯ್ಯ ರಾಜ್ಯಕ್ಕೆ ಮಾದರಿ



ಜಮಖಂಡಿ: ಸಮಾಜವಾದಿಯಾಗಿ ನುಡಿದಂತೆ ನಡೆದ ಸಿದ್ದರಾಮಯ್ಯ ಅವರು ಅಧಿಕಾರಕ್ಕೆ ಅಂಟಿಕೊಳ್ಳದೆ, ಪಕ್ಷ ಸಿದ್ಧಾಂತವನ್ನು ಕಟಿಬದ್ಧವಾಗಿ ರಾಜ್ಯಕ್ಕೆ ಮಾದರಿ ವ್ಯಕ್ತಿಯಾಗಿಯಾಗಿದ್ದಾರೆ. ಎಂದು ಕಾಂಗ್ರೆಸ್ ರೈತ ಮುಖಂಡ ಬಿ.ಎಸ್.ಸಿಂಧೂರ ಪ್ರಶಂಶಿಸಿದರು. ನಗರದಲ್ಲಿ ಸುದ್ದಿಗಾರರೊಮದಿಗೆ ಮಾತನಾಡುತ್ತ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಣದೀಪ್ ಸಿಂಗ್ ಸುರ್ಜೇವಾಲಾ ಹಾಗೂ ಕೆ.ಸಿ.ವೇಣುಗೋಪಾಲ್ ಇವರ ಮಾತಿಗೆ ಗೌರವ ನೀಡಿ ಸಿದ್ದರಾಮಯ್ಯ ಅವರು ಮುಖ್ಯ ಮಂತ್ರಿ ಸ್ಥಾನವನ್ನು ತ್ಯಜಿಸುವ ನಿರ್ಧಾರ ಸ್ತುಸ್ತಾರ್ಹ್ಯವಾಗಿದೆ ಎಂದರು. ಬಿ.ಎಸ್ .ಯಡಿಯೂರಪ್ಪ ಅವರು ಅಧಿಕಾರ ಕಳೆದುಕೊಂಡಾಗ ಕಣ್ಣೀರು ಹಾಕಿ ಬಿಜೆಪಿಗೆ ಶಾಪ ಹಾಕಿದಂತೆ ಸಿದ್ದರಾಮಯ್ಯ ಅವರು ಮಾಡಿಲ್ಲ, ಬಿಜೆಪಿಯವರಿಗೆ ಅಧಿಕಾರದ ಹುಚ್ಚಿದ್ದರೆ, ಕಾಂಗ್ರೆಸ್‌ನವರಿಗೆ ಅಭಿವೃದ್ಧಿಯ ಹುಚ್ಚಿದೆ. ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಯಾಗಲಿರುವ ಡಿ.ಕೆ. ಶಿವಕುಮಾರ್ ಅವರು ಉತ್ತರ ಕರ್ನಾಟಕದ ಮಹತ್ವಾಕಾಂಕ್ಷಿ ಕೃಷ್ಣಾ ಮೇಲ್ದಂಡೆ ಯೋಜನೆ ಯನ್ನು ಯಶಸ್ವಿಯಾಗಿ ಪೂರ್ಣಗೊಳಿಸುತ್ತಾರೆ ಎನ್ನುವ ದೃಢ ವಿಶ್ವಾಸ ನಮಗಿದೆ ಎಂದು ಅವರು ಇದೇ ವೇಳೆ ಆಶಯ ವ್ಯಕ್ತಪಡಿಸಿದರು.

ಸಂಭ್ರಮದ ಜಾತ್ರೆ



ಹುನಗುಂದ: ಸಮೀಪದ ತೂರಮರಿ ಗ್ರಾಮ ದೇವತೆಗಳಾದ ದ್ಯಾಮಮ್ಮ ಹಾಗೂ ಗುಂಡಿನ ದ್ಯಾಮಮ್ಮ ಉಡಿ ತುಂಬುವ ಕಾರ್ಯಕ್ರಮ ಮಂಗಳವಾರ ಸಡಗರ ಸಂಭ್ರಮದಿಂದ ನಡೆಯಿತು.ಗ್ರಾಮದ ಗ್ರಾಮ ದೇವಿಯನ್ನು ಮಂಗಳವಾರ ಬೆಳಿಗ್ಗೆ ಹೊಳೆಸ್ನಾನಕ್ಕೆ ಕರೆದುಕೊಂಡು ಹೋಗಿ ಗ್ರಾಮದ 51 ಮಹಿಳೆಯರು ಕುಂಭ, ನೂತನ ಪಲ್ಲಕ್ಕಿ, ಛತ್ರಿ, ಹಾಗೂ ಡೊಳ್ಳುಗಳ ವಾಧ್ಯಮೇಳ ಮೆರವಣಿಗೆ ಮೂಲಕ ಗ್ರಾಮದೇವಿಯ ನೂತನ ಗ್ರಾಮದೇವತೆ (ದೇಸಾಯಿಯವರ) ಕಟ್ಟಿಗೆ ಕುಂಬಾಭಿಷೇಕದ ನಂತರ ದೇವಿಯನ್ನು ಕಟ್ಟಿಗೆ ಕುರಿಸಲಾಯಿತು. ಸಂಜೆ ದೇವಿಗೆ ಗ್ರಾಮದ ದೈವದಿಂದ ಸಾಯಂಕಾಲ ಉಡಿ ತುಂಬುವ ಕಾರ್ಯಕ್ರಮದ ಹಾಗೂ ಹೇಳಿಕೆ, ರಾತ್ರಿ ದೇವಿಯ ಜಾಗರಣೆ, ಡೊಳ್ಳಿನಪದ, ಲಾವಣಿ ಪದ ಕಾರ್ಯಕ್ರಮದ ನಡೆಯಿತು. ದೇವಸ್ಥಾನದಲ್ಲಿ ಗ್ರಾಮ ದೇವತೆಗೆ ವಿಶೇಷ ಪೂಜೆ, ನೈವಿದ್ಯೆ ಗ್ರಾಮದ ಜನರು ಅರ್ಪಿಸಿದರು.ಗ್ರಾಮ ದೇವತೆಯ ಮೆರವಣಿಯೂ ಸಕಲ ಡೋಳ್ಳು ವಾದ್ಯಗಳೊಂದಿಗೆ ಆರಂಭವಾಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ನಂತರ ಮರಳಿ ದೇವಸ್ಥಾನದ ಗರ್ಭಗುಡಿಯಲ್ಲಿ ಕೂರಿಸಲಾಯಿತು. ಗ್ರಾಮದ ಸುತ್ತಮುತ್ತಲಿನ ಗ್ರಾಮದ ಜನರು ಆಗಮಿಸಿದರು.



ಜಮಖಂಡಿ: ಸ್ಥಳೀಯ ವಕೀಲರ ಸಂಘದ 2026ರ ಚುನಾವಣೆಯಲ್ಲಿ ಬ್ರಾಹ್ಮಣ ಸಮಾಜದ ಹಿರಿಯರಾದ ನ್ಯಾ.ಎ.ಪಿ.ಕುಲಕರ್ಣಿ ಅಧ್ಯಕ್ಷರಾಗಿ ಮತ್ತು ಉಪಾಧ್ಯಕ್ಷರಾಗಿ ನ್ಯಾ.ವಿಜಯಲಕ್ಷ್ಮಿ ಭಟ್ಟ ಆಯ್ಕೆಯಾಗಿದ್ದರಿಂದ ತಾಲೂಕು ಬ್ರಾಹ್ಮಣ ಸಂಘದ ಪದಾಧಿಕಾರಿಗಳು ಗೌರವಿಸಿದರು. ತಾಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷ ಉಮೇಶ ದೇಸಾಯಿ, ರಾಜೇಂದ್ರ ಹುಲ್ಯಾಳಕರ, ಸಂಜೀವ ಟೋಣಪಿ, ಶ್ರೀನಿಕೇತನ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಭೀಮ ಮೊಕಾಶಿ, ನಿತಿನ್ ಹುಲ್ಯಾಳಕರ, ಜಮಖಂಡಿ ಅರ್ಬನ ಬ್ಯಾಂಕಿನ ವ್ಯವಸ್ಥಾಪಕ ಸಂತೋಷಹಲ್ಯಾಳ, ಶ್ರೀಕಾಂತ ಕುಲಕರ್ಣಿ, ನರಸಿಂಹ ನಾಯಕ, ರಾಘವೇಂದ್ರ ಕುಲಕರ್ಣಿ, ಶ್ರೀನಿವಾಸ ಪುರೋಹಿತ ಇದ್ದರು.

ಮಣ್ಣಿನ ತೇವಾಂಶ ಅರಿತು ಬಿತ್ತನೆ ಮಾಡಿ

ಜಮಖಂಡಿ: ರೈತರು ಬಿತ್ತನೆ ಮಾಡುವ ಮುನ್ನ ಮಣ್ಣು ಪರೀಕ್ಷೆ ಮಾಡಿಸಿ ಇಲಾಖೆಯಿಂದ ಉತ್ತಮ ಗುಣಮಟ್ಟದ ಬೀಜಗಳನ್ನು ರೈತ ಸಂಪರ್ಕ ಕೇಂದ್ರದಿಂದ ಖರೀದಿಸಿ ಬಿತ್ತನೆ ಮಾಡಬೇಕು ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ತಾಲೂಕು ಬೀಜ ವಿತರಣಾ ಕೇಂದ್ರದಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣೆಯನ್ನು ಸಾಂಕೇತಿಕವಾಗಿ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಇಲಾಖೆ ಅಥವಾ ಕೃಷಿ ವಿಜ್ಞಾನ ಕೇಂದ್ರದವರು ತಿಳಿಸುವಂತಹ ತಂತ್ರಜ್ಞಾನ ಅಳವಡಿಸಿಕೊಂಡು ಮಣ್ಣಿನ ತೇವಾಂಶ ಅರಿತು ಬಿತ್ತನೆ ಮಾಡಬೇಕು. ಇದರಿಂದ ಉತ್ತಮ ಬೆಳೆ ಹಾಗೂ ಹೆಚ್ಚಿನ ಇಳುವರಿ ಪಡೆಯಲು ಸಹಾಯವಾಗುತ್ತದೆ ಎಂದು ತಿಳಿಸಿದರು.

ತಾಲೂಕಿನ ಸಹಾಯಕ ಕೃಷಿ ನಿರ್ದೇಶಕ ಸಿದ್ದಪ್ಪ ಬಿ.ಪಟ್ಟಿಹಾಳ ಮಾತನಾಡಿ, ಜಮಖಂಡಿ ಹಾಗೂ ಸಾವಳಗಿ ಹೋಬಳಿಯಲ್ಲಿ ಬಿತ್ತನೆ ಬೀಜಗಳ ಸಮರ್ಪಕ ದಾಸ್ತಾನು ಮಾಡಲಾಗಿದೆ. ಪ್ರಸ್ತುತ ಸೋಯಾಅವರೆ, ಹೆಸರು ಹಾಗೂ ತೊಗರಿ ಬೀಜಗಳು ಲಭ್ಯ ಇವೆ. ಇನ್ನೂ ಎರಡು ದಿನಗಳಲ್ಲಿ ಗೋವಿನಜೋಳ, ಉದ್ದು ನವಣೆ ಬೀಜಗಳು ಬರಲಿವೆ ಎಂದು ತಿಳಿಸಿದರು. ಕೃಷಿಕ ಸಮಾಜದ ಅಧ್ಯಕ್ಷ ಶಿದಲಿಂಗಪ್ಪಗೌಡ ಪಾಟೀಲ, ಜಿಲ್ಲಾ ಪ್ರತಿನಿಧಿ ನಿಂಗಪ್ಪ ಕಡಪಟ್ಟಿ, ಖಜಾಂಚಿ ಅಶೋಕ ಸದಲಗಿ, ಧರೆಪ್ಪ ಆಲಗೂರ, ಸುರೇಶಗೌಡ ಪಾಟೀಲ, ಅಜಯ ಕಡಪಟ್ಟಿ, ಮಲ್ಲು ದಾನಗೌಡ, ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳಾದ ಶಂಕರರಾವ ಪವಾರ, ರಾಜಕುಮಾರ ಕುಚನೂರ ಇದ್ದರು.



ಜಮಖಂಡಿ: ತಾಲೂಕು ಬೀಜ ವಿತರಣಾ ಕೇಂದ್ರದಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣೆಯನ್ನು ಶಾಸಕ ಜಗದೀಶ ಗುಡಗುಂಟಿ ಸಾಂಕೇತಿಕವಾಗಿ ಉದ್ಘಾಟಿಸಿದರು.

ಕದಂಬ ಸೈನ್ಯದ ವತಿಯಿಂದ ತಹಶೀಲ್ದಾರ್ ಎಸ್.ಬಿ.ಬೊಮ್ಮನ್ನವರಗೆ ಮನವಿ

ಇಮ್ಮಡಿ ಪುಲಿಕೇಶಿ, ಬಸವಣ್ಣನ ಮೂರ್ತಿ ಸ್ಥಾಪಿಸಿ

ಬಾದಾಮಿ: ಕೇಂದ್ರ ಸರ್ಕಾರದ ಹೃದಯ ಯೋಜನೆ ಅಡಿಯಲ್ಲಿ ಚಾಲುಕ್ಯ ಪರಮೇಶ್ವರ ಇಮ್ಮಡಿ ಪುಲಿಕೇಶಿ ಮತ್ತು ಜಗಜ್ಯೋತಿ ಬಸವಣ್ಣನವರ ಮೂರ್ತಿ ಪ್ರತಿಷ್ಠಾಪನೆ ಮಾಡಲು ಸ್ಥಳ ಅವಕಾಶ ನೀಡಬೇಕು ಎಂದು ಆಗ್ರಹಿಸಿ ಕದಂಬ ಸೈನ್ಯದ ವತಿಯಿಂದ ತಹಶೀಲ್ದಾರ್ ಎಸ್.ಬಿ.ಬೊಮ್ಮನ್ನವರ ಅವರಿಗೆ ಮನವಿ ಸಲ್ಲಿಸಿದರು.

ಕೇಂದ್ರ ಸರ್ಕಾರವು ಪಾರಂಪರಿಕ ನಗರ ಚಾಲುಕ್ಯ ರಾಜಧಾನಿ ಬಾದಾಮಿ ನಗರದಲ್ಲಿ ಕೇಂದ್ರ ಹೃದಯ ಯೋಜನೆ ಅಡಿಯಲ್ಲಿ ರೂ.3 ಕೋಟಿ ರೂ. ವೆಚ್ಚದಲ್ಲಿ ಎರಡು ಇಮ್ಮಡಿ ಪುಲಿಕೇಶಿ ಮೂರ್ತಿ, ಜಗಜ್ಯೋತಿ ಬಸವಣ್ಣನವರ ಮೂರ್ತಿ ಸ್ಟೇಷನ್ ರಸ್ತೆ ಬಸವೇಶ್ವರ ವೃತ್ತದಲ್ಲಿ ಪ್ರತಿಷ್ಠಾಪನೆ ಮಾಡಲು ಮೂರ್ತಿಗಳು ಸಿದ್ಧವಾಗಿದ್ದು, ಕಳೆದ ಮೂರು ವರ್ಷಗಳಿಂದ ಬಾದಾಮಿ ರಾಮದುರ್ಗ ರಸ್ತೆಯಲ್ಲಿ ಅನಾಥವಾಗಿ ಬಿದ್ದಿವೆ. ಮೂರ್ತಿ ಗಳಿಗೆ ಯಾವುದೇ ರಕ್ಷಣೆ ಇಲ್ಲದೆ ತಾತ್ಕಾಲಿಕ ಶೆಡ್ ನಿರ್ಮಾಣ ಮಾಡಿ ಮೂರ್ತಿಗಳನ್ನು ರಕ್ಷಣೆ ಮಾಡದೆ, ಬಯಲಿನಲ್ಲಿ ಮಳೆ ,ಬಿಸಿಲಿಗೆ ಸಿಲುಕಿ ಮೂರ್ತಿ ಗಳು ಹಾಳಾಗುತ್ತಿವೆ, ಪಕ್ಕದಲ್ಲಿ ಮೂರ್ತಿಗಳ ಪಕ್ಕದಲ್ಲಿ ಸಿಮೆಂಟ್ ಕಲ್ಲು ತಯಾರಿಕೆ ಘಟಕ ದಿಂದ ಸಿಮೆಂಟ್ ಕಲ್ಲು ಪುಡಿ ಧೂಳಿನಿಂದ ಹಾಳಾಗುತ್ತಿದೆ.

ಬಾದಾಮಿ ಪುರಸಭೆಯವರು ಸ್ಥಳ ಅವಕಾಶ ನೀಡುತ್ತಿಲ್ಲ ಎಂದು ಸೈನ್ಯ ಆರೋಪಿಸಿದರು. ಕನ್ನಡ ನಾಡಿನ ಹೆಮ್ಮೆಯ ಚಕ್ರವರ್ತಿ ಇಮ್ಮಡಿ ಪುಲಿಕೇಶಿ ಜಗಜ್ಯೋತಿ ಬಸವಣ್ಣನವರ ಮೂರ್ತಿಗಳು ಪ್ರತಿಷ್ಠಾಪನೆ ಆಗದೆ ಇರುವುದು ಸಮಸ್ತ ಕನ್ನಡಿಗರಿಗೆ ಮಾಡಿದ ಘನಘೋರ ಅವಮಾನವಾಗಿದೆ.



ಕಳೆದ ಎರಡು ತಿಂಗಳಲ್ಲಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಮ್ಮಡಿ ಪುಲಿಕೇಶಿ ಮೂರ್ತಿ ಪ್ರತಿಷ್ಠಾಪನೆ ಮಾಡಲು ರಾಮದುರ್ಗ ವೃತ್ತದಲ್ಲಿ ಶಂಕುಸ್ಥಾಪನೆ ನೆರವೇರಿಸಿದ್ದಾರೆ. ಇದಕ್ಕೆ ಕದಂಬ ಸೈನ್ಯ ಸ್ವಾಗತವಿದೆ ಇಲ್ಲಿ ಸ್ಥಾಪನೆ ಮಾಡಲು ಇಮ್ಮಡಿ ಪುಲಿಕೇಶಿ ಮೂರ್ತಿ ಕೆತ್ತನೆ ಕೆಲಸ ಪ್ರಾರಂಭವಾಗಿದೆ ಇದು ಸಂತೋಷದ ವಿಷಯು ಆದರೆ ಕೇಂದ್ರ ಸರ್ಕಾರ ಹೃದಯ ಯೋಜನೆ ಅಡಿಯಲ್ಲಿ ಇಮ್ಮಡಿ ಪುಲಿಕೇಶಿ ಎರಡು ಮತ್ತು ಅಣ್ಣ ಬಸವಣ್ಣನವರ ಒಂದು ಮೂರ್ತಿಗಳು ಸ್ಥಳ ಅವಕಾಶ ನೀಡದೆ ಅನಾಥವಾಗಿ ಬಿದ್ದಿವೆ. ತಾಲ್ಲೂಕು ಆಡಳಿತ ಮತ್ತು ಪುರಸಭೆ ರವರ ನಿರ್ಲಕ್ಷದಿಂದ, ಸ್ಥಳ ಅವಕಾಶ ಕಲ್ಪಿಸಿ ಮೂರ್ತಿ ಗಳು ಪ್ರತಿಷ್ಠಾಪನೆ ಆಗಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕದಂಬ ಸೈನ್ಯ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್, ರಾಜ್ಯ ಕಾರ್ಯದರ್ಶಿ ವಿನಾಯಕ ಸಂಡೂರ, ಜಿಲ್ಲಾಧ್ಯಕ್ಷ ಶಿವು ನಿಂಗಪ್ಪ ಇಸರಡ್ಡಿ, ರಾಜ್ಯ ಸಮಿತಿ ಸದಸ್ಯರಾದ ಬಸವನಗೌಡ ಪಾಟೀಲ್ ಮುಧೋಳ, ರವಿ ಹೊಸೂರ್, ಅಪ್ಪಣ್ಣ ಬಶೆಟ್ಟೆಪ್ಪ ನೂರಂದಪ್ಪ ಬನಶಂಕರಿ, ವಿಜಯಪುರ ಜಿಲ್ಲೆ ಅಧ್ಯಕ್ಷ ಈರಯ್ಯ ಶಾಂತಯ್ಯ ಆನಂದ ಸಂಗಪ್ಪ ಕಾಳಗಿ ವಿಜಯಪುರ, ಬಾದಾಮಿ ತಾಲೂಕು ಮುಖಂಡರಾದ ಮಹಾಂತೇಶ್ ಈರಯ್ಯ ಕಳೀಮಠ, ಪ್ರಕಾಶ್ ಹನುಮಂತ ನಾಲ್ವಡಿ, ಮಹೇಶ್ ಯಲಿಯೂರು ಮಂಡ್ಯ ಜಿಲ್ಲೆ ಬಾಗಲಕೋಟೆ ತಾಲೂಕು ಅಧ್ಯಕ್ಷ ಕೈಲಾಶ್ ರಾ, ಹಂದ್ರಾಳ, ಮುಖಂಡರಾದ ಸಂಗಮೇಶ ಚೌದ್ರಿ, ಹಾಗೂ ಪ್ರಮುಖರು ಭಾಗವಹಿಸಿದ್ದರು.


ಮುಧೋಳ ನಗರಸಭೆಗೆ ಬೀಗ ಜಡಿದು ಪ್ರತಿಭಟನೆ

ಮುಧೋಳ: ಕಳೆದ ಮೂರು ವರ್ಷಗಳಿಂದ ಮುಧೋಳ ನಗರದ ಜನರಿಗೆ ಯಾವುದೇ ಮೂಲಭೂತ ಸೌಕರ್ಯ ಗಳನ್ನು ಕಲ್ಪಿಸದೆ, ನಗರದ ಅಭಿವೃದ್ಧಿಯನ್ನು ಸಂಪೂರ್ಣವಾಗಿ ಕುಂಠಿತಗೊಳಿಸಿರುವ ಮುಧೋಳ ನಗರಸಭೆಯ ಬೇಜವಾಬ್ದಾರಿತನದ ವಿರುದ್ಧ ಬಿಜೆಪಿ ನಗರ ಮತ್ತು ಗ್ರಾಮೀಣ ಘಟಕದ ವತಿಯಿಂದ ಬುಧವಾರ ನಗರಸಭೆಗೆ ಬೀಗ ಜಡಿದು ಬೃಹತ್ ಪ್ರತಿಭಟನೆ ನಡೆಸಲಾಯಿತು.

ಬಿಜೆಪಿ ಯುವ ಧುರೀಣ ಅರುಣ ಗೋವಿಂದಕಾರಜೋಳ ಮಾತನಾಡಿ ಕಾಂಗ್ರೆಸ್‌ನ ದುರಾಡಳಿತದ ವಿರುದ್ಧ ಬಿಜೆಪಿ ನೇತೃತ್ವದಲ್ಲಿ ಮುಧೋಳ ನಗರದ ನಗರಸಭೆ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಬೇಕಾದ ಪರಿಸ್ಥಿತಿ ಬಂದಿದೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ತಾಲೂಕಿನಲ್ಲಿ ಮರಳು, ಇಸ್ಪೇಟ್, ಗಾಂಜಾ, ವೈಶ್ಯಾವಾಟಿಕೆ ದಂಧೆ ಜೋರಾಗಿ ನಡೆಯುತ್ತಿದೆ, ಸರ್ಕಾರಿ ಕಚೇರಿ ಗಳಲ್ಲಿ ಲಂಚಾವತಾರ ಮುಗಿಲು ಮುಟ್ಟಿದೆ, ಅಕ್ರಮ ಅಕ್ಕಿ ಸಾಗಾಟ ನಿರಂತರವಾಗಿ ನಡೆದಿದೆ, ಕಳ್ಳತನ ಪ್ರಕರಣಗಳು ದಿನದಿಂದ ದಿನ ಹೆಚ್ಚುತ್ತಲಿವೆ ಇವುಗಳು ನಿಲ್ಲದಿದ್ದರೆ ಮುಂದಿನ ದಿನಮಾನ ದಲ್ಲಿ ಬಿಜೆಪಿ ಪಕ್ಷದಿಂದ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಬಿಜೆಪಿ ಗ್ರಾಮೀಣ ಅಧ್ಯಕ್ಷ ಸಂಗಣ್ಣ ಕಾತರಕಿ, ನಗರ ಅಧ್ಯಕ್ಷ ಕೆ.ಎಸ್.ಹಿರೇಮಠ, ಬಿಜೆಪಿ ಮುಖಂಡ ರಾದ ಕೆ.ಆರ್. ಮಾಚಪ್ಪನವರ, ಕಲ್ಲಪ್ಪ ಸಬರದ, ಲಕ್ಷ್ಮಣ ಚಿನ್ನಣ್ಣವರ, ಸದಾಶಿವ ತೇಲಿ, ಬಸವರಾಜ ಮಳಲಿ, ಧರೆಪ್ಪ ಸಾಂಗ್ಲಿಕರ, ಭೀಮನಗೌಡ ಪಾಟೀಲ, ಡಾ.ರವಿ ನಂದಗಾಂವ, ನಾಗಪ್ಪ ಅಂಬಿ, ಸದಾಶಿವ ಇಟಕನ್ನವರ, ಶ್ರೀಶೈಲ ಚಿನ್ನಣ್ಣವರ, ಗುರುಪಾದ ಕುಳಲಿ, ಮಂಜು ಮಾನೆ, ಕಲ್ಮೇಶ ಗೋಸಾರ, ಸಂತೋಷ ಘೋರ್ಪಡೆ, ಮುಕುಂದ ನಿಂಬಾಳ್ಕರ, ರವಿ ಮಾಚಪ್ಪನವರ, ರಾಘು ಶಿಂಧೆ, ಹೊಳಬಸು ಬಟಕುರ್ಕಿ, ಎಂ.ಎಸ್.ಹಂಚಿನಾಳ, ಮಹಮ್ಮದ ಶೇಖ, ಸುಭೇದಾ ಮಾನೆ, ಕಮಲಾ ಚೇಡರ ಮಾತನಾಡಿ ಮುಧೋಳ ನಗರದಲ್ಲಿ ಬೀದಿ ದೀಪ, ಕುಡಿಯುವ ನೀರು, ಚರಂಡಿ ಸ್ವಚ್ಛತೆ ಮುಂತಾದ ನಾಗರಿಕ ಸಮಸ್ಯೆಗಳನ್ನು ನಿವಾರಿಸುವಲ್ಲಿ ನಗರಸಭೆ ಸಂಪೂರ್ಣ ವಿಫಲವಾಗಿದೆ ಇವುಗಳನ್ನು ಶೀಘ್ರದಲ್ಲಿ ಸರಿಪಡಿಸದಿದ್ದರೆ ಮತ್ತೆ ಬಿಜೆಪಿ ಪಕ್ಷದ ವತಿಯಿಂದ ಹೋರಾಟ ನಡೆಸಲಾಗುವುದು ಎಂದರು.

ಬಿಜೆಪಿ ಹಿರಿಯರು, ಪದಾಧಿಕಾರಿಗಳು, ಅಸಂಖ್ಯಾತ ಕಾರ್ಯಕರ್ತರು ಮತ್ತು ಮುಧೋಳ ನಗರದ ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಿ ನಗರಸಭೆ ಆಡಳಿತ ಮಂಡಳಿಗೆ ಎಚ್ಚರಿಕೆ ನೀಡಿದರು.



ತ್ಯಾಗ ಬಲಿದಾನದ ಸಂಕೇತ ಬಕ್ರೀದ್



ಬೀಳಗಿ: ಪಟ್ಟಣದ ಜಾಮೀಯಾ ಈದಗಾ ಮೈದಾನದಲ್ಲಿ ಮುಸ್ಲಿಂ ಸಮಾಜ ಬಾಂಧವರು ಸಾಮೂಹಿಕವಾಗಿ ತ್ಯಾಗ ಬಲಿದಾನಗಳ ಹಬ್ಬ ಈದುಲ್ ಅಜಾ (ಬಕ್ರೀದ) ಹಬ್ಬದ ವಿಶೇಷ ಪ್ರಾರ್ಥನೆ ಸಲ್ಲಿಸಿದರು.ಪರಮದಯಾಳು ಆ ಅಲ್ಲಾಹನು ಎಲ್ಲರಿಗೂ ಒಳ್ಳೆಯ ಆರೋಗ್ಯ, ಶಾಂತಿ, ನೆಮ್ಮದಿ, ಸೌಹಾರ್ದತೆಯ ಬದುಕನ್ನು ನೀಡಲಿ ಎಂದು ಮೌಲಾನಾ ರಿಹಾನ ಅವರು ಪ್ರಾರ್ಥಿಸಿದರು.

ಜುಮ್ಮಾ ಮಸೀದಿ ಕಮೀಟಿ ಅಧ್ಯಕ್ಷ ಎಂ. ಎಂ. ಜಮಖಂಡಿ, ಮುಖಂಡರಾದ ನೂರಲಿ ತಹಶೀಲ್ದಾರ, ಶಮ್ಮು ಮುಜಾವರ, ದಾದಾಪೀರ ಮುಜಾವರ, ಚಾಂದ ಅತ್ತಾರ, ರಫೀಕ ಬೇಪಾರಿ, ಮೈಬೂಬ ಮುಜಾವರ, ಇಮಾಮಸಾಬ ಚೌಧರಿ ಮತ್ತಿತರಿದ್ದರು.ಬೀಳಗಿ ಪಟ್ಟಣದ ಜಾಮೀಯಾ ಹಳೆ ಈದ್ಗಾ ಮೈದಾನ, ಅನಗವಾಡಿ, ಗಲಗಲಿ, ಚಿಕ್ಕಾಲಗುಂಡಿ, ರೊಳ್ಳಿ ಸೇರಿದಂತೆ ವಿವಿಧ ಪ್ರಮುಖ ಗ್ರಾಮಗಳಲ್ಲಿ ಮುಸ್ಲಿಂ ಸಮಾಜ ಬಾಂಧವರು ಸಾಮೂಹಿಕವಾಗಿ ತ್ಯಾಗ ಬಲಿದಾನಗಳ ಹಬ್ಬ ಈದುಲ್ ಅಜಾ (ಬಕ್ರೀದ) ಹಬ್ಬದ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಜೂ.1ರಿಂದ ವಿನೂತನ ಹೋರಾಟಕ್ಕೆ ಮುಳುಗಡೆ ಸಂತ್ರಸ್ತರು ಸಜ್ಜು

ಹುನಗುಂದ: ತಾಲೂಕಿನ ಇದ್ದಲಗಿ ಗ್ರಾಮದ ಮುಳುಗಡೆ ಸಂತ್ರಸ್ತರ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ನಡೆಸುತ್ತಿರುವ ಅನಿದಿಷ್ಟಾವಧಿ ಧರಣಿಯು 23ನೇ ದಿನವಾದ ಗುರುವಾರ ಕೂಡಾ ಮುಂದುವರೆಯಿತು.

ಸಂತ್ರಸ್ತರ ಧರಣಿಗೆ ಸ್ಥಳೀಯ ಜನಪ್ರತಿನಿಧಿ ಹಾಗೂ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ತಲೆ ಕೆಡಿಸಿಕೊಳ್ಳದೇ ಇರೋದರಿಂದ ಸರ್ಕಾರ ಮತ್ತು ಜನಪ್ರತಿನಿಧಿಗಳಿಗೆ ಹಾಗೂ ಅಧಿಕಾರಿಗಳಿಗೆ ಬಿಸಿ ಮೂಡಿಸಲು ಮತ್ತು ಬೇಡಿಕೆ ಈಡೇರಿಕೆಗೆ ಸಂತ್ರಸ್ತರು ಜೂ.1ರಿಂದ ವಿನೂತನ ಹೋರಾಟಕ್ಕೆ ಸಜ್ಜಾಗಿದ್ದಾರೆ.

22 ದಿನಗಳಿಂದ ನಾವು ಹೋರಾಟ ಮಾಡುತ್ತಾ ಬಂದರೂ ಸಂತ್ರಸ್ತರ ಹಲವು ಬೇಡಿಕೆಗಳಲ್ಲಿ ಒಂದು ಬೇಡಿಕೆ ಕೂಡಾ ಈಡೇರಿಸಲು ಅಧಿಕಾರಿಗಳು ಮುಂದಾಗುತ್ತಿಲ್ಲ, ಇದ್ದಲಗಿ ಸೇರಿದಂತೆ ಉಳಿದ 9 ಮುಳಗಡೆ ಗ್ರಾಮಗಳ ಸಂತ್ರಸ್ತರು ಸೇರಿಸಿ ಸಂತ್ರಸ್ತರ ಬೇಡಿಕೆ ಈಡೇರಿಕೆಗಾಗಿ ಇದ್ದಲಗಿಯಿಂದ ಕೂಡಲಸಂಗಮದವರೆಗೆ ಪಾದಯಾತ್ರೆ ಮಾಡುವ ಮೂಲಕ ಸರ್ಕಾರ ಎಚ್ಚರಿಸುವ ತಿರ್ಮಾನ ತಗೆದುಕೊಂಡಿದ್ದಾರೆ.



ಬಸವರಾಜ ಬಡ್ಡಿ, ಹಸನಸಾಬ ಪಿಂಜಾರ, ಮಹಾಂತೇಶ ನಾಡಗೌಡರ,ಸಂಗಪ್ಪ ಅನೇಹೊಸೂರ, ಭೀಮಪ್ಪ ಗೋನಾಳ, ಬಸಪ್ಪ ಹಳಪೇಟಿ, ಮಲ್ಲಪ್ಪ ಅಡಿಹಾಳ, ಭೀಮಪ್ಪ ಅಡಿಹಾಳ,ಸಂಗಮೇಶ ಅನೇಹೊಸೂರ, ಕಲ್ಲಪ್ಪ ಅನೇಹೊಸೂರ, ಶರಣಪ್ಪ ಮುಳ್ಳೂರ, ಬಸವರಾಜ ಮುಳ್ಳೂರ, ಹಬೀಸಾಬ ಮುಲ್ಲಾ,ಹುಚ್ಚಪ್ಪ ಬೂದಗೂಳಿ, ಹನುಮಂತ ಹಡಪದ, ಮಹಾಂತೇಶ ವಾಲೀಕಾರ, ಇಮಾಮಸಾಬ ಹುನಗುಂದ, ಶರಣಪ್ಪ ಬೇನಾಳ, ಮಲ್ಲಮ್ಮ ಗಡ್ಡಿಮಠ, ಮುತ್ತವ್ವ ಬೇನಾಳ, ಮಹಾದೇವಿ ತೋಟಗೇರಿ, ನೀಲಮ್ಮ ಮಾಗಿ, ಭೀಮವ್ವ ಬೇನಾಳ, ಸಂಗವ್ವ ಹಾವರಗಿ ಸೇರಿದಂತೆ ಇತರರಿದ್ದರು.

ಬಕ್ರೀದ್: ಸಾಮೂಹಿಕ ಪ್ರಾರ್ಥನೆ

ಕೆರೂರ: ಪಟ್ಟಣದ ಈದ್ಗಾ ಮೈದಾನದಲ್ಲಿ ಬಕ್ರೀದ್ ಹಬ್ಬದ ಅಂಗವಾಗಿ ಗುರುವಾರ ಸ್ಥಳೀಯ ಮುಸ್ಲಿಂ ಭಾಂದವರು ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದರು. ತ್ಯಾಗ ಮತ್ತು ಬಲಿದಾನದ ಪ್ರತಿಕವಾದ ಈ ಹಬ್ಬವನ್ನು ಮುಸ್ಲಿಂ ಭಾಂದವರು ದಾನ-ಧರ್ಮ ಮಾಡುವುದರ ಮೂಲಕ ಸಂಭ್ರಮದಿಂದ ಆಚರಿಸಿದರು. ಮೈದಾನದಲ್ಲಿ ಧರ್ಮಗುರುಗಳು ಸಮಾಜಕ್ಕೆ ಸಂದೇಶ ಸಾರಿದರು. ನಂತರ ಮುಸ್ಲಿಂ ಭಾಂದವರು ಪರಸ್ಪರ ವಿನಿಮಯ ಮಾಡಿಕೊಂಡು ಹಬ್ಬದ ಶುಭಾಶಯ ಕೋರಿದರು. ಉರಿ ಬಿಸಲನ್ನು ಲೆಕ್ಕಿಸದೆ ವೃದ್ದರು, ವಯಸ್ಕರು, ಪುಟಾಣಿ ಮಕ್ಕಳು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲಗೊಂಡು ಅಲ್ಲಾಹುವಿನ ಕೃಪೆಗೆ ಪಾತ್ರರಾದರು.ಧರ್ಮ ಗುರುಗಳಾದ ಉಸ್ಮಾನಸಾಬ ಮುಲ್ಲಾ,ಇಬ್ರಾಹಿಂ ಖಾಜಿ, ವಾಸಿಮ್ ಖಾಜಿ, ನೌವ ಜವಾನ ಶೀರತ್ ಕಮೀಟಿ ಅಧ್ಯಕ್ಷ ಮೋದಿನಸಾಬ ದೊಡಕಟ್ಟಿ, ಮಕ್ಬದಲಿ ಕುಡಚಿ, ಬಿ.ಕೆ.ಬಾಳಕಾಯಿ, ಸಲಾಬದತ್ ಹದ್ಲಿ ಪಾಲ್ಗೊಂಡಿದ್ದರು.



ತ್ಯಾಗದ ಸಂಕೇತ ಬಕ್ರೀದ್

ತೇರದಾಳ: ಪಟ್ಟಣದ ಎಲ್ಲ ಮುಸ್ಲಿಂ ಬಾಂಧವರು ಬಕ್ರೀದ ಆಚರಿಸಿದರು. ನಸುಕಿನ ಜಾವ ಎಲ್ಲ ಮುಸ್ಲಿಂ ಸಮುದಾಯದ ಬಂಧುಗಳು ಮದರಸಾದಲ್ಲಿ ಸೇರಿಕೊಂಡು ಸಾಮೂಹಿಕ ನಮಾಜ ಮಾಡುವ ಮೂಲಕ ಪ್ರವಾದಿ ಇಬ್ರಾಹಿಂ ಅವರಿಗೆ ಭಕ್ತಿ ಸಲ್ಲಿಸಿದರು.ಮೌಲಾನಾ ಸಲಾವುದ್ದಿನ್ ಖಾಜಿ ಹಾಗೂ ಮೌಲಾನಾ ಮಂಜೂರ ಮಾತನಾಡಿ, ಬಕ್ರೀದ ಎಂದರೆ ಕೇವಲ ಪ್ರಾಣಿ ಬಲಿಯಲ್ಲ ಇದು ಸಾಂಕೇತಿಕ ಮಾತ್ರ.



ಆದರೆ ವಾಸ್ತವವಾಗಿ ನಾವೆಲ್ಲರೂ ನಮ್ಮಲ್ಲಿರುವ ಮೃಗತ್ವ, ಅಹಂಕಾರ, ದುರಾಸೆ, ಸ್ವಾರ್ಥ ಬಲಿಕೊಟ್ಟು ಪರಸ್ಪರರಲ್ಲ ಪ್ರೀತಿ ಹಂಚುವುದು ಪ್ರಮುಖವಾಗಿದೆ ಎಂದರು. ಪಟ್ಟಣದ ಹಿಡಕಲ್ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಸಿ ಮಾತನಾಡಿದರು.ರಮಜಾನ ಕೋರಬು, ಪಜಲ ಅತಾರಾವುತ, ಮಾಶುಮ ಇನಾಮದಾರ, ಫೈಜುಲ್ಲಾ ಇನಾಮದಾರ, ರಿಯಾಜ ನಗಾರ್ಜಿ, ರಿಯಾಜ ತಾಂಬೋಳಿ, ಮೌಲಾಹಪೀಜ ಚಿತ್ರಭಾನುಕೋಟೆ, ಇಲಿಯಾಸ ಮೋಮೀನ, ತಯಾಬ ಮೂಡಲಗಿ, ಹಬೀಬ ಅತ್ತಾರ, ಅನ್ವರ ಪಠಾಣ ಇದ್ದರು.

ನುಡಿದಂತೆ ನಡೆದ ಸಿಎಂ ಸಿದ್ದರಾಮಯ್ಯ

ಬಾಗಲಕೋಟೆ: ರಾಜಕೀಯಕ್ಷೇತ್ರ ಪಲ್ಲಟಗಳತಿರುವು. ಸಿಎಂ ಸಿದ್ದರಾಮಯ್ಯ ನಾಡಿಗೆ, ಸಾಮಾಜಿಕ ನ್ಯಾಯಕ್ಕೆ , ಸಿದ್ಧಾಂತಕ್ಕೆ ಬದ್ಧರಾಗಿ ಸೇವೆ ಸಲ್ಲಿಸಿದವರು. ಇನ್ನೆರಡು ವರ್ಷ ಅವರ ಅಧಿಕಾರ ಅವಧಿ ರಾಜ್ಯಕ್ಕೆ ಅಗತ್ಯವಾಗಿತ್ತು. ಆದರೇ ತಾವು ನುಡಿದಂತೆ ನಡೆದು ವಚನ ಭ್ರಷ್ಟರಲ್ಲ ಅಂತ ಸಾಬೀತು ಪಡಿಸಿದ್ದಾರೆ. ತನ್ಮೂಲಕ ರಾಜಕಾರಣದಲ್ಲಿ ಕೃತಿ- ಮಾತು ಒಂದಾಗಿರಬೇಕು ಎನ್ನುವ ಸಂದೇಶ ನೀಡಿದ್ದಾರೆ ಎಂದು ಕೆಪಿಸಿಸಿ ಸದಸ್ಯೆ ರಕ್ಷಿತಾ ಭರತಕುಮಾರ ಈಟಿ ತಿಳಿಸಿದ್ದಾರೆ. ಪಕ್ಷದ ಹೈಕಮಾಂಡ ನಿರ್ದೇಶನಕ್ಕೆ ಗೌರವ ತೋರಿದ್ದಾರೆ. ಬಹುದೊಡ್ಡ ಜವಾಬ್ದಾರಿ ಡಿಸಿಎಂ ಡಿ.ಕೆ.ಶಿವಕುಮಾರ ಹೆಗಲೇರಿದೆ. ಪಕ್ಷದ ನಿರ್ಧಾರಕ್ಕೆ ಎಲ್ಲರು ತಲೆ ಭಾಗಿದ್ದೇವೆ. ಹಿಂದುಳಿದ ಸಮುದಾಯದ , ಸಾಮಾಜಿಕ ಹರಿಕಾರನಿಗೆ ಎಂಟು ವರ್ಷಗಳ ಕಾಲ ಅವಕಾಶ ನೀಡಿದ್ದು ಮರೆಯಲಾಗದು. ಜೊತೆಗೆ ಪಕ್ಷಕ್ಕಾಗಿ ದುಡಿದ ಡಿಸಿಎಂ ಡಿ.ಕೆ.ಶಿವಕುಮಾರ ಅವರಿಗೆ ಸಮುಚಿತ್ತದ ಒಲವು ತೋರಿರುವುದು ಸ್ವಾಗತಾರ್ಹ. ಹಿಂದುಳಿದ ನಾಯಕ ಸಿಎಂ ಸಿದ್ದರಾಮಯ್ಯ ನಾಡಿನ ಅಸ್ಮಿತೆ. ಸಿಎಂ ಹುದ್ದೆಯಿಂದ ಸಿದ್ದರಾಮಯ್ಯ ನಿರ್ಗಮನ ಬಹಳ ಬೇಸರ ಉಂಟು ಮಾಡಿದೆ. ಅವರ ಮಾರ್ಗದರ್ಶನ, ಅಹಿಂದ ಪರಿಕಲ್ಪನೆ ಸದಾ ನಾಡಿನಲ್ಲಿ ಇಮ್ಮಡಿಗೊಳ್ಳಬೇಕು. ಸಿಎಂ ಸಿದ್ದರಾಮಯ್ಯ ಅವರಂತಹ ನಾಯಕರು ಮತ್ತೆ ಬೇಕು. ಅದನ್ನು ಮೈಗೂಡಿಸಿಕೊಂಡು ನಾವೆಲ್ಲ ಸಾಗಬೇಕು. ರಾಜಕೀಯ ಪಲ್ಲಟಕ್ಕೆ ನಾವೆಲ್ಲ ಸಾಕ್ಷಿಬೂತರಾಗಿದ್ದೇವೆ. ಹೊಸತನಕ್ಕೂ ಅಣಿಯಾಗಬೇಕಿದೆ ಎಂದು ಪ್ರಕಟನೆಯಲ್ಲಿ ತಿಳಿಸಿದ್ದಾರೆ.



ಮೇ 31ರಂದು ರಮ್ಯಾ ಜೋಶಿ ರಂಗ ಪ್ರವೇಶ

ಬಾಗಲಕೋಟೆ: ಮಯೂರಿ ನೃತ್ಯ ನಿಕೇತನದ ವಿದ್ಯಾರ್ಥಿನಿ ರಮ್ಯಾ ಜೋಶಿ ಮೇ 31ರಂದು ನವನಗರದ ಕಲಾಭವನದಲ್ಲಿ ಸಂಜೆ 4 ಗಂಟೆಗೆ ರಂಗಪ್ರವೇಶ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ನೃತ್ಯ ಅಲಂಕಾರೆ ಚೇತನಾ ದೇಸಾಯಿಪಟ್ಟಿ ತಿಳಿಸಿದರು.

ನವನಗರದ ಪತ್ರಿಕಾಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಂಗಪ್ರವೇಶದಲ್ಲಿ 9 ನೃತ್ಯ ಬಂಧುಗಳನ್ನು ಪ್ರದರ್ಶನ ಮಾಡಲಿದ್ದಾಳೆ. ಪುಷ್ಪಾಂಜಲಿ, ಕೃತಿ, ಜತಿಸ್ವರ, ಕೀರ್ತನಂ, ವರ್ಣಂ, ಜಾವಳಿ, ದೇವರನಾಮ, ತಿಲ್ಲಾನ, ಮಂಗಳಂ ಸೇರಿದಂತೆ 9 ವರ್ಷಗಳಿಂದ ಭರತನಾಟ್ಯವನ್ನು ಕಲಿಯುತ್ತಿದ್ದಾಳೆ. 2023 ರಲ್ಲಿ ಮಧುರೈ ಕಲಾಕೇಂದ್ರ ಹಾಗೂ ತಮಿಳ್ ಇಸಾಯಿ ಸಂಗಂ ವತಿಯಿಂದ ಹಮ್ಮಿಕೊಂಡಿದ್ದ ನಿರಂತರ 24 ಗಂಟೆಗಳ ಹೈ ರೇಂಜ್ ಬುಕ್ ಆಫ್ ರೆಕಾರ್ಡ್‌ದಲ್ಲಿ ಪಾಲ್ಗೊಂಡಿದ್ದಾಳೆ ಎಂದರು.



ರಮ್ಯಾ ಜೋಶಿ ಸೋಲಾಪುರದ ಶ್ರೀಶ್ ಡ್ಯಾನ್ಸ್ ಸ್ಟುಡಿಯೋ, ಇಂಡಿಯನ್ ಆರ್ಟ್ ಮತ್ತು ಕಲ್ಚರ್ ಸೊಸಾಯಿಟಿ, ರಾಮಸೇತು ವರ್ಲ್ಡ್ ಟ್ರಾವೆಲ್ ವತಿಯಿಂದ ರಾಮಜನ್ಮಭೂಮಿ ಅಯೋಧ್ಯಾ ಸಾಂಸ್ಕೃತಿಕ ಮಹೋತ್ಸವದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನ ತೋರಿಸಿದ್ದಾಳೆ. ವಿಶಾರದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ರಮ್ಯಾ ಗಂಧರ್ವ ಮಹಾವಿದ್ಯಾಲಯದ ವತಿಯಿಂದ ಮಾಧ್ಯಮ ಪ್ರಥಮ ಹಿಂದೂಸ್ತಾನಿ ಸಂಗೀತದಲ್ಲಿ ಉತ್ತೀರ್ಣರಾಗಿದ್ದಾಳೆ ಎಂದು ಹೇಳಿದರು. ರಮ್ಯಾ ಜೋಶಿ ರಂಗ ಪ್ರವೇಶ ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಗಳಾಗಿ ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಉಪ ಕುಲಪತಿ ಡಾ.ಮೀನಾ ಚಂದಾವರಕರ, ಮಧುರೈ ಕಲಾ ಕೇಂದ್ರದ ನಿರ್ದೇಶಕಿ ಅಮುಸಿನಿ ಮಹಾದೇವನ್ , ನಟರಾಜ್ ಸಂಗೀತ ನೃತ್ಯ ನಿಕೇತನ ನಿರ್ದೇಶಕಿ ಶುಭದಾ ದೇಶಪಾಂಡೆ, ಡಾ.ವಿನೋದ ಅಕ್ಕಸಾಲಿ, ಡಾ.ಸಂದೀಪ ಹುಯಿಲಗೋಳ ಆಗಮಿಸುವರು ಎಂದರು. ವೆಂಕಣ್ಣ ಆಚಾರ್ಯ ಜೋಶಿ, ಸುಮಾ ಕುಲಕರ್ಣಿ, ಜಯಶ್ರೀ ಜೋಶಿ, ಇದ್ದರು.

ರಮಾತಾಯಿ ತ್ಯಾಗ ಅಪಾರ

ತೇರದಾಳ: ಜಗತ್ತು ಕಂಡ ಶ್ರೇಷ್ಟ ಮಹಾಮಾನವತಾವಾದಿ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರವರ ಸಾಧನೆಗೆ ಪ್ರಮುಖರಾದವರು ಎಂದರೆ ಪತ್ನಿ ರಮಾತಾಯಿ ಅಂಬೇಡ್ಕರ್. ಬಾಬಾಸಾಹೇಬರ ಪ್ರತಿ ಹೆಜ್ಜೆಯಲ್ಲಿಯೂ ಆಸರೆಯಾಗಿ, ಧೈರ್ಯ ನೀಡಿ ಅವರ ಸಾಧನೆಗೆ ಜೀವ ನೀಡಿದವರು ಎಂದು ದಲಿತ ಮುಖಂಡ ಹಾಗೂ ಬಾಗಲಕೋಟೆ ಜಿಲ್ಲಾ ಕಾಂಗ್ರೆಸ್ ಎಸ್‌ಸಿ ಘಟಕದ ಜಿಲ್ಲಾ ಉಪಾಧ್ಯಕ್ಷ ಪರಸಪ್ಪ ಮಾಸ್ತಿ ಹೇಳಿದರು. ಪಟ್ಟಣದ ತಕ್ಷಶಿಲಾ ಮಹಾಬುದ್ಧವಿಹಾರ ಇಂಟರನ್ಯಾಶನಲ್ ಚಾರಿಟೇಬಲ್ ಟ್ರಸ್ಟ್(ರಿ) ತೇರದಾಳದಲ್ಲಿ ಹಮ್ಮಿಕೊಂಡಿದ್ದ ತಾಯಿ ರಮಾಬಾಯಿ ಅಂಬೇಡ್ಕರವರ ಪುಣ್ಯತಿಥಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಡಾ.ಬಾಬಾಸಾಹೇಬರು ಇಡೀ ದಲಿತ ಸಮುದಾಯಕ್ಕೆ ಗೌರವದ ಬದುಕನ್ನು ನೀಡಲು ತಮ್ಮ ಸಂಸಾರವನ್ನೇ ತ್ಯಾಗ ಮಾಡಿದ್ದಾರೆ ಎಂದರು.ಮಕ್ಕಳಾದ ಶ್ರದ್ಧಾ ಗುಡಕ್ಕನವರ, ತುಳಸಿ, ಸಿದ್ಧಾರ್ಥ ಗುಡಕ್ಕನವರ ಸೇರಿದಂತ ಹಲವಾರು ಮಕ್ಕಳು ಬುದ್ಧವಂದನೆ ಮಾಡುವುದರ ಮೂಲಕ ರಮಾತಾಯಿಯವರಿಗೆ ಗೌರವ ಸಲ್ಲಿಸಿದರು.ಮುಖಂಡರಾದ ದಯಾನಂದ ಕಾಳೆ, ಸದಾಶಿವ ಶಿಂಗೆ, ಲಕ್ಷ್ಮಣ ಹಟ್ಟೆನ್ನವರ, ಅರ್ಜುನ ಕೆಂಪವಾಡ, ರಘು ಪೂಜಾರಿ, ಮಂಜು ಸರಿಕರ, ಗೌತಮ ರೋಡಕರ, ಕೆಂಪನ್ನ ಶಿಂಗೆ, ಶಿವಪ್ಪ ಸರಿಕರ, ರತ್ನಪ್ಪ ಕಾಂಬಳೆ, ಬಸು ಯಲ್ಲಡಗಿ, ಸಂತೋಷ ನಡುವಿನಕೇರಿ ಸೇರಿದಂತೆ ಇನ್ನಿತರರು ಇದ್ದರು.



ತತ್ವ ಪ್ರದಾನ ನಿಜವಾದ ಧರ್ಮ: ಕಾಶಿನಾಥ ಶ್ರೀ

ಗುಳೇದಗುಡ್ಡ: ಪಟ್ಟಣದ ಶ್ರೀಗುರು ಒಪ್ಪತ್ತೇಶ್ವರ ಮಠದ ಗೋಶಾಲೆ ಟ್ರಸ್ಟ್ ವತಿಯಿಂದ ಅಧಿಕ ಮಾಸದ ನಿಮಿತ್ತ ನಡೆದ ಮೌನಾನುಷ್ಠಾನ ಹಾಗೂ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಬರುವ ಸನ್ನಿವೇಶದ 14ನೇ ಒಪ್ಪತ್ತೇಶ್ವರ ಮಹಾಸ್ವಾಮಿಗಳ ಪಟ್ಟಾಧಿಕಾರ ಮಹೋತ್ಸವದ ಕಾರ್ಯಕ್ರಮ ನಡೆಯಿತು.

ಕೋಟೆಕಲ್ ಗ್ರಾಮದ ಕೆಲೂಡಿ ಕುಟುಂಬದಿಂದ ಪಟ್ಟಾಧಿಕಾರ ಮಹೋತ್ಸವದ ಕಾರ್ಯಕ್ರಮ, ಸೇವೆಗಳು ನಡೆದವು. ಯಲಬುರ್ಗಾದ ಬಸವಲಿಂಗ ಸ್ವಾಮಿಗಳು 14ನೇ ಒಪ್ಪತ್ತೇಶ್ವರರಾಗಿ ಪಟ್ಟಾಧಿಕಾರ ಸ್ವೀಕರಿಸಿದರು. ಮುರುಘಾಮಠದ ಕಾಶಿನಾಥ ಸ್ವಾಮೀಜಿ ಪಟ್ಟಾಧಿಕಾರ ಹಸ್ತಾಂತರ ಮಾಡಿದರು.

ಮುರುಘಾಮಠದ ಕಾಶಿನಾಥ ಸ್ವಾಮಿಗಳು ಮಾತನಾಡಿ, ವ್ಯಕ್ತಿ ಪ್ರಧಾನವಾದುದು ಧರ್ಮವಲ್ಲ ತತ್ವ ಪ್ರದಾನವಾದುದು ನಿಜವಾದ ಧರ್ಮವಾಗಿದೆ. ಈ ಭೂಮಿಯಲ್ಲಿರುವ ಸಕಲ ಚರಾಚರಗಳಿಗೆ ಸನ್ಮಾರ್ಗದಲ್ಲಿ ನಡೆಸುವ, ಏಳಿಗೆಯನ್ನು ಬಯಸುವದೆಂದರೆ ಅದು ವೀರಶೈವ ಲಿಂಗಾಯತ ಸಮಾಜವಾಗಿದೆ. ಒಪ್ಪತ್ತೇಶ್ವರ ಶ್ರೀಗಳು ಅಧಿಕ ಮಾಸದಲ್ಲಿ ಮೌನಾನುಷ್ಠಾನ ನಡೆಸುವದರ ಜೊತೆಗೆ ಧರ್ಮ ಬೋಧನೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಒಪ್ಪತ್ತೇಶ್ವರ ಸ್ವಾಮೀಗಳು ಮಾತನಾಡಿ, ಮಠಾಧೀಶರ ಪಟ್ಟಾಧಿಕಾರ ಮಹೋತ್ಸವದ ವಿಧಿವಿಧಾನಗಳು, ಅದರ ಆಚರಣೆಗಳನ್ನು ಮಹತ್ವವನ್ನು ತಿಳಿಸುವುದು ಈ ಕಾರ್ಯಕ್ರಮ ಉದ್ದೇಶ. ಪ್ರತಿಯೊಬ್ಬರು ಗುರುವಿನ ಸ್ಮರಣೆ ಮಾಡಬೇಕು ಎಂದರು.ಯಲಬುರ್ಗಾದ ಮರಡಿಮಠದ ಬಸವಲಿಂಗ ಸ್ವಾಮಿಗಳು, ಗುರುಗುಂಟಾ ಚರಮೂರ್ತೇಶ್ವರ ಮಠದ ಸದಾನಂದ ಶಿವಾಚಾರ್ಯರು, ಟೀಕಿನಮಠದ ಮಲ್ಲಿಕಾರ್ಜುನ ಶ್ರೀಗಳು, ಪುರುತಗೇರಿಯ ಕೈಲಾಸಲಿಂಗ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ಶ್ಯಾಮಣ್ಣ ಪತ್ತಾರ, ಬಸವರಾಜ ಅಬ್ಬಿಗೇರಿ ಅವರಿಂದ ಸಂಗೀತ ಸೇವೆ ನಡೆಯಿತು.



ಸಂಗಪ್ಪ ಜವಳಿ, ರಂಗಪ್ಪ ಅರಮನ್ನವರ, ನೀಲಪ್ಪ ಅಬಕಾರಿ, ಸಂಗಪ್ಪ ಆಲೂರ, ಮುತ್ತಪ್ಪ ಅಬಕಾರಿ, ಮಹಾಂತೇಶ ಹಿರೇಮಠ, ಸಂಗಪ್ಪ ಹಡಪದ, ಶಿವಾನಂದ ಮಳಿಮಠ, ಶರಣಪ್ಪ ಚಿಕ್ಕನರಗುಂದ, ಯಲಗೂರೇಶ ಅರಮನಿ, ಹುಚ್ಚೇಶ ಕಮತರ, ಅಶೋಕ ರೋಜಿ, ಹುಚ್ಚಪ್ಪ ಅಬಕಾರಿ,ಪರಸಪ್ಪ ಆಲೂರ, ಬೂದಿಹಾಳಮಠ, ಯಲಗುರದಪ್ಪ ತೊಗಲಂಗಿ, ವೈ.ಜಿ.ತಳವಾರ, ಅಂಬರೀಶ ಕವಡಿಮಟ್ಟಿ, ಕಾಜಗಾರ, ಶಿವು ಹಿರೇಮಠ ಮತ್ತಿತರರು ಇದ್ದರು.

ಕಿರುಸುದ್ದಿ

ಬಕ್ರೀದ್: ಪ್ರಾರ್ಥನೆ



• **ಬಸವನಬಾಗೇವಾಡಿ:** ಪಟ್ಟಣದ ಮುಸಬಿನಾಳ ರಸ್ತೆಯಲ್ಲಿನ ಈದ್ಗಾ ಮೈದಾನದಲ್ಲಿ ಬಕ್ರೀದ್ ನಿಮಿತ್ತ ಪ್ರಾರ್ಥನೆ ಮಾಡಿ ಸುಖ ಶಾಂತಿ ನೆಮ್ಮದಿ ನೀಡಲಿ ಎಂದು ಅಲ್ಲಾಹನಿಗೆ ಪ್ರಾರ್ಥನೆ ಸಲ್ಲಿಸಿದರು. ಹಾಫೀಜ ಮಹಮ್ಮದ ಶೋಯಬಾ, ಹಾಫೀಜ ಮೊಹಮ್ಮದ ಅಲಿ ಮಿಲಿ, ಕಮಾಲಸಾಬ ಕೊರಬು, ಮಾಜಿ ಪುರಸಭೆ ಸದಸ್ಯ ಅಬ್ದುಲರಜಾಕ ಚೌದ್ರಿ, ಮಹಮ್ಮದ ಇಕ್ಬಾಲ ಕೋರಬು, ಇಬ್ರಾಹಿಂಸಾಬ ಬೊಮ್ಮನಹಳ್ಳಿ, ನಜೀರ ಗಣಿ, ಶಬ್ಬೀರಅಹ್ಮದ ನದಾಫ, ಚಾಂದಪಾಶಾ ಕೋರಬು, ಮಹಿಬೂಬ ನಾಯಿಕೋಡಿ, ನಿಸಾರ ಚೌದ್ರಿ, ಮುತಾಬ ಬೊಮ್ಮನಹಳ್ಳಿ, ಅಲ್ಲಾಭಕ್ಷ ಕೊರಬು, ಜಾಕಿರಹುಸೇನ ಬಾಗೇವಾಡಿ, ದಸ್ತಗಿರ ವಜ್ಜಲ, ಬುಡ್ಡೆಸಾಬ ಚಳ್ಳಿಗಿಡದ, ಲಾಲು ಕೋರಬು, ಮಹಿಬೂಬಸಾಬ ಗಣಿ, ಅಬ್ದುಲರಜಾಕ ಕೋರಬು, ದಸ್ತಗಿರ ಹುಬ್ಬಳ್ಳಿ, ಮೊಹಮ್ಮದ ರಫೀಕ ಹೂಕ್ರಾಣಿ, ಅಬ್ದುಲರಜಾಕ ಬಾಗವಾನ, ಎಚ್. ಆರ್ ಬಾಗವಾನ, ಅಜೀಜ ಬಾಗವಾನ, ಮಿರಾಸಾಬ ಕೊರಬು, ಬಂದೇನವಾಜ ನಂದವಾಡಗಿ, ಮಹಿಬೂಬಅಲಿ ಬಳಗಾನೂರ, ಅಲ್ತಾಫ ಹುಸೇನ ಮುದ್ದೇಬಿಹಾಳ, ಸಲೀಮ ಸೈಯದ ಇಮಾಮ ಅಲಿ ಬಾಗವಾನ, ಮಕ್ತುಮಸಾಬ ನದಾಫ, ಹುಸೇನಸಾಬ ಬೈರವಾಡಗಿ, ಮನ್ನಾನ ಶಾಬಾದಿ, ಜಮೀನ ಇಬ್ರಾಹಿಂಪುರ, ಅಮೀನಸಾಬ ಮುಮುದಾಪುರ, ಜಾಫರ ಮಕಾನದಾರ, ಮಹಮ್ಮದಶಫೀಕ ಹೋಕ್ರಾಣಿ, ಖಾಜಂಬರ ಚಳ್ಳಿಗಿಡದ,ಇಮ್ರಾನ ಕೋರಬು, ಜಹೀರಅಬ್ಬಾಸ ಬೊಮ್ಮನಹಳ್ಳಿ, ರಿಹಾನ ಕೆರೂರ, ಮೊಮ್ಮದರಫೀಕ ಮನಗೂಳಿ, ದಾದಾ ಬಾಗವಾನ, ರಯೀಸಅಹ್ಮದ ಚಳ್ಳಿಗಿಡದ, ಸಿರಾಜ ಕೆರೂರ, ಮಲಿಕಸಾಬ ಕೋರಳಿ, ಸಮೀರ ಕೋರಬು, ಮಹಿಬೂಬಸಾಬ ಬಾಗವಾನ ಇದ್ದರು.

ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜಿಗೆ 28ನೇ ರ‍್ಯಾಂಕ್

• **ವಿಜಯಪುರ:** ನಗರದ ಬಿಎಲ್‌ಡಿಇ ಸಂಸ್ಥೆಯ ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜಿಗೆ ದೇಶದ ಅತ್ಯುನ್ನತ 175 ಕಾಲೇಜುಗಳಲ್ಲಿ 28ನೇ ರ‍್ಯಾಂಕ್ ಲಭಿಸಿದೆ. ನ್ಯಾಷನಲ್ ಟೈಮ್ಸ್ ಎಂಜಿನಿಯರಿಂಗ್ ರ‍್ಯಾಂಕಿಂಗ್ ನಡೆಸಿದ ಸಮೀಕ್ಷೆಯಲ್ಲಿ ಈ ಸ್ಥಾನ ಸಿಕ್ಕಿದೆ. ಈ ಸಂಸ್ಥೆ ದೇಶದ ನಾನಾ ಎಂಜಿನಿಯರಿಂಗ್ ಕಾಲೇಜುಗಳ ಸಮೀಕ್ಷೆ ನಡೆಸಿದ್ದು, ಬಿಎಲ್‌ಡಿಇ ಎಂಜಿನಿಯರಿಂಗ್ ಕಾಲೇಜು ನಾನಾ ವಿಭಾಗಗಳಲ್ಲಿ ಅತ್ಯುತ್ತಮ ಸಾಧನೆ ಮಾಡುವ ಮೂಲಕ ಗಮನ ಸೆಳೆದಿದೆ. ಕಾಲೇಜಿನ ವಿದ್ಯಾರ್ಥಿಗಳಿಗೆ ಉದ್ಯೋಗ ವ್ಯವಸ್ಥೆ ಮಾಡುವಲ್ಲಿ ದೇಶದ ಉನ್ನತ 70 ಖಾಸಗಿ ಕಾಲೇಜುಗಳ ಪೈಕಿ ಬಿಎಲ್‌ಡಿಇ ಎಂಜಿನಿಯರಿಂಗ್ ಕಾಲೇಜಿಗೆ 43 ನೇ ರ‍್ಯಾಂಕ್ ಬಂದಿದೆ. ಅದೇ ರೀತಿ ದೇಶದ 125 ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ 27 ನೇ ರ‍್ಯಾಂಕ್ ಬಂದಿದ್ದರೆ, ದಕ್ಷಿಣ ಭಾರತದ ಅತ್ಯುತ್ತಮ 25 ಎಂಜಿನಿಯರಿಂಗ್ ಕಾಲೇಜುಗಳಲ್ಲಿ 15ನೇ ಸ್ಥಾನ ಲಭಿಸಿದೆ.ಕಾಲೇಜಿನ ಈ ಸಾಧನೆಗೆ ಬಿಎಲ್‌ಡಿಇ ಸಂಸ್ಥೆಯ ಅಧ್ಯಕ್ಷ ಮತ್ತು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತು ವಿಪ ಶಾಸಕ ಸುನೀಲಗೌಡ ಪಾಟೀಲ ಸಂತಸ ವ್ಯಕ್ತಪಡಿಸಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯ ಡಾ.ಪಿ.ಮಂಜುನಾಥ ತಿಳಿಸಿದ್ದಾರೆ.

ತ್ಯಾಗ, ಬಲಿದಾನ, ಭಕ್ತಿ ಸಂಕೇತ ಬಕ್ರೀದ್

ಮುದ್ದೇಬಿಹಾಳ: ತಾಳಿಕೋಟೆ ರಸ್ತೆಯ ಪಕ್ಕದಲ್ಲಿರುವ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ತ್ಯಾಗ, ಬಲಿದಾನ ಮತ್ತು ಭಕ್ತಿ ಸಂಕೇತವಾದ ಬಕ್ರೀದ್ ಹಬ್ಬವನ್ನು ಗುರುವಾರ ಶ್ರದ್ಧಾಭಕ್ತಿಯಿಂದ ಆಚರಿಸಿದರು. ಪಟ್ಟಣದ ಸಂದಲ್ ಮಸೀದಿ, ಬಾಗಬಾನ್ ಮಸೀದಿ, ಮಕ್ಕಾ ಮಸೀದಿ, ಬಿಲಾಲ್ ಮಸೀದಿಗಳಲ್ಲಿ ಸೇರಿದಂತೆ ವಿವಿಧ ಭಾಗಗಳಿಂದ ಆಗಮಿಸಿದ ಜನ ವಿಶೇಷ ಪ್ರಾರ್ಥನೆ ಸಲ್ಲಿಸಿದ ಬಳಿಕ ಜಾಮಿಯಾ ಮಸೀದಿ ಸಮೀಪದಿಂದ ಭಕ್ತರು ತಕ್ಬೀರ್ ಘೋಷಣೆಗಳೊಂದಿಗೆ ಈದ್ಗಾ ಮೈದಾನಕ್ಕೆ ಆಗಮಿಸಿದರು.

ಜಾಮಿಯಾ ಮಸೀದಿಯ ಮೌಲಾನಾ ಅಫ್ತಾಬ್ ಧರ್ಮೋಪದೇಶ ನೀಡಿದರು.ಹಜ್ರತ್ ಇಬ್ರಾಹಿಂ (ಅ) ಹಾಗೂ ಇಸ್ಮಾಯಿಲ್ (ಅ) ಅವರ ತ್ಯಾಗದ ಘಟನೆಯನ್ನು ಉಲ್ಲೇಖಿಸಿದ ದೇವನಿಗೆ ಅತ್ಯಂತ ಪ್ರಿಯವಾದದ್ದನ್ನೂ ತ್ಯಾಗ ಮಾಡಲು ಸಿದ್ಧರಾಗಿರಬೇಕು ಎಂಬ ಸಂದೇಶ ನೀಡಿದರು. ಡಾ.ಎ.ಎಂ.ಮುಲ್ಲಾ, ಡಿ.ಡಿ.ಬಾಗವಾನ್, ಅಲೀಮ್ ಮೊಮೀನ್, ಅಬ್ದುಲ್ ಗನಿ ನದಾಫ್, ಉಸ್ಮಾನ್ ಗನಿ ಮುಲ್ಲಾ, ಅಬ್ದುಲ್ ಗಫೂರ್ ಮಕಾನದಾರ್, ಸದ್ದಾಂ ಕುಂಟೋಜಿ, ಎನ್.ಬಿ.ಮುದ್ನಾಳ, ವಹಾಬ್ ಮೊಮೀನ್, ಅಬ್ದುಲ್ ಖಾದಿರ್ ಮತೇದಾರ್, ಅಲ್ಲಾಭಕ್ಷ ನಾಯ್ಕೋಡಿ, ಹಾಜಿ ತೆಗ್ಗಿ, ಅಬ್ದುಲ್ ಮಜೀದ್ ಮಕಂದಾರ್, ಮೈಬೂಬ ಹಳ್ಳಿ, ಗುಲಾಂ ದಫೇದಾರ್, ಅಮೀನಸಾಬ್ ಮುಲ್ಲಾ, ಎಂ.ಎ.ಮುದ್ದೇಬಿಹಾಳ, ಮಹಿಬೂಬ್ ಗೊಲಸಂಗಿ, ಪಿಂಟು ಸಾಲಿಮನಿ ಪಾಲ್ಗೊಂಡಿದ್ದರು.



ವಿಜಯಪುರ: ಜಿಲ್ಲೆಯ ಬಬಲೇಶ್ವರ ತಾಲೂಕಿನ ಕಾಖಂಡಕಿ ಗ್ರಾಮದ ಈದ್ಗಾ ಮೈದಾನದಲ್ಲಿ ಬಕ್ರೀದ್ ಹಬ್ಬದ ನಿಮಿತ್ತ ಪ್ರಾರ್ಥನೆ ಸಲ್ಲಿಸಲಾಯಿತು.

ಬಕ್ರೀದ್ ತ್ಯಾಗ ಬಲಿದಾನದ ಸಂಕೇತ

• **ಇಂಡಿ:** ಬಕ್ರೀದ್ ಮುಸ್ಲಿಂ ಬಾಂಧವರ ಪ್ರಮುಖ ತ್ಯಾಗ ಮತ್ತು ಬಲಿದಾನದ ಹಬ್ಬವಾಗಿದೆ. ಅಲ್ಲಾಹನ ಮೇಲಿನ ಭಕ್ತಿಯಿಂದ ಪ್ರವಾದಿ ಮಹಮ್ಮದ ಇಬ್ರಾಹಿಂ ತನ್ನ ಮಗನನ್ನೇ ಬಲಿ ಕೊಡಲು ಮುಂದಾದಾಗ ಅವನ ತ್ಯಾಗಕ್ಕೆ ಮೆಚ್ಚಿ ಅಲ್ಲಾಹ ಮಗನ ಬದಲಾಗಿ ಕುರಿಯನ್ನು ಬಲಿ ನೀಡುವಂತೆ ಮಾಡಿದ ಪವಾಡ ನೆನಪಿಸುವ ಈ ಹಬ್ಬ ಎಂದು ಧರ್ಮಗುರುಗಳು ಮೌಲಾನಾ ಶಾಕೀರ ಹುಸೇನ ಕಾಶ್ಮಿ ಹೇಳಿದರು. ನಗರದ ಹಂಜಗಿ ರಸ್ತೆಯ ಈದ್ಗಾ ಮೈದಾನದಲ್ಲಿ ಬಕ್ರೀದ ಹಬ್ಬದ ನಿಮಿತ್ತ ನಡೆದ ನಮಾಜ್ ಕಾರ್ಯಕ್ರಮದ ಮೊದಲು ಮಾತನಾಡಿದರು. ಧರ್ಮಗುರುಗಳು ಮುಫ್ತಿ ಅಬ್ದುಲ ರಹಮಾನ, ಧರ್ಮಗುರುಗಳು ಹಾಫೀಜ, ಫಯರೋಜ ಬಾಗವಾನ, ಜಾವೇದ ಮೋಮಿನ, ಅಬ್ದುಲ ರಹಮಾನ ಬಾಗವಾನ, ಅಬ್ದುಲ ರಶಿದ ಮುಗಳಿ, ಷರೀಪ ಪಟೇಲ, ಹಸನ ಮುಜಾವರ, ಯುನುಸ ರೇವೂರಕರ, ಫಾರುಖ ತುರ್ಕಿ, ಫಯಾಜ ಬಾಗವಾನ, ರಫೀಕ ಇಂಡಿಕರ, ಅಬ್ದುಲ ರಶೀದ ಅರಬ, ಖಾಜಾ ಪಟೇಲ, ಹುಸೇನ ಜಮಾದಾರ, ಪುರಸಭೆ ಮಾಜಿ ಸದಸ್ಯರಾದ ಅಯೂಬ ಬಾಗವಾನ, ಶಬ್ಬೀರ ಖಾಜಿ, ಜಹಾಂಗೀರ ಸೌದಾಗರ, ಅಸ್ಲಾಂ ಕಡಣಿ, ಮುಸ್ತಾಕ ಇಂಡಿಕರ, ಜಾನುದ್ದೀನ ಬಾಗವಾನ, ಮಹಿಬೂಬ ಅರಬ, ವ್ಯಾಪಾರಿಗಳಾದ ನಿಸಾರ ಬಾಗವಾನ, ರಿಯಾಜ್ ಗೌಂಡಿ, ಸಲೀಂ ಶೇಖ, ಹಾಜಿ ಪಟೇಲ, ಸಲೀಂ ತೋಳನೂರ, ಬಾಬುಸಾಬ ಸೌದಾಗರ, ಮುಬಾರಕ ಕೋಲಾರ, ಅಬು ತಾಲಿ ಹೊಸುರ, ಬಸೀರ ಇನಾಮದಾರ, ಮಹಮ್ಮದ ಗುಲಬರ್ಗಾ, ರಾಜ ಅಹಮ್ಮದ ತುರಕನಗೇರಿ, ಅಸ್ಲಂ ಪಟೇಲ ಮತ್ತಿತರರಿದ್ದರು.



ಇಂಡಿ: ನಗರದ ಹಂಜಗಿ ರಸ್ತೆಯ ಈದ್ಗಾ ಮೈದಾನದಲ್ಲಿ ಬಕ್ರೀದ ಹಬ್ಬದ ನಿಮಿತ್ತ ಮುಸ್ಲಿಂ ಸಮುದಾಯದವರು ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದರು. ನಮಾಜ್ ಮುನ್ನ ಧರ್ಮಗುರು ಮೌಲಾನಾ ಶಾಕೀರ ಹುಸೇನ ಕಾಶ್ಮಿ ಮಾತನಾಡಿದರು. ಧರ್ಮಗುರು ಮುಫ್ತಿ ಅಬ್ದುಲ ರಹಮಾನ, ಧರ್ಮಗುರು ಹಾಫೀಜ, ಫಯರೋಜ ಬಾಗವಾನ, ಜಾವೇದ ಮೋಮಿನ, ಅಬ್ದುಲ ರಹಮಾನ ಬಾಗವಾನ ,ಅಬ್ದುಲ ರಶಿದ ಮುಗಳಿ, ಷರೀಪ ಪಟೇಲ, ಹಸನ ಮುಜಾವರ, ಯುನುಸ ರೇವೂರಕರ ಸೇರಿದಂತೆ ಇತರರು ಇದ್ದರು.

ಮಯೂರ ವರ್ಮ ಸ್ವಾಭಿಮಾನದ ಸಂಕೇತ

• **ವಿಜಯಪುರ:** ಕನ್ನಡಿಗರ ಸಾಮೂಹಿಕ ಪ್ರಜ್ಞೆಯಲ್ಲಿ ಅಸ್ಮಿತೆಯ ಬೀಜ ಬಿತ್ತಿ, ಕನ್ನಡ ಭಾಷೆ, ನೆಲ, ಸಂಸ್ಕೃತಿಯ ಸಂಕೇತವಾದ ಮಯೂರ ವರ್ಮನ ಆದರ್ಶಗಳು ಇಂದಿನ ಜಾಗತೀಕರಣದಲ್ಲಿ ಕನ್ನಡ ಭಾಷೆ ಉಳಿಸಿ ಬೆಳೆಸುವಲ್ಲಿ ನಮಗೆ ದಾರಿ ದೀಪವಾಗಿವೆ ಎಂದು ಶಿಕ್ಷಕ ಸಾಹಿತಿ ಸಂತೋಷ ಬಂಡೆ ಹೇಳಿದರು.

ವಿಜಯಪುರ ತಾಲೂಕಿನ ನಾಗಠಾಣ ಗ್ರಾಮದ ಮಲ್ಲಿಕಾರ್ಜುನ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಗುರುವಾರ ಹಮ್ಮಿಕೊಂಡ 1681 ನೇ ಕನ್ನಡ ಸಾಮ್ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕದಂಬರ ಮಯೂರ ವರ್ಮನು ಕನ್ನಡದ ಸ್ವಾಭಿಮಾನದ ಸಂಕೇತ. ಆಡಳಿತ ಭಾಷೆಯಾಗಿ ಕನ್ನಡವನ್ನು ಬಳಸಿದ ಮೊದಲಿಗನಾಗಿ, ಇಂದಿನ ಆಧುನಿಕತೆಯಲ್ಲಿ ಕನ್ನಡದ ಸಾಂಸ್ಕೃತಿಕ ಅಸ್ಮಿತೆ ಮತ್ತು ಶಾಸ್ತ್ರೀಯ ಸ್ಥಾನಮಾನಕ್ಕೆ ಆತ ಹಾಕಿದ ಬುನಾದಿ ಅತ್ಯಂತ ಮಹತ್ವದಾಗಿದೆ ಎಂದರು.



ಮುಖ್ಯ ಶಿಕ್ಷಕ ಸುರೇಶಗೌಡ ಬಿರಾದಾರ ಮಾತನಾಡಿ, ಕನ್ನಡ ಭಾಷೆ, ಸಂಸ್ಕೃತಿಯನ್ನು ಜಾಗತಿಕ ಮಟ್ಟದಲ್ಲಿ ಎತ್ತಿಹಿಡಿಯಲು ಕದಂಬರ ಮಯೂರ ವರ್ಮನ ಸ್ವಾಭಿಮಾನದ ಚಿಂತನೆ ಇಂದಿಗೂ ಅತ್ಯಗತ್ಯವಾಗಿದೆ ಎಂದರು.

ಸಂಸ್ಥೆಯ ಅಧ್ಯಕ್ಷ ಶಂಕರ ಹುಣಶ್ಯಾಳ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಯೂರ ವರ್ಮನ ಕನ್ನಡಾಭಿಮಾನ ಪ್ರತಿಯೊಬ್ಬ ಕನ್ನಡಿಗನಿಗೂ ಮಾತೃಭಾಷಾಭಿಮಾನ, ಸ್ವಾವಲಂಬನೆ ಮತ್ತು ಸಾಂಸ್ಕೃತಿಕ ಬದ್ಧತೆಯನ್ನು ಕಲಿಸುವ ಜೀವಂತ ಆದರ್ಶವಾಗಿದೆ ಎಂದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಸುನಂದಾ ಹುಣಶ್ಯಾಳ, ಶಿಕ್ಷಕರಾದ ಸಿದ್ದು ರತ್ನಾಕರ, ರೇಣುಕಾ ಭಜಂತ್ರಿ, ವೀರೇಶ ಹುಣಶ್ಯಾಳ ಇದ್ದರು.

ವಿಚಾರ ಸಂಕಿರಣದ ಕರಪತ್ರ ಬಿಡುಗಡೆ

• **ವಿಜಯಪುರ:** ನ್ಯಾ.ಬ್ರಿಜೇಶ್‌ಕುಮಾರ ನೇತೃತ್ವದ 2ನೇ ನ್ಯಾಯಾಧಿಕರಣದ ತೀರ್ಪಿನಂತೆ ಆಲಮಟ್ಟಿ ಲಾಲ್‌ಬಹದ್ದೂರ ಶಾಸ್ತ್ರೀ ಜಲಾಶಯದ ನೀರಿನಮಟ್ಟವನ್ನು 519.60ರಿಂದ 524.260ಕ್ಕೆ ನೀರು ನಿಲ್ಲಿಸಲು ಗೇಟ್ ಅಳವಡಿಸುವಂತೆ ನ್ಯಾಯಾಧೀಕರಣ ತಿರ್ಪು ನೀಡಿದ್ದರೂ ಕೂಡಾ ಇಲ್ಲಿಯವರೆಗೂ ಸರ್ಕಾರಗಳು ಗೇಟ್ ಅಳವಡಿಸಲು ಆಗುತ್ತಿಲ್ಲ. 13ನೇ ವರ್ಷಕ್ಕೆ ಪಾದಾರ್ಪನೆ ಮಾಡಿದ್ದರು ಕೇಂದ್ರ ಸರ್ಕಾರ ಇನ್ನು ಅಧಿಸೂಚನೆ ಹೊರಡಿಸಿಲ್ಲ. ವಿಜಯಪುರ ಜಿಲ್ಲೆ ಹೇಳಿಕೊಳ್ಳಲು ಪಂಚನದಿಗಳು ಬೇಡಾಗಿದೆ ಆದರೆ ವಾಸ್ತವವಾಗಿ ಇನ್ನು ಕೆಲವು ಹಳ್ಳಿಗಳಲ್ಲಿ ಕುಡಿಯಲು ನೀರಿಲ್ಲ, ಕೃಷಿಗೆ ನೀರು ಬಿಡುವುದಂತು ದೂರದ ಮಾತು ಆದ್ದರಿಂದ ನಮ್ಮ ನೀರಿನ ಪಾಲನ್ನು ನಮಗೆ ಕೊಡಲು ಸರ್ಕಾರಕ್ಕೆ ಒತ್ತಾಯಿಸಲು ಹಾಗೂ ನೀರಿನ ಹಂಚಿಕೆಯಲ್ಲಿ ಅವಳಿ ಜಿಲ್ಲೆಯ ರೈತರಿಗೆ ಯಾವ ರೀತಿ ವಂಚನೆ ಮಾಡಿದ್ದಾರೆ ಎಂಬುದನ್ನು ಕುರಿತು ವಿಚಾರ ಸಂಕಿರಣ ಕಾರ್ಯಕ್ರಮ ಜೂ.8ರಂದು ವಿಜಯಪುರ ನಗರದ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ ಬೆಳಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದ್ದು, ಇದರ ಅಂಗವಾಗಿ ಕರಪತ್ರವನ್ನು ಜಿಲ್ಲಾಧಿಕಾರಿ ಕಛೇರಿ ಆವರಣದಲ್ಲಿ ಅಖಂಡ ಕರ್ನಾಟಕ ರೈತ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಜಂಟಿಯಾಗಿ ಬಿಡುಗಡೆಗೊಳಿಸಲಾಯಿತು. ಮೇ 29ರಂದ ಜಿಲ್ಲೆಯಾದ್ಯಂತ ಹಳ್ಳಿ ಹಳ್ಳಿಗಳಿಗೆ ರೈತರ ಬಳಿ ಹೋಗಿ ರೈತರನ್ನು ಜಾಗೃತಿಗೊಳಿಸಿ ವಿಚಾರ ಸಂಕಿರಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸಲು ಮನವಿ ಮಾಡಿಕೊಳ್ಳಲಾಗುವುದೆಂದು ತಿಳಿಸಿದ್ದಾರೆ.

ಅರವಿಂದ ಕುಲಕರ್ಣಿ, ಮಹಾದೇವಪ್ಪ ತೇಲಿ, ಸಿದ್ಧನಗೌಡ ಪಾಟೀಲ, ಉಮೇಶ ವಾಲೀಕಾರ, ಜಿಲ್ಲಾ ಸಂಘಟನ ಕಾರ್ಯದರ್ಶಿ ಗುರುರಾಜ ಪಡಶೆಟ್ಟಿ ಹೊನಕೇರಪ್ಪ ತೆಲಗಿ, ಬಬಲೇಶ್ವರ ತಾಲೂಕು ಗೌರವ ಅಧ್ಯಕ್ಷ ಸಿದ್ದಪ್ಪ ಕೋಟ್ಯಾಳ, ಬಬಲೇಶ್ವರ ತಾಲೂಕು ತಾಲೂಕಾಧ್ಯಕ್ಷ ಗುರಣಗೌಡ ಬಿರಾದಾರ, ಪ್ರಭುಲಿಂಗ ಕಾರಜೋಳ, ಸಂತೋಷ ಚೌರಿ, ಒಗೆಪ್ಪ ಬಿರಾದಾರ, ಸೋಮಯ್ಯ ನಂದಿಕೋಲ, ಅಮೋಗಿ ಉಕ್ಕಲಿ, ಮಲ್ಲಿಕಾರ್ಜುನ ಬಟಗಿ, ಬೋಗೇಶ ಸೊಲಾಪೂರ, ನೀಲಮ್ಮ ಕಟ್ಟಿಮನಿ, ಲಂಕೆಪ್ಪ ತಳವಾರ, ನಬಿರಸೂಲ ಬಿರಾದಾರ, ಗುರಪ್ಪ ತಳವಾರ, ಅಜೀಜ ಪಾಟೀಲ ಇದ್ದರು.



ಕಲಿಕಾ ಕಾರ್ಯತಂತ್ರಗಳ ಕಾರ್ಯಾಗಾರ

• **ವಿಜಯಪುರ:** ಸೃಜನಾತ್ಮಕ ಬೋಧನೆ ಮತ್ತು ಕಲಿಕಾ ಕಾರ್ಯತಂತ್ರಗಳು ಕುರಿತು ಒಂದು ದಿನದ ಕಾರ್ಯಾಗಾರ ನಗರದ ಬಿಎಲ್‌ಡಿಇ ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಯಿತು. ಬಿಎಲ್‌ಡಿಇ ಸಂಸ್ಥೆಯ ಬಿ.ಎಂ.ಪಾಟೀಲ ಪಬ್ಲಿಕ್ (ಸಿಬಿಎಸ್‌ಇ) ಶಾಲೆ ಮತ್ತು ಬಿ.ಎಂ. ಪಾಟೀಲ್ ಪಬ್ಲಿಕ್ (ಐಸಿಎಸ್‌ಇ) ಶಾಲೆಯ ಶಿಕ್ಷಕರಿಗಾಗಿ ಆಯೋಜಿಸಲಾದ ಈ ಕಾರ್ಯಾಗಾರವನ್ನು ಶೈಕ್ಷಣಿಕ ಸಂಯೋಜಕಿ ದೀಪಾ ಜಂಬೂರೆ ಉದ್ಘಾಟಿಸಿದರು. ಜಾಗೃತ ಮನಸ್ಥಿತಿ ಮತ್ತು ಭೋಧನೆ ತಂತ್ರಗಳು ವಿಷಯ ಕುರಿತು ಬಿ.ಎಂ. ಪಾಟೀಲ ಪಬ್ಲಿಕ್ (ಸಿಬಿಎಸ್) ಶಾಲೆಯ ಉಪಪ್ರಾಚಾರ್ಯೆ ವಸುಧಾ ನಾರ್ವೇಕರ ಉಪನ್ಯಾಸ ನೀಡಿದರು.



ಬಿ.ಎಂ.ಪಾಟೀಲ ಪಬ್ಲಿಕ್ (ಐಸಿಎಸ್‌ಇ) ಶಾಲೆಯ ಪ್ರಾಚಾರ್ಯ ವಿಕ್ರಮ ನಾರ್ವೇಕರ ಮಾತನಾಡಿ, ಮನಸ್ಸಿನ ಏಕಾಗ್ರತೆ, ಶಾಂತ ಮನೋಭಾವ ಹಾಗೂ ವಿದ್ಯಾರ್ಥಿಗಳೊಂದಿಗೆ ಉತ್ತಮ ಸಂವಹನ ನಡೆಸುವ ವಿಧಾನಗಳ ಕುರಿತು ಶಿಕ್ಷಕರಿಗೆ ತರಬೇತಿ ನೀಡಿದರು. ಆಂಗ್ಲ ಭಾಷಾ ಶಿಕ್ಷಕ ಯೋಗಿರಾಜ ಹಳಕಟ್ಟಿ ಸ್ವಾಗತಿಸಿದರು. ಮೀರಾ ಮೋಕಾಶಿ ವಂದಿಸಿದರು.

ವಿವಿಧೆಡೆ ಶ್ರದ್ಧಾ ಭಕ್ತಿಯ ಬಕ್ರೀದ್ ಆಚರಣೆ

• **ವಿಜಯಪುರ:** ಬಕ್ರೀದ್ ಹಬ್ಬ ತ್ಯಾಗ ಮತ್ತು ಬಲಿದಾನದ ಸಂಕೇತವಾಗಿದೆ ಎಂದು ಮೌಲಾನಾ ಫೈಸಲ್ ಸಕಾಫ್ ಖಾದ್ರಿಸಾದತ್ ಹೇಳಿದರು.

ನಗರದ ಆಸಾರ್ ಮಹಲ್ ಶರೀಫದಲ್ಲಿ ಹಮ್ಮಿಕೊಂಡ ಬಕ್ರೀದ್ ಹಬ್ಬದ ಪ್ರಾರ್ಥನೆಯಲ್ಲಿ ಅವರು ಆಶೀರ್ವಚನ ನೀಡಿ ಮಾತನಾಡಿದರು.

ದೇವರ ಮಕ್ಕಳಾದ ನಾವುಗಳು ದೇವಭಯ ಹೊಂದಿರಬೇಕು. ನಾವೆಲ್ಲರೂ ದೇವರ ಕೃಪೆಯಿಂದ ಬದುಕಿ ಬಾಳುತ್ತಿದ್ದೇವೆ. ನಮ್ಮೆಲ್ಲರ ಕರ್ಮಗಳನ್ನು ದೇವನೊಬ್ಬ ಗಮನಿಸುತ್ತಿದ್ದಾನೆ. ದೇವರ ಮನೆಯಿದು. ಬಾಡಿಗೆದಾರರು ನಾವುಗಳೆಲ್ಲ ಎಂಬ ಮಾತಿನಂತೆ ವಸುದೇವ ಕುಟುಂಬಕಂ ಎಂಬ ವಿಚಾರದಲ್ಲಿ ನಂಬಿಕೆಯಿಟ್ಟು ಬದುಕಬೇಕು ಎಂದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹಾಸಿಂಪೀರ ವಾಲಿಕಾರ, ಸೈಯ್ಯದ್ ಅಮೀದ್ ತಕಾಪಸಾದಾತ, ಸೈಯ್ಯದ್ ಮುಸ್ತಾಫಾಖಾದ್ರಿ ಸಾದಾತ, ಜಮೀರ್‌ಅಹ್ಮದ್ ಬಾಗಲಕೋಟ, ಪಾಪಾ ಪೀರಜಾದೆ, ಹಾಸಿಂಪೀರ ಇನಾಮದಾರ, ಸೈಯ್ಯದ ಅತಿಕಪೀರಾಸಾದಾತ, ಜಾವಿದ ಕಿಲ್ಲೇದಾರ ಇದ್ದರು.

ನಿಡಗುಂದಿ: ಪಟ್ಟಣ ಸೇರಿದಂತೆ ತಾಲೂಕಾದ್ಯಂತ ಮುಸ್ಲಿಂ ಬಾಂಧವರು ಗುರುವಾರ ಬಕ್ರೀದ ಹಬ್ಬ ಆಚರಿಸಿದರು. ಬೆಳಗ್ಗೆ ಮಸೀದಿಗಳಿಗೆ ತೆರಳಿ ಸಾಮೂಹಿಕ ಪ್ರಾರ್ಥನೆ, ಈದ್ ಸಂದೇಶ, ಪ್ರವಚನ ಆಲಿಸಿ ಪರಸ್ಪರ ಈದ್ ಶುಭಕೋರಿದರು. ಬಜಾರ್ ರಸ್ತೆ, ಹಳೆ ಬಸ್ ನಿಲ್ದಾಣ ಮಾರ್ಗವಾಗಿ ಹೊರವಲಯದ ಈದ್ಗಾ ಮೈದಾನಕ್ಕೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಮೌಲಾನಾ ಆಸಿಫ್ ಚಪ್ಪರಬಂದ ಪ್ರಾರ್ಥನೆ ಮಾಡಿಸಿದರು. ಹಾಫಿಜ್ ಜಾಹೀದ ಸೌದಾಗಾರ ಧರ್ಮೋಪದೇಶ ನೀಡಿದರು. ಅಂಜುಮನ್ ಅಧ್ಯಕ್ಷ ಎಂ.ಎಂ. ಮುಲ್ಲಾ, ಮುಖಂಡ ಹಾಜಿ ಜಾಕೀರ್ ಬೇಪಾರಿ, ಲಾಲಸಾಬ ಬಾಣಕಾರ,ರಾಜಾಸಾಬ ಬಾಣಕಾರ, ಮೌಲಾಸಾಬ್ ಅತ್ತಾರ, ಅಲಿ ಚಪ್ಪರಬಂದ, ರಮಜಾನ ನದಾಫ್, ರಾಜು ನದಾಫ್, ಮೈಬುಬಸಾಬ ಮುಲ್ಲಾ, ಲಾಲಸಾಬ ಹೆರಕಲ್ಲ, ಇಮಾಮಸಾಬ ಮಾಲ್ದಾರ, ಯೂಸುಫ್ ಜೈನಾಪುರ, ಹಸನ್ ಡೊಂಗ್ರಿ ಹಾದಿಮನಿ, ಇಮಾಮಖಾನ್ ಪಾಟೀಲ, ಶಿಕ್ಷಕ ಶಖೀಲಅಹ್ಮದ ಕುಂಟೋಜಿ, ಯುಸೂಫ್ ಜೈನಾಪುರ, ನಜೀರ ಗುಳೇದ, ಮಹಬೂಬ ವಾಲಿಕಾರ, ಅಲ್ಲಾಭಕ್ಷ ಲಷ್ಕರಿ ಇತರರಿದ್ದರು.

ನಾಲತವಾಡ: ಪಟ್ಟಣದಲ್ಲಿ ಗುರುವಾರ ಶಾಂತಿ ಮತ್ತು ಸುವ್ಯವಸ್ಥಿತವಾಗಿ ಸಂಭ್ರಮದ ಬಕ್ರೀದ್ ಆಚರಿಸಲಾಯಿತು.ನಂತರ ಪ್ರಮುಖ ಬೀದಿಗಳಲ್ಲಿ ದೇವನ ಸ್ತೂತಿಗಳನ್ನು ಪಠಿಸುತ್ತ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲು ಈದ್ಗಾ ತೆರಳಿದರು. ಈದ್ಗಾ ಸೇರಿದ ಮುಸ್ಲಿಂರು ದೇವನಿಗೆ 2 ಬಾರೀ ತಲೆ ಬಾಗಿ ಪ್ರಾರ್ಥನೆ ಸಲ್ಲಿಸಿದರು. ಅಲ್ಲಾಬಕ್ಷ ಖಾಜಿಯವರು ಬಕ್ರೀದ್ ಕುರಿತು ಉಪದೇಶ ನೀಡಿದರು. ಶಾಸಕ ಸಿ.ಎಸ್.ನಾಡಗೌಡ, ಮಾಜಿ ಶಾಸಕ ನಂದಿನಿ ದೇಶಮುಖ ಅವರು ಸ್ಥಳಿಯ ಮುಸ್ಲಿಂರನ್ನು ತಮ್ಮ ವಾಡೆಗೆ ಬರಮಾಡಿಕೊಂಡು ಶುಭ ಕೋರಿದರು.





ಸಿದ್ದರಾಮಯ್ಯ ರಾಜೀನಾಮೆ: ಕುರುಬ ಸಂಘದಿಂದ ಪ್ರತಿಭಟನೆ

• **ಸಿಂದಗಿ:** ಸ್ಥಳೀಯ ಶಾಸಕರು ಸಹ ಚುನಾವಣೆ ಸಂದರ್ಭದಲ್ಲಿ ಬಹಳಷ್ಟು ಕಾರ್ಯಕ್ರಮಗಳಲ್ಲಿ ಸಿದ್ದರಾಮಯ್ಯನವ ಹೆಸರನ್ನು ಮುಂದಿಟ್ಟುಕೊಂಡು ಮತ ಕೇಳಿ ಅಹಿಂದ ವರ್ಗಗಳ ಮತ ಪಡೆದು ಶಾಸಕರಾಗಿದ್ದಾರೆ. ಈ ರಾಜೀನಾಮೆ ಅಹಿಂದ ವರ್ಗಕ್ಕೆ ಸಾಕಷ್ಟು ನೋವುಂಟುಮಾಡಿದೆ. ಅಹಿಂದ ವರ್ಗಗಳ ಮತ ಪಡೆದ ಶಾಸಕ ಅಶೋಕ ಮನಗೂಳಿ ಅವರು ಕೂಡಲೇ ರಾಜೀನಾಮೆ ಕೊಡಬೇಕೆಂದು ಸಮಾಜದ ಮುಖಂಡ ಮಲ್ಲಿಕಾರ್ಜುನ ಸಾವಳಸಂಗ ಆಗ್ರಹಿಸಿದ್ದಾರೆ.

ನಗರದ ಬಸವೇಶ್ವರ ವೃತ್ತದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜೀನಾಮೆ ನೀಡಲು ಒತ್ತಡ ಹಾಕಲಾಗಿದೆ ಎಂದು ಆರೋಪಿಸಿ ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಗುರುವಾರ ಕುರುಬ ಸಂಘ ತಾಲೂಕು ಘಟಕದಿಂದ ಪ್ರತಿಭಟನೆ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಸಿದ್ದರಾಮಯ್ಯ ಹಾಗೂ ಅವರ ಅಹಿಂದ ಬೆಂಬಲವೇ ಕಾರಣ. ಸಿದ್ದರಾಮಯ್ಯ ರಾಜೀನಾಮೆ ನೀಡಿದರೇ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಭಾರಿ ಹಿನ್ನಡೆ ಎದುರಿಸಬೇಕಾಗುತ್ತದೆ. ರಾಜ್ಯಕ್ಕೆ ಗ್ಯಾರಂಟಿ ನೀಡಿ, ಅದನ್ನು ವ್ಯವಸ್ಥಿತವಾಗಿ ನಿಭಾಯಿಸಿರುವ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸುವ ಉದ್ದೇಶ ಏನು? 2028ರವರೆಗೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿರಲಿದ್ದಾರೆ




ಎನ್ನುವ ಕಾರಣಕ್ಕೆ ಅಹಿಂದ ಸಮಾಜವು ಶೇ.90ರಷ್ಟು ಮತ ಹಾಕಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದಿದೆ. ಕಾಂಗ್ರೆಸ್ ಸರ್ಕಾರ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿದರ ಮುಂಬರುವ 2028ರ ಚುನಾವಣೆಯಲ್ಲಿ ಅಹಿಂದ ಒಕ್ಕೂಟ ತಕ್ಕ ಪಾಠ ಕಲಿಸಲಿದೆ ಎಂದು ಎಚ್ಚರಿಸಿದರು.

ತಳವಾರ ಸಮಾಜದ ಮುಖಂಡ ಪೀರು ಕೆರೂರ ಮಾತನಾಡಿದರು. ಕುರುಬ ಸಂಘದ ತಾಲೂಕಾಧ್ಯಕ್ಷ ನಿಂಗಣ್ಣ ಬುಳ್ಳಾ, ಆಲಮೇಲ ತಾಲೂಕು ಕುರುಬ ಸಂಘದ ಅಧ್ಯಕ್ಷ ಸಿದ್ದು ಕರಿಗೊಂಡ, ಪೀರು ಕೆರೂರ, ಶಿವಾನಂದ ಗಣಿಹಾರ, ದತ್ತು ಎಡಗಿ, ಯಲ್ಲು ಬಮುನಳ್ಳಿ, ಭೀಮರಾಯ ಸೀತಿಮನಿ, ಮಾಳು ಗಡೆದ,ಲಕ್ಷ್ಮಣ್ಣ ಜೇವರ್ಗಿ, ಬಾಪುಗೌಡ ಪಾಟೀಲ, ಸಿದ್ದು ತಮದೊಡ್ಡಿ, ನಿಂಗಣ್ಣ ಬಿಸಾನಾಳ, ವಿಠ್ಠಲ ನಾಯ್ಕೋಡಿ, ಮಡಿವಾಳಪ್ಪ ಪೂಜಾರಿ, ಬಸನಗೌಡ ಪಾಟೀಲ ಸೇರಿದಂತೆ ಅಭಿಮಾನಿಗಳು ಇದ್ದರು.

ಕಳಪೆ ಮಾವಿನ ಹಣ್ಣು ಮಾರಾಟ: ಸಾರ್ವಜನಿಕರ ಆಕ್ರೋಶ

• **ಮುದ್ದೇಬಿಹಾಳ:** ವ್ಯಾಪಾರಿಗಳು ಹೆಚ್ಚಿನ ಬೆಲೆ ಕೊಟ್ಟರು ಕೊಳೆತ, ಹುಳುಗಳು ಇರುವ ಹಾಗೂ ಗುಣಮಟ್ಟ ಕಳೆದುಕೊಂಡ ಮಾವಿನ ಹಣ್ಣುಗಳನ್ನು ಮಾರುಕಟ್ಟೆಗೆ ತಂದು ಮಾರಾಟ ಮಾಡಿರುವದಕ್ಕೆ ಗ್ರಾಹಕರು ಆಕ್ರೋಶಗೊಂಡ ಪೊಲೀಸರಿಗೆ ದೂರು ಒಪ್ಪಿಸಿದ ಘಟನೆ ನಡೆದಿದೆ.

ನಗರದ ಬಸವೇಶ್ವರ ವೃತ್ತ, ಬಜಾರ ರಸ್ತೆ, ಬಸ್ ನಿಲ್ದಾಣ ಎದುರುಗಡೆ ಕೆಲವು ಕಡೆ ಮಾವಿನ ಹಣ್ಣು ಮಾರಾಟಗಾರರು ಮಾರುಕಟ್ಟೆಯಲ್ಲಿ ರಾಸಾಯನಿಕ ಬಳಸಿದ, ಹುಳು ಬಿದ್ದ ಹಾಗೂ ಹಾಳಾಗಿರುವ ಮಾವಿನ ಹಣ್ಣುಗಳ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಗ್ರಾಹಕರಿಗೆ ವಂಚಿಸುವುದು ಅಲ್ಲದೆ. ಮಾರಾಟದ ಬೆಲೆ



ಕೂಡ ಗ್ರಾಹಕರಿಂದ ಗ್ರಾಹಕರಿಗೆ ವ್ಯತ್ಯಾಸ ಕಂಡುಬಂದಿದೆ. ಬಸವೇಶ್ವರ ವೃತ್ತದಲ್ಲಿ ಮಾರಾಟಗಾರರೊಬ್ಬರು 100 ರೂ ಗೆ ಎರಡು ಕೆಜಿ ಯಂತೆ ಮಾವಿನ ಹಣ್ಣು ಮಾರಿದ್ದರು. ಮನೆಗೆ ಹೋಗಿ ಈ ಮಾವಿನ ಹಣ್ಣು ಕತ್ತರಿಸಿ ತಿನ್ನುವಾಗ ಎಲ್ಲಾ ಹಣ್ಣುಗಳಲ್ಲಿ ಹುಳು ಪತ್ತೆಯಾಗಿರುವುದು ಬೆಳಕಿಗೆ ಬಂದಿದೆ. ವ್ಯಾಪಾರಿ ಮಾರಾಟ ಮಾಡುತ್ತಿರುವ ಸುಮಾರು 40-50 ಕೆಜಿ ಕೊಳೆತ ಹಣ್ಣು ಮಾರಿರುವದು ಕಂಡುಬಂದಿದೆ. ಕೆಲವು ಗ್ರಾಹಕರು ಮಾವು ಖರೀದಿ ಮಾಡಿದಾಗ ಕೆಟ್ಟಿರುವ ಹಣ್ಣು ಕಂಡು ಸುತ್ತಮುತ್ತಲಿನ ಗ್ರಾಹಕರನ್ನು ಕರೆದು, ವ್ಯಾಪಾರಿಯನ್ನು ತರಾಟೆಗೆ ತೆಗೆದುಕೊಂಡು, ಗ್ರಾಹಕರಿಗೆ ಮೋಸ ಮಾಡಿದ್ರೆ ಹೇಗೆ ನಿಮ್ಮನ್ನು ಯಾರು ಪ್ರಶ್ನೆ ಮಾಡುವವರು ಇಲ್ಲವೆ ಎಂದು ನಂತರ ಪೊಲೀಸ್ ಇಲಾಖೆಗೆ ಪೋನ್ ಮಾಡಿ ವ್ಯಾಪಾರಿಯನ್ನು ಪೊಲೀಸರ ಕೈಗೆ ಒಪ್ಪಿಸಿದ್ದಾರೆ. ಈ ವೇಳೆ ವ್ಯಾಪಾರಿ ನಾನು ಮಾವಿನ ಹಣ್ಣು ನಾಲತವಾಡ ಮೂಲದ ರಮೇಶ್ ಅವರ ಹತ್ತಿರ ಮಾವು ಕೊಂಡುಕೊಂಡಿದ್ದೇನೆ ನನ್ನದು ಯಾವುದೇ ತಪ್ಪಿಲ್ಲ ಎಂದು ಪೊಲೀಸರಿಗೆ ಉತ್ತರಿಸಿದರು.

ಗ್ಯಾಸ್ಟ್ರಿಕ್ ಸಮಸ್ಯೆಯಿಂದ ಜಠರದ ಕ್ಯಾನ್ಸರ್: ಶ್ರೀಕಾಂತ

• **ವಿಜಯಪುರ:** ಅತಿಯಾದ ಆಮ್ಲೀಯತೆ ಅಥವಾ ಗ್ಯಾಸ್ಟ್ರಿಕ್ ಸಮಸ್ಯೆ ಜಠರದ ಕ್ಯಾನ್ಸರ್‌ಗೆ ಕಾರಣವಾಗಬಹುದು ಎಂದು ಹುಬ್ಬಳ್ಳಿ ಎಚ್‌ಸಿಜಿ ಕ್ಯಾನ್ಸರ ಆಸ್ಪತ್ರೆಯ ಸಂದರ್ಶಕ ತಜ್ಞವೈದ್ಯ ಡಾ.ಶ್ರೀಕಾಂತ ರವಿಚಂದ್ರನ್ ಹೇಳಿದರು.



ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರ ಚಿಕಿತ್ಸೆ ವಿಭಾಗ ಆಯೋಜಿಸಿದ್ದ ಜಠರದ ಕ್ಯಾನ್ಸರ್ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 40 ವರ್ಷ ದಾಟಿದ ವಯಸ್ಕರು ಗ್ಯಾಸ್ಟ್ರಿಕ್ ಸಮಸ್ಯೆ ನಿರ್ಲಕ್ಷಿಸಬಾರದರು. ಔಷಧ ಅಂಗಡಿಗಳಲ್ಲಿ ಸ್ವಚಿಕಿತ್ಸೆಯನ್ನು ಪಡೆಯದೆ ಉದರದರ್ಶಕ ಯಂತ್ರದ (ಎಂಡೊಸ್ಕೋಪಿ) ತಪಾಸಣೆ ಮಾಡಿಸಿಕೊಂಡರೆ ಜಠರದ ಕ್ಯಾನ್ಸರ್‌ನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿ ಸೂಕ್ತ ಚಿಕಿತ್ಸೆಯ ಮೂಲಕ ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿದೆ ಎಂದರು.

ಬಿಎಲ್‌ಡಿಇ ಆಸ್ಪತ್ರೆಯ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ.ಮಂಜುನಾಥ ಕೋಟೆಣ್ಣವರ ಮಾತನಾಡಿ, ದುಶ್ಚಟಗಳು, ಹೆಚ್ಚು ಹೊತ್ತಿಸಿದ ಎಣ್ಣೆ, ಮಸಾಲೆ ಆಹಾರ ಸೇವನೆ ಹಾಗೂ ಅನುವಂಶಿಕವಾಗಿಯೂ ಬರಬಹುದು. ದೀರ್ಘಕಾಲದ ಗ್ಯಾಸ್ಟ್ರಿಕ್ ಸಮಸ್ಯೆಯೆಂದು ಸುಮ್ಮನಿರದೆ, ತಜ್ಞ ವೈದ್ಯರನ್ನು ಸಂಪರ್ಕಿಸಿ ಸೂಕ್ತ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಶಸ್ತ್ರ ಚಿಕಿತ್ಸಕರ ಸಂಘದ ಕಾರ್ಯದರ್ಶಿ ಮತ್ತು ಪ್ರಾಧ್ಯಾಪಕ ಡಾ. ರಮಾಕಾಂತ ಬಳೂರಕರ ಮಾತನಾಡಿ, ಜಠರದ ಕ್ಯಾನ್ಸರ್ ರೋಗಿಗಳಿಗೆ ಬಿಎಲ್‌ಡಿಇ ಆಸ್ಪತ್ರೆಯಲ್ಲಿ ಎಲ್ಲ ಬಗೆಯ ಚಿಕಿತ್ಸೆಗಳಿವೆ. ಅಲ್ಲದೇ, ತಜ್ಞ ವೈದ್ಯರು ಲಭ್ಯರಿದ್ದಾರೆ ಎಂದರು.

ಶಸ್ತ್ರಚಿಕಿತ್ಸೆ ವಿಭಾಗದ ಪ್ರಾಧ್ಯಾಪಕ ಡಾ.ವಿಜಯಾ ಪಾಟೀಲ, ಡಾ. ಗಿರೀಶ ಕುಲ್ಲೊಳ್ಳಿ, ಡಾ.ವಿಕ್ರಂ ಸಿಂದಗಿಕರ, ಡಾ.ದೀಪಕ ಚವ್ಹಾಣ, ಡಾ.ದಯಾನಂದ ಬಿರಾದಾರ, ಡಾ.ಪ್ರದೀಪ ಜಾಬು ಸೇರಿದಂತೆ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

ರೋಗಿಗಳ ಅನುಕೂಲಕ್ಕೆ ಕೂಲರ್ ವಿತರಣೆ

• **ವಿಜಯಪುರ:** ಜಿಲ್ಲೆಯಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿದ್ದರಿಂದ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗುವ ರೋಗಿಗಳ ಅನುಕೂಲಕ್ಕಾಗಿ ಉಷ್ಣತೆಯಿಂದ ಆಗುವ ದುಷ್ಪರಿಣಾಮ ತಡೆಗಟ್ಟಲು ಜಿಲ್ಲಾ ಆಸ್ಪತ್ರೆಗೆ ಕೂಲರ್ ವಿತರಿಸಲಾಯಿತು.

ಜಿಲ್ಲಾ ಆಸ್ಪತ್ರೆಯ ವಿವಿಧ ವಾರ್ಡ್‌ಗಳಿಗೆ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಶಿವಾನಂದ ಮಾಸ್ತಿಹೋಳಿ ಕೂಲರ್ ವಿತರಿಸಿ, ಮಾತನಾಡಿ, ರಾಜ್ಯದಲ್ಲಿಯೆ ಮೊದಲ ಬಾರಿಗೆ ವಿಜಯಪುರ ಜಿಲ್ಲಾ ಆಸ್ಪತ್ರೆ ರೋಗಿಗಳ ಅನುಕೂಲಕ್ಕಾಗಿ ಕೂಲರ್ ಅನ್ನು ವಿತರಿಸಿದ್ದು, ರೋಗಿಗಳಿಗೆ ಅನುಕೂಲವಾಗಲಿದೆ ಎಂದರು.

ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಇಲಿಯಾಸ್ ಸಿದ್ದಿಕಿ, ಮುನ್ನಾ ಮಣೂರ, ನಜೀರ್ ತಾಳಿಕೋಟಿ, ಅಬೂಬಕರ್ ಕಂಬಾಗಿ, ಸಂತೋಷ ಶಹಾಪೂರ, ಲಕ್ಷ್ಮೀ ಕ್ಷೀರಸಾಗರ, ಸವಿತಾ ಧನರಾಜ, ಶ್ರೀಕಾಂತ ಮಾನೆ, ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ ಡಾ.ಚಂದು ರಾಠೋಡ, ಡಾ.ಎ.ಜಿ.ಬಿರಾದಾರ, ಆಡಳಿತಾಧಿಕಾರಿ ಅಬ್ದುಲ್ ಶಕುರ್ ಸಿಂದಗಿಕರ್ ಇದ್ದರು.



ನಾಟಕ ಬರಹಗಾರರು, ಕವಿಗಳಿಂದ ಡಿಸಿಗೆ ಮನವಿ

• **ವಿಜಯಪುರ:** ಕರ್ನಾಟಕ ರಾಜ್ಯ ನಾಟಕ ಬರಹಗಾರ ಕವಿಗಳ ಸಂಘ ವಿಜಯಪುರ ಇವರ ವತಿಯಿಂದ ವಿವಿಧ ಬೇಡಿಕೆಗಳ ಕುರಿತು ಮನವಿ ಸಲ್ಲಿಸಲಾಯಿತು.

ವಿಜಯಪುರ ಜಿಲ್ಲೆಯ ಹೆಸರಾಂತ ನಾಟಕರಾದ ಹಂದಿಗನೂರು ಸಿದ್ದರಾಮಪ್ಪ ಟ್ರಸ್ಟ್ ವನ್ನು ಸರ್ಕಾರದ ವತಿಯಿಂದ ಪ್ರಾರಂಭಿಸಬೇಕು. ಈ ಟ್ರಸ್ಟಿನ ಮೂಲಕ ಅವರ ಬದುಕು ಬರಹ ಹಾಗೂ ನಾಟಕದ ಮೂಲಕ ಸಮಾಜದ ಪರಿವರ್ತನೆಗೆ ಅವರ ಕೊಡುಗೆಗಳು ಏನು ಎಂಬುವದರ ಕುರಿತು ಇಂದಿನ ಯುವ ಪೀಳಿಗೆಗೆ ತಿಳಿಸುವ ಕಾರ್ಯ ಈ ಟ್ರಸ್ಟಿನ ಮೂಲಕವಾಗಿ ಆಗುತ್ತದೆ ಕಳೆದ ವರ್ಷ ಬಾಗಲಕೋಟೆ ಜಿಲ್ಲೆಯಲ್ಲಿ ಬಿ.ಬಿ.ದತ್ತರಗಿಯವರ ಟ್ರಸ್ಟ ಪ್ರಾರಂಭವಾಗಿದೆ ಅದೇ ರೀತಿ ಬಿಜಾಪುರದ ಹೆಸರಾಂತ ನಾಟಕರರಾದ ಹಂದಿಗನೂರು ಸಿದ್ದರಾಮಪ್ಪ ಟ್ರಸ್ಟ್ ಪ್ರಾರಂಭಿಸಬೇಕು ಹಾಗೂ ವಿಜಯಪುರದ ರಾಣಿ ಚೆನ್ನಮ್ಮ ರಂಗಮಂದಿರ ನೂತನ ಕಟ್ಟಡದೊಂದಿಗೆ ಪುನ ಪ್ರಾರಂಭವಾಗಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಜಯಪುರ ಇವರು ತಮ್ಮ ಇಲಾಖೆಯಿಂದ ನಡೆಯುವ ಕಾರ್ಯಕ್ರಮಕ್ಕೆ ಕವಿಗಳಿಗೆ ಆಹ್ವಾನ ನೀಡಬೇಕು ಮತ್ತು ಆಮಂತ್ರಣ ಪತ್ರಿಕೆಯಲ್ಲಿ ಹೆಸರು ಹಾಕಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಜಯಪುರ ಇವರು ವಿಜಯಪುರ ಜಿಲ್ಲೆಯ ಕವಿಗಳ ಮಾಹಿತಿಯನ್ನು ಕಾಲಕಾಲಕ್ಕೆ ತಮ್ಮ ಮೇಲಾಧಿಕಾರಿಗಳಿಗೆ ನೀಡಬೇಕು ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ವಿಜಯಪುರ ಜಿಲ್ಲಾಧ್ಯಕ್ಷರೂ ವಿಜಯಪುರ ಜಿಲ್ಲೆಯಲ್ಲಿ ಜರುಗುವ ತಾಲೂಕ ಮತ್ತು ಜಿಲ್ಲಾ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಕವಿಗಳನ್ನು ಆಯ್ಕೆ ಮಾಡಬೇಕು ವಿಜಯಪುರ ನಗರದಲ್ಲಿ ನಮ್ಮ ಸಂಘದ ಕಾರ್ಯ ಚಟುವಟಿಕೆ ನಡೆಸಲು ನಿವೇಶನ ನೀಡಬೇಕು. ಅರ್ಹತೆ ಹೊಂದಿದ ಕವಿಗಳಿಗೆ ಮಾಶಾಸನ ವ್ಯವಸ್ಥೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಡಬೇಕು ಹಾಗೂ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಪ್ರತಿ ವರ್ಷ ಜಿಲ್ಲೆಯ ಎರಡು ಜನ ಕವಿಗಳಿಗೆ ನೀಡಬೇಕು. ಹೀಗೆ ಹಲವಾರು ಬೇಡಿಕೆ ನೀಡಲಾಯಿತು.



ಜಿಲ್ಲೆಯ ದಲಿತ ಹಿರಿಯ ಹೋರಾಟಗಾರರಾದ ಅಭಿಷೇಕ ಚಕ್ರವರ್ತಿ ನಾಟಕ ಬರಹಗಾರ ಕವಿಗಳ ಸಂಘದ ಜಿಲ್ಲಾಧ್ಯಕ್ಷ ವೈ.ಎಚ್.ಅಂಗಡಗೇರಿ, ರಾಜ್ಯ ಸಂಘಟನಾ ಸಂಚಾಲಕ ಡಾ.ರಾಘವೇಂದ್ರ ಉಮ್ಮರಗಿ, ಗೌರವಾಧ್ಯಕ್ಷ ಸಿದ್ದಪ್ಪ ಅಳಗೊಂಡ, ಪ್ರಧಾನ ಕಾರ್ಯದರ್ಶಿ ಗುಂಡು ಕುಂಬಾರ, ಶಿವಾನಂದ ಡೆಂಗಿ, ಭೀಮು ಹೊನವಾಡ, ಮಲ್ಲಿಕಾರ್ಜುನ ಆಗಸರ, ಅನಿಲ ಜಾದವ ಉಪಸ್ಥಿತರಿದ್ದರು.

ಕಿರುಸುದ್ದಿ



ಕುರುಗೊಡು: ಸಮೀಪದ ಶಿರಿಗೇರಿ ಗ್ರಾಮದಲ್ಲಿ ಗುರುವಾರ ಜಾಮಿಯ ಮಸೀದಿ ಕಮಿಟಿ ವತಿಯಿಂದ ಬಕ್ರೀದ್ ಹಬ್ಬವನ್ನು ಗ್ರಾಮದ ಮುಸ್ಲಿಂ ಬಾಂಧವರು ಆಚರಿಸಿದರು. ಪ್ರಮುಖರಾದ ಖಾದರ್ ಬಾಷಾ, ಕೆ.ನಬಿಸಾಬ್, ಬಿ.ಮಹಮ್ಮದ್ ರಫೀಕ್, ಬಿ.ಅನ್ವರ್ ಬಾಷ, ಮುರ್ಷಿದ್ ಅಹ್ಮದ್, ಬಿ.ಅಹ್ಮದ್ ಸಾಬ್, ಆಶಿಫ್ ಮೌಲನ, ಬಿ.ಸಲಾಂ ಸಾಬ್, ಎಂ.ವಲಿ ಸಾಬ್ ,ಚಾಂದ್ ಬಾಷ, ನೂರು ಬಾಷ, ಪಿ.ಮಾಬು ಸಾಬ್ ಇತರರಿದ್ದರು.

ಕಾರ್ಮಿಕ ಕಾರ್ಡ್ ತಿರಸ್ಕಾರ: ಆರೋಪ

ಸಿಂಧನೂರು: ತಾಲೂಕಿನ ಉಮಲೂಟಿ ಗ್ರಾಮದ ನೈಜ ಕಟ್ಟಡ ಕಾರ್ಮಿಕನಾಗಿ ಅರ್ಜಿ ಸಲ್ಲಿಸಿದ್ದು, ಅದನ್ನು ವಿಜಯಲಕ್ಷ್ಮೀ ತಾಲೂಕು ಕಾರ್ಮಿಕ ನಿರೀಕ್ಷಕರು ತಿರಸ್ಕಾರ ಮಾಡಿರುವುದಕ್ಕೆ ಯಾವುದೇ ಕಾರಣ ತಿಳಿದಿಲ್ಲ, ಇದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ ಎಂದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಶಾಮಿದ್ ತಾಯಿ ತಿಪ್ಪಮ್ಮ ಕಟ್ಟಡ ಕಾರ್ಮಿಕ ಸಂಖ್ಯೆ ಕೆಎಆರ್‌ಸಿಆರ್ 0300004658 ಇದ್ದು ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದಾಗ ತಿರಸ್ಕಾರ ಮಾಡಿದ್ದಾರೆ. ಯಾವುದೇ ಕಾರಣವಿಲ್ಲದೆ ವಿನಾಕಾರಣ ತಿರಸ್ಕಾರ ಮಾಡಿದ್ದಾರೆಂದರೆ ಇದಕ್ಕೆ ಮೂಲ ಕಾರಣ ಲಂಚ ಕೊಡದೇ ಇರುವುದು ಎಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ.ಇನ್ನೂ ಈ ಕಟ್ಟಡ ಕಾರ್ಮಿಕ ಕಾರ್ಡ್‌ಗೆ ಅರ್ಜಿ ಸಲ್ಲಿಸಿದ ಸಹೋದರ ಮಾಬಿ ಸುಬಾನಿ ಮಾಹಿತಿ ಕೋರಿ ಅರ್ಜಿ ಸಲ್ಲಿಸಿದ್ದಾರೆ.ಈ ಹಿಂದೆ ಅದೇ ಉಮಲೂಟಿ ಗ್ರಾಮದಲ್ಲಿ ಕಟ್ಟಡ ಕಾರ್ಮಿಕ ಕಾರ್ಡ್‌ಗೆ ತಿರಸ್ಕಾರ ಮಾಡಲಾಗಿತ್ತು ಎಂಬ ಆರೋಪ ಈಗಾಗಲೇ ತಾಲೂಕು ಅಧಿಕಾರಿ ವಿಜಯಲಕ್ಷ್ಮೀ ಅವರ ಮೇಲಿದೆ. ಈ ಆರೋಪ ತಾಲೂಕು ಅಧಿಕಾರಿ ಮೇಲೆ ಪದೇ ಪದೆ ಕೇಳಿ ಬರುತ್ತಿದ್ದು ಇನ್ನೂ ಮುಂದೆ ಆದರೂ ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳು ಈ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂಬ ಮಾತು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ.

ಬೈಕ್ ಸವಾರನ ಮೇಲೆ ಪೊಲೀಸರಿಂದ ಹಲ್ಲೆ

ಸಿಂಧನೂರು: ಬೈಕ್ ತಪಾಸಣೆ ನೆಪದಲ್ಲಿ ಸವಾರನಿಗೆ ಮಸ್ಕಿ ತಾಲೂಕಿನ ಬಳಗಾನೂರು ಠಾಣೆಯ ಪೊಲೀಸರು ಅವಾಚ್ಯ ಶಬ್ದಗಳಿಂದ ನಿಂದಿಸಿ ಕೊರಳು ಪಟ್ಟಿ ಹಿಡಿದು ತಳ್ಳಾಡಿದ ಘಟನೆ ತಾಲೂಕಿನ ಜವಳಗೇರಾ ಗ್ರಾಮದ ಹತ್ತಿರ ನಡೆದಿದೆ.

ಮಂಗಳವಾರ ಬೈಕ್ ತಪಾಸಣೆ ಗೈಯುತ್ತಿರುವ ಬಳಗಾನೂರ ಎಎಸ್‌ಐ ಸಿದ್ದಪ್ಪ, ಪೊಲೀಸ್ ಪೇದೆ ದಯಾನಂದ, ಹೋಂಗಾರ್ಡ್ ಪಂಪಾಪತಿ ತಪಾಸಣೆಯಲ್ಲಿದ್ದವರು. ಇದೇ ಸಮಯದಲ್ಲಿ ಮಂಜುನಾಥ ನಾಯಕ ಎಂಬ ಯುವಕ ಸಿಂಧನೂರು ಕಡೆಯಿಂದ ನೀರಮಾನ್ವಿಗೆ ಹೊರಟಿರುವಾಗ ತಪಾಸಣೆ ನಡೆಸಲಾಗಿದೆ. ಹೆಲ್ಮೆಟ್ ಇಲ್ಲದಕ್ಕೆ ರಶೀದಿ ಕೊಡಿ ಕೋರ್ಟ್‌ನಲ್ಲಿ ಪಾವತಿ ಮಾಡುತ್ತೇನೆಂದು ಹೇಳಿದರೂ ಕೇಳದ ಪೊಲೀಸರು ಬೈಯ್ದಾಡಿ ಕೊರಳು ಪಟ್ಟಿ ಹಿಡಿದು ತಳ್ಳಾಡಿದ್ದಾರೆ ಮತ್ತು ಕೈ ಮೇಲೆ ಉಗುರು ಗುರುತುಗಳು ಬೀಳುವಂತೆ ಚೂರಿದ್ದಾರೆ.ಆಗ ಮಂಜುನಾಥ ನಾಯಕ ಅವರು ಬೇರೆ ಗಾಡಿಗಳನ್ನು ಬಿಡುತ್ತಿದ್ದಿರಿ ನಮ್ಮನ್ನು ಯಾಕೆ ಬಿಡುವುದಿಲ್ಲ ಎಂದು ಕೇಳಿದಾಗ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಸಿಡಿಲು ಬಡಿದು ಆಕಳು, ಎಮ್ಮೆ ಸಾವು

ಕಲಬುರಗಿ: ಜಿಲ್ಲೆಯ ಆಳಂದತಾಲೂಕಿನಲ್ಲಿ ಮುಂಗಾರು ಪೂರ್ವ ಗುಡುಗು, ಮಿಂಚು ಸಹಿತ ಸುರಿದ ಭಾರಿ ಮಳೆಗೆ ಸಿಡಿಲು ಬಡಿದು ಆಕಳು ಹಾಗೂ ಎಮ್ಮೆ ಸಾವಿಗೀಡಾಗಿರುವ ಘಟನೆ ಬುಧವಾರ ಬೆಳಗಿನ ಜಾವ ನಡೆದಿದೆ.ಬೆಳಗ್ಗೆ ಸುರಿದ ಮಳೆಯ ವೇಳೆ ತಾಲೂಕಿನ ಸಾಲೇಗಾಂವ ಗ್ರಾಮದ ರೈತ ಗುರುನಾಥ ಹೆಬಳೇ ಎಂಬುವರ ಹೊಲದಲ್ಲಿ ಕಟ್ಟಲಾಗಿದ್ದ ಆಕಳು ಮತ್ತು ಎಮ್ಮೆ ಸ್ಥಳದಲ್ಲೇ ಮೃತಪಟ್ಟಿವೆ. ತಾಲೂಕಿನ ನಿಂಬರ್ಗಾದಲ್ಲಿ 27 ಮಿ.ಮೀ, ಕೊರಹಳ್ಳಿಯಲ್ಲಿ 7.5 ಮಿ.ಮೀ, ಆಳಂದದಲ್ಲಿ 4.8 ಮಿ.ಮೀ ಮಳೆಯಾಗಿದೆ. ನರೋಣ ವ್ಯಾಪ್ತಿಯ ರಿಕ್ಕಿನ ಆಲೂರು ಗ್ರಾಮದಲ್ಲಿ ಕೆಲವು ಮನೆಗಳ ಗೋಡೆ ಕುಸಿದಿದ್ದು, ಜಾನುವಾರು ಸಾವು ಹೊರತುಪಡಿಸಿ ಯಾವುದೇ ಜೀವಹಾನಿ ಸಂಭವಿಸಿಲ್ಲ ಎಂದು ತಹಶೀಲ್ದಾರ್ ಅಣ್ಣಾರಾವ ಪಾಟೀಲ ತಿಳಿಸಿದ್ದಾರೆ.



ಕುಷ್ಟಗಿ: ತ್ಯಾಗ-ಬಲಿದಾನದ ಪ್ರತೀಕವಾದ ಬಕ್ರೀದ್ ಹಬ್ಬವನ್ನು ಮುಸ್ಲಿಂ ಬಾಂಧವರು ಪಟ್ಟಣದ ಸೇರಿದಂತೆ ತಾಲೂಕಿನಲ್ಲಿ ಶ್ರದ್ಧಾ-ಭಕ್ತಿಯಿಂದ ಆಚರಿಸಿದರು. ಪಟ್ಟಣದ ಹೊರವಲದ ಈದ್ಗಾ ಮೈದಾನದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಪರಸ್ಪರ ಶುಭಾಶಯ ಕೋರಿದರು. ಸಿಪಿಐ ವಿಶ್ವನಾಥ ಹಿರೇಗೌಡ್ರು ನೇತೃತ್ವದಲ್ಲಿ ಪಿಎಸೈ ಹನಮಂತಪ್ಪ ತಳವಾರ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಭೋವಿ ಸಮಾಜಕ್ಕೆ ಪ್ರಮಾಣಪತ್ರ ನೀಡಿ

ಕುಷ್ಟಗಿ: ತಾಲೂಕಿನ ಹಾಬಲಕಟ್ಟಿ ಗ್ರಾಮದ ಭೋವಿ ಸಮುದಾಯದವರಿಗೆ ಪರಿಶಿಷ್ಟ ಜಾತಿ ಪ್ರಮಾಣಪತ್ರ ನೀಡಬೇಕು ಎಂದು ಆಗ್ರಹಿಸಿ ಪಟ್ಟಣದ ತಹಶೀಲ್ದಾರ್ ಕಚೇರಿಯ ಗ್ರೇಡ್–2 ತಹಶೀಲ್ದಾರ್ ರಜನಿಕಾಂತ್ ಕೆಂಗೇರಿಗೆ ಅಖಿಲ ಕರ್ನಾಟಕ ಭೋವಿ ಸಮಾಜದ ವಿವಿಧ್ಧೋಶಗಳ ಕಲ್ಯಾಣ ಸಂಘದ ಪದಾಽಕಾರಿಗಳು ಬುಧವಾರ ಮನವಿ ಸಲ್ಲಿಸಿದರು.

ಸಂಘಟನೆ ತಾಲೂಕಾಧ್ಯಕ್ಷ ಶರಣಪ್ಪ ಬಿ.ಜಿ. ಮಾತನಾಡಿ, ಹಾಬಲಕಟ್ಟಿ ಗ್ರಾಮದ ಭೋವಿ ಸಮಾಜದ ವಿದ್ಯಾರ್ಥಿಗಳಿಗೆ ಪರಿಶಿಷ್ಟ ಜಾತಿ ಪ್ರಮಾಣಪತ್ರವನ್ನು ಜೂ.8 ರೊಳಗೆ ವಿತರಣೆ ಮಾಡಬೇಕಿದೆ.

ಈಗಾಗಲೇ ತಾವು ಕೇಳಿದ ಎಲ್ಲಾ ದಾಖಲಾತಿಗಳನ್ನು ಒಪ್ಪಿಸಿದೆ. ಮುಂದಿನ ತಿಂಗಳಲ್ಲಿ ಶಾಲೆಗಳು ಪುನಾರಂಭಗೊಳ್ಳುತ್ತವೆ. ಶೀಘ್ರವೇ 1950ರಲ್ಲಿ ಮೂಲಭೋವಿ ಸಮಾಜದವರು ದಾಖಲಾತಿಗಳಲ್ಲಿವೆ. 1944ರಲ್ಲಿ ವಡ್ಡರ್ ಜನಾಂಗದವರು ಜಾತಿ ಹೆಸರನ್ನು ಬೋಯಿ ಬದಲಾಯಿಸಿಕೊಂಡು ಗೆಜೆಟ್ ಗಮನಿಸಬೇಕಿದೆ.

1950ರಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಬಂದಾಗ 2002 ರಲ್ಲಿ ಭೋವಿ ಪರ್ಯಾಯ ಪದವಾಗಿ ಸೇರಿಸಿಕೊಂಡಿದೆ. ತ್ವರಿತವಾಗಿ ಸಮಾಜದವರಿಗೆ ಜಾತಿ ಪ್ರಮಾಣ ಪತ್ರ ನೀಡಿ ಸಾಮಾಜಿಕ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.

ಸಂಘಟನೆ ಕಾರ್ಯದರ್ಶಿ ಮುತ್ತಪ್ಪ ಭೋವಿ, ಸಂಘಟಕರಾದ ಪವಾಡೆಪ್ಪ ಜಿಂಗಿ, ಶರಣಪ್ಪ ಭೋವಿ ಹನ್ಮಪ್ಪ ಭೋವಿ, ಪರುಶು ಹಾದಿಮನಿ ಹಾಗೂ ಇನ್ನಿತರರು ಇದ್ದರು.



ಕುಷ್ಟಗಿ: ತಾಲೂಕಿನ ಹಾಬಲಕಟ್ಟಿ ಗ್ರಾಮದ ಭೋವಿ ಸಮುದಾಯದವರಿಗೆ ಪರಿಶಿಷ್ಟ ಜಾತಿ ಪ್ರಮಾಣಪತ್ರ ನೀಡಬೇಕು ಎಂದು ಆಗ್ರಹಿಸಿ ಪಟ್ಟಣದ ತಹಶೀಲ್ದಾರ್ ಕಚೇರಿಯ ಗ್ರೇಡ್–2 ತಹಶೀಲ್ದಾರ್ ರಜನಿಕಾಂತ್ ಕೆಂಗೇರಿಗೆ ಅಖಿಲ ಕರ್ನಾಟಕ ಭೋವಿ ಸಮಾಜದ ವಿವಿಧ್ಧೋಶಗಳ ಕಲ್ಯಾಣ ಸಂಘದ ಪದಾಽಕಾರಿಗಳು ಬುಧವಾರ ಮನವಿ ಸಲ್ಲಿಸಿದರು.

ಪೆಟ್ರೋಲ್, ಡೀಸೆಲ್ ಬಂಕ್ ಪ್ರತಿನಿಧಿಗಳೊಂದಿಗೆ ಸಭೆ

ಸಮರ್ಪಕವಾಗಿ ಇಂಧನ ಪೂರೈಸಿ: ಡಿಸಿ

ರಾಯಚೂರು: ಜಿಲ್ಲೆಯಲ್ಲಿ ಪೆಟ್ರೋಲ್, ಡೀಸೆಲ್ ಹಾಗೂ ಎಲ್‌ಪಿಜಿ ಅನಿಲ್ ಪೂರೈಕೆಯಲ್ಲಿ ಯಾವುದೇ ಕೊರತೆಯಿಲ್ಲ, ಹಾಗಾಗಿ ಸಾರ್ವಜನಿಕರು ಅಂತಕ ಪಡಬಾರದು ಎಂದು ಡಿಸಿ ಪೂವಿತಾ ಎಸ್. ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ವಿಡಿಯೋ ಕಾನ್ಫರೆನ್ಸ್ ಸಭಾಂಗಣದಲ್ಲಿ ಜಿಲ್ಲೆಯ ಅಧಿಕಾರಿಗಳು, ತೈಲ ಕಂಪನಿಯ ಸೇಲ್ಸ್ ಅಧಿಕಾರಿಗಳು ಹಾಗೂ ಪೆಟ್ರೋಲ್, ಡೀಸೆಲ್ ಬಂಕ್ ಪ್ರತಿನಿಧಿಗಳೊಂದಿಗೆ ವಿಡಿಯೋ ಸಂವಾದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ತೈಲ ಪೂರೈಕೆ ವಿಷಯದಲ್ಲಿ ಕಂಪನಿಗಳು ಜಾಗರೂಕತೆ ವಹಿಸಿ, ಸಮಸ್ಯೆ ಬಾರದ ರೀತಿಯಲ್ಲಿ ಇಂಧನ ಪೂರೈಸಬೇಕು. ಜಿಲ್ಲೆಗೆ ವಿವಿಧ ತೈಲ ಕಂಪನಿ ವಿತರಕರು ಸಮರ್ಪಕವಾಗಿ ಪೆಟ್ರೋಲ್ ಮತ್ತು ಡೀಸೆಲ್ ಪೂರೈಸಬೇಕು. ಎಲ್ಲ ಬಂಕ್ ಮಾಲೀಕರು ದೈನಂದಿನ ಮಾಹಿತಿ ಒದಗಿಸಬೇಕು. ಸಾರ್ವಜನಿಕರ ಬೇಡಿಕೆ ಅನುಸಾರ ಇಂಧನ ಪೂರೈಸಲು ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಮಾರಾಟಗಾರರಿಗೆ ಜಿಲ್ಲಾಧಿಕಾರಿ ಸೂಚಿಸಿದರು.

ಗ್ರಾಹಕರ ಹಿತರಕ್ಷಣೆ, ಇಂಧನ ಸುರಕ್ಷತೆ ಮತ್ತು ನಿಯಮಾವಳಿಗಳ ಪಾಲನೆ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು. ತೈಲ ಕಂಪನಿ ಪ್ರತಿನಿಧಿಗಳು ಮಾತನಾಡಿ, ಜಿಲ್ಲೆಯಲ್ಲಿ ಇಂಧನದ ಕೊರತೆ ಇರುವುದಿಲ್ಲ ಎಂದು ಸ್ಪಷ್ಟಪಡಿಸುವುದರ ಜೊತೆಗೆ ಇಂಡೆಂಟ್ ಅನುಗುಣವಾಗಿ ಇಂಧನ ಪೂರೈಸಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಆಹಾರ ಇಲಾಖೆಯ ಉಪ ನಿರ್ದೇಶಕ ನಜೀರ್ ಅಹಮದ್ ಮಾತನಾಡಿ, ಜಿಲ್ಲೆಯಲ್ಲಿ ಬಿಪಿಸಿಎಲ್ 48, ಐಒಸಿಎಲ್ 84 ಎಚ್‌ಪಿಸಿಎಲ್ 30 ಇದ್ದು, ನಯಾರ 32 ಒಳಗೊಂಡಂತೆ ಒಟ್ಟು 194 ಪೆಟ್ರೋಲ್ ಬಂಕ್‌ಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಸಭೆಗೆ ಮಾಹಿತಿ ನೀಡಿದರು. ಎಸ್ಪಿ ಅರುಣಾಂಗ್ಷು ಗಿರಿ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ, ಬಸವಣ್ಣೆಪ್ಪ ಕಲಶೆಟ್ಟಿ, ತಹಶೀಲ್ದಾರ್ ಸುರೇಶ ವರ್ಮಾ, ಆಹಾರ ಇಲಾಖೆಯ ವ್ಯವಸ್ಥಾಪಕ ಹರೀಶ್ ಸೇರಿದಂತೆ ಇತರ ಅಧಿಕಾರಿಗಳಿದ್ದರು.



> **ಮುಂಗಾರು ಆರಂಭವಾಗುತ್ತಿರುವರಿಂದ ರೈತರ ಭೂಮಿ ಉಳುಮೆ ಕಾರ್ಯ ನಡೆಯುತ್ತಿದೆ. ಹಾಗಾಗಿ ರೈತರಿಗೆ ಯಾವುದೇ ಅನಾನುಕೂಲ ಹಾಗೂ ಸಮಸ್ಯೆಯಾಗದಂತೆ ಇಂಧನ ಪೂರೈಕೆ ಮಾಡಬೇಕು. ನಿಗದಿತ ದರದಲ್ಲಿ ತೈಲವನ್ನು ಮಾರಾಟ ಮಾಡಬೇಕು. ಒಂದು ವೇಳೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದಲ್ಲಿ ಅಂತಹವರ ವಿರುದ್ಧ ಕ್ರಮ ಜರುಗಿಸಲಾಗುತ್ತದೆ.**
> ■ ಪೂವಿತಾ ಎಸ್., ಡಿಸಿ

ಪ್ರಿಯಾಂಕ್ ಖರ್ಗೆಗೆ ಡಿಸಿಎಂ ಸ್ಥಾನ ನೀಡಿ

ಕಲಬುರಗಿ: ರಾಜ್ಯ ರಾಜಕಾರಣದಲ್ಲಿ ತೀವ್ರಗೊಳ್ಳುತ್ತಿರುವ ಸಿಎಂ ಬದಲಾವಣೆ ಚರ್ಚೆಗಳ ಬೆನ್ನಲ್ಲೇ, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಉಪಮುಖ್ಯಮಂತ್ರಿ ಹುದ್ದೆ ನೀಡಬೇಕು ಎಂದು ಕಲ್ಯಾಣ ಕರ್ನಾಟಕ ಭಾಗದ ಪ್ರಮುಖ ಮಠಾಧೀಶರು ಬ್ಯಾಟ್ ಬೀಸಿದ್ದಾರೆ.

ಶ್ರೀಶೈಲಂ ಸಾರಂಗಧರ ಮಠದ ಜಗದ್ಗುರು ಡಾ.ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ, ಮುಗುಳನಾಗಾವಿಯ ಅಭಿನವ ಸಿದ್ದಲಿಂಗ ಶಿವಾಚಾರ್ಯರು, ಚಿತ್ತಾ ಪುರದ ಕರದಾಳ ಪೀಠದ ಪ್ರಣವಾನಂದ ಸ್ವಾಮೀಜಿ ಹಾಗೂ ತೋನಸಳ್ಳಿಯ ಡಾ.ಮಲ್ಲಣ್ಣಪ್ಪ ಮುತ್ಯಾ ಸೇರಿದಂತೆ ಹಲವು ಪೂಜ್ಯರು ಪ್ರಿಯಾಂಕ್ ಖರ್ಗೆ ಅವರ ಬೆಂಬಲಕ್ಕೆ ನಿಂತಿದ್ದಾರೆ.

ಈಗಾಗಲೇ, ಉತ್ತಮ ಸಚಿವರಾಗಿ ಅವರು ಗುರುತಿಸಿಕೊಂಡಿದ್ದು, ಅವರಿಗೆ ದೊಡ್ಡ ಜವಾಬ್ದಾರಿ ನೀಡುವ ಮೂಲಕ ಹೈಕಮಾಂಡ್ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಮಠಾಧೀಶರು ಜಂಟಿಯಾಗಿ ಒತ್ತಾಯಿಸಿದ್ದಾರೆ.

101 ಇಡುಗಾಯಿ ಒಡೆದ ಅಭಿಮಾನಿಗಳು: ಮಠಾಧೀಶರ ಒತ್ತಾಯದ ಬೆನ್ನಲ್ಲೇ ಸಚಿವರ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಹಬ್ಬದ ವಾತಾವರಣ ಸೃಷ್ಟಿಸಿದ್ದಾರೆ. ಪ್ರಿಯಾಂಕ್ ಖರ್ಗೆ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ಸಿಗಲಿ ಎಂದು ಪ್ರಾರ್ಥಿಸಿ, ಐತಿಹಾಸಿಕ ಶರಣಬಸವೇಶ್ವರ ದೇವಸ್ಥಾನ ಸೇರಿದಂತೆ ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಶರಣಬಸವೇಶ್ವರ ಮಠದ ಆವರಣದಲ್ಲಿ ದೇವರಿಗೆ 101 ತೆಂಗಿನಕಾಯಿಗಳನ್ನು ಇಡುಗಾಯಿಯಾಗಿ ಒಡೆಯುವ ಮೂಲಕ ಅಭಿಮಾನಿಗಳು ತಮ್ಮ ಭಕ್ತಿ ಹಾಗೂ ಹಕ್ಕೊತ್ತಾಯವನ್ನು ಪ್ರದರ್ಶಿಸಿದರು.

> **ಪ್ರಿಯಾಂಕ್ ಖರ್ಗೆ ಅವರಿಗೆ ರಾಜ್ಯದ ಡಿಸಿಎಂ ಸ್ಥಾನ ನೀಡಬೇಕು. ರಾಜ್ಯದ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗಾಗಿ ಅವರು ಶ್ರಮಿಸುತ್ತಾರೆ ಎನ್ನುವ ವಿಶ್ವಾಸವಿದೆ. ಹೈಕಮಾಂಡ್ ಈ ಮಹತ್ವದ ಜವಾಬ್ದಾರಿಯನ್ನು ಅವರ ಹೆಗಲಿಗೆ ನೀಡಲಿ.**
> ■ ಡಾ.ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ, ಜಗದ್ಗುರು, ಶ್ರೀಶೈಲಂ ಸಾರಂಗಧರ ಮಠ



ಅರ್ಜಿ ಆಹ್ವಾನ

ಸಿಂಧನೂರು: ತಾಲೂಕಿನಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಡಿಯಲ್ಲಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು ಎಂದು ತಾಲೂಕ ಹಿಂದುಳಿದ ವರ್ಗಗಳ ಕಲ್ಯಾಣಧಿಕಾರಿ ಲಿಂಗಪ್ಪ ಅಂಗಡಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು. ಮೆಟ್ರಿಕ್ ಪೂರ್ವ ಬಾಲಕರಮ ಬಾಲಕಿಯರವಸತಿನಿಲಯಗಳಾದತಾಲೂಕಿನಅಂಬಾಮಠ,ಜವಳಗೇರಾ,ಸಿಂಧನೂರು ವಸತಿ ನಿಲಯಗಳಲ್ಲಿ ಖಾಲಿ ಇರುವ ಸ್ಥಾನಗಳಿಗೆ ಅರ್ಜಿ ಸಲ್ಲಿಸಲು ಜೂ.28 ಕೊನೆ ದಿನ ನಿಗದಿಯಾಗಿದೆ. ಮೆಟ್ರಿಕ್ ನಂತರದ ಬಾಲಕರ/ಬಾಲಕಿಯರ ವಸತಿ ನಿಲಯಗಳಾದ ಬಾಲಕರ ವಸತಿ ನಿಲಯ ಹೊಸದು,ಪಿಡಬ್ಲ್ಯೂಡಿ ಕ್ಯಾಂಪ್,ತುರವಿಹಾಳ ಮತ್ತು ಬಾಲಕಿಯರ ವಸತಿ ನಿಲಯ ಸುಕಾಲಪೇಟೆ,ಹೊಸದು,ಸಿಂಧನೂರು ಟೌನ್ ಅರ್ಜಿ ಸಲ್ಲಿಸಲು ಜೂ.15ರ ವರೆಗೆ ಆನ್‌ಲೈನ್ ಅರ್ಜಿಗಳನ್ನು Http://bacwd.karn-taka.gov.in ಈ ಲಿಂಕ್ ನಲ್ಲಿ ಸಲ್ಲಿಸಿ ದೃಢೀಕೃತ ದಾಖಲೆಗಳೊಂದಿಗೆ ತಾಲೂಕು ಕಚೇರಿಗೆ ಸಲ್ಲಿಸಬೇಕು ಎಂದು ತಿಳಿಸಿದರು.

ಜೂ.10ರಂದು ಆರೋಗ್ಯ ಉಚಿತ ತಪಾಸಣೆ-ಶಸ್ತ್ರ ಚಿಕಿತ್ಸೆ ಶಿಬಿರ

ಗಂಗಾವತಿ: ಕಲ್ಯಾಣ ಕರ್ನಾಟಕ ಭಾಗದಲ್ಲಿ-ಪ್ರಥಮ ಬಾರಿಗೆ ಬೃಹತ ಉಚಿತ ಆರೋಗ್ಯ ತಪಾಸಣೆ-ಶಸ್ತ್ರ ಚಿಕಿತ್ಸೆ ಶಿಬಿರ ಜೂ.10ರಂದು ಕೆಎಲ್‌ಇ ಕಾಲೇಜನಲ್ಲಿ ನಡೆಸಲಾಗುವುದು ಎಂದು ಕೆಎಲ್‌ಇ ಕಾಲೇಜ ಆಡಳಿತ ಮಂಡಳಿ ಸದಸ್ಯ ಮಾಜಿ ಶಾಸಕ ಪರಣ್ಣ ಮುನವಳ್ಳಿ ಹೇಳಿದರು.

ಅವರು ನಗರದ ಕೆಎಲ್‌ಇ ಕಾಲೇಜನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಕೊಪ್ಪಳದ ಗವಿಸಿದ್ದೇಶ್ವರ ಶ್ರೀಗಳ ಸಲಹೆ ಮೇರೆಗೆ ಡಾ.ಪ್ರಭಾಕರ ಕೋರೆಯವರು ಜೂ.10ರಂದುಕೆಎಲ್‌ಇ ಡಾ.ಪ್ರಭಾಕರ ಕೋರೆ ಆಸ್ಪತ್ರೆ, ವೈದ್ಯಕೀಯ ಸಂಶೋಧನಾ ಕೇಂದ್ರ ಬೆಳಗಾವಿ ಕೆಎಲ್‌ಇ ಡಾ.ಸಂಪತಕುಮಾರ ಕ್ಯಾನ್ಸರ್ ಆಸ್ಪತ್ರೆ, ಬೆಳಗಾವಿ ಸಹಯೋಗದಲ್ಲಿ ಅತ್ಯುತ್ತಮ ಗುಣ ಮಟ್ಟದ ತಜ್ಞರು ಮತ್ತು ಬಹು ಅಂಗಾಂಗ ಜೋಡಣೆಯ ತಜ್ಞರಿಂದ ಅಂಗಾಂಗ ಕಸಿ ಜೋಡಣೆ, ಹೃದಯರೋಗ ಶಸ್ತ್ರ ಚಿಕಿತ್ಸೆ, ಎಲುಬು ಕೀಲು ಮರುಜೋಡಣೆ, ಮೂತ್ರಕೋಶ/ ಮೂತ್ರಪಿಂಡ ಚಿಕಿತ್ಸೆ, ನೇತ್ರ ಶಸ್ತ್ರ ಚಿಕಿತ್ಸೆ, ಮಧುಮೇಹ ಎಂಡೋಕ್ರೈನೋಲಜಿ, ಚಿಕ್ಕಮಕ್ಕಳ ಚಿಕಿತ್ಸೆ, ಸ್ತ್ರೀರೋಗ ಮತ್ತು ಪ್ರಸುತಿ ಚಿಕಿತ್ಸೆ ಆಯುರ್ವೇದ, ಹೋಮಿಯೋಪತಿಕ, ಆಯುಸ್ಮಾನ ಮುಂತಾದ ಎಲ್ಲಾ ಚಿಕಿತ್ಸೆಗಳನ್ನು ಉಚಿತವಾಗಿ ಬರುವ ಎಲ್ಲರಿಗೂ ಉಚಿತ ಬಸ್ ವ್ಯವಸ್ಥೇ ಬಸ್ ನಿಲ್ದಾಣದಿಂದ, ಸಿಬಿಎಸ್ ವೃತ್ತ, ರಾಣಾ ಪ್ರತಾಪ ವೃತ್ತದಿಂದ, ಊಟದ ವ್ಯವಸ್ಥೇ ಮಾಡಲಾಗುವುದು ಎಂದರು.

ಕೆಎಲ್‌ಇ ಕಾಲೇಜ ಗಂಗಾವತಿ ಆಡಳಿತ ಮಂಡಳಿ ಅಧ್ಯಕ್ಷ ಗಿರಿಯಪ್ಪ ಹೊಸಕೇರಿ ಹಾಗೂ ಡಾ.ಅಲ್ಲಮ ಪ್ರಭು ಬೆಳಗಾವಿ ಮಾತನಾಡಿ, ಜೂ10ರಂದು ನಡೆಯುವ ಬೃಹತ್ ಉಚಿತ ಆರೋಗ್ಯ ತಪಾಸಣೆ-ಶಸ್ತ್ರ ಚಿಕಿತ್ಸೆ ಶಿಬಿರ ಜೂ.10ರಂದು ಕೆಎಲ್‌ಇ ಕಾಲೇಜನಲ್ಲಿ ನಡೆಸಲಾಗುವುದು ಕೊಪ್ಪಳ ಜಿಲ್ಲೆಯ ಸರ್ವರು ಇದರ ಸದುಪಯೋಗ ಪಡಿಸಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ- 9060305009, 9448132474, 9448257673 ಸಂಪರ್ಕಿಸಿರಿ ಎಂದರು. ಮಾಜಿ ಸಂಸದ ಶಿವರಾಮಗೌಡ, ಕಾಲೇಜ ಪ್ರಾಚಾರ್ಯ ಡಾ.ಮಾನಸ ಡಿ.ಎ, ಮಾಜಿ ಶಾಸಕ ಜಿ.ವಿರಪ್ಪ, ಕೆ.ಚನ್ನಬಸಯ್ಯ ಸ್ವಾಮಿ ಇತರರಿದ್ದರು.



ಎಂಎಸ್‌ಎಂಎಸ್ ಪದವಿ ವಿದ್ಯಾರ್ಥಿಗಳಿಂದ ವೈವಾ ಯಶಸ್ವಿ

ಶ್ರೀರಾಮನಗರ: ಸಮೀಪದ ಮರಳಿಯ ಎಂಎಸ್‌ಎಂಎಸ್ ಪದವಿ ಮಹಾವಿದ್ಯಾಲಯ ಕಾಲೇಜಿನಲ್ಲಿ ಬುಧವಾರ ಬಿಎ, ಬಿಕಾಂ 6ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪ್ರಬಂಧ ಸಂಬಂಧಿಸಿದ ವೈವಾ (ಮೌಖಿಕ ಪರೀಕ್ಷೆ) ಯಶಸ್ವಿಯಾಗಿ ನಡೆಯಿತು.

ಕೊಪ್ಪಳ ವಿಶ್ವವಿದ್ಯಾಯಲದಿಂದ ಆಗಮಿಸಿದ್ದ ಗಂಗಾವತಿಯ ಟಿ.ಎಂ.ಎ (ಬಿ.ಇಡಿ.) ಕಾಲೇಜಿನ ಉಪನ್ಯಾಸಕರಾದ ಪಂಚಾಕ್ಷರಯ್ಯ ಹಿರೇಮಠ ಅವರು ವಿದ್ಯಾರ್ಥಿಗಳಿಗೆ ಸಂದರ್ಶನ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಎಂಎಸ್ ಎಂಎಸ್ ಪದವಿ ವಿದ್ಯಾರ್ಥಿಗಳು ಪ್ರಬಂಧಕ್ಕೆ ಉತ್ತಮ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಮಂಡಿಸಿದ್ದಾರೆ. ಕಾಲೇಜಿನ ವಿದ್ಯಾರ್ಥಿಗಳು ಪದವಿ ಹಂತದಲ್ಲಿಯೇ ಮಹಾಪ್ರಬಂಧದ (ಪಿಎಚ್‌ಡಿ) ಮಾದರಿಯಲ್ಲಿ ಹೊಸ ವಿಷಯದ ಆಯ್ಕೆ, ವಿವಿಧ ಸಂಶೋಧನಾ ವಿಧಾನಗಳನ್ನು ಅನುಸರಿಸಿದ್ದಾರೆ ಹಾಗೂ ವೈವಾ ವೇಳೆ ಎಲ್ಲ ವಿದ್ಯಾರ್ಥಿಗಳು ಶಿಸ್ತಿನಿಂದ ಉತ್ತಮವಾಗಿ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ವಿದ್ಯಾರ್ಥಿನಿ ಆಶಾ ದೀಪಿಕಾ ಮಾತನಾಡಿ, ನಮಗೆ ಪ್ರಬಂಧ ಮಂಡಿಸಲು ಎಂಎಸ್‌ಎಂಎಸ್ ಶಿಕ್ಷಣ ಸಂಸ್ಥೆ ಉತ್ತಮವಾದ ಅವಕಾಶ ಕಲ್ಪಿಸಿದ್ದಕ್ಕೆ ಎಲ್ಲರ ಪರವಾಗಿ ಕೃತಜ್ಞತೆಯನ್ನು ತಿಳಿಸುತ್ತೇವೆ. ಬಿಎ ಹಾಗೂ ಬಿಕಾಂನ ಎಲ್ಲ ಸ್ನೇಹಿತರು ತುಂಬಾ ಆಸಕ್ತಿಯಿಂದ ವಿವಿಧ ವಿಷಯಗಳ ಬಗ್ಗೆ ಸಂಶೋಧನೆಯನ್ನು ನೆರವೇರಿಸಿ ಯಶಸ್ವಿಯಾಗಿ ಮಂಡಿಸಲಾಗಿದೆ. ಸಂದರ್ಶಿಸಿದ ಪಂಚಾಕ್ಷರಯ್ಯ ಅವರಿಗೆ, ಸಹಕಾರ ನೀಡಿದ ಸಂಸ್ಥೆಯ ಉಪನ್ಯಾಸಕರಿಗೆ ಧನ್ಯವಾದಗಳನ್ನ ವ್ಯಕ್ತಪಡಿಸಿದರು.

ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಗಳು, ಪ್ರಾಂಶುಪಾಲರು, ಉಪನ್ಯಾಸಕರ ವರ್ಗ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಪಿಣರಾಯಿ ನಿವಾಸದ ಮೇಲಿನ ಇಡಿ ದಾಳಿ ಖಂಡಿಸಿ ಪ್ರತಿಭಟನೆ

ಕಲಬುರಗಿ: ಕೇರಳದ ಮಾಜಿ ಮುಖ್ಯಮಂತ್ರಿ ಹಾಗೂ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಪಿಣರಾಯಿ ವಿಜಯನ್ ಅವರ ನಿವಾಸದ ಮೇಲಿನ ಜಾರಿ ನಿರ್ದೇಶನಾಲಯ (ಇಡಿ) ದಾಳಿಯನ್ನು ಖಂಡಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ನಗರದ ಎಸ್‌ವಿಪಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಇಡಿ ದಾಳಿಯು ರಾಜಕೀಯ ಪ್ರತೀಕಾರದ ಕ್ರಮವಾಗಿದ್ದು, ಕೇಂದ್ರ ಸರ್ಕಾರವು ವಿರೋಧ ಪಕ್ಷಗಳ ನಾಯಕರನ್ನು ಗುರಿಯಾಗಿಸಿಕೊಂಡು ಕೇಂದ್ರ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನೆ ವೇಳೆ ದೆಹಲಿಯಲ್ಲಿ ಹಿರಿಯ ನಾಯಕಿ ಬೃಂದಾ ಕಾರಟ್, ಪೊಲಿಟ್ ಬ್ಯೂರೋ ಸದಸ್ಯರಾದ ಅಶೋಕ್ ಧವಳೆ, ಮರಿಯಮ್ ಧವಳೆ ಸೇರಿದಂತೆ ಹಲವರನ್ನು ಪೊಲೀಸರು ಬಂಧಿಸಿರುವುದನ್ನು ಪಕ್ಷ ತೀವ್ರವಾಗಿ ಖಂಡಿಸಿದೆ.

ಕೆ.ನೀಲಾ, ಭೀಮಶೆಟ್ಟಿ ಯಂಪಳ್ಳಿ, ಸುಧಾಮ ಧನ್ನಿ, ಶ್ರೀಮಂತ ಬಿರಾದಾರ ಶಾಂತಾ ಘಂಟೆ, ಚಂದಮ್ಮ ಗೋಳಾ, ಪದ್ಮನಿ ಕಿರಣಗಿ, ನಾಗಪ್ಪ ರಾಯಚೂರಕರ್, ಪ್ರಕಾಶ ಕುಸಾಳೆ ಸೇರಿದಂತೆ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.



ಜಿಲ್ಲಾ ಕುರುಬರ ಸಂಘ, ಸಿದ್ದು ಅಭಿಮಾನಿಗಳ ಬೃಹತ್ ಪ್ರತಿಭಟನೆ

ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಸಿಡಿದೆದ್ದ ಕುರುಬ ಸಮುದಾಯ

ಕಲಬುರಗಿ: 2023ರ ಚುನಾವಣೆಯಲ್ಲಿ ಅಹಿಂದ ನಾಯಕ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಪಕ್ಷ ರಾಜಕೀಯ ಪಿತೂರಿ ನಡೆಸಿ ಸಿಎಂ ಸ್ಥಾನದಿಂದಕೆಳಗಿಸಿದ್ದು,ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲಾಗುವುದು ಎಂದು ಕರ್ನಾಟಕ ಪ್ರದೇಶ ಕುರುಬ ಸಂಘ ಜಿಲ್ಲಾ ಘಟಕ ಹಾಗೂ ಸಿದ್ದರಾಮಯ್ಯ ಅಭಿಮಾನಿ ಬಳಗ ಎಐಸಿಸಿ ಅಧ್ಯಕ್ಷ ಡಾ.ಮಲ್ಲಿಕಾರ್ಜುನ ಖರ್ಗೆ,ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ವಿರುದ್ಧ ಸಿಡಿದೆದ್ದು ಆಕ್ರೋಶ ಹೊರಹಾಕಿವೆ.

ಸಿಎಂ ಸಿದ್ದರಾಮಯ್ಯ ಅವರ ರಾಜೀನಾಮೆ ಪಡೆಯಲು ಮುಂದಾಗಿರುವ ಹೈಕಮಾಂಡ್ ನಿರ್ಧಾರವನ್ನು ಖಂಡಿಸಿ ಗುರುವಾರ ನಗರದಲ್ಲಿ ಪ್ರದೇಶ ಕುರುಬರ ಸಂಘ ಹಾಗೂ ಸಿದ್ದರಾಮಯ್ಯ ಅಭಿಮಾನಿ ಬಳಗದ ವತಿಯಿಂದ ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಿ ನಗರದ ಐತಿಹಾಸಿಕ ಸರ್ದಾರ್ ವಲ್ಲಭಭಾಯ್ ಪಟೇಲ್ ವೃತ್ತದಲ್ಲಿ ಜಮಾವಣೆಗೊಂಡ ನೂರಾರು ಪ್ರತಿಭಟನಾಕಾರರು ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಮತಬ್ಯಾಂಕ್‌ಗೆ ಧಕ್ಕೆ ಭೀತಿ: ಪ್ರತಿಭಟನೆಯ ನೇತೃತ್ವ ವಹಿಸಿದ್ದ ಸಂಘದ ಜಿಲ್ಲಾಧ್ಯಕ್ಷ ಗುರುನಾಥ ಪೂಜಾರಿ ಮಾತನಾಡಿ, ಸಿದ್ದರಾಮಯ್ಯ ಅವರು ತಮ್ಮ ಸಂಘಟನಾ ಶಕ್ತಿಯಿಂದ ಪಕ್ಷವನ್ನು ಎರಡು ಬಾರಿ ಅಧಿಕಾರಕ್ಕೆ ತಂದಿದ್ದಾರೆ. ಕಳೆದ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರ ಮುಖನೋಡಿಯೇ ಸಮಸ್ತ ಅಹಿಂದ ವರ್ಗ ಕಾಂಗ್ರೆಸ್ ಕೈ ಹಿಡಿದಿತ್ತು. ಈಗ ಯಾವುದೇ ಸೂಕ್ತ ಕಾರಣವಿಲ್ಲದೆ ಅವರನ್ನು ಸಿಎಂ ಕುರ್ಚಿಯಿಂದ ಇಳಿಸಲು ಹೊರಟಿರುವುದು ಅಹಿಂದ ಸಮುದಾಯಕ್ಕೆ ಮಾಡುವ ದ್ರೋಹವಾಗಿದೆ. ಹೈಕಮಾಂಡ್‌ನ ಈ ಏಕಪಕ್ಷೀಯ ತೀರ್ಮಾನ ಮುಂದಿನ ಚುನಾವಣೆಗಳಲ್ಲಿ ಪಕ್ಷದ ಮತ ಗಳಿಕೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಎಚ್ಚರಿಸಿದರು.

ಸಂಘದ ಮುಖಂಡರಾದ ರವಿಗೊಂಡ ಕಟ್ಟಿಮನಿ, ಪರಮೇಶ್ವರ ಆಲಗೂಡು, ನಾಗೀಂದ್ರಪ್ಪ ಪೂಜಾರಿ, ರವಿ ಪೂಜಾರಿ, ಬಸವರಾಜ ಹೊಸಳ್ಳಿ ಸೇರಿದಂತೆ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.



> **ದೇಶಕ್ಕೆ ಮಾದರಿಯಂತೆ ಆಡಳಿತ ನೀಡಿದ, ದಾಖಲೆಯ ಬಜೆಟ್ ಮಂಡಿಸಿರುವ ಜಾತ್ಯಾತೀತ ನಾಯಕನಿಗೆ ಈ ರೀತಿ ಅಗೌರವ ತೋರಿದ ಕಾಂಗ್ರೆಸ್ ಪಕ್ಷಕ್ಕೆ ಬರುವ ಚುನಾವಣೆಯಲ್ಲಿ ಹಿಂದುಳಿದ ಸಮುದಾಯದ ಜನರು ಸರಿಯಾದ ಬುದ್ಧಿ ಕಲಿಸಲಿದ್ದಾರೆ.**
> ■ ಕೆಜಿ ಪೂಜಾರಿ, ಅಫಜಲಪುರ ಮುಖಂಡ

ರೋಗಿಗಳಿಂದ ಹಣ ಸಂಗ್ರಹ: ಆರೋಪ

ಕುಷ್ಟಗಿ: ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಂದ ಹಣ ಪಡೆಯುತ್ತಿದ್ದಾರೆ ಎಂದು ಆರೋಪಿಸಿರುವ ಕರವೇ ಸ್ವಾಭಿಮಾನಿ ಸೇನೆ ಜಿಲ್ಲಾಧ್ಯಕ್ಷ ಸಂತೋಷ್ ತೋಟದ್ ಅವರು, ಶೀಘ್ರ ತಡೆಗಟ್ಟಬೇಕು ಎಂದು ಆಗ್ರಹಿಸಿದ್ದಾರೆ.

ಇಲ್ಲಿನ ಹಳೆ ಪ್ರವಾಸಿ ಮಂದಿರದಲ್ಲಿ ಗುರುವಾರ ಸಂಜೆ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು. ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಽಕಾರಿ ಚಂದ್ರಕಲಾ ಎಂಬವರು ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸುವ ರೋಗಿಗಳಿಂದ ಹಣ ಪಡೆಯುತ್ತಿದ್ದು, ಬಡವರಿಗೆ ನಿರ್ಗತಿಕರಿಗಾಗಿ ಸರ್ಕಾರಿ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದೆ. ಆದರೆ ಹೆರಿಗೆ ಚಿಕಿತ್ಸೆಗೆ 5-10 ಸಾವಿರ ರೂ. ಬೇಡಿಕೆ ಇಟ್ಟಿರುತ್ತಾರೆ ಎಂದು ಆರೋಪಿಸಿದ್ದಾರೆ. ರೋಗಿಗಳಿಗೆ ಹೊರಗಡೆ ಮೆಡಿಕಲ್ ಶಾಪ್‌ನಲ್ಲಿ ಚೀಟಿ ಪಡೆದುಕೊಂಡು ಬನ್ನಿ ಅಂತ ಹೇಳುತ್ತಿದ್ದಾರೆ. ಕೂಡಲೇ ಇಂತಹ ಅಽಕಾರಿಗಳನ್ನು ಸೇವೆಯಿಂದ ವಜಾಗೊಳಿಸಬೇಕಿದೆ ಎಂದು ಒತ್ತಾಯಿಸಿದ್ದಾರೆ.

ಈ ವೇಳೆಯಲ್ಲಿ ಜಿಲ್ಲಾ ಸಂಘಟನೆ ಸಂಚಾಲಕ ಸಿದ್ದಪ್ಪ ಡಿ.ಕಲಾಲಬಂಡಿ, ತಾಲೂಕಾಧ್ಯಕ್ಷ ಮರಿಯಪ್ಪ ಹಕ್ಕಲ್, ಉಪಾಧ್ಯಕ್ಷ ಮಹಾಂತೇಶ ಅಮರಾವತಿ ಇದ್ದರು.



ಸೌಹಾರ್ದತೆಯ ಬಕ್ರೀದ್ ಆಚರಣೆ



ಕುಕನೂರು: ತಾಲೂಕಿನ ಶಿರೂರು ಗ್ರಾಮವು ಇಂದು ವಿಶಿಷ್ಟವಾದ ಕೋಮು ಸೌಹಾರ್ದತೆ ಮತ್ತು ಭಾವೈಕ್ಯತೆಗೆ ಸಾಕ್ಷಿಯಾಯಿತು. ತ್ಯಾಗ ಹಾಗೂ ಕರುಣೆಯ ಸಂಕೇತವಾದ ಬಕ್ರೀದ್ ಹಬ್ಬವನ್ನು ಇಲ್ಲಿನ ಮುಸ್ಲಿಂ ಬಾಂಧವರು ಅತ್ಯಂತ ಶ್ರದ್ಧಾಭಕ್ತಿ ಹಾಗೂ ಸೌಹಾರ್ದತೆಯಿಂದ ಸಂಭ್ರಮ ಸಡಗರದಿಂದ ಆಚರಿಸಿದರು.

ದೇಶದ ಶಾಂತಿ-ಸಮೃದ್ಧಿಗಾಗಿ ವಿಶೇಷ ದುವಾ

ಗ್ರಾಮದ ಪ್ರಮುಖ ಈದ್ಗಾ ಮೈದಾನದಲ್ಲಿ ಬೆಳಿಗ್ಗೆ ನಡೆದ ವಿಶೇಷ ಸಾಮೂಹಿಕ ಪ್ರಾರ್ಥನೆಯಲ್ಲಿ ಶಿರೂರು, ತಿಪ್ಪರಸನಹಾಳ ಹಾಗೂ ನಿಟ್ಟಾಲಿ ಗ್ರಾಮಗಳ ನೂರಾರು ಮುಸ್ಲಿಂ ಬಾಂಧವರು ಒಟ್ಟಾಗಿ ಪಾಲ್ಗೊಂಡಿದ್ದರು. ದೇಶದಲ್ಲಿ ಶಾಂತಿ, ನೆಮ್ಮದಿ ನೆಲೆಸಲಿ ಮತ್ತು ಮಳೆ-ಬೆಳೆ ಚೆನ್ನಾಗಿ ಆಗಲಿ ಎಂದು ಎಲ್ಲರೂ ಒಗೂಡಿ ವಿಶೇಷ ದುವಾ (ಪ್ರಾರ್ಥನೆ) ಸಲ್ಲಿಸಿದರು. ಪ್ರಾರ್ಥನೆಯ ನಂತರ ಪರಸ್ಪರ ಆಲಿಂಗನ ಮಾಡಿಕೊಳ್ಳುವ ಮೂಲಕ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡ ದೃಶ್ಯ ನೆರೆದಿದ್ದವರ ಕಣ್ಣಿಗೆ ಹಬ್ಬದಂತಿತ್ತು.

ಪ್ರಮುಖ ಮುಖಂಡರಾದ ಖಾಜಾಸಾಬ ಯಮನೂರಸಾಬ್, ಅಲ್ಲಾಸಾಬ ಪಿಂಜಾರ, ಮಹೆಬೂಬಸಾಬ್ ಅಲ್ಲಾಸಾಬ್ ಅಂಗಡಿ, ರೈಮಾನಸಾಬ್ ನಬೀಸಾಬ್, ಖಾಜಾಸಾಬ ಅಂಗಡಿ, ಹುಸೇನಸಾಬ್ ಅಂಗಡಿ, ಮಹಮ್ಮದ್ ಸಾಬ್ ಸೇರಿದಂತೆ ಮೂರೂ ಗ್ರಾಮಗಳ ಹಿರಿಯರು, ಸಮಾಜದ ಮುಸ್ಲಿಂ ಬಾಂಧವರಿದ್ದರು.

ಕಿರುಸುದ್ದಿ

ಜಿಲ್ಲಾದ್ಯಂತ ಬಕ್ರೀದ್ ಆಚರಣೆ



ಬಳ್ಳಾರಿ: ಬಕ್ರೀದ್ ಹಬ್ಬವನ್ನು ನಗರ ಸೇರಿದಂತೆ ಜಿಲ್ಲಾದ್ಯಂತ ಮುಸ್ಲಿಂ ಬಾಂಧವರು ಗುರುವಾರ ಆಚರಿಸಿದರು. ಹತ್ತಿರದ ಈದ್ಗಾ ಮೈದಾನಕ್ಕೆ ತೆರಳಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ನಗರದ ಈಡಿಗ ಮೈದಾನದಲ್ಲಿ ರಾಜ್ಯಸಭಾ ಸದಸ್ಯ ಡಾ.ಸೈಯದ್ ನಾಸಿರ್ ಹುಸೇನ್ ಸೇರಿದಂತೆ ಅನೇಕ ಗಣ್ಯರು ಸಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿ ಪ್ರಾರ್ಥನೆ ಸಲ್ಲಿಸಿ, ಪರಸ್ಪರ ಹಬ್ಬದ ಶುಭಾಶಯಗಳನ್ನು ಕೋರಿದರು. ನಂತರ ಮಾತನಾಡಿದ ಅವರು, ಪವಿತ್ರ ಬಕ್ರೀದ್ ಹಬ್ಬ ತ್ಯಾಗ, ಮಾನವೀಯತೆ ಹಾಗೂ ಸಹೋದರತ್ವದ ಸಂದೇಶವನ್ನು ಸಾರುತ್ತದೆ. ದೇಶದ ಏಕತೆ, ರಾಜ್ಯದ ಅಭಿವೃದ್ಧಿ ಹಾಗೂ ಸಮಾಜದಲ್ಲಿ ಶಾಂತಿ, ಸುಖ, ಸೌಹಾರ್ದತೆ ಸದಾ ನೆಲೆಸಿರಲಿ ಎಂದು ಪ್ರಾರ್ಥಿಸಿದರು.



ಹಗರಿಬೊಮ್ಮನಹಳ್ಳಿ: ಬಕ್ರೀದ್ ಹಬ್ಬದ ಅಂಗವಾಗಿ ಹಗರಿಬೊಮ್ಮನಹಳ್ಳಿ ಪಟ್ಟಣ ಸೇರಿದಂತೆ ತಾಲೂಕಿನ ಬೆಣಕಲ್, ಮಾಲವಿ ಬಲ್ಲಾವುಣಿಸಿ, ಉಲವತ್ತಿ, ತಂಬ್ರಹಳ್ಳಿ, ಹಂಪಾಪಟ್ಟಣ, ಹನಸಿ ಮುಂತಾದ ಗ್ರಾಮಗಳಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ಡಾ.ಕೆ.ಎಚ್.ಮುನಿಯಪಗೆ ಡಿಸಿಎಂ ಸ್ಥಾನ ನೀಡಿ

ವಿಜಯನಗರ: ಕಾಂಗ್ರೆಸ್ ಹಿರಿಯ ನಾಯಕ ಹಾಗೂ ಮುತ್ಸದ್ದಿ ರಾಜಕಾರಣಿ ಡಾ.ಕೆ.ಎಚ್.ಮುನಿಯಪ್ಪ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಜಿಲ್ಲಾ ಮಾದಾರ ಸಮಾಜದ ಮುಖಂಡರು ಒತ್ತಾಯಿಸಿದ್ದಾರೆ. ಕೋಲಾರ ಕ್ಷೇತ್ರದಿಂದ ಸತತ 7 ಬಾರಿ ಸಂಸದರಾಗಿ, ಕೇಂದ್ರ ಹಾಗೂ ರಾಜ್ಯ ಸಚಿವರಾಗಿ ದೀರ್ಘಕಾಲದ



ಅನುಭವ ಹೊಂದಿರುವ ಮುನಿಯಪ್ಪನವರು ಮಾದಿಗ ಸಮುದಾಯದ ಹಿರಿಯ ಧ್ವನಿಯಾಗಿದ್ದಾರೆ. ದಲಿತರಲ್ಲಿ ಅತಿ ದೊಡ್ಡ ಸಮುದಾಯವಾದ ಮಾದಿಗ ಸಮಾಜಕ್ಕೆ ಇದುವರೆಗೆ ಮುಖ್ಯಮಂತ್ರಿ ಅಥವಾ ಉಪ ಮುಖ್ಯಮಂತ್ರಿ ಸ್ಥಾನ ಸಿಕ್ಕಿಲ್ಲ. ಸಾಮಾಜಿಕ ನ್ಯಾಯದ ಹಿತದೃಷ್ಟಿಯಿಂದ ಡಾ.ಕೆ.ಎಚ್.ಮುನಿಯಪ್ಪ ಅವರಿಗೆ ಈ ಬಾರಿ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಸಮಾಜದ ಮುಖಂಡರಾದ ನಿಂಬಗಲ್ ರಾಮಕೃಷ್ಣ ಎಚ್.ಸೋಮಶೇಖರ್, ಕೊಟಗಿನಾಳ್ ಮಲ್ಲಿಕಾರ್ಜುನ ಸೇರಿದಂತೆ ಜಿಲ್ಲೆಯ ಪ್ರಮುಖರು ಆಗ್ರಹಿಸಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೈಕಲ್ ಸವಾರ ಸಾವು

ಕೊಟ್ಟೂರು: ಪಟ್ಟಣದ ಚಪ್ಪರದಹಳ್ಳಿ ರಸ್ತೆಯಲ್ಲಿ ಟೆಂಪೋ ಡಿಕ್ಕಿ ಹೊಡೆದ ಪರಿಣಾಮ ಸೈಕಲ್ ಸವಾರ ಸಾವನ್ನಪ್ಪಿರುವ ಘಟನೆ ವರದಿಯಾಗಿದೆ. ಚಪ್ಪರದಹಳ್ಳಿಯ ಆನಂದ ತಂದೆ ಹೊನ್ನಪ್ಪ ಮೃತ ವ್ಯಕ್ತಿ. ಆನಂದ ಮಧ್ಯಾಹ್ನ ಪಟ್ಟಣದಿಂದ ಚಪ್ಪರದಹಳ್ಳಿ ಗ್ರಾಮಕ್ಕೆ ಹೋಗುತ್ತಿರುವಾಗ ನಿಯಮಾನುಸಾರ ಎಡಭಾಗದಲ್ಲೇ ತನ್ನ ಮೂರು ಚಕ್ರದ ಸೈಕಲ್‌ನಲ್ಲಿ ಅಂಗಡಿಗೆ ಸಾಮಗ್ರಿಗಳನ್ನು ತೆಗೆದುಕೊಂಡು ಚಪ್ಪರದಹಳ್ಳಿ ಹಿಂದಿರುಗುವಾಗ ಬ್ಯಾಡಗಿ ಪಟ್ಟಣದ ಆನಂದ ತಂದೆ ಹೊನ್ನಪ್ಪ ಈತನು ತನ್ನ ಟೆಂಪೋ ಟ್ರಾವೆಲರ್ ವಾಹನದಿಂದ ಹಿಂದಿನಿಂದ ಡಿಕ್ಕಿ ಹೊಡೆದಿದ್ದಾರೆ. ಅಪಘಾತವಾದ ಕೂಡಲೇ ಕೊಟ್ಟೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಆನಂದನ ಗದ್ದಕ್ಕೆ, ಕುತ್ತಿಗೆಗೆ ಹಾಗೂ ಎಡಕಾಲು ಹಿಮ್ಮಡಿಯ ಹತ್ತಿರ ಭಾರೀ ರಕ್ತಗಾಯವಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಆನಂದ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ. ಆನಂದ ಹೆಂಡತಿ ಬಣಕಾರ ಪ್ರೇಮ ಇವರ ದೂರಿನ ಮೇರೆಗೆ ಕೊಟ್ಟೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕುರುಗೋಡು: ಎಮ್ಮಿಗನೂರು ಗ್ರಾಮದಲ್ಲಿ ಉಭಯ ಜಾಮಿಯ ಮಸೀದಿ ಕಮಿಟಿ ವತಿಯಿಂದ ಬಕ್ರೀದ್ ಹಬ್ಬವನ್ನು ಗುರುವಾರ ಗ್ರಾಮದ ಮುಸ್ಲಿಂ ಸಮುದಾಯದ ಸಂಭ್ರಮ ಕಂಡು ಬಂತು.

ಎಸ್‌ಸಿ ಮೋರ್ಚಾ ಅಧ್ಯಕ್ಷರಾಗಿ ಜೆ.ಶಿವರಾಜ್ ಆಯ್ಕೆ

ಹೂವಿನಹಡಗಲಿ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಭಾರತೀಯ ಜನತಾ ಪಾರ್ಟಿ ಎಸ್‌ಸಿ ಮೋರ್ಚಾಕ್ಕೆ, ಜೆ.ಶಿವರಾಜ್ ನೂತನ ಅಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ.

ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಹಲವು ಜನಪರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಅವರನ್ನು ಗುರುತಿಸಿ ಶಾಸಕರು, ಪಕ್ಷದ ಮುಖಂಡರು, ಕಾರ್ಯಕರ್ತರು ಶಿವರಾಜ್ ಅವರನ್ನು ಆಯ್ಕೆ ಮಾಡಿದ್ದಾರೆ. ಶಾಸಕ ಎಲ್.ಕೃಷ್ಣನಾಯ್ಕ್, ತಾಲೂಕು ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಪೂಜಾರ್, ಹಾಗೂ ಬಿಜೆಪಿ ಮುಖಂಡರು, ಕಾರ್ಯಕರ್ತರು ಮತ್ತು ಸ್ನೇಹಿತರಿಗೆ ಅಭಿನಂದನೆ ತಿಳಿಸಿದರು. ಮಾತನಾಡಿದ ಜೆ. ಶಿವರಾಜ್, ತಾಲೂಕಿನ ಸರ್ವತೋಮುಖ ಅಭಿವೃದ್ಧಿಗೆ ನಿರಂತರ ಶ್ರಮಿಸಲಾಗುವುದು ಎಂದು ತಿಳಿಸಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನಪರ ಯೋಜನೆಗಳನ್ನು ಪ್ರತಿಯೊಬ್ಬ ಅರ್ಹ ಫಲಾನುಭವಿಗೂ ತಲುಪಿಸುವ ನಿಟ್ಟಿನಲ್ಲಿ ಮೋರ್ಚಾ ಕಾರ್ಯಕರ್ತರು ತಳಮಟ್ಟದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು. ಇತ್ತೀಚೆಗೆ ತಾಲೂಕಿನ ಪ್ರವಾಸಿ ಮಂದಿರದಲ್ಲಿ ನಡೆದ ಸನ್ಮಾನ ಮಾತನಾಡಿದ ನಾಯಕರು ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯಗಳಂತೆ ದುರ್ಬಲ ವರ್ಗದವರಿಗೆ ಸಾಮಾಜಿಕ ನ್ಯಾಯ ಹಾಗೂ ಆರ್ಥಿಕ ಸಬಲೀಕರಣ ಒದಗಿಸಲು ಬಿಜೆಪಿ ಬದ್ಧವಾಗಿದೆ ಎಂದು ಹೇಳಿದರು. ಪ್ರಧಾನಿ ನರೇಂದ್ರ ಮೋದಿ, ಅವರ ನೇತೃತ್ವದ ಸರ್ಕಾರ ಜಾರಿಗೆ ತಂದಿರುವ ವಿವಿಧ ಕಲ್ಯಾಣ ಕಾರ್ಯಕ್ರಮಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳು ಲಕ್ಷಾಂತರ ಎಸ್‌ಸಿ, ಎಸ್‌ಟಿ ಸಮುದಾಯದ ಬದುಕಿನಲ್ಲಿ ಹೊಸ ಆಶಾಕಿರಣ ಮೂಡಿಸಿವೆ ಎಂದು ಶ್ಲಾಘಿಸಲಾಯಿತು.



ಹೂವಿನಹಡಗಲಿ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಭಾರತೀಯ ಜನತಾ ಪಾರ್ಟಿ ಎಸ್‌ಸಿ ಮೋರ್ಚಾಕ್ಕೆ, ಜೆ.ಶಿವರಾಜ್ ನೂತನ ಅಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ. ತಾಲೂಕು ಬಿಜೆಪಿ ಮುಖಂಡರು, ಮೋರ್ಚಾದ ಪದಾಧಿಕಾರಿಗಳು, ಸ್ಥಳೀಯ, ಕಾರ್ಯಕರ್ತರು ಉಪಸ್ಥಿತರಿದ್ದರು.

ಜೂ.28ರಿಂದ ಪೋಲಿಯೋ ಕಾರ್ಯಕ್ರಮ

ಪ್ರತಿ ಮಗುವಿಗೆ ಲಸಿಕೆ ಹಾಕಿಸಿ: ಡಿಸಿ

ಯಾದಗಿರಿ: ಜಿಲೆಯಲ್ಲಿ, ಜೂ.28ರಿಂದ ಜು.01 ರವರೆಗೆ ನಾಲ್ಕು ದಿನಗಳ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಯಾವುದೇ ಐದು ವರ್ಷ ದೊಳಗಿನ ಅರ್ಹ ಮಗು ಪೋಲಿಯೋ ಲಸಿಕೆಯಿಂದ ವಂಚಿತವಾಗದಂತೆ ನಿಗಾವಹಿಸಲು ಜಿಲ್ಲಾಧಿಕಾರಿ ರಾಹುಲ್ ತುಕಾರಾಮ ಪಾಂಡ್ವೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕೆ ಕಾರ್ಯಕ್ರಮ ಆಯೋಜಿಸುವ ಕುರಿತು ನಡೆದ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲೆಯಾದ್ಯಂತ ಒಟ್ಟು 1,66,693 ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕಬೇಕಾಗಿದ್ದು, ಅರ್ಹ ಮಕ್ಕಳಿಗೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸುವಂತೆ ಅವರು ಸೂಚಿಸಿದರು.

ಐದು ವರ್ಷದೊಳಗಿನ 1,66,693 ಲಕ್ಷ ಮಕ್ಕಳಿಗೆ ಲಸಿಕೆ ಹಾಕುವ ಗುರಿ ತಲುಪಲು , ಒಟ್ಟು 664 ಬೂತ್ ಮಟ್ಟದ ಲಸಿಕಾ ತಂಡಗಳನ್ನು ರಚಿಸಲಾಗಿದ್ದು, 37 ಟ್ರಾನ್ಸಿಟ್ (ಸಂಚಾರಿ) ತಂಡಗಳನ್ನು ನೇಮಿಸಲಾಗಿದೆ. 1,412 ಲಸಿಕಾ ಸಿಬ್ಬಂದಿ, 261 ಹೈ ರಿಸ್ಕ್ ಪ್ರದೇಶದ ತಂಡಗಳನ್ನು ನೇಮಿಸಲಾಗಿದೆ, 403 ತಂಡಗಳು ಮನೆ ಮನೆಗೆ ಭೇಟಿ ನೀಡಲಿವೆ' ಎಂದು ತಿಳಿಸಿದರು.

ಜೂ.28ರಂದು ಬೂತ್ ಮಟ್ಟದ ಲಸಿಕಾ ಕಾರ್ಯಕ್ರಮ ನಡೆದರೆ, ಜೂನ್ 29 ಮತ್ತು 30 ಹಾಗೂ ಜುಲೈ 01 ರಂದು ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಮನೆ ಮನೆಗೆ ಭೇಟಿ ನೀಡಿ ಪಲ್ಸ್ ಪೋಲಿಯೊ ಲಸಿಕೆ ನೀಡಲಾಗುತ್ತಿದೆ. 28 ರಿಂದ 01ರ ವರೆಗೆ ವಿಶೇಷ ಪ್ರದೇಶಗಳು ಹಾಗೂ ಟ್ರಾನ್ಸಿಟ್ ಸ್ಥಳಗಳಲ್ಲಿ, ನಿಗಾವಹಿಸಬೇಕು' ಎಂದರು.



> **ಈ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮದಲ್ಲಿ ಐದು ವರ್ಷದೊಳಗಿನ ಯಾವುದೇ ಮಗು ಲಸಿಕೆಯಿಂದ ವಂಚಿತರಾಗದಂತೆ ಎಚ್ಚರಿಕೆ ವಹಿಸಬೇಕು, ಅದಕ್ಕೆ ಬೇಕಾದ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು.**
> ■ ರಾಹುಲ್ ಪಾಂಡ್ವೆ ತುಕಾರಾಮ್, ಜಿಲ್ಲಾಧಿಕಾರಿ

ಲಸಿಕೆಯಿಂದ ವಂಚಿತರಾಗದಂತೆ ಪೋಲಿಯೊ ಅಭಿಯಾನ ನಡೆಯಲಿದೆ. ಪೋಲಿಯೊ ಲಸಿಕಾ ಕಾರ್ಯಕ್ರಮಕ್ಕೆ ಸಂಬಂಧಿಸಿದ ತಂಡಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು,

ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಆರ್‌ಸಿಎಚ್, ಅಧಿಕಾರಿಗಳು, ತಹಶೀಲ್ದಾರ್, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಆರೋಗ್ಯ ಅರ್ಹ ಮಗು ವಿಶೇಷ ಪಿಡಿಒಗಳು,

ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿ, ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಬಸ್ ನಿಲ್ದಾಣ ದೂರದ ಪ್ರದೇಶ, ಅಪಾಯಕಾರಿ ಪ್ರದೇಶ, ವಲಸಿಗ ಕಾರ್ಮಿಕರ ಮಕ್ಕಳು, ಜಿಲ್ಲೆಗೆ ಆಗಮಿಸುವ ಕಾರ್ಮಿಕರ ಮಕ್ಕಳನ್ನು ಸಹ ಗುರುತಿಸಿ ಲಸಿಕೆ ಹಾಕಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಅಧಿಕಾರಿಗಳು ರೈಲ್ವೆ ನಿಲ್ದಾಣ, ಜನನಿಬಿಡ, ಹಾಗೂ ವಿವಿಧ ಸಮುದಾಯ

ರಾಷ್ಟ್ರೀಯ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮದ ಕುರಿತು ಶಾಲಾ ಮಕ್ಕಳ ಮೂಲಕ ಜಾಗೃತಿ ಜಾಥಾ ಪಾಲಕರಲ್ಲಿ, ಸೂಕ್ತ, ಅರಿವು, ಜಾಗೃತಿ ಕಾರ್ಯಕ್ರಮ ಆಯೋಜಿಸಬೇಕು, ಶಿಕ್ಷಕರ ಮೂಲಕ ಮಕ್ಕಳಿಗೆ ಲಸಿಕೆ ಹಾಕಿಸಲು, ಅವಶ್ಯಕ ಕ್ರಮ ಕೈಗೊಳ್ಳಬೇಕು. ಲಸಿಕಾ ಸಿಬ್ಬಂದಿಗೆ ಸೂಕ್ತ ವಾಹನಗಳ ವ್ಯವಸ್ಥೆ ಮಾಡಬೇಕು' ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು, ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಮಹೇಶ್ ಬಿರಾದಾರ, ಜಿಲ್ಲಾ ಆರ್‌ಸಿಎಚ್ ಅಧಿಕಾರಿಗಳಾದ ಡಾ.ಮಲ್ಲಪ್ಪ ಕೆ, ಡಬ್ಲ್ಯುಎಚ್‌ಒ, ಎಸ್‌ಎಂಒ ಡಾ.ಅನಿಲ್ ಕುಮಾರ್ ತಾಳಿಕೋಟಿ ಸೇರಿದಂತೆ ಇತರೆ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಸಿಎಂ ಸಿದ್ದರಾಮಯ್ಯ 2 ವರ್ಷ ಮುಂದುವರಿಯಲಿ

ಬಳ್ಳಾರಿ: ಸಿಎಂ ಸಿದ್ದರಾಮಯ್ಯ ಅವರು, ಇನ್ನೂ 2 ವರ್ಷ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು. ಹೈಕಮಾಂಡ್ ವರಿಷ್ಠರು ನಿರ್ಧಾರವನ್ನು ಬದಲಿಸದಿದ್ದರೆ, ಮುಂಬರುವ 2028ಕ್ಕೆ ಅಹಿಂದ ವರ್ಗ, ಕುರುಬ ಸಮಾಜದ ಶಕ್ತಿ ಏನೆಂಬುದನ್ನು ಕಾಂಗ್ರೆಸ್‌ಗೆ ತೋರಿಸ್ತೇವೆ ಎಂದು ಬಳ್ಳಾರಿ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಡಾ.ಪಿ.ಎಲ್. ಗಾದಿಲಿಂಗನ ಗೌಡ ಎಚ್ಚರಿಸಿದರು.

ನಗರದ ಸಂಘದ ಕಚೇರಿಯಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಭಾಗ್ಯಗಳ ಸರದಾರ, ಕಾನೂನು ತಜ್ಞ, ಅತ್ಯಂತ ಪ್ರಾಮಾಣಿಕ ರಾಜಕಾರಣಿ ಸಿ.ಎಂ. ಸಿದ್ದರಾಮಯ್ಯ, ನಮ್ಮ ಕುರುಬ ಸಮಾಜದ ಸಿದ್ದರಾಮಯ್ಯ ಅವರು, ಎಲ್ಲ ವರ್ಗದವರ ಪ್ರೀತಿ, ವಿಶ್ವಾಸಗಳಿಸಿದ್ದು, ದೇಶದಲ್ಲೇ ಮಾದರಿ ರಾಜಕಾರಣಿಯಾಗಿದ್ದಾರೆ. ಹೈಕಮಾಂಡ್ ವರಿಷ್ಠರು ನೀಡಿದ ಸೂಚನೆಯನ್ನು ಹಿಂಪಡೆಯಬೇಕು, ರಾಜೀನಾಮೆ ನೀಡಿದ್ದೇ ಆದಲ್ಲಿ, ಪಡೆದಿದ್ದೆ ಆದಲ್ಲಿ, ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸ್ತೇವೆ ಎಂದು ಎಚ್ಚರಿಸಿದರು.

ಪ್ರಧಾನ ಕಾರ್ಯದರ್ಶಿ ಕೆ.ಮೋಹನ್ ಮಾತನಾಡಿ, ಯಾವುದೇ ಕಾರಣಕ್ಕೂ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಬಾರದು. ಕೂಡಲೇ ಹೈಕಮಾಂಡ್ ವರಿಷ್ಠರು, ತಮ್ಮ ನಿರ್ಧಾರವನ್ನು ಹಿಂಪಡೆಯಬೇಕು. ದೇವರಾಜು ಅರಸು ಮಾದರಿಯಲ್ಲಿ ಸ್ವಚ್ಛ ಹಾಗೂ ಸುಂದರ ಆಡಳಿತ ನಡೆಸುವ ಮೂಲಕ ದೇಶದಲ್ಲೇ ಸಿಎಂ ಸಿದ್ದರಾಮಯ್ಯ ಅವರು ಮಾದರಿಯಾಗಿದ್ದಾರೆ. ನುಡಿದಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ವಿಶ್ವದ ಗಮನಸೆಳೆದಿದ್ದಾರೆ ಎಂದರು.

ಅಹಿಂದ ಸಂಘಟನೆಯ ರಾಜ್ಯ ಕಾರ್ಯಾಧ್ಯಕ್ಷ ಭಟ್ಟಿ ಯರಿಸ್ವಾಮಿ ಮಾತನಾಡಿ, ಸಿಎಂ ಸಿದ್ದರಾಮಯ್ಯ ಅವರು, ತಮ್ಮ ಸುದೀರ್ಘ ರಾಜಕಾರಣದಲ್ಲಿ ಯಾವುದೇ ಒಂದು ಸಣ್ಣ ಕಪ್ಪು ಚುಕ್ಕೆಗಳಿಲ್ಲದೇ ರಾಜಕಾರಣ ಮಾಡಿದ್ದಾರೆ. ಎಲ್ಲ ವರ್ಗದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾದರಿ ಆಡಳಿತ ನಡೆಸುತ್ತಿರುವ ಸಿಎಂ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸುವ ಹೈಕಮಾಂಡ್ ಸೂಚನೆ, ನಿರ್ಧಾರ ಸರಿಯಲ್ಲ, ಕೂಡಲೇ ಇದನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಸಂಘದ ನಿರ್ದೇಶಕ ಹೊನ್ನೂರು ಸ್ವಾಮಿ, ಕೆ.ಎಸ್.ರಘು ಬಂಡಿಹಟ್ಟಿ, ಕೆ.ಶಿವಕುಮಾರ್, ನಗರ ಅಧ್ಯಕ್ಷ ಬೆಳ್ಳಿ ಕಟ್ಟೆಪ್ಪ, ಅಸುಂಡಿ ಪರಮೇಶ್, ಕೊಳಗಲ್ ಗಂಗಾಧರ, ಮಲ್ಲಿ, ಗುಗ್ಗರಹಟ್ಟಿ ಶ್ರೀಕಾಂತ್, ಸೇರಿದಂತೆ ಸಮಾಜದ ವಿವಿಧ ಮುಖಂಡರಿದ್ದರು.



ಶೈಕ್ಷಣಿಕ ಕಾರ್ಯಕ್ರಮ ಅನುಷ್ಠಾನಗೊಳಿಸಿ

ಹೂವಿನಹಡಗಲಿ: ತಾಲೂಕಿನ ಶೈಕ್ಷಣಿಕ ಪ್ರಗತಿಗೆ ಶಿಕ್ಷಕರು ಯೋಜನೆ ರೂಪಿಸಿ ಅನುಷ್ಠಾನ ಗೊಳಿಸಲು ನೂತನ ಕ್ಷೇತ್ರ ಶಿಕ್ಷಣಾಧಿಕಾರಿ ಮಂಗಳಾ ಕೆ. ಹೇಳಿದರು.

ಪಟ್ಟಣದ ಮೌಂಟ್ ಕಾರ್ಮೆಲ್ ಸೇವಾ ಸದನದಲ್ಲಿ ಬುಧವಾರ ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ತಾಲೂಕಿನ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮುಖ್ಯ ಗುರುಗಳಿಗೆ ಆಯೋಜಿಸಿದ್ದ 2026-27ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಸಿದ್ಧತೆ ಕುರಿತು ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಉತ್ತಮ ಕಲಿಕೆ ಉಜ್ವಲ ಭವಿಷ್ಯ ಈ ಸಾಲಿನ ಶಾಲಾ ಶಿಕ್ಷಣ ಇಲಾಖೆಯ ಘೋಷಣೆಯಾಗಿದ್ದು ಮಕ್ಕಳ ಉತ್ತಮ ಭವಿಷ್ಯ ರೂಪಿಸುವುದು ಶಿಕ್ಷಕರ ಆದ್ಯ ಕರ್ತವ್ಯವಾಗಿದೆ. ಇದಕ್ಕೆ ಅನುಗುಣವಾಗಿ ಶಿಕ್ಷಕರು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಬೇಕು ಎಂದು ತಿಳಿಸಿದರು.

ಜೂನ್ 1 ಶಾಲಾ ಪ್ರಾರಂಭೋತ್ಸವವನ್ನು ಹಬ್ಬದ ರೀತಿಯಲ್ಲಿ ಸಡಗರ ಸಂಭ್ರಮದಿಂದ ಆಚರಿಸಬೇಕು. ಅಂದು ಶಾಲೆಗೆ ಬರುವ ಮಕ್ಕಳನ್ನು ಪ್ರೀತಿಯಿಂದ ಸ್ವಾಗತಿಸಬೇಕು ಎಂದು ತಿಳಿಸಿದರು.

ಕ್ಷೇತ್ರ ಸಮನ್ವಯಾಧಿಕಾರಿ ಎ.ಕೋಟೆಪ್ಪ ಎಸ್‌ಎಟಿಎಸ್ ತಂತ್ರಾಂಶದಲ್ಲಿ ಕಳೆದ ವರ್ಷದ ವಿದ್ಯಾರ್ಥಿಗಳನ್ನು ತೇರ್ಗಡೆ ಗೊಳಿಸಿ ದಾಖಲು ಮಾಡಬೇಕು ಎಂದು ತಿಳಿಸಿದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ವಿ.ಹನುಮಂತಪ್ಪ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಯು ಆನಂದ್ ಮಾತನಾಡಿದರು.

ಬಿಆರ್‌ಪಿ ಸಚಿನ್ ಆರಾಧ್ಯ ಈ ವರ್ಷದ ಯೋಜನೆಗಳ ಬಗ್ಗೆ ಪೂರಕ ಮಾಹಿತಿ ನೀಡಿದರು. ತಾಲೂಕು ದೈಹಿಕ ಪರಿವೀಕ್ಷಕ ರಫಿ ಅಹಮದ್ ಖವಾಸ್ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಜಿ ಜಗದೀಶ್, ಪ್ರೌಢಶಾಲೆ ಮುಖ್ಯ ಗುರುಗಳ ಸಂಘದ ಉಪಾಧ್ಯಕ್ಷೆ ಹನಸಿ ಮಂಗಳಾ ಇತರರು ಉಪಸ್ಥಿತರಿದ್ದರು. ತಾಲೂಕಿನ ವಿವಿಧ ಪ್ರಾಥಮಿಕ ಪ್ರೌಢಶಾಲೆಗಳ ಮುಖ್ಯ ಗುರುಗಳು ಸಭೆಯಲ್ಲಿ ಭಾಗವಹಿಸಿದ್ದರು.



ರೈತರ ಸಮಸ್ಯೆ ಪರಿಹಾರಕ್ಕೆ ಒತ್ತಾಯ

ಬೀದರ: ರಸಗೊಬ್ಬರ, ಡೀಸೆಲ್ ಹಾಗೂ ಪೆಟ್ರೋಲ್ ದರಗಳ ನಿರಂತರ ಏರಿಕೆಯಿಂದ ರೈತರು ಮತ್ತು ಕಾರ್ಮಿಕ ವರ್ಗ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದು, ಗ್ರಾಮೀಣ ಆರ್ಥಿಕ ನೀತಿ ಘೋಷಣೆ, ರೈತರ ಸಾಲಮನ್ನಾ ಹಾಗೂ 60 ವರ್ಷ ಮೇಲ್ಪಟ್ಟ ರೈತರಿಗೆ ಮಾಸಿಕ ಗೌರವಧನ ನೀಡುವಂತೆ ಆಗ್ರಹಿಸಿ ಸಂಯುಕ್ತ ಕಿಸಾನ ಮೋರ್ಚಾ ಜಿಲ್ಲಾ ಘಟಕ ಬೀದರ ವತಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಜಿಲ್ಲಾಧಿಕಾರಿ ಮೂಲಕ ಪ್ರಧಾನಮಂತ್ರಿ ಹಾಗೂ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾದ ಮನವಿಯಲ್ಲಿ ರೈತ ಪರ ಹಲವು ಪ್ರಮುಖ ಬೇಡಿಕೆಗಳನ್ನು ಮಂಡಿಸಲಾಗಿದೆ.

ಕನಿಷ್ಠ ಬೆಂಬಲ ಬೆಲೆ ಕುರಿತು ಕಾನೂನು ಜಾರಿಗೆ ತರಬೇಕು ಎಂದು ಒತ್ತಾಯಿಸಿರುವ ಸಂಘಟನೆ, ಸರ್ಕಾರ ಘೋಷಿಸಿರುವ ಬೆಂಬಲ ಬೆಲೆ ರೈತರಿಗೆ ಪ್ರಯೋಜನಕಾರಿಯಾಗಿಲ್ಲ ಎಂದು ಆರೋಪಿಸಿದೆ. ಸಂಸತ್ತಿನಲ್ಲಿ ಕುರಿತು ಕಾನೂನು ಮಾಡಬೇಕೆಂದು ಆಗ್ರಹಿಸಲಾಗಿದೆ.

ಮುಂಗಾರು ಹಾಗೂ ಹಿಂಗಾರು ಹಂಗಾಮಿನ ಸಂದರ್ಭದಲ್ಲಿ ರಸಗೊಬ್ಬರ, ಡೀಜಲ್ ಮತ್ತು ಪೆಟ್ರೋಲ್ ದರ ಏರಿಕೆಯಿಂದ ಕೃಷಿ ವೆಚ್ಚ ದುಪ್ಪಟ್ಟಾಗಿದ್ದು, ಟ್ರ್ಯಾಕ್ಟರ್ ಉಳುಮೆ, ನೀರಾವರಿ ಪಂಪ್‌ಸೆಟ್ ಬಳಕೆ ಹಾಗೂ ಬೆಳೆ ಸಾಗಾಣಿಕೆ ವೆಚ್ಚ ಹೆಚ್ಚಳದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಬಗರ್‌ಹುಕುಂ ಸಾಗುವಳಿದಾರರನ್ನು ಕ್ರಮಬದ್ಧಗೊಳಿಸುವುದು, ಇನಾಂ ಭೂಮಿ ನ್ಯಾಯಮಂಡಳಿ ರಚನೆ ಹಾಗೂ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ನಾಲ್ಕು ಲೇಬರ್ ಕೋಡ್‌ಗಳನ್ನು ಹಿಂಪಡೆಯಬೇಕು ಎಂಬ ಬೇಡಿಕೆಯೂ ಮನವಿಯಲ್ಲಿ ಸೇರಿಸಲಾಗಿದೆ.

ಶಿವರಾಯ ಮುದಾಳೆ, ಮಲ್ಲಿಕಾರ್ಜುನ ಸ್ವಾಮಿ, ನಜೀರ ಅಹ್ಮದ್, ಮಾರುತಿ ಬೌದ್ಧೆ, ಬಾಬುರಾವ ಹೊನ್ನಾ, ಕೊಂಡಿಬಾರಾವ ಪಾಂಡ್ರೆ, ವಿಠಲ್ ರಾವ ಮೇತ್ರೆ, ಕಾಶಿನಾಥ ಭೂರೆ, ಷಣ್ಮುಕಪ್ಪಾ, ಧೂಲಪ್ಪಾ, ವಿಶ್ವನಾಥ ಧರಣೆ, ಖಾಸಿಮ್ ಅಲಿ, ಶಿವರಾಜ ಪಾಟೀಲ ಅತಿವಾಳ, ಖಮರ್ ಪಟೇಲ್, ಬಸವರಾಜ ಅಷ್ಟೂರ, ಶಫಾಯತ್ ಅಲಿ, ನಾಗೇಂದ್ರಪ್ಪ ನಂಜವಾಡೆ, ಜೈಶೀಲಕುಮಾರ, ಅರುಣ ಪಟೇಲ್, ನನ್ನೇಸಾಬ್ ಟಿ.ಮಿರ್ಜಾಪೂರ, ಭಾವುರಾವ ನೆಳವಾಡೆ, ಶಾಂತಮ್ಮಾ ಮೂಲಗೆ, ಮುಖಿಯೋದ್ದೀನ್ ಮತ್ತಿತರರಿದ್ದರು.

ಶ್ರದ್ಧೆ, ಭಕ್ತಿಯಿಂದ ಬಕ್ರೀದ್ ಆಚರಣೆ

ವಿಜಯನಗರ: ಹೊಸಪೇಟೆ ಸೇರಿದಂತೆ ಜಿಲ್ಲಾದ್ಯಂತ ಗುರುವಾರ ತ್ಯಾಗ ಹಾಗೂ ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಮುಸ್ಲಿಂ ಬಾಂಧವರು ಅತ್ಯಂತ ಶ್ರದ್ಧೆ, ಭಕ್ತಿ ಹಾಗೂ ಸೌಹಾರ್ದತೆಯಿಂದ ಆಚರಿಸಿದರು.

ಹಬ್ಬದ ಅಂಗವಾಗಿ ಹೊಸಪೇಟೆ ನಗರದ ವಿವಿಧ ಈದ್ಗಾ ಮೈದಾನದಲ್ಲಿ ಸೇರಿದ್ದ ಸಾವಿರಾರು ಮುಸ್ಲಿಂ ಬಾಂಧವರು, ಶಿಸ್ತಿನ ಸಾಲುಗಳಲ್ಲಿ ನಿಂತು ಸಾಮೂಹಿಕ ಪ್ರಾರ್ಥನೆ (ನಮಾಜ್) ಸಲ್ಲಿಸಿದರು.

ಧರ್ಮಗುರುಗಳು ಪ್ರವಚನ ನೀಡಿ, ಹಬ್ಬದ ಮಹತ್ವ ಹಾಗೂ ಶಾಂತಿ-ಸೌಹಾರ್ದತೆಯ ಶುಭ ಸಂದೇಶ ಬೋಧಿಸಿದರು.

ನಗರದ ಚಿತ್ತವಾಡ್ಗಿಯ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಅಂಜುಮನ್ ಕಮಿಟಿಯ ಮಾಜಿ ಅಧ್ಯಕ್ಷ, ಚಿತ್ತವಾಡ್ಗಿ ಜಾಮೀಯ ಮಸೀದಿ ಕಮಿಟಿ ಅಧ್ಯಕ್ಷರೂ ಆಗಿರುವ ಹುಡಾ ಅಧ್ಯಕ್ಷ ಹೆಚ್.ಎನ್. ಮೊಹಮ್ಮದ್ ಇಮಾಮ್ ನಿಯಾಜಿ ಅವರು ಪಾಲ್ಗೊಂಡು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು.

ಚಿತ್ತವಾಡ್ಗಿ ಈದ್ಗಾ ಮೈದಾನದ ಪ್ರಾರ್ಥನಾ ಸಭೆಯಲ್ಲಿ ಚಿತ್ತವಾಡ್ಗಿ ಜಾಮೀಯ ಮಸೀದಿಯ ಕಾರ್ಯದರ್ಶಿ ಜಾಕೀರ್ ಹುಸೇನ್, ಜಂಟಿ ಕಾರ್ಯದರ್ಶಿ ಮಾಳಗಿ ಗೌಸ್ ಅಜಾಮ್, ಖಜಾಂಚಿ ಚಾಂದ್ ಭಾಷ, ಕಮಿಟಿ ಸದಸ್ಯರಾದ ನಾಸೀರ್ ಅಲಿ, ಜೀಲಾನ್ ಭಾಷ, ಮನ್ಸೂರ್, ಮೆಹಬೂಬ್ ಸಾಬ್, ಮೆಹಬೂಬ್, ಮುಕ್ತಿಯಾರ್ ಹಾಗೂ ಮಸೀದಿಯ ಆಫೀಸಾಬ್ ಮೊಹಮ್ಮದ್ ಅನೀಫ್ ಸೇರಿದಂತೆ ನೂರಾರು ಮುಸ್ಲಿಂ ಬಾಂಧವರು ಉಪಸ್ಥಿತರಿದ್ದರು.



ಬೆಣಕಲ್ಲು ದೇವಸ್ಥಾನಕ್ಕೆ 2 ಲಕ್ಷ ರೂ. ನೆರವು



ಹಗರಿಬೊಮ್ಮನಹಳ್ಳಿ: ತಾಲೂಕಿನ ಬೆಣಕಲ್ಲು ಗ್ರಾಮದ ಶ್ರೀಆಂಜನೇಯ ದೇವಸ್ಥಾನ ಜೀರ್ಣೋದ್ಧಾರಕ್ಕೆ ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 2 ಲಕ್ಷ ರೂ. ಮೊತ್ತದ ಚೆಕ್ಕನ್ನು ಶ್ರೀಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆಯ ತಾಲೂಕು ಯೋಜನಾಧಿಕಾರಿ ಬಿ.ಸಿ.ಚಂದ್ರಶೇಖರ್ ಅವರು ಜನ ಜಾಗೃತ ವೇದಿಕೆಯ ಅಧ್ಯಕ್ಷ ಬಾದಾಮಿ ನಟರಾಜ ಜನ ಜಾಗೃತಿ ವೇದಿಕೆಯ ದಿವಾಕರ ಗೌಡ ಇವರ ಉಪಸ್ಥಿತಿಯಲ್ಲಿ ದೇವಸ್ಥಾನ ನಿರ್ಮಾಣ ಸಮಿತಿಯವರಿಗೆ ನೀಡಿದರು.

ಬೆಣಕಲ್ ಗ್ರಾಮದ ಮುಖಂಡರಾದ ತಳವಾರ ಹನುಮಂತಪ್ಪ, ಕೊಟ್ರೇಶ್, ಗ್ರಾಪಂ ಬಿಲ್ ಕಲೆಕ್ಟರ್ ಟಿ.ಲಕ್ಷ್ಮಣ, ದೇವಸ್ಥಾನ ಕಮಿಟಿಯ ಅಧ್ಯಕ್ಷ ಮಂಜುನಾಥ, ಕೊಟ್ರೇಶ್ ಗೋಣಿಬಸಪ್ಪ ಸೇರಿದಂತೆ ದೇವಸ್ಥಾನ ಸಮಿತಿಯ ಇತರ ಪದಾಧಿಕಾರಿಗಳು ಗ್ರಾಮದ ಮುಖಂಡರು ಧರ್ಮಸ್ಥಳ ಯೋಜನೆಯ ವಲಯ ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು, ಧರ್ಮಸ್ಥಳ ಸಂಘದ ಮಹಿಳಾ ಸದಸ್ಯರು ಗ್ರಾಮದ ನಾಗರಿಕರು ಪಾಲ್ಗೊಂಡಿದ್ದರು.

ವಿದ್ಯುತ್ ನೌಕರರ ಸಂಘದ ಚುನಾವಣೆ

ಹುಣಸಗಿ: ಪಟ್ಟಣದ ಜೇಸ್ಕಾಂ ಉಪವಿಭಾಗ ಕಛೇರಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ(659) ನ ಸಂಘದ ಪ್ರಾಥಮಿಕ ಸಮಿತಿ ಚುನಾವಣೆ ಬುಧವಾರ ಬೆಳಗ್ಗೆ 9 ಗಂಟೆಯಿಂದ ಸಂಜೆ 3 ಗಂಟೆಯವರಿಗೆ ಶಾಂತಿಯುತವಾಗಿ ನಡೆಯಿತು.

ಸಂಜೆ 4 ಗಂಟೆಗೆ ಮತ ಎಣಿಕೆ ಆರಂಭವಾಗಿ 4.35 ಸುಮಾರಿಗೆ ಫಲಿತಾಂಶ ಹೊರಬಿದ್ದಿತು. ಒಟ್ಟು 7 ಪ್ರಾಥಮಿಕ ಸದಸ್ಯರ ಪೈಕಿ ಒಟ್ಟು 10 ನಾಮಪತ್ರಗಳು ಸಲ್ಲಿಕೆಯಾಗಿ 10 ಸದಸ್ಯರು ಕಣದಲ್ಲಿದ್ದರು. ಹುಣಸಗಿ ಉಪ ವಿಭಾಗದಲ್ಲಿ ಒಟ್ಟು 82 ಮತಗಳ ಪೈಕಿ 80 ಮತಗಳು ಚಲಾವಣೆಯಾಗಿ ಬಸವರಾಜ 67 ಮತಗಳು ಲಾಲಬಿ ಕೆ 49 ಮತಗಳು, ಮಲ್ಲನಗೌಡ 67 ಮತಗಳು, ಮಲ್ಲಿಕಾರ್ಜುನ 58 ಮತಗಳು ಮುಸ್ತಾಪ 70 ಮತಗಳು ನಂದಪ್ಪ 57 ಮತಗಳು ತಿಮ್ಮಪ್ಪ ಕರಿಬಸಪ್ಪನವರ 63 ಮತಗಳು ಪಡೆದು ಭರ್ಜರಿ ಜಯಗಳಿಸಿದ್ದಾರೆ ಎಂದು ಚುನಾವಣೆ ಅಧಿಕಾರಿ ಹಣಮಂತ ಗೋನಾಲ ವಕೀಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೊಟ್ರೇಶಪ್ಪ ಕುಟುಂಬದವರಿಗೆ ಸಾಂತ್ವನ



ಹಗರಿಬೊಮ್ಮನಹಳ್ಳಿ: ತಾಲೂಕಿನ ಮಾಲವಿ ಗ್ರಾಮದ ಕಾಂಗ್ರೆಸ್ ಮುಖಂಡ ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ಅಮ್ಮಾರ್ ಕೊಟ್ರೇಶಪ್ಪ ಇತ್ತೀಚೆಗೆ ನಿಧನರಾಗಿದ್ದು, ಈ ಹಿನ್ನೆಲೆ ಗುರುವಾರ ಮಾಜಿ ಶಾಸಕ ಎಸ್.ಭೀಮನಾಯ್ಕ್ ಅಮ್ಮರ್ ಕೊಟ್ರೇಶಪ್ಪ ಮನೆಗೆ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಪುರಸಭೆ ಸದಸ್ಯ ಪವಾಡಿ ಹನುಮಂತಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಗೋಣಿ ಬಸಪ್ಪ, ಮುಖಂಡರಾದ ಡಿಶ್ ಮಂಜುನಾಥ, ಹ್ಯಾಳದ ಚನ್ನ ಬಸಪ್ಪ, ಕೊಟಗಿ ನಾಗರಾಜ, ಅಮರ್ ಮಂಜುನಾಥ ಹಸನ್ ಸಾಬ್, ಅಜೀಜ್ ಸಾಬ್, ಹುಸೇನ್ ಸಾಬ್, ರೈಮಾನ್ ಸಾಬ್, ಗಾಣಿಗರ ನಾಗರಾಜ, ಉಪ್ಪಾರ್ ಬಸವರಾಜ ಮಹಾಜನದಹಳ್ಳಿ ಮಂಜುನಾಥ, ರೆಡ್ಡಿ ಸುರೇಶ್, ಅಮರ್ ಕೊಟ್ರೇಶಪ್ಪ ಅವರ ತಂದೆ ನಾಗಪ್ಪ ಸಹೋದರ ಮಲ್ಲಿಕಾರ್ಜುನ, ಮಕ್ಕಳಾದ ಸಿದ್ದೇಶ್, ಇತರರು ಇದ್ದರು.

ಮಾಜಿ ಪ್ರಧಾನಿ ನೆಹರೂ ಪುಣ್ಯಸ್ಮರಣೆ

ಬಳ್ಳಾರಿ: ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸ್ವತಂತ್ರ ಭಾರತದ ಮೊದಲ ಪ್ರಧಾನಿ, ನವ ಭಾರತ ನಿರ್ಮಾತೃ ಭಾರತ ರತ್ನ ಪಂ. ಜವಾಹರ್ ಲಾಲ್ ನೆಹರೂ ಅವರ ಭಾವಚಿತ್ರಕ್ಕೆ ಪುಷ್ಪಗಳನ್ನೂ ಸಲ್ಲಿಸುವ ಮೂಲಕ ಪುಣ್ಯಸ್ಮರಣೆಯನ್ನು ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪಕ್ಷದ ಮುಖಂಡರು ಪಂ. ಜವಾಹರ್ ಲಾಲ್ ನೆಹರೂ ಅವರು ದೇಶಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸಿದರು.

ಹಿರಿಯ ನಾಯಕರಾದ ಕಲ್ಲುಕಂಭ ಪಂಪಾಪತಿ, ಮಹಮ್ಮದ್ ಗೌಸ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹುಮಯೂನ್ ಖಾನ್, ಡಿಸಿಸಿ ಕಾರ್ಯಾಧ್ಯಕ್ಷ ಭೋಯಪಾಟಿ ವಿಷ್ಣು ವರ್ಧನ್, ಜಿಲ್ಲಾ ಗ್ಯಾರಂಟಿ ಸಮಿತಿಯ ಅಧ್ಯಕ್ಷ ಚಿದಾನಂದಪ್ಪ, ಡಿಸಿಸಿ ಉಪಾಧ್ಯಕ್ಷ ಶ್ರೀನಿವಾಸುಲು, ಡಿಸಿಸಿ ಉಪಾಧ್ಯಕ್ಷ ಕೆ.ಶ್ರೀನಿವಾಸುಲು, ಪ್ರಚಾರ ಸಮಿತಿಯ ಜಿಲ್ಲಾ ನಗರ ಅಧ್ಯಕ್ಷ ಈರನ್ನ ಗೌಡ, ಸೇವಾದಳ ಜಿಲ್ಲಾ ನಗರ ಅಧ್ಯಕ್ಷ ಅತ್ತವುಲ್ಲ, ಕಾರ್ಯಕರ್ತರಾದ ಬಿ.ಎ.ಮಲ್ಲೇಶ್ವರಿ, ಲಿಂಗರಾಜು, ಪರ್ವಿನ್ ಭಾನು ಇತರರು ಇದ್ದರು.

